ಮಹಿಷಾಸುರಮರ್ಧಿನಿ ಶಿಲ್ಪ ರಚನೆ

ತಾತ್ವಿಕ ನೆಲೆ, ಹಿನ್ನೆಲೆ ಮತ್ತು ರಚನಾ ಸಿದ್ಧಾಂತ



ಕರ್ನಾಟಕ ಸರ್ಕಾರ ಶಿಲ್ಪಕಲಾ ಅಕಾಡೆಮಿಗೆ ಸಲ್ಲಿಸಿದ
ಹಿರಿಯ ಫೆಲೋಷಿಪ್ ಪ್ರಬಂಧ ೨೦೧೦- ೨೦೧೧

ಡಾ. ಚೂಡಾಮಣಿ ನಂದಗೋಪಾಲ್
ಹಿರಿಯ ಕಲಾ ಇತಿಹಾಸ ಸಂಶೋಧಕರು, ಬೆಂಗಳೂರು

ಮಹಿಷಾಸುರಮರ್ಧಿನಿ ಶಿಲ್ಪ ರಚನೆ

ತಾತ್ವಿಕ ನೆಲೆ, ಹಿನ್ನೆಲೆ ಮತ್ತು ರಚನಾ ಸಿದ್ಧಾಂತ



ಕರ್ನಾಟಕ ಸರ್ಕಾರ ಶಿಲ್ಪಕಲಾ ಅಕಾಡೆಮಿಗೆ ಸಲ್ಲಿಸಿದ
ಹಿರಿಯ ಫೆಲೋಷಿಪ್ ಪ್ರಬಂಧ ೨೦೧೦- ೨೦೧೧

ಡಾ. ಚೂಡಾಮಣಿ ನಂದಗೋಪಾಲ್
ಹಿರಿಯ ಕಲಾ ಇತಿಹಾಸ ಸಂಶೋಧಕರು, ಬೆಂಗಳೂರು

ಕರ್ನಾಟಕ ಸರ್ಕಾರ

ಶಿಲ್ಪಕಲಾ ಅಕಾಡೆಮಿ



ಮಹಿಷಾಸುರಮರ್ಧಿನಿ ಶಿಲ್ಪ ರಚನೆ

ತಾತ್ವಿಕ ನೆಲೆ, ಹಿನ್ನೆಲೆ ಮತ್ತು ರಚನಾ ಸಿದ್ಧಾಂತ

ಡಾ॥ ಚೂಡಾಮಣಿ ನಂದಗೋಪಾಲ್

ಹಿರಿಯ ಕಲಾ ಇತಿಹಾಸ ಸಂಶೋಧಕರು

ಬೆಂಗಳೂರು

ಪೀಠಿಕೆ

"ಮಹಿಷಾಸುರಮರ್ಧಿನಿ ಶಿಲ್ಪರಚನೆ"- ತಾತ್ವಿಕ ನೆಲೆ, ಹಿನ್ನೆಲೆ ಮತ್ತು ರಚನಾ ಸಿದ್ಧಾಂತವೆಂಬ ಶೀರ್ಷಿಕೆಯಡಿಯಲ್ಲಿ ಯೋಜನೆಯನ್ನು ಸಿದ್ಧಪಡಿಸಿ ಶಿಲ್ಪಕಲಾ ಅಕಾಡೆಮಿ, ಕರ್ನಾಟಕ ಸರ್ಕಾರಕ್ಕೆ ಹಿರಿಯರಿಗಾಗಿ ನಿಯೋಜಿತವಾಗಿದ್ದ ಫೆಲೋಷಿಪ್‌ಗೆ ಸಲ್ಲಿಸಿದಾಗ, ಅಧ್ಯಕ್ಷರಾದ ಮಹಾಶಿಲ್ಪಿಗಳೂ, ತಜ್ಞರೂ ಆದ ಮಾನ್ಯ ಜ್ಞಾನಾನಂದ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಅಧ್ಯಯನ ಯೋಜನೆಯನ್ನು ಒಪ್ಪಿ ಫೆಲೋಶಿಪ್ ನೀಡಿದ ಶಿಲ್ಪಕಲಾ ಅಕಾಡೆಮಿ, ಅಧ್ಯಕ್ಷರು ಹಾಗೂ ಸದಸ್ಯರಿಗೆ ನಾನು ಚಿರಋಣಿಯಾಗಿದ್ದೇನೆ. ಇಂತಹ ಅಧ್ಯಯನದ ಅವಶ್ಯಕತೆಯಿದೆಯೆಂದು ಮಾನ್ಯ ಜ್ಞಾನಾನಂದರು ಈ ಪರಿಕಲ್ಪನೆಯ ಜ್ಞಾನ ಸದೃಶವನ್ನು ಮಾಡಿಸಿದ್ದರಿಂದಲೇ ನನಗೆ ಈ ಅಧ್ಯಯನವನ್ನು ಮಾಡಲು ಮಾರ್ಗ ದೊರೆಯಿತು. ಅವರಿಗೆ ನನ್ನ ಮೊದಲ ಕೃತಜ್ಞತೆಗಳು. ನಂತರ ಕಛೇರಿಯ ಸಿಬ್ಬಂಧಿಗಳು ಸಿದ್ಧಹಸ್ತರಾಗಿ ಈ ಯೋಜನೆಯು ಪೂರ್ಣಗೊಳಿಸಲು ಸಹಕರಿಸಿದ್ದಾರೆ. ಅವರಿಗೆ ನನ್ನ ವಂದನೆಗಳು. ಅನೇಕ ಕಾರ್ಯಭಾರ ಒತ್ತಡಗಳಿಂದ ಕೊಟ್ಟ ಸಮಯಕ್ಕೆ ಪೂರೈಸದೇ ಇರುವುದಕ್ಕೆ ಕ್ಷಮೆ ಕೋರುತ್ತೇನೆ. ನನ್ನ ಈ ಅಧ್ಯಯನದಲ್ಲಿ ವಿಷಯವಸ್ತುವನ್ನು ಮೂಲಗ್ರಂಥಗಳಿಂದ ಹೆಕ್ಕಿ, ಅನೇಕ ಶಿಲ್ಪಗಳ ಚಿತ್ರಗಳನ್ನು ಸ್ವತಃ ಪ್ರವಾಸ ಮಾಡಿ ಒದಗಿಸಿ, ಬೇಕಾದ ರೇಖಾಚಿತ್ರಗಳನ್ನು ಸುಂದರವಾಗಿ ಬಿಡಿಸಿ ಪ್ರತಿಯೊಂದು ಘಟ್ಟದಲ್ಲೂ ಸಕ್ರಿಯವಾಗಿ ನನ್ನೊಂದಿಗೆ ಚರ್ಚೆಯಲ್ಲಿ ಭಾಗವಹಿಸಿ ಎಲ್ಲಾ ರೀತಿಯ ಸಹಕಾರ ನೀಡಿದ ನನ್ನ ನೆಚ್ಚಿನ ಸಂಶೋಧನಾ ವಿದ್ಯಾರ್ಥಿನಿ (ಪಿಎಚ್.ಡಿ.) ಮತ್ತು ನನ್ನೊಂದಿಗೆ ಜೈನ್ ವಿಶ್ವವಿದ್ಯಾಲಯದಲ್ಲಿ ದೃಶ್ಯಕಲಾ ವಿಭಾಗದ ಮುಖ್ಯಸ್ಥೆಯಾಗಿ ಸೇವೆ ಸಲ್ಲಿಸುತ್ತಿರುವ ಡಾ. ಸೌಮ್ಯ ಮಂಜುನಾಥ್ ಚವ್ಹಾಣ್ ಅವರಿಗೆ ನನ್ನ ವಿಶೇಷ ಕೃತಜ್ಞತೆಗಳು ಸಲ್ಲಿಸುತ್ತೇನೆ. ಅದರಂತೆ ಇನ್ನೊಬ್ಬ ಎಂ.ಫಿಲ್. ವಿದ್ಯಾರ್ಥಿ ವಿದ್ಯಾ ಸಿಮ್ಲಡಕ ಅವರು ಹಂಪಿಯ ಕೆಲವು ಛಾಯಾಚಿತ್ರಗಳನ್ನು ಒದಗಿಸಿದ್ದಾರೆ. ಅವರ ಸಹಕಾರವನ್ನು ಇಲ್ಲಿ ನೆನೆಯುತ್ತೇನೆ. ದೃಶ್ಯಕಲಾ ವಿಭಾಗದಲ್ಲಿ ಪಿ ಎಚ್. ಡಿ ಅಧ್ಯಯನ ಮಾಡುತ್ತಿರುವ ಸಂಶೋಧನಾ ವಿಧ್ಯಾರ್ಥಿಗಳಾದ ಅಖಿಲ ಲಕ್ಷ್ಮಿಕಾಂತ್ ಮತ್ತು ಅನಿತ ಎಚ್ ಸಿ ಇವರು ಕರಡುಪ್ರತಿಯನ್ನು ತಿದ್ದುಕೊಟ್ಟುದಲ್ಲದೆ, ಪ್ರತಿಯ ವಿನ್ಯಾಸವನ್ನು ಸಿದ್ಧಪಡಿಸಿ ಕೊಟ್ಟಿರುವುದಕ್ಕಾಗಿ, ಮತ್ತು ಸೋಮಶೇಖರ್ ಅವರು ಕೆಲವು ರೇಖಾಚಿತ್ರಗಳನ್ನು ಮಾಡಿಕೊಟ್ಟಿರುವುದಕ್ಕಾಗಿ ಮನಸಾರೆ ಸ್ಮರಿಸುತ್ತೇನೆ. ನಾನು ಬರೆದ ಹಸ್ತಪ್ರತಿಯನ್ನು ಓರಣವಾಗಿ ಬೆರಳಚ್ಚು ರೂಪದಲ್ಲಿ ಸಿದ್ಧಪಡಿಸಿಕೊಟ್ಟ ಶ್ರೀಮತಿ ಗೀತಾ ಪ್ರಕಾಶ್‌ರವರ ಉಪಕಾರ ಈ ಅಧ್ಯಯನಕ್ಕೆ ಮಹತ್ವವಾಗಿದೆ. ಅವರಿಗೂ ನನ್ನ ಕೃತಜ್ಞತೆಗಳು.

ಪ್ರಸ್ತುತ ಸಂಶೋಧನಾ ಯೋಜನೆಯಲ್ಲಿ ನಾನು ಸೇವೆ ಸಲ್ಲಿಸುತ್ತಿರುವ ಜೈನ್ ವಿಶ್ವವಿದ್ಯಾಲಯದ ಅಧ್ಯಕ್ಷರಾದ ಶ್ರೀಮಾನ್ಯ ಚೇನ್‌ರಾಜ್ ಜೈನ್ ಅವರನ್ನು ಉಪಕಾರದಿಂದ ಇಲ್ಲಿ ಸ್ಮರಿಸುತ್ತಿದ್ದೇನೆ. ಅವರ ಸಹಕಾರ, ಪ್ರಾಮಾಣಿಕ ಪ್ರೋತ್ಸಾಹ ನನಗೆ ಸಾಕಷ್ಟು ಹುರುಪನ್ನು ತಂದಿದೆ. ಇಂತಹ ಉತ್ತಮ ಕೆಲಸವನ್ನು ಅವರು ಮಾನ್ಯತೆಯಿಂದ ಗುರುತಿಸುವ ಸಹೃದಯಿ ಅವರಿಗೆ ಅನಂತ ಧನ್ಯವಾದಗಳು. ಮಿಥಿಕ್ ಸೊಸೈಟಿಯ ಆಡಳಿತ ಮಂಡಳಿಯ ಗ್ರಂಥಾಲಯ ಸಹಕಾರಕ್ಕೆ ನಾನು ಚಿರಋಣಿ. ಹಾಗೆಯೇ ಜೈನ್ ವಿಶ್ವವಿದ್ಯಾಲಯದ ಗ್ರಂಥಪಾಲಕರಿಗೂ ಧನ್ಯವಾದಗಳನ್ನೂ ಸಲ್ಲಿಸುತ್ತೇನೆ.

ಈ ಸಂಶೋಧನೆಗಾಗಿ ಪ್ರವಾಸಗಳನ್ನು ಕೈಗೊಂಡಾಗ, ಗೃಹಕೃತ್ಯಗಳನ್ನು ಬದಿಗಿರಿಸಿ ಬರಿಯಲು ತೊಡಗಿದಾಗ ಅಂತಹ ಎಲ್ಲಾ ತರಹದ ಏರುಪೇರುಗಳನ್ನು ಸಹಿಸಿಕೊಳ್ಳುವವರು ಹತ್ತಿರದ ನನ್ನ ಕುಟುಂಬದ ಸದಸ್ಯರು. ಅವರ ಸಹನೆಯನ್ನು ಸಾಕಷ್ಟು ಬಾರಿ ಪರೀಕ್ಷೆಗೆ ಒಳಪಡಿಸಬೇಕಾದ ಪ್ರಸಂಗ ಒದಗಿತು. ಅದನ್ನೆಲ್ಲಾ ಸಹಿಸಿ, ಉತ್ತಮ ಬರವಣಿಗೆಯನ್ನು ನೋಡಿ ಪ್ರೋತ್ಸಾಹಿಸಿ, ಹೆಮ್ಮೆ ಪಡುವ ನನ್ನ ಪತಿ ಪ್ರೊ. ನಂದಗೋಪಾಲರಿಗೆ, ದೇವಿಯನ್ನು ಕುರಿತಾದ ಈ ಅಧ್ಯಯನವು ಸಂತೋಷ ತಂದಿದೆಯೆಂದು ಭಾವಿಸಿ ಅವರಿಗೆ ಅನೇಕ ಧನ್ಯವಾದಗಳನ್ನು ಈ ಮೂಲಕ ತಿಳಿಯಪಡಿಸುತ್ತೇನೆ. ನನ್ನೊಂದಿಗೆ ಪ್ರವಾಸಕ್ಕೆ ಬಂದು ಹೊಯ್ಸಳ ದೇವಾಲಯದ ಛಾಯಾಚಿತ್ರಗಳನ್ನು ತೆಗೆದು, ನನ್ನ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ಈ ಅಧ್ಯಯನಕ್ಕೆ ಸಹಕರಿಸಿದ ಪುತ್ರ ಅನೂಪ್ ಚಂದ್ರ ಹಾಗೂ ಒಲವಿನ ಸೊಸೆ ಚಿತ್ರಾಳಿಗೂ ಪ್ರೇಮಪೂರ್ವಕ ಧನ್ಯವಾದಗಳನ್ನು ತಿಳಿಸುತ್ತೇನೆ.

ಈ ಸಂಶೋಧನಾ ಕೈಪಿಡಿಯು ಕರ್ನಾಟಕ ಸರಕಾರದ ಸಹಕಾರದಿಂದ ಪೂರ್ಣಗೊಂಡಿದೆ. ಇಂತಹ ಇನ್ನೂ ಉತ್ತಮ ಸಂಶೋಧನೆಗಳು ನಮ್ಮ ಸರಕಾರದ ಪ್ರೋತ್ಸಾಹದಿಂದ ಹೊರ ಬರಲೆಂದು ಆಶಿಸುತ್ತೇನೆ. ಈ ಅಧ್ಯಯನವು ನಮ್ಮ ನಾಡಿನ ರೂವಾರಿಗಳು, ಕಲಾಸಕ್ತರು, ಕಲಾ ಇತಿಹಾಸಜ್ಞರು, ದೇವಿಯ ಉಪಾಸಕರು, ಸಾಹಿತಿಗಳು ಮತ್ತು ಯುವ ಪೀಳಿಗೆಯ ಓದುಗರು ಎಲ್ಲರಿಗೂ ಪ್ರಯೋಜನವಾದರೆ ನನ್ನ ಶ್ರಮವು ಸಾರ್ಥಕವಾಯಿತೆಂದು ಭಾವಿಸುತ್ತೇನೆ. ಈ ಒಂದು ಸದಾವಕಾಶದಿಂದ ಸ್ವತಃ ಜ್ಞಾನಾರ್ಜನೆಯಾದುದಲ್ಲದೇ ದೇವಿಯ ವಿವಿಧ ರೂಪಗಳ ಒಳ ಅರ್ಥಗಳು, ಪರಿಕಲ್ಪನೆಗಳು, ಸ್ತ್ರೀತ್ವದ ಮಹತ್ವ, ಅದರ ಸರಿಯಾದ ಪ್ರಯೋಗದ ಅರಿವು, ಇವೆಲ್ಲವನ್ನೂ ಶಿಲ್ಪಿಗಳು ತಮ್ಮ ಅನುಭವದ ಮೂಸೆಯಿಂದ ಕಲಾರಚನೆಯನ್ನು ಸೃಜಿಸಿದ ರೀತಿ, ಮುಂತಾದ ಅನೇಕ

ವಿಷಯಗಳನ್ನು ಮನನ ಮಾಡಲು ಈ ಅಧ್ಯಯನವು ಒಂದು ರೀತಿಯ ವರದಾನವಾಗಿ ಪರಿಣಮಿಸಿತು. ಆ ದೃಷ್ಟಿಯಲ್ಲಿ ಸಂಶೋಧನೆಯು ವಿಸ್ತೃತಗೊಂಡು ಮುಂದುವರಿಯುವ ಸಾಧ್ಯತೆ ಈ ಅಧ್ಯಯನವು ತಂದುಕೊಟ್ಟಿತು ಎಂದು ತುಂಬು ಮನಸ್ಸಿನಿಂದ ನಿವೇದಿಸಿಕೊಳ್ಳುತ್ತೇನೆ.

ಸಿರಿಗನ್ನಡಂ ಗೆಲ್ಗೆ.

ಬೆಂಗಳೂರು

20.9.2012

ಡಾ॥ ಚೂಡಾಮಣಿ ನಂದಗೋಪಾಲ್

ಹಿರಿಯ ಕಲಾ ಇತಿಹಾಸ ಸಂಶೋಧಕರು

ಬೆಂಗಳೂರು

ಈ ಸಂಶೋಧನೆಯಲ್ಲಿ ಬರುವ ಅಧ್ಯಾಯಗಳನ್ನು ಕೆಳಗಿನಂತೆ ಆಯೋಜಿಸಲಾಗಿದೆ.

ಮಹಿಷಾಸುರಮರ್ಧಿನಿ ಶಿಲ್ಪ ರಚನೆ

ತಾತ್ವಿಕ ನೆಲೆ, ಹಿನ್ನೆಲೆ ಮತ್ತು ರಚನಾ ಸಿದ್ಧಾಂತ

ಪರಿವಿಡಿ

ಅಧ್ಯಾಯ – ೦೧

ಮಹಿಷಾಸುರಮರ್ಧಿನಿ ಶಿಲ್ಪ ರಚನೆ

ತಾತ್ವಿಕ ನೆಲೆ, ಹಿನ್ನೆಲೆ ಮತ್ತು ರಚನಾ ಸಿದ್ಧಾಂತ



ಮಹಿಷಾಸುರ ಮರ್ಧಿನಿ, ಹೊಯ್ಸಳ ಶೈಲಿ

ಪ್ರಸ್ತಾವನೆ

ಅಧ್ಯಾಯ – ೦೧

ಜಗತ್ತಿನ ಶಿಲ್ಪಕಲಾ ಸೃಷ್ಟಿಯಲ್ಲಿ ಭಾರತೀಯ ಶಿಲ್ಪಕಲಾ ರಚನೆಗಳು ಮಹತ್ವಸ್ಥಾನವನ್ನು ಪಡೆದಿರುತ್ತವೆ. ಇವು ನಮ್ಮ ಸಾಂಸ್ಕೃತಿಕ ಚಿತ್ರಣವನ್ನು ನೀಡುವುದಷ್ಟೇ ಅಲ್ಲದೆ ನಮ್ಮ ನಂಬುಗೆ, ಜೀವನದ ಮೌಲ್ಯ, ಧಾರ್ಮಿಕ ತತ್ವಗಳನ್ನು ತಮ್ಮಲ್ಲಿ ಹಿಡಿದಿಟ್ಟುಕೊಂಡ ಮಹಾದಾಖಲೆಗಳಾಗಿವೆ. ಕಲಾವಿದನ ನೈಪುಣ್ಯತೆ, ಶಾಸ್ತ್ರ ತಿಳುವಳಿಕೆ, ಪರಿಕಲ್ಪನೆ, ರಚನಾಕ್ರಮ ಹಾಗೂ ಸೃಜನಶೀಲತೆಗಳಿಗೆ ಭಾರತೀಯ ಶಿಲ್ಪ ಸಂಪತ್ತು ಒರೆಗಲ್ಲಾಗಿದೆ. ಭಾರತದ ದೇವಾಲಯ ರಚನೆಗಳಲ್ಲಿ ಶಿಲ್ಪಗಳ ಬಳಕೆಯೇ ಮೇಲುಗೈಯಾಗಿದೆ. ಅವು ವಿಗ್ರಹಗಳಾಗಿರಬಹುದು, ಮೂರ್ತಿಗಳಾಗಿರಬಹುದು, ಭಿತ್ತಿಯಲ್ಲಿರುವ, ಕಂಭಗಳಲ್ಲಿರುವ, ಶಿಖರ, ದ್ವಾರ, ಭುವನೇಶ್ವರಿಗಳಲ್ಲಿ ಕಾಣುವ ಶಿಲ್ಪಗಳಾಗಿರಬಹುದು, ಎಲ್ಲವೂ ತಾಂತ್ರಿಕತೆ, ಪ್ರಮಾಣಬದ್ಧತೆ, ಶಿಲ್ಪಶಾಸ್ತ್ರ ನಿಯಮಗಳಿಗೆ ಬದ್ಧವಾಗಿಯೇ ರಚಿತಗೊಂಡಿರುತ್ತವೆ.

ಭಾರತೀಯ ಶಿಲ್ಪಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಒಂದು ವಿಷಯ ನಿಶ್ಚಯವಾಗಿ ನಿವೇದಿತವಾಗುತ್ತದೆ. ಏನೆಂದರೆ ಅವುಗಳ ಸೃಷ್ಟಿ ತಾಂತ್ರಿಕವಾಗಿ ಲೋಪದೋಷಗಳಿಲ್ಲದಂತಹುದು. ಅವು ವಿಗ್ರಹವಾಗಿರಬಹುದು, ನೃತ್ಯಶಿಲ್ಪಗಳಿರಬಹುದು ಅಥವಾ ಸೃಜನಶೀಲ, ಬಿಡಿ ಶಿಲ್ಪಗಳೇ ಆಗಿರಬಹುದು ತಾಂತ್ರಿಕ ದೃಷ್ಟಿಯಿಂದ ಪರಿಪೂರ್ಣತೆ ಹೊಂದಿರುತ್ತವೆ. ಈ ತಾಂತ್ರಿಕ ಪರಿಪೂರ್ಣತೆಗೆ ಹಲವು ಕಾರಣಗಳಿವೆ. ಮೂಲತಃ ಆಗಿನ ಶಿಲ್ಪಿಗಳು ಅಂದು ಪ್ರಚಲಿತವಾಗಿದ್ದ ಶಾಸ್ತ್ರ ಸಮ್ಮತ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ತಮ್ಮ ಕಲಾಕೃತಿಗಳನ್ನು ರಚಿಸುತ್ತಿದ್ದರು.

ಸಾವಿರಾರು ಸಂಖ್ಯೆಯಲ್ಲಿ ಇರುವ ಶಿಲ್ಪಗಳು ವಿವಿಧ ರೀತಿಯಲ್ಲಿ ಭಿನ್ನವಾಗಿವೆ. ಇದಕ್ಕೆ ಕಾರಣ ಈ ಶಿಲ್ಪಗಳ ಅಭಿವ್ಯಕ್ತಿಯು ಕಲಾವಿದನ ಅನುಭವ ಮತ್ತು ರಸಾಭಿಜ್ಞತೆ ಮತ್ತು ಅವನು ಪಡೆಯುತ್ತಿದ್ದ ರಸಾನುಭವವನ್ನು ಸಂಪೂರ್ಣವಾಗಿ ಅವಲಂಬಿಸಿರುವುದರಿಂದ ಪ್ರತಿಯೊಂದು ಶಿಲ್ಪವೂ ಒಂದು ಹೊಸ ಪರಿಯನ್ನು ಸೂಚಿಸುತ್ತದೆ. ಕಲಾವಿದನ ಕ್ರಿಯಾಶಕ್ತಿ ಹಾಗೂ ಪ್ರತಿಭೆಗಳೂ ಇಲ್ಲಿ ಗಮನ ಸೆಳೆಯುತ್ತವೆ.

ಇಂತಹ ಶಿಲ್ಪಗಳಲ್ಲಿ ಮುಖ್ಯವಾಗಿ ಸ್ತ್ರೀ ಶಿಲ್ಪಗಳು ಹೆಚ್ಚಿನ ಸಂಖ್ಯೆಯಲ್ಲಿಯೇ ದೊರೆಯುತ್ತವೆ. ಅವುಗಳಲ್ಲಿ ಶಾಕ್ತ ಪಂಥಕ್ಕೆ ಸೇರಿದ ದೇವೀ ಶಿಲ್ಪಗಳು, ಮಾತೃದೇವತೆಗಳು, ಪರಿವಾರದೇವತೆಗಳು, ಗ್ರಾಮದೇವತೆಗಳು ಮುಂತಾದ ಶಿಲ್ಪಗಳು ಮುಖ್ಯವಾಗುತ್ತವೆ. ಇವುಗಳ

ಬಗ್ಗೆ ಸಾಕಷ್ಟು ಅಧ್ಯಯನಗಳಾಗಿದ್ದರೂ ಹೊಸ ರೀತಿಯ ವಿಚಾರಗಳನ್ನು ಇಂದಿಗೂ ಈ ಕ್ಷೇತ್ರದಲ್ಲಿ ಪರಿಶೋಧಿಸಲು ಸಾಧ್ಯವಾಗುತ್ತದೆ. ಇಲ್ಲಿ ಅಧ್ಯಯನಕ್ಕಾಗಿ ವಿವಿಧ ರೀತಿಯಲ್ಲಿ ಕರ್ನಾಟಕದಲ್ಲಿ ಕಂಡರಿಸಿದ ಶಿಲ್ಪಕಲಾಸೃಷ್ಟಿ "ಮಹಿಷಾಸುರ ಮರ್ಧಿನಿ"ಯನ್ನು ಆರಿಸಿಕೊಳ್ಳಲಾಗಿದೆ. ಅದರೊಂದಿಗೆ ದುರ್ಗಾ, ಚಾಮುಂಡಿ, ಕಾಳಿ, ಚಾಮುಂಡ ಈ ಶಿಲ್ಪಗಳಲ್ಲಿ ಕಂಡುಬರುವ ವ್ಯತ್ಯಾಸಗಳೇನು ಎಂಬುದನ್ನು ಹಲವು ಆಗಮ, ಶಾಸ್ತ್ರ ಆಧಾರಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಅಧ್ಯಯನ ಮಾಡಲಾಗಿದೆ. ಇನ್ನೊಂದೆಡೆ ಕರ್ನಾಟಕದ ಶಿಲ್ಪಕಲಾ ಪರಂಪರೆ ಮತ್ತು ಕಲಾಇತಿಹಾಸದಲ್ಲಿ ಈ ಶಿಲ್ಪಗಳನ್ನು ಹೇಗೆ ಪ್ರತಿಬಿಂಬಿಸಲಾಗಿದೆ ಎಂಬುದನ್ನು ಅಧ್ಯಯನ ಮಾಡಿ ಅವುಗಳನ್ನೆಲ್ಲಾ ಒಂದೆಡೆ ದಾಖಲೆ ಮಾಡುವುದು ಈ ಅಧ್ಯಯನದ ಮೂಲ ಉದ್ದೇಶವಾಗಿದೆ. ಇದರೊಂದಿಗೆ ಈ ಶಕ್ತಿ ಶಿಲ್ಪಗಳನ್ನು ಸೃಜಿಸುತ್ತಿದ್ದ ರೀತಿ, ಅಳತೆ, ಪ್ರಮಾಣ, ಧ್ಯಾನ ಶ್ಲೋಕಗಳು ಮುಂತಾದ ಕಡೆಗೂ ಲಕ್ಷ ಕೊಡಲಾಗುವುದು. ಮಹಿಷಾಸುರಮರ್ಧಿನಿ ಶಿಲ್ಪರಚನೆಗೆ ದೇವೀ ಮಹಾತ್ಮೆ ಹಾಗೂ ಕಾಲದಿಂದಲೂ ಪ್ರಚಲಿತವಾಗಿದ್ದ ವೃತ್ತಾಂತಗಳು ಯಾವ ರೀತಿ ಪೂರಕವಾಗಿವೆ ಎಂದು ತಿಳಿಯಲು ಮತ್ತು ಭಾರತಾದ್ಯಂತ ಈ ಗ್ರಂಥವು ಎಷ್ಟು ಪ್ರಭಾವ ಬೀರಿತ್ತೆಂದು ತಿಳಿಯಲು ಕರ್ನಾಟಕವೇ ಅಲ್ಲದೇ ಇತರ ಪ್ರಾಂತ್ಯಗಳ, ಶೈಲಿಗಳ ಶಿಲ್ಪಗಳನ್ನೂ ಈ ಅಧ್ಯಯನದಲ್ಲಿ ಸೇರಿಸಿಕೊಳ್ಳಲಾಗಿದೆ.

ಮಹಿಷಾಸುರಮರ್ಧಿನಿ, ದುರ್ಗಾ, ಚಾಮುಂಡಿ, ಚಾಮುಂಡ ಹಾಗೂ ಕಾಳಿ ಶಿಲ್ಪಗಳ ರೂಪರೇಷೆಗಳು:

ಸಾಮಾನ್ಯ ಎಣಿಕೆಯಲ್ಲಿ ಚಾಮುಂಡಿ, ದುರ್ಗೆ, ಕಾಳಿ ಎಲ್ಲವೂ ಒಂದೇ ಶಕ್ತಿಯೇ ಆದರೂ ಮೂರ್ತಿ ಲಕ್ಷಣದಲ್ಲಿಯೂ, ಈ ರೂಪಗಳನ್ನು ಧಾರಣ ಮಾಡಿದ ಸಂದರ್ಭಗಳಲ್ಲಿ ವೈವಿಧ್ಯವಿದೆ. ಒಂದೇ ಶಕ್ತಿಯು ಸಂದರ್ಭಕ್ಕೆ ಸರಿಯಾಗಿ ಭೋಗದಲ್ಲಿ ಭವಾನಿ, ಯುದ್ಧ ಪ್ರಸಂಗದಲ್ಲಿ ದುರ್ಗಾ, ಕೋಪಬಂದಾಗ ಕಾಳಿ ಮತ್ತು ಕಾಪಾಡುವಾಗ ವಿಷ್ಣುಸಂಭೂತೆ ಇತ್ಯಾದಿ. ಶಿಲ್ಪದಲ್ಲಿ ದುರ್ಗಾದೇವಿಯ ಸ್ಥಾನಕ ಮೂರ್ತಿಗಳು ವಿಷ್ಣುಮೂರ್ತಿಗಳಂತೆಯೇ ಇರುವುದು. ದುರ್ಗೆಯನ್ನು ವೈಷ್ಣವಿ, ನಾರಾಯಣಿ ಎಂದು ದುರ್ಗಾ ದ್ವಾದಶಾಕ್ಷರೀ ಮಂತ್ರದಲ್ಲಿ ವಿವರಿಸಲಾಗಿದೆ. ಮೊದಲಬಾರಿಗೆ ವಿಷ್ಣುಧರ್ಮೋತ್ತರ ಪುರಾಣದಲ್ಲಿ ಅಂದರೆ ಕ್ರಿ.ಶ. ನಾಲ್ಕನೇ ಶತಮಾನದಲ್ಲಿ ದೇವಿಯ ವರ್ಣನೆಯನ್ನು ನೀಡಲಾಗಿದೆ. ನಂತರ ಬಂದ ವರಾಹಪುರಾಣ, ವಾಮನ ಪುರಾಣ, ಪದ್ಮಪುರಾಣಗಳಲ್ಲಿಯೂ ದೇವಿಯ ವಿವಿಧರೂಪಗಳ ಉಲ್ಲೇಖಗಳಿವೆ.

ಅಕಾಡೆಮಿಯ ಫೆಲೋಷಿಪ್ ಅಧ್ಯಯನ ಯೋಜನೆಗೆ ಆರಿಸಿಕೊಂಡಿರುವ 'ಮಹಿಷಾಸುರಮರ್ಧಿನಿ' ಶಿಲ್ಪರಚನೆಯು ಶಕ್ತಿದೇವತೆಯ ಭಿನ್ನ ಸ್ವರೂಪಗಳಾದ ಮಹಿಷ ಮರ್ಧಿನಿ, ದುರ್ಗ, ಸಿಂಹವಾಹಿನಿದುರ್ಗಾ, ನವದುರ್ಗಾ, ಚಾಮುಂಡಿ, ಚಾಮುಂಡಾ ಹಾಗೂ ಕಾಳಿ ಶಿಲ್ಪಗಳನ್ನು ಈ ಕೆಳಕಂಡ ಅಧ್ಯಯನ ಮಾರ್ಗಸೂಚಿಯ ಆಧಾರದ ಮೇಲೆ ಅಧ್ಯಯನಕ್ಕೆ ಒಳಪಡಿಸಲಾಗಿವೆ.

- ಮೊದಲ ಹಂತದಲ್ಲಿ ಈ ಮೇಲೆ ತಿಳಿಸಿರುವ ಶಕ್ತಿಯ ಏಳು ಸ್ವರೂಪಗಳ ಕಲ್ಪನೆ, ನೆಲೆ, ಹಿನ್ನೆಲೆಯ ಅಧ್ಯಯನವನ್ನು ಮಾಡಲಾಗಿದೆ.

- ಎರಡನೆಯ ಹಂತದಲ್ಲಿ ಮೂಲ ಆಧಾರಗ್ರಂಥಗಳನ್ನು ಗುರುತಿಸಿ ಅವುಗಳ ಪಠ್ಯವನ್ನು ವಿವರವಾಗಿ ತೆಗೆದುಕೊಂಡು ಯಾವ ರೀತಿಯ ವಿವರಣೆಗಳನ್ನು ಅಲ್ಲಿ ಕಾಣಬಹುದೆಂದು ತಿಳಿಯಲಾಗಿದೆ. ಉದಾಹರಣೆಗೆ ವಿಷ್ಣುಧರ್ಮೋತ್ತರ ಪುರಾಣ, ವಾಮನ ಪುರಾಣ, ಪದ್ಮ ಪುರಾಣ, ವರಾಹ ಪುರಾಣ, ಶಾರದಾತಿಲಕ ತಂತ್ರ, ಶಿಲ್ಪರತ್ನ, ಸುಪ್ರಬೇಧಾಗಮ, ಪೂರ್ವಕರ್ನಾಗಮ, ಶ್ರೀತತ್ವನಿಧಿಯ ಶಕ್ತಿನಿಧಿಯ ಭಾಗ, ಸೌಂದರ್ಯಲಹರೀ ಮುಂತಾದ ಗ್ರಂಥಗಳಲ್ಲಿ ಚರ್ಚಿಸಲಾದ ವಿವರಗಳನ್ನು ಅಧ್ಯಯನಕ್ಕೆ ಹಿನ್ನೆಲೆಯ ರೂಪದಲ್ಲಿ ಬಳಸಲಾಗಿದೆ.

- ಮೂರನೇ ಹಂತದಲ್ಲಿ ಈ ಮಹಿಷಾಸುರಮರ್ಧಿನಿ ಶಿಲ್ಪಗಳ ಮೂರ್ತಿಲಕ್ಷಣಗಳು, ಸ್ಥಾನಕ ಭಂಗಿಗಳು, ವಾಹನ, ಆಯುಧಗಳು, ಆಭರಣಗಳು, ಮುಖಭಾವ ಮುಂತಾದ ವಿಚಾರಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಅದರ ಜೊತೆಗೆ ತಾಂತ್ರಿಕ ರೂಪದ ಒಂದು ಸಂಕ್ಷಿಪ್ತ ಸಮೀಕ್ಷೆಯನ್ನು ಮಾಡಲಾಗಿದೆ.

- ನಾಲ್ಕನೇ ಹಂತದಲ್ಲಿ ಚಾಲುಕ್ಯರ ಕಾಲದ ಬಾದಾಮಿ ಗುಹೆಯ ಮಹಿಷ ಮರ್ಧಿನಿಯ ಶಿಲ್ಪದಿಂದ ಹಿಡಿದು ಮೈಸೂರು ಅರಸರ ಅಧಿದೇವತೆಯಾದ ಚಾಮುಂಡಿ ಶಿಲ್ಪ ರಚನೆಯವರೆಗೂ ವಿವಿಧ ಕಾಲದಲ್ಲಿ ರಚಿಸಿರುವ ದೇವಾಲಯ ಶಿಲ್ಪಗಳನ್ನು ಅಧ್ಯಯನ ಮಾಡಲು ಪ್ರವಾಸ ಕೈಗೊಂಡು ಛಾಯಾಚಿತ್ರಗಳ ಮೂಲಕ, ರೇಖಾಚಿತ್ರಗಳ ಮೂಲಕ ದಾಖಲಾತಿ ಮಾಡುವುದು. ಈ ರೀತಿ ಒಂದು ವ್ಯವಸ್ಥಿತ ರೂಪದ ಅಧ್ಯಯನವನ್ನು ಕೈಗೊಳ್ಳಲಾಗಿದ್ದು ದೇವಿ ಶಿಲ್ಪರಚನೆಯ ಪರಿಕಲ್ಪನೆಯ ಒಂದು ಕೈಪಿಡಿ ಇದಾಗಿದೆ.

ಭಾರತೀಯ ಸಮಾಜದ ಆಧ್ಯಾತ್ಮಿಕ ಪ್ರಜ್ಞೆಯಲ್ಲಿ ಹಾಗೂ ಸಾಮಾನ್ಯ ಜನತೆಯ ಶ್ರದ್ಧಾಭಾವನೆಯಲ್ಲಿ ಶೈವ, ವೈಷ್ಣವ ಮತ್ತು ಶಾಕ್ತ ಸಂಪ್ರದಾಯ, ಆಚರಣೆಗಳು, ತಾತ್ವಿಕತೆ ಮತ್ತು ಅಂತರಾರ್ಥಗಳು ಪ್ರಾಧಾನ್ಯತೆಯನ್ನು ಪಡೆದಿರುತ್ತವೆ. ಇವುಗಳನ್ನು ಭಿನ್ನ ಮತ ಅಥವಾ

ಪಂಥಗಳೆಂದೂ ತಿಳಿಯಲಾಗಿದೆ. ಈ ಪಂಥಗಳ ಶ್ರದ್ಧಾಳುಗಳು ಮತ್ತು ಅನುಯಾಯಿಗಳಿಂದ ಈ ಪಂಥಗಳ ಬೆಳವಣಿಗೆ ಜೊತೆ ಜೊತೆಯಾಗಿಯೇ ಸಾಗಿತ್ತಾದರೂ ಐತಿಹಾಸಿಕ ಕಾಲಘಟ್ಟದಲ್ಲಿ ಇವು ಪರಸ್ಪರ ಸ್ಪರ್ಧಾತ್ಮಕವಾಗಿಯೂ ಬೆಳೆದುಬಂದವು. ಹಲವೊಮ್ಮೆ ಶಾಕ್ತ ಪಂಥವು ಹೆಚ್ಚು ಬಲಪ್ರದವಾಗಿ ಎಲ್ಲಾ ಸಮುದಾಯ ಜೀವನದಲ್ಲಿ ಗುರುತಿಸಿಕೊಂಡಿದ್ದೂ ಉಂಟು. ಇದಕ್ಕೆ ಕಾರಣ ಶಾಕ್ತ ಪಂಥ ಸ್ತ್ರೀ ಶಕ್ತಿಯನ್ನು ಎತ್ತಿ ಹಿಡಿದಿದ್ದರಿಂದ ಶೈವ, ವೈಷ್ಣವ, ಜೈನ ಮತ್ತು ಬೌದ್ಧ ಮತಗಳ ಸ್ತ್ರೀ ದೇವತೆಗಳನ್ನೆಲ್ಲಾ ಒಂದು ಮಹಾಶಕ್ತಿಯ ದ್ಯೋತಕವೆಂದು ಪರಿಗಣಿಸಲಾಯಿತು. ಹೀಗಾಗಿ ಯಾವುದೇ ಪಂಥದ ಸ್ತ್ರೀದೇವತೆಯರನ್ನು 'ದೇವಿ'ಯರೆಂತಲೂ, ಅವರುಗಳು ಶಕ್ತಿಸ್ವರೂಪಿಣಿಯರೆಂಬ ಭಾವನೆಯು ಸಾಮಾನ್ಯ ಜನರ ಮನಸ್ಸಿನಲ್ಲಿ, ಚಿತ್ತದಲ್ಲಿ ಮತ್ತು ಶಾಕ್ತ ಸಂಪ್ರದಾಯಸ್ಥರಲ್ಲಿ ಬೇರೂರಿತು. ಶಕ್ತಿಯನ್ನು ಪಡೆಯಲು ಶಕ್ತಿಯ ಆರಾಧನೆ ಮತ್ತು ಉಪಾಸನೆಗಳನ್ನೂ ನಾನಾ ವಿಧದಲ್ಲಿ ರೂಪಿಸಿ ಅನುಸರಿಸಲಾಯಿತು. ಅದರೊಂದಿಗೆ ದೇವಿಯನ್ನು ಕುರಿತು ಶಿಲ್ಪರಚನೆ, ವಾಸ್ತುರಚನೆ, ಚಿತ್ರರಚನೆ, ಶ್ಲೋಕರಚನೆಗಳೂ ಮಹತ್ವವನ್ನು ಪಡೆದವು. ಶಕ್ತಿಯ ತೇಜಸ್ಸು ಮತ್ತು ಮಹತ್ವವನ್ನು ಬಿಂಬಿಸುವ ನೂರಾರು ಗ್ರಂಥಗಳು, ಭಕ್ತಿರಚನೆಗಳು ಶಕ್ತಿಪೂಜೆಗೆ ಮಹತ್ವವನ್ನು ತಂದುಕೊಟ್ಟವು.

ನಾಗರಿಕ ಸಮಾಜದ ಉಗಮ ಮತ್ತು ವಿಕಾಸದ ಹಾದಿಯುದ್ದಕ್ಕೂ ಶಕ್ತಿ ಅಥವಾ ದೇವಿಯನ್ನು ಮಾತೃದೇವತೆಯ ರೂಪದಲ್ಲಿ ಚಿತ್ರಿಸಿ, ಭಾವಿಸಿ ಮತ್ತು ಪರಿಕಲ್ಪಿಸಿರುವುದನ್ನು ಕಾಣುತ್ತೇವೆ. ಸಿಂಧೂ ಸಂಸ್ಕೃತಿಯ ಉತ್ಖನನಗಳಲ್ಲಿ ದೊರೆತ ಮೃಣ್ಮಯ ಶಿಲ್ಪಗಳನ್ನು ಮಾತೃದೇವತೆಗಳೆಂದೇ ಗುರುತಿಸಲಾಗಿದೆ. ಮಾತೃದೇವತೆಯ ಆರಾಧನೆಯ ಪ್ರಾರಂಭದ ದಿಶೆಯನ್ನು ಇಲ್ಲಿ ಗುರುತಿಸಲಾಗಿದೆ. ನಂತರದ ವೇದಕಾಲದಲ್ಲಿಯೂ ದೇವಿ ಉಪಾಸನೆಯ ಕಲ್ಪನೆಯನ್ನು ತೋರುವ ಉಲ್ಲೇಖಗಳಿವೆ. ಅಲ್ಲಿ ದೇವಿಯನ್ನು ವನಗಳ ಅಧಿದೇವತೆ 'ಅರಣ್ಯಾನಿ' ಎಂಬ ಹೆಸರಿನಿಂದ ಗುರುತಿಸಲಾಗಿದೆ.

ಮೋತಿಚಂದ್ರರೆಂಬ ವಿದ್ವಾಂಸರು ಪೂರ್ವ ಇತಿಹಾಸ ಕಾಲದ ಮೃಣ್ಮಯ ಸ್ತ್ರೀ ಶಿಲ್ಪಗಳನ್ನೂ ವೇದಕಾಲದ ದೈವೀ ಮಾತೃತ್ವದ ಸಂಕೇತವಾದ 'ಅದಿತಿ' ಎಂದು ಈ ಜಗತ್ತಿನ ಸೃಷ್ಟಿಕರ್ತೆಯೊಂದಿಗೆ ಗುರುತಿಸುತ್ತಾರೆ. ಈ ರೀತಿಯ ಮಾತೃತ್ವವನ್ನು ಪ್ರತಿಪಾದಿಸುವ ಪಂಥವನ್ನು ಕರ್ನಾಟಕ, ಆಂಧ್ರ, ಗುಜರಾತ್, ಮಹಾರಾಷ್ಟ್ರ ಮತ್ತು ಬಂಗಾಳಗಳಲ್ಲಿ ಹೆಚ್ಚು ಪ್ರಗತಿಹೊಂದಿರುವುದನ್ನು ಇತಿಹಾಸದುದ್ದಕ್ಕೂ ಕಾಣುತ್ತೇವೆ. ಋಗ್ವೇದದಲ್ಲಿ ಉಷಾ, ಅದಿತಿ ಮತ್ತು ಸರಸ್ವತಿಯ ಉಲ್ಲೇಖಗಳು ಪ್ರಾರಂಭದಲ್ಲಿಯೂ ನಂತರ ಶ್ರೀ ಲಕ್ಷ್ಮಿಯ ಉಲ್ಲೇಖವೂ ಸಿಗುತ್ತದೆ.

ಬ್ರಹ್ಮ, ವಿಷ್ಣು ಮತ್ತು ಈಶ್ವರರನ್ನೊಳಗೊಂಡ ತ್ರಿಮೂರ್ತಿ ಅಥವಾ ತ್ರಿಪುರುಷ ಕಲ್ಪನೆ ಬೆಳೆದಂತೆ ಅವರೊಂದಿಗಿನ ಸ್ತ್ರೀಶಕ್ತಿಯ ಕಲ್ಪನೆ ಹೆಚ್ಚು ಸ್ಪಷ್ಟಗೊಂಡು ಸರಸ್ವತಿ, ಲಕ್ಷ್ಮೀ ಮತ್ತು ಪಾರ್ವತೀ ಸ್ವರೂಪಗಳು ಪ್ರಾಮುಖ್ಯತೆ ಪಡೆಯತೊಡಗಿದವು. ಈ ಎಲ್ಲಾ ಸ್ತ್ರೀ ತತ್ವಗಳನ್ನೊಳಗೊಂಡ ಶಕ್ತಿರೂಪದ ಪರಿಕಲ್ಪನೆ ಅತ್ಯಂತ ಮಹತ್ವವನ್ನು ಪಡೆದಾಗ ಈ ಶಕ್ತಿಯನ್ನು ನಂತರದ ವೇದಗಳ ಕಾಲದಲ್ಲಿ ಪರಾಶಕ್ತಿಯೆಂದೂ ಗುರುತಿಸಲಾಯಿತು. ಹೀಗೆ ಉಗಮವಾದ ಮಾತೃಸ್ವರೂಪ 'ಸಪ್ತಮಾತೃಕಾ ಪರಿಕಲ್ಪನೆಯಲ್ಲಿ ವೈವಿಧ್ಯಮಯವಾಯಿತು.

ಉಪನಿಷತ್‌ಗಳಲ್ಲಿ 'ಚಂಡಿ', 'ಉಮಾ' ಮತ್ತು ಹೇಮವತಿ ಎಂಬ ನಾಮಗಳ ರೂಪದಲ್ಲಿ ಶಕ್ತಿಯನ್ನು ಗುರುತಿಸಲಾಗಿದೆ. ತೈತ್ತರೀಯ ಅರಣ್ಯಕದಲ್ಲಿ ಮತ್ತು ನಾರಾಯಣ ಉಪನಿಷತ್‌ನಲ್ಲಿ 'ದುರ್ಗಾ' ಎಂದೂ ಗುರುತಿಸಲಾಗಿದೆ. ವಿವಿಧ ಭಕ್ತಿಸಾಹಿತ್ಯ ಗ್ರಂಥಗಳಲ್ಲಿ ಪೃಥ್ವಿ, ಅದಿತಿ, ಗೌರಿ, ಪ್ರಕೃತಿ, ಶೀತಾಲ, ಉಗ್ರತಾರ, ಕಾಳಿ, ಭವಾನಿ, ಚಾಮುಂಡ, ಕಾಲರಾತ್ರಿ, ದುರ್ಗಾ ಮುಂತಾದ ಅನೇಕರೂಪಗಳಿಂದ ಮಾತೃದೇವತೆ ಅಥವಾ ಶಕ್ತಿ ಅಥವಾ ದೇವಿಯನ್ನು ಸಂಬೋಧಿಸಲಾಗಿದೆ (Divine Mother Durga: Plurality of her names- Dr.Jyotsna Sahoo and Dr.B.L. Malla-orissa Review Sep-oct-2007 p.40) ಕೇನ ಉಪನಿಷತ್ತಿನಲ್ಲಿ ದೇವಿಯನ್ನು 'ಶಕ್ತಿ' ಎಂದೇ ಸಂಬೋಧಿಸಲಾಗಿದೆ. ವೇದಕಾಲದ ತ್ರಿಮೂರ್ತಿ ಪರಿಕಲ್ಪನೆಯಲ್ಲಿ ಅಗ್ನಿ, ವಾಯು ಮತ್ತು ಇಂದ್ರ ಮುಖ್ಯರು ಮತ್ತು ಮಹಾಶಕ್ತಿವಂತರೆಂದು ಗುರುತಿಸಿದ್ದರೂ ಈ ಸ್ತ್ರೀ ಶಕ್ತಿಯ ಮುಂದೆ ಅವರು ಕಳೆಗುಂದಿದರೆಂದು ಕೇನ ಉಪನಿಷತ್ತಿನಲ್ಲಿ ಉಲ್ಲೇಖವಿದೆ. ಸುಮಾರು ೧೩ರಿಂದ ೧೮ನೇ ಶತಮಾನದ ಸಮಯದಲ್ಲಿ ರಚಿತಗೊಂಡ ಶಾಕ್ತ ಉಪನಿಷತ್ತಿನಲ್ಲಿ 'ಶ್ರೀ ವಿದ್ಯಾ' ರೂಪದಲ್ಲಿಯೇ ದೇವಿಯನ್ನು ಚಿತ್ರಿಸಲಾಗಿದೆ.

ವೇದಭಾಗಗಳಾದ ಬ್ರಾಹ್ಮಣಗಳಲ್ಲಿ ಹಲವಾರು ಮಾತೃದೇವತೆಗಳ ಪ್ರಸ್ತಾಪ ಬರುತ್ತದೆ. ಅವುಗಳೆಂದರೆ ನಿರುತಿ, ಶಚೀ, ಮೂಡುಷೀ, ಯಮೀ, ಅಂಬಿಕಾ, ರುದ್ರಾಣಿ, ಶ್ರೀ ಮತ್ತು ಸರಸ್ವತಿ, ಇವರಲ್ಲಿ ಅಂಬಿಕೆ ಮತ್ತು ರುದ್ರಾಣಿಯರು ದುರ್ಗೆಯಾಗಿ ಮೈದಳೆದರು. (ಎಸ್.ಕೆ.ರಾಮಚಂದ್ರರಾವ್, ಮೂರ್ತಿಶಿಲ್ಪ ನೆಲೆ ಮತ್ತು ಹಿನ್ನೆಲೆ – ಪು. ೧೮೨) ನಂತರದ ದಿನಗಳಲ್ಲಿ ಸ್ತ್ರೀ ದೇವತೆಯನ್ನು ವರನೀಡುವವಳು, ಮಂಗಳೆ, 'ದಾಯಿನಿ' ಎಂಬ ರೀತಿಯಲ್ಲಿ ಅರ್ಥೈಸಿ ಅನೇಕ ನಂಬಿಕೆಗಳು ಈ ಅರ್ಥವನ್ನು ಪುಷ್ಟಿಸಿದವು. ಸಾಂಖ್ಯ ಸಿದ್ಧಾಂತದ ಹಿನ್ನೆಲೆಯಲ್ಲಿ ನಿಂತು ನೋಡಿದಾಗ ಸ್ತ್ರೀ ಪ್ರಕೃತಿಯಾಗಿ ಸೃಷ್ಟಿಕರ್ತೆಯಾಗಿ ರೂಪಗೊಳ್ಳುತ್ತಾಳೆ. ತ್ರಿಗುಣಗಳಾದ ಸತ್ವ, ರಾಜಸ ಮತ್ತು ತಾಮಸಗಳು ಸ್ತ್ರೀ ಶಕ್ತಿಯಿಂದ ಪ್ರೇರೇಪಗೊಳ್ಳುತ್ತವೆ. ಮುಂದೆ ಬಂದ

ತಾತ್ವಿಕರು ಸ್ತ್ರೀಯನ್ನು ಅವಳ ಶಕ್ತಿಯನ್ನೂ 'ಮಾಯಾ' ಎಂದೂ ವ್ಯಾಖ್ಯಾನಿಸುತ್ತಾರೆ. ಹೀಗೆ ವಿವಿಧ ತಾತ್ವಿಕ ಹಿನ್ನೆಲೆಗಳಲ್ಲಿ ಸ್ತ್ರೀ ಶಕ್ತಿಯನ್ನು ಮೂಲತಃ ಪ್ರಧಾನ ಶಕ್ತಿಯೆಂದೇ ಪರಿಗಣಿಸಿದ್ದರೂ ಅದನ್ನು ಅರ್ಥೈಸಿರುವ ರೀತಿ, ಪರಿಭಾವಿಸುವ ರೀತಿ ಹಾಗೂ ಚಿತ್ರಿಸುವ ರೂಪಗಳಲ್ಲಿ ಸಾಕಷ್ಟು ವೈವಿಧ್ಯತೆಗಳನ್ನು ಗಮನಿಸಬಹುದು.

ಈ ಸಂಶೋಧನೆಯಲ್ಲಿ ಬರುವ ಅಧ್ಯಾಯಗಳನ್ನು ಕೆಳಗಿನಂತೆ ಆಯೋಜಿಸಲಾಗಿದೆ.

ಪರಿವಿಡಿ



ಹೊಯ್ಸಳ ಶೈಲಿಯ ಮಹಿಷಾಸುರ ಮರ್ಧಿನಿಯ ಶಿಲ್ಪ

ಅಧ್ಯಾಯ – ೦೨

ಶಕ್ತಿ (ದೇವಿಯ) ವಿಭಿನ್ನ ಸ್ವರೂಪಗಳು

ಅಧ್ಯಾಯ - ೦೨

ಶಕ್ತಿ (ದೇವಿಯ) ವಿಭಿನ್ನ ಸ್ವರೂಪಗಳು

ಶಕ್ತಿಯ ವಿಭಿನ್ನ ಸ್ವರೂಪಗಳನ್ನು ತಾತ್ವಿಕವಾಗಿ, ಸೈದ್ಧಾಂತಿಕವಾಗಿ, ಪುರಾಣಾಧಾರಗಳಾಗಿ, ಐತಿಹಾಸಿಕ ಬೆಳವಣಿಗೆಯಲ್ಲಿ ಬಂದಿರುವ ಬಗೆಯಾಗಿ, ಶಾಸ್ತ್ರಗ್ರಂಥಗಳ ಪೂರಕ ರೂಪದಲ್ಲಿ, ಜನರ ನಂಬಿಕೆಗಳಲ್ಲಿ, ಭಕ್ತಿ-ಸಾಹಿತ್ಯದಲ್ಲಿ, ಕಾವ್ಯರಚನೆಗಳಲ್ಲಿ ಚಿತ್ರ ಮತ್ತು ಶಿಲ್ಪಗಳಲ್ಲಿ ರೂಪಿತವಾಗಿರುವಂತೆ ಅನೇಕ ರೀತಿಯಲ್ಲಿ ವ್ಯಾಖ್ಯಾನಿಸಲು ಅವಕಾಶವಿದೆ. ದೇವಿ ಮಹಾತ್ಮೆ ಮತ್ತು ಶ್ರೀತತ್ವನಿಧಿಯ ಶಕ್ತಿನಿಧಿ ಗ್ರಂಥಗಳು ದೇವಿಯ ನೂರಾರು ರೂಪಗಳನ್ನು ಪ್ರಮಾಣ ಸಮೇತ ನೀಡುತ್ತವೆ. ಈ ಆಧಾರಗಳನ್ನು ಗಮನದಲ್ಲಿರಿಸಿಕೊಂಡು ಶಕ್ತಿಯ ಹಲವು ಸ್ವರೂಪಗಳನ್ನು ಇಲ್ಲಿ ವ್ಯಾಖ್ಯಾನಿಸಲು ಪ್ರಯತ್ನಿಸಲಾಗಿದೆ.

'ಬುಡಕಟ್ಟು ಜನಾಂಗ, ಗ್ರಾಮಸ್ಥರು, ಶಿಷ್ಟ ಸಂಪ್ರದಾಯಕ್ಕೆ ಸೇರಿದ ವಿವಿಧ ಸಮುದಾಯಗಳು ಜಗತ್ತಿನ ಎಲ್ಲಾ ಸಂಸ್ಕೃತಿಗಳಲ್ಲೂ ಪ್ರಾರಂಭದ ದಿಶೆಯಲ್ಲಿ ಸ್ತ್ರೀತ್ವವು ಜಗತ್ತನ್ನೇ ಸೃಷ್ಟಿಸಿ ಸಲಹುವ ತಾಯಿಯ ರೂಪದಲ್ಲೇ ಕಂಡಿವೆ. ಇದಕ್ಕೆ ಆಧಾರವಾಗಿ ಮೌಖಿಕ ರೂಪದಲ್ಲಿ ನೂರಾರು ಕಥನಗಳು, ಹಾಡುಗಳು, ಮತ್ತು ಕವಿತೆಗಳು ಸಿಗುತ್ತವೆ. ತಾಯಿಯ ಕಲ್ಪನೆಯೊಂದಿಗೆ ಮಹಿಳೆಯರ ನಿಗೂಢವಾದ ಶಕ್ತಿ, ಸ್ವಾರಸ್ಯವಾದ ಸ್ವಭಾವ, ಅದ್ಭುತವೆನಿಸುವ ಪ್ರಸವ ಸಾಮರ್ಥ್ಯ ತಮ್ಮ ಮೋಹಕವಾದ ಸ್ವರೂಪ ಇವೆಲ್ಲವೂ ಈ ಹಂತದಲ್ಲಿಯೇ ಸೇರಿಕೊಂಡವು. ಇದಲ್ಲದೆ ಜಗತ್ತಿನ ಎಲ್ಲಾ ಸಮಾಜಗಳು ಆರಂಭವಾದದು ಮಾತೃಪ್ರಮುಖವಾಗಿಯೇ. ಹಾಗಾಗಿಯೇ ತಾಯಿಯ ಪಾರಮ್ಯಕ್ಕೆ ಅಂದರೆ ಮಾತೃತ್ವಕ್ಕೆ ಪುಷ್ಟಿ ದೊರೆಯುವಂತಾಯಿತು.

ಮಾತೃಮಾರ್ಯಾದೆ ತಾಂತ್ರಿಕ ಅಥವಾ ಶಾಕ್ತ ಸಂಪ್ರದಾಯದ ಮೂಲಾಧಾರ. ಈ ಸಂಪ್ರದಾಯ ವೈದಿಕ ಯುಗಕ್ಕಿಂತಲೂ ಪ್ರಾಚೀನವೆನ್ನುವುದು ನಿರ್ವಿವಾದ. 'ಜಗತ್‌ಶಕ್ತಿಮಯಂ ವಿದ್ಯಾತ್‌ಶಕ್ತಿ, ಪ್ರೇರಯಿತಾ ಶಿವ' (ಕರಣಾಗಮ) ಎನ್ನುವುದು ಈ ಸಂಪ್ರದಾಯದ ಮುಖ್ಯ ನಿಲವು. ಇದರಲ್ಲಿ ದಕ್ಷಿಣಾಚಾರವೆಂದೂ, ವಾಮಚಾರವೆಂದೂ ಎರಡು ಕವಲುಗಳು. ಮೊದಲನೆಯದು ಸಾತ್ತ್ವಿಕ, ವೇದಗಳನ್ನವಲಂಬಿಸಿ ನಿಂತ ಪಂಥ, ಇಲ್ಲಿ ಪುರಾಣಗಳ ಪ್ರಭಾವ ಹೆಚ್ಚು. ಎರಡನೆಯದು ರಾಜಸ, ವೇದಬಾಹ್ಯವಾದುದೆಂದು ಪ್ರತೀತಿ; ಇದರಲ್ಲಿ ಶಿವನಿಗಿಂತಲೂ ಶಕ್ತಿಗೆ ಪ್ರಾಶಸ್ತ್ಯ ಹೆಚ್ಚು. ಶಕ್ತಿಯೇ ಶಿವನಿಗೂ ಕಾರಣವೆಂದು ಇದರ ನೆಲೆ. ಶಕ್ತೇಃ ಪ್ರಾಧಾನ್ಯಂ ಸರ್ವದಾ ಪರಿಕೀರ್ತಿತಂ ಮುಂದೆ 'ಶಿವನು ತಂದೆ, ಶಕ್ತಿಯು ತಾಯಿ' (ಸರ್ವೇಷಾಂ

ಜಗತಾಮೇಷಾಂ ಮಾತಾ ಶಕ್ತಿಃ ಪಿತಾ ಶಿವಃ) ವಾಸ್ತವವಾಗಿ ಒಂದೇ ಶೈವ ಶಕ್ತಿ; ಬೆಂಕಿಯಲ್ಲಿ ಕಾವು ಹೇಗೋ ಹಾಗೆ ಶಿವನಲ್ಲಿ ಶಕ್ತಿ ಅವಿನಾಭಾವಿನೀ (ಏಕೈವ ವಸ್ತುತಃ ಶೈವೀ ಶಕ್ತಿರ್ಯಾ ವಿಮಲಾ ಪರಾ। ಅವಿನಾಭಾವಿನೀ ಶಂಭೋಃ ಶುಚೇರುಷ್ಣತ್ವವದ್ವಿಭೋಃ) ಬೆಂಕಿಯಲ್ಲಿ ಬಿಸಿ ಇದ್ದಂತೆ, ಸೂರ್ಯನ ಕಿರಣಗಳಿದ್ದಂತೆ, ಚಂದ್ರನ ಬೆಳದಿಂಗಳಿದ್ದಂತೆ ಶಿವನಿಗೆ ಶಕ್ತಿ ಸಹಜವಾದುದು (ಶಿವಸ್ಯ ಸಹಾಜಾ ಶಿವಾ) ಎಂಬ ನಿಲುವು ಬಂದಿತಾದರೂ ಮೊದಲಿಗೆ ಶಕ್ತಿಯ ಪಾರಮ್ಯ ಇದ್ದುದರಲ್ಲಿ ಸಂಶಯವಿಲ್ಲ. ಶಕ್ತಿಯಿಂದಲೇ ಸಂಪ್ರದಾಯ ಶಕ್ತವಾದುದು. (ಎಸ್.ಕೆ.ರಾಮಚಂದ್ರರಾವ್, ಮೂರ್ತಿಶಿಲ್ಪ ನೆಲೆ ಮತ್ತು ಹಿನ್ನೆಲೆ – ಪು. ೧೬೩)

ಯಾದೇವಿ ಸರ್ವ ಭೂತೇಷು
ಶಕ್ತಿ ರೂಪೇಣ ಸಂಸ್ಥಿತಾ
ನಮಸ್ತಸ್ಯೈ ನಮಸ್ತಸ್ಯೈ ನಮಸ್ತ ಸ್ಯೈ ನಮೋ ನಮಃ

'ಸರ್ವ ಜೀವರಾಶಿಗಳಲ್ಲಿ ಶಕ್ತಿಯಾಗಿ ವಿಷದವಾಗಿರುವ ದೇವಿಯೇ ನಿನಗೆ ಮತ್ತೆ ಮತ್ತೆ ನಮಸ್ಕರಿಸುತ್ತೇನೆ'. ದುರ್ಗಾ ಸಪ್ತಶತಿಯ ಈ ಉಕ್ತಿಗಳು ದೇವಿಯ ಪಾರಮ್ಯವನ್ನು ಸೃಷ್ಟಿ, ಚೇತನದ ಜಗತ್–ವ್ಯಾಪಕತೆಯನ್ನು ಮತ್ತೆ ಮತ್ತೆ ರುಜುವಾತು ಪಡಿಸುತ್ತವೆ. ಯಾವುದೇ ಪಂಥ ಮತ್ತು ಸಂಪ್ರದಾಯವಿರಲಿ ದೇವಿಯು ಶಕ್ತಿರೂಪಿಣಿ ಎಂಬುದು ನಿರ್ವಿವಾದ. ಆದರೆ ಶಾಕ್ತ ಸಂಪ್ರದಾಯದ ಅನುಯಾಯಿಗಳು ಸೃಷ್ಟಿ, ಸ್ಥಿತಿ, ಲಯ, ಚೇತನ, ಜಡ, ಪಂಚಮಹಾಭೂತ, ಸಮಸ್ತ ಜೀವ ಜಂತುಗಳು, ಮಾನವ ಸಮುದಾಯದ, ಅಣು, ರೇಣು, ತೃಣ ಕಾಷ್ಟ ಎಲ್ಲವೂ ಶಕ್ತಿ ನಿಯಾಮಕ ಎಂಬುದನ್ನು ನಂಬುವುದೇ ಅಲ್ಲದೇ ದೇವಿಯ ಶಕ್ತಿಯ ಔನತ್ಯವನ್ನು ಪ್ರತಿ ಹೆಜ್ಜೆಯಲ್ಲೂ ಸ್ಪಷ್ಟಪಡಿಸುತ್ತಾ ಹೋಗುತ್ತಾರೆ. ಅವರ ಭಕ್ತಿ ಸಾಧನೆ ಪಥದಲ್ಲಿ ನೂರಾರು ದೇವಿಯ ರೂಪಗಳು ಸ್ಪಷ್ಟಗೊಳ್ಳುತ್ತವೆ. ಆ ರೂಪಗಳ ಹಿನ್ನೆಲೆ, ಉದ್ದೇಶ, ಬಾಹುಳ್ಯ, ಲೋಕಕಲ್ಯಾಣ ಭಾವನೆ, ವಿಸ್ತೃತತೆಯನ್ನು ಅರಿಯಲು ಹೊರಟಾಗ ದೇವಿಯು ಸ್ತ್ರೀಶಕ್ತಿ ಎಂಬ ಸೀಮಾರೇಖೆಯನ್ನು ದಾಟಿ ವಿಶ್ವವ್ಯಾಪಕ ಶಕ್ತಿಯಾಗಿ ಮೆರೆಯುವುದನ್ನು ಕಾಣುತ್ತೇವೆ. ಆ ಮಟ್ಟದ ಅರಿವಿನ ಅರ್ಥವನ್ನು ಸಾಂಖ್ಯ ತತ್ವಗಳಲ್ಲಿ ಹಾಗೂ ಯೋಗ–ಸಾಧನೆಯಲ್ಲಿ ಹೆಚ್ಚಿನ ಮಟ್ಟಿಗೆ ಅರಿತುಕೊಳ್ಳಲು ಸಾಧ್ಯ. ಈ ಅರಿವಿಗೆ ಆಧಾರವಾಗಿ ಶಕ್ತಿಯ ವಿಭಿನ್ನ ರೂಪಗಳ ಬಗ್ಗೆ ಒಂದು ಸ್ಥೂಲವಾದ ಪರಿಚಯದ ಅಗತ್ಯವು ಇಲ್ಲಿದೆ.

ದೇವೀ ಶಕ್ತಿಯನ್ನು ನಾನಾ ರೂಪದಲ್ಲಿ ಆವೀರ್ಭವಿಸಿ ಪರಿಕಲ್ಪಿಸಲಾಗಿದೆ. ಪ್ರತಿಯೊಂದು ರೂಪವೂ ಸ್ತ್ರೀ ಶಕ್ತಿಯ ಧೀಶಕ್ತಿಯನ್ನು ಪ್ರಸ್ತುತಪಡಿಸುತ್ತವೆ. ಇವುಗಳಲ್ಲಿ ಅತ್ಯಂತ ಪ್ರಾಚೀನವೂ ಬಹುಪಾಲು ಜನಪ್ರಿಯತೆಯನ್ನು ಪಡೆದಿರುವ ದುರ್ಗಾರೂಪ ಮುಖ್ಯವೆನಿಸುತ್ತದೆ. ದೇವಿಯ

ದುರ್ಗಾರೂಪವನ್ನು ತಿಳಿಯುವ ಮೊದಲು ಇತರ ರೂಪಗಳ ಕಡೆಗೆ ಗಮನಹರಿಸೋಣ. ದೇವಿಯ ರೂಪವನ್ನು ಆಯಾ ವಯೋಮಿತಿಗೆ ಅನುಸಾರವಾಗಿ, ಅವತಾರದ ಕಾರಣಕ್ಕಾಗಿ, ಮಹಾಉದ್ದೇಶಕ್ಕಾಗಿ, ಲೋಕ ಕಲ್ಯಾಣಕ್ಕಾಗಿ ವಿವಿಧ ರೀತಿಗಳಲ್ಲಿ ಪರಿಕಲ್ಪಿಸಲಾಗಿದೆ. ಅದರಂತೆ ಆಯಾ ರೂಪದ ಸುತ್ತಲೂ ಹಲವು ಸ್ವಾರಸ್ಯಕರ ಸಂಗತಿಗಳು, ಪ್ರಾಮಾಣ್ಯಗಳು, ಕಥಾನಕಗಳು, ಮೂರ್ತಿ ಲಕ್ಷಣಗಳು ಬೆಳೆದುಕೊಂಡು ಬಂದಿವೆ.

ವಯೋಮಿತಿಗೆ ಅನುಸಾರವಾಗಿ ನೋಡುವುದಾದರೆ ದೇವಿಯು ಒಂದು ವರ್ಷದವಳಿದ್ದಾಗ 'ಸಂಧ್ಯಾ' ಎಂಬುದಾಗಿ, ಎರಡನೇ ವರ್ಷದಲ್ಲಿ ಅವಳು 'ಸರಸ್ವತಿ'ಯೆಂಬುದಾಗಿ, ಏಳು ವರ್ಷದ ವೇಳೆಗೆ 'ಚಂಡಿಕಾ', ಎಂಟು ವರ್ಷದಲ್ಲಿ 'ಶಾಂಭವಿ', ಒಂಭತ್ತು ವರ್ಷದ ಹೊತ್ತಿಗೆ ದುರ್ಗಾ ಅಥವಾ ಬಾಲಾ ಎಂದು, ಹತ್ತರ ಹರೆಯದಲ್ಲಿ 'ಗೌರಿ', ಹದಿಮೂರರ ಸಮಯದಲ್ಲಿ 'ಮಹಾಲಕ್ಷ್ಮಿ' ಎನಿಸಿಕೊಂಡರೆ ಹದಿನಾರರ ಹರೆಯದಲ್ಲಿ ಆಕೆ 'ಲಲಿತೆ'ಯಾಗುತ್ತಾಳೆ.

ಲಲಿತ: ಇದೇ ಲಲಿತೆಯು ಷೋಡಶೀ ಎಂದೂ ತ್ರಿಪುರ ಸುಂದರಿ ಎಂದೂ ಕರೆಸಿಕೊಳ್ಳುವುದಲ್ಲದೇ ಲಲಿತಾ, ಷೋಡಶೀ ಮತ್ತು ತ್ರಿಪುರಸುಂದರಿ ಮೂರ್ತರೂಪಗಳು 'ಶ್ರೀ ಚಕ್ರ' ವೆಂಬ ಅಮೂರ್ತರೂಪದಲ್ಲಿ ಲೀನವಾಗಿ ಹೋಗುತ್ತವೆ.

ಲಲಿತೆಯೂ ಸಮರ ದೇವತೆಯಾಗಿ ತನ್ನ ಶಕ್ತಿ, ಬಲವನ್ನು ಪ್ರದರ್ಶಿಸಿರುವ ಅನೇಕ ಸಂದರ್ಭಗಳಿವೆ. ಲಲಿತೋ–ಪಾಖ್ಯಾನ ಗ್ರಂಥದಲ್ಲಿ ಲಲಿತೆಯ ಆವಿಷ್ಕಾರ, ಸಂದರ್ಭಗಳು, ಭಂಡಾಸುರನ ವಧೆಗಾಗಿ ದೇವಿಯು ಯೋಜಿಸುವ ಯುದ್ಧ ರಚನಾಕ್ರಮಗಳನ್ನು ವಿಸ್ತೃತ ಪಡಿಸಲಾಗಿದೆ. ದೇವಿಯ ಲಲಿತೆಯ ರೂಪವು ಹೆಚ್ಚು ದಕ್ಷಿಣ ಭಾರತದಲ್ಲಿ ಜನಪ್ರಿಯವಾಗಿರುವುದು ಲಲಿತಾ ಸಹಸ್ರನಾಮ ಮತ್ತು ಸೌಂದರ್ಯ ಲಹರೀ ಎಂಬ ಶಂಕರಾಚಾರ್ಯ ರಚಿತ ಭಕ್ತಿ ಸುಧಾಮೃತದಿಂದ. ಇದೇ ಪ್ರಮಾಣದಲ್ಲಿ ಬಂಗಾಳ ಪ್ರಾಂತ್ಯವೂ ಸೇರಿ ಉತ್ತರ ಭಾರತದಲ್ಲಿ ಕಾಳಿಯ ರೂಪವು ಜನಪರವಾದುದಾಗಿದೆ.

ಲಲಿತೆಯು ಚತುರ್ಭುಜೆಯಾಗಿರುತ್ತಾಳೆ. ಎರಡು ಕೈಗಳಲ್ಲಿ ಒಂದು ಫಲ ಮತ್ತು ಒಂದು ಸಂಪುಟವಿದ್ದರೆ, ಎಡಭಾಗದ ಎರಡು ಕೈಗಳಲ್ಲಿ ಶಂಖ ಮತ್ತು ದರ್ಪಣವಿರುತ್ತದೆ. ಸರ್ವಾಭರಣ ಭೂಷಿತೆಯಾಗಿ ಭವ್ಯವಾದ ನಿಲುವಿನ ನಿಂತ ಮೂರ್ತಿ ಲಕ್ಷಣವನ್ನು ಲಲಿತೆ ಹೊಂದಿರುತ್ತಾಳೆ. ಲಲಿತೆಯನ್ನು ಶ್ರೀಚಕ್ರ ಯಂತ್ರದಲ್ಲಿ ಆವಾಹನೆ ಮಾಡಿ ಪೂಜಿಸಿದಾಗ 'ಶ್ರೀ ವಿದ್ಯಾ' ಎಂದು ಪರಿಕಲ್ಪಿಸಲಾಗುತ್ತದೆ. ತಾಂತ್ರಿಕ ಮತ್ತು ವೈದಿಕ ಮಾರ್ಗಗಳನ್ನು ಒಂದುಗೂಡಿಸುವ ಈ 'ಶ್ರೀ

ವಿದ್ಯಾ' ಯಂತ್ರವು ಆದಿ ಶಂಕರಚಾರ್ಯರಿಂದ ರಚಿತವಾಗಿ ಅದರ ಮಹತ್ವವನ್ನು ಭವನ ಉಪನಿಷತ್ತು ಮತ್ತು ಲಲಿತೋಪಾಖ್ಯಾನದಲ್ಲಿ ವಿಸ್ತಾರವಾಗಿ ಉಲ್ಲೇಖಿಸಲಾಗಿದೆ. ಭಾರತೀಯ ಆಧ್ಯಾತ್ಮ ಸಾಧನೆಯ ಪಥದಲ್ಲಿ 'ಶ್ರೀ ವಿದ್ಯಾ' ಯಂತ್ರವು ತ್ರಿಪುರ ಸುಂದರಿ ಕಲ್ಪರೂಪದಲ್ಲಿ ಉಪಾಸನೆಗೊಳ್ಳುತ್ತದೆ. ಹೀಗೆ ಲಲಿತೆಯ ಉಪಾಸನೆ 'ಶ್ರೀವಿದ್ಯಾ' ಉಪಾಸನೆಯೆಂದೇ ತಿಳಿಯಲಾಗುತ್ತದೆ.

ನಂದ:

ನಂದ ಭಗವತಿಯೆಂಬ ದೇವಿಂ

ಗಂದುಕನಕಾಂಬರ ವಿಭೂಷಣ

ವಂದು ಕನಕ ಚತುರ್ಭುಜವು ಗದೆ ಶಂಖ ಶರಶಾರ್ಙ್ಗ

ಸುಂದರದ ಶೋಭಾಯ ಮಾನದ

ಲಂದು ಕನಕದ ಕುಂಡಲದ ಮಕು

ಟಿಂದ ವಶಿಕರ ನಂದಭಗವತಿ ಧ್ಯಾನ ಮೂರ್ತಿಂದ ॥ ೬೮ ॥

(ಶ್ರೀ ದೇವಿ ಮಹಾತ್ಮೆ. ಸಂ. ಅ. ರಾ. ಸೇ. Refer P. *೨೩೯–ಶ್ಲೋಕ–೫೪–೫೯ & ೬೪)*

ದೇವಿಯು ನಿಮಿತ್ತಾತ್ಮಕ ರೂಪಗಳನ್ನು ಮೇಲಿಂದ ಮೇಲೆ ತಳೆಯುತ್ತಿರುತ್ತಾಳೆ. ಮಾರ್ಕಂಡೇಯ ಪುರಾಣದ ದೇವಿ ಮಹಾತ್ಮದಲ್ಲಿ ದೇವಿಯು ವಿವಿಧ ರೂಪಗಳನ್ನು ತಳೆಯುವ ಬಗ್ಗೆ ಹೆಚ್ಚು ವಿವರಗಳು ದೊರೆಯುತ್ತವೆ. ದ್ವಾಪರಯುಗದ ಕೊನೆಯಲ್ಲಿ ಮತ್ತು ಕಲಿಯುಗದ ಆದಿಯ ಸಂದಿಗ್ಧಕಾಲವನ್ನು ವೈವಸ್ವತ ಮನ್ವಂತರ ಎಂದು ಗುರುತಿಸಲಾಗಿದೆ. ಆ ಸಮಯದಲ್ಲಿ ಶುಂಭ ಮತ್ತು ನಿಶುಂಭ ಎಂಬ ಅಸುರರ ಪ್ರಾಭಲ್ಯವಿರುತ್ತದೆ. ಆಗ ದೇವಿಯು 'ನಂದ' ಎಂಬ ರೂಪ ಪಡೆಯುತ್ತಾಳೆ. ವಿಂಧ್ಯ ಪರ್ವತದಲ್ಲಿ ಗೋವುಳಗ ನಂದ–ಗೋಪಾಲ ಎಂಬುವನಿಗೆ 'ನಂದ'ಳಾಗಿ ಜನಿಸುತ್ತಾಳೆ. ಅಲ್ಲಿಂದ ಮುಂದೆ ವಿಪ್ರಚಿತ್ತವೆಂಬ ವಂಶದಲ್ಲಿ ಹುಟ್ಟುವ ಎಲ್ಲಾ ಅಸುರರನ್ನು ನಾಶಪಡಿಸುತ್ತಾಳೆ. ಆದರೆ ವಿಷ್ಣು ಧರ್ಮೋತ್ತರದ ಪ್ರಕಾರ ಭಾರದ್ವಾಜರಿಂದ ನಂದ ಹುಟ್ಟುತ್ತಾಳೆ. ಚತುರ್ಭುಜೆಯಾಗಿ ಎಡಭಾಗದಲ್ಲಿ ವರದ ಮತ್ತು ಅಂಕುಶ ಹಿಡಿದಿದ್ದರೆ, ಬಲಭಾಗದಲ್ಲಿ ಅಭಯ ಮತ್ತು ಕಮಲ ಹಸ್ತ ಹಿಡಿದಿರುತ್ತಾಳೆ. ಇಲ್ಲವಾದಲ್ಲಿ ಖಡ್ಗ ಮತ್ತು

ಖೇಟಕಗಳನ್ನೂ ಹಿಡಿದಿರುತ್ತಾಳೆ. ಆನೆಯ ಮೇಲೆ ಕುಳಿತ ನಂದಾದೇವಿ ಶ್ವೇತ ವರ್ಣದವಳಾಗಿರುತ್ತಾಳೆ.

ನಂದಳ ರೂಪದಲ್ಲಿ ದೇವಿಯು ಸಾವಿರಾರು ಅಸುರರನ್ನು ಭಕ್ಷಿಸುತ್ತಾಳೆ. ಆಗ ಅವಳ ಹಲ್ಲು, ಬಾಯಿ, ದೇಹ ಮತ್ತು ಆಯುಧಗಳೆಲ್ಲಾ ರಕ್ತ ವರ್ಣವಾಗುವುದರಿಂದ ಅವಳ ಈ ರೂಪವನ್ನು ರಕ್ತ-ಚಾಮುಂಡ ಎಂದು ತಿಳಿಯಲಾಗುತ್ತದೆ. ರಕ್ತ ಚಾಮುಂಡಳನ್ನು ಯೋಗೇಶ್ವರಿಯ ರೂಪದಲ್ಲಿ ನೋಡಲಾಗುತ್ತದೆ. ಯೋಗೇಶ್ವರಿಯು ಚರಾ-ಚರ, ಜೀವ-ನಿರ್ಜೀವ ವಸ್ತುಗಳಲ್ಲಿ ಶಕ್ತಿ, ಬಲ ಚೇತನಗಳನ್ನು ತುಂಬುವುದೇ ಅಲ್ಲದೆ ಪ್ರಪಂಚದಾದ್ಯಂತ ಹೃದ್ಯವಾಗಿ ಜೀವ ನೀಡುವ ಮಹಾಶಕ್ತಿಯಾಗುತ್ತಾಳೆ. ದೇವಿಯು ತನ್ನ ನಾಲ್ಕು ಕೈಗಳಲ್ಲಿ ಖಡ್ಗ, ಮುಸಲಿ, ನೇಗಿಲು ಮತ್ತು ಪಾತ್ರೆಯನ್ನು ಹಿಡಿದಿರುತ್ತಾಳೆ. ಅದೇ ಸಮಯದಲ್ಲಿ ನೂರು ವರ್ಷಗಳ ಕಾಲ ನೀರು ಆಹಾರದ ತೀವ್ರ ಕೊರತೆಯಿಂದಾಗಿ ಭೀಕರ ಕ್ಷಾಮ ತಲೆದೋರುತ್ತದೆ. ದೇವಿಯ ಈ ಕ್ರೌರ್ಯ ವರ್ತನೆಗೆ ಬೆದರಿ ಋಷಿ ಮುನಿಗಳೆಲ್ಲಾ ದೇವಿಯನ್ನು ಶಾಂತಳಾಗಿ ಲೋಕವನ್ನು ಉದ್ಧಾರ ಮಾಡೆಂದು ಪ್ರಾರ್ಥಿಸಿದಾಗ ಪಾರ್ವತಿಯ ದೇಹದ ಮೂಲಕ ನೂರು ಕಣ್ಣುಗಳನ್ನು ಪಡೆದುಕೊಂಡು ಹೊರಬಂದ ರೂಪವನ್ನು 'ಶತಾಕ್ಷಿ' ಎಂದು ಗುರುತಿಸಲಾಗುತ್ತದೆ. ವೈವಸ್ವತ ಮನ್ವಂತರದ ನಲವತ್ತನೇ ಯುಗದಲ್ಲಿ ಶತಾಕ್ಷಿಯು ನೂರಾರು ರೀತಿಯ ಸಸ್ಯವರ್ಗಗಳನ್ನು, ಜಲವನ್ನೂ, ತರಕಾರಿಗಳನ್ನೂ ಬೆಳೆಯುವಂತೆ ಕರುಣಿಸುವ ರೂಪವನ್ನು 'ಶಾಕಾಂಬರಿ' ಎಂದು ತಿಳಿಯಲಾಗುತ್ತದೆ. ತದನಂತರ ಇದೇ ಸಮಯದಲ್ಲಿ ದುರ್ಗಮನೆಂಬ ಅಸುರನನ್ನು ಸಂಹರಿಸುವ ದೇವಿಯನ್ನು 'ದುರ್ಗಾ' ಎಂದು ಕರೆಯಲಾಗಿದೆ. (T.A. Gopinath Rao, Elements of Hindu Iconography vol.I Part II, p. 334)

ಶಾಕಾಂಬರಿ, ಬನಶಂಕರಿ : ಪದ್ಮಪುರಾಣದಲ್ಲಿ ಶಾಕಾಂಬರಿಯನ್ನು ಧ್ಯಾನಿಸುತ್ತಾ ಈ ರೀತಿ ವರ್ಣಿಸಲಾಗಿದೆ. ಶೂಲ, ಪಾಶ, ಕಪಾಲ, ಬಿಲ್ಲು, ವಜ್ರಾಯುಧ, ಬಾಣಗಳು, ಅಂಕುಶ, ಗುರಾಣಿ, ಶಂಖ, ಚಕ್ರ, ಗದಾ, ಸರ್ಪ, ಖಡ್ಗ, ಅಭಯ ಮುದ್ರೆ, ಖಟ್ವಾಂಗ, ದಂಡ ಹಾಗೂ ದೂರ್ವಾ ಇವುಗಳನ್ನು ಧರಿಸಿ ಮಳೆಯು ಬಾರದೇ (ಕ್ಷಾಮ) ಹತಪ್ರಾಯರಾಗಿದ್ದ ಮುನಿಸಮೂಹವನ್ನು ಸಸ್ಯಾದಿಗಳನ್ನು ನೀಡಿಯಾವಳು ರಕ್ಷಿಸುವಳೋ ಅಂತಹ ಲೋಕಜನನಿಯಾದ ಮಹೇಶ ಪ್ರಾಣ ವಲ್ಲಭೆಯಾದ ಶಾಕಾಂಬರಿಯನ್ನು ನಮಿಸುತ್ತೇನೆ. (ಶ್ರೀ ತತ್ವನಿಧಿ Vol,I, ಶಕ್ತಿ ನಿಧಿ ಪುಟ.೨೨೭)

ಪದ್ಮಪುರಾಣದ ವಿವರಗಳ ಪ್ರಕಾರ ಪ್ರಳಯಕಾಲದ ವಹ್ನಿರೂಪದ ಕಾಂತಿಯಿಂದ ಸುಂದರವಾಗಿರುವ, ಶೂಲ, ಕಪಾಲಿ, ಬಾಣ, ಬಿಲ್ಲು, ವರ, ಅಭಯ, ಪರಿಘ (ಆಯುಧ) ಶಂಖ,

ಚಕ್ರ ಮತ್ತು ಗದೆ ಇವುಗಳನ್ನು ಧರಿಸಿರುವ ಚಂದ್ರಕಲೆಯಿಂದ ಶೋಭಿಸುವ ಕಿರೀಟವುಳ್ಳ, ರತ್ನ - ಖಚಿತವಾದ ವಸ್ತ್ರಗಳಿಂದ ಅಲಂಕೃತಳಾದ ಮೂರು ಕಣ್ಣುಗಳಿರುವ ಬ್ರಹ್ಮ ಮತ್ತು ವಿಷ್ಣುವಿನಿಂದ ಸ್ತೋತ್ರ ಮಾಡಲ್ಪಟ್ಟ ಬನಶಂಕರಿಯನ್ನು ನಮಸ್ಕರಿಸುತ್ತೇನೆ. (ಶಕ್ತಿ ನಿಧಿ, ಪುಟ -೨೨೭) ಹೀಗೆ ಸಮಸ್ತ ಸಸ್ಯ, ಬನಗಳಿಗೆ ಅಭಿಮಾನಿ ದೇವತೆಯಾಗಿರುವುದರಿಂದ ದೇವಿಯು ಶಾಕಾಂಬರೀ ಮತ್ತು ಬನಶಂಕರಿಯಾಗಿ ಶೋಭಿಸುತ್ತಾಳೆ. ಹಿಂದೂ ಸಂಪ್ರದಾಯಗಳಲ್ಲಿ ಶಾಕಾಂಬರೀ ವ್ರತವೂ ಮುಖ್ಯವಾಗಿರುತ್ತದೆ. ಬನಗಳನ್ನು ರಕ್ಷಿಸುವ ಅಧಿದೇವತೆಯಾಗಿ ಬನಶಂಕರಿ ದೇವಾಲಯಗಳು ಕಂಡುಬರುತ್ತವೆ.

ದಶ ಮಹಾವಿದ್ಯಾ: ಮುಂಡ ಮಾಲಾತಂತ್ರದ ಪ್ರಕಾರ ಒಂದೇ ಶಕ್ತಿಯ ಹತ್ತು ಅವತಾರ ವಿಶೇಷಗಳು ಮಹಾವಿದ್ಯೆಯರೆಂದು ವ್ಯವಹರಿಸಲ್ಪಡುತ್ತಾರೆ. ಧೂಮವತೀ, ಬಗಲೀ, ಭೈರವೀ, ಛಿನ್ನಮಸ್ತಾ, ಭುವನೇಶ್ವರೀ, ಸುಂದರೀ, ತಾರಾ, ಕಾಲೀ, ಕಮಲಾ, ದುರ್ಗಾ ಇವು ಅಲ್ಲಿನ ಹೆಸರುಗಳು. ಆದರೆ ವಾಡಿಕೆಯಲ್ಲಿ ಕಾಳಿ, ತಾರಾ, ಷೋಡಶೀ (ತ್ರಿಪುರಾ), ಭುವನೇಶ್ವರಿ, ಭೈರವಿ (ತ್ರಿಪುರ ಭೈರವಿ) ಛಿನ್ನಮಸ್ತಾ, ಧೂಮವತೀ, ಅಲಕ್ಷ್ಮಿ (ವಿಧವೆ), ಮಾತಂಗೀ, ಕಮಲಾ (ಲಕ್ಷ್ಮಿ) ಬಗಲಾಮುಖಿ ಇವರನ್ನು ದಶಮಹಾವಿದ್ಯೆಯರೆಂದು ಹೇಳುವುದಿದೆ. ಇವರಲ್ಲಿ ಮೊದಲನೇ ಎರಡು ಮಹಾವಿದ್ಯೆಗಳೆಂದೂ, ಅನಂತರ ಐದು ವಿದ್ಯೆಗಳೆಂದೂ, ಅಲ್ಲಿಂದ ಮುಂದೆ ಮೂರು ಸಿದ್ಧ ವಿದ್ಯೆಗಳೆಂದೂ ಪರಿಗಣಿಸಿ, ಷೋಡಶಿಯನ್ನು ಶ್ರೀವಿದ್ಯೆಯೆಂದೂ ಕರೆಯುತ್ತಾರೆ. ಬಾಲಾ, ಲಲಿತಾ, ಮಹಾತ್ರಿಪುರ ಸುಂದರೀ, ರಾಜರಾಜೇಶ್ವರೀ, ಲಲಿತಾ ಪರಮೇಶ್ವರೀ ಎಂಬ ಪರ್ಯಾಯ ನಾಮಗಳಿವೆ. ಒಂದೊಂದು ವಿದ್ಯೆಗೂ ಪ್ರತ್ಯೇಕವಾದ ಧ್ಯಾನ, ಮಂತ್ರ, ಯಂತ್ರ, ಕವಚ ಮೊದಲಾದವು ಇರುತ್ತವೆ. (ಎಸ್. ಕೆ. ರಾಮಚಂದ್ರರಾವ್, ಮೂರ್ತಿ ಶಿಲ್ಪ ನೆಲೆ ಹಿನ್ನೆಲೆ, ಪುಟ. ೧೭೩)

ದೇವಿ ಭಾಗವತ ಪುರಾಣದ ಪ್ರಕಾರ. ದೇವಿಯು ಸತಿಯ ರೂಪದಲ್ಲಿದ್ದಾಗ ತನ್ನ ತಂದೆ ಆಯೋಜಿಸಿದ್ದ ಯಜ್ಞಕ್ಕೆ ಹೋಗಲು ಪತಿಯಾದ ಶಿವನು ಒಪ್ಪಿಗೆ ನೀಡದಿದ್ದಾಗ ಸತಿಯ ಕೋಪ ಉತ್ತುಂಗಕ್ಕೇರಿ ಆ ಶಕ್ತಿಯು ಹತ್ತು ಮಹಾರೂಪಗಳಲ್ಲಿ ಹೊರಹೊಮ್ಮಿತು. ಆ ಮಹಾರೂಪಗಳೇ ಮುಂದೆ ಜ್ಞಾನದೇವಿಗಳಾಗಿ ಮಹಾವಿದ್ಯೆಯರಾದರು. ದೇವಿ ಪುರಾಣಗಳು ತಿಳಿಸುವಂತೆ ದೇವಿಯ ಕೋಪ, ಅಗಾಧ ಶಕ್ತಿಗೆ ಪೃಥ್ವಿ ನಡುಗಿತು. ಶಾಂತವಾದ ಹಿಮಾಲಯ ಪರ್ವತ ಅಲ್ಲಾಡತೊಡಗಿತು. ಪ್ರಕೃತಿ ಅಲ್ಲೋಲ ಕಲ್ಲೋಲವಾಯಿತು. ದೇವಿಯು ವಿಕಾರವಾಗಿ ಬೃಹದಾಕಾರವಾಗಿ ಬೆಳೆಯತೊಡಗಿದಳು ಶಿವನ ಸತಿ ಏನಾದಳೆಂದು ಶಿವನಿಗೆ ಚಿಂತೆಯಾಗಿ ಆ

ಬೃಹದಾಕಾರದ ಶಕ್ತಿಯಿಂದ ತಪ್ಪಿಸಿಕೊಂಡು ಓಡತೊಡಗಿದಾಗ ಯಾವ ದಿಕ್ಕಿಗೆ ಹೋದರೂ ಅಂತಹುದೇ ಒಂದು ಶಕ್ತಿಯು ಎದುರಾಗತೊಡಗಿತು.

ಶಿವನು ದಿಕ್ಕು ತೋಚದೆ ಆ ಸ್ತ್ರೀ ಮಾಯೆಯನ್ನು ನೀನಾರು ನನ್ನ ಸುಂದರವಾದ ಸತಿ ಎಲ್ಲಿ ಎಂದು ಪ್ರಶ್ನಿಸಿದಾಗ ದೇವಿಯು ಹೂಂಕರಿಸುತ್ತಾ ನಾನೇ ನಿನ್ನ ಸತಿ ನನ್ನನ್ನು ಗುರುತಿಸಲು ನಿನಗೆ ಸಾಧ್ಯವಾಗದೇ ಗೊಂದಲದಲ್ಲಿ ಸಿಕ್ಕಿ ಬಿದ್ದಿದ್ದೀಯ ಎಂದು ಘರ್ಜಿಸಿದಾಗ ಶಿವ ಮತ್ತೆ ಕೇಳುತ್ತಾನೆ, ನೀನು ಯಾರು, ನಿನ್ನ ಮೂಲ ಪ್ರಕೃತಿ ಯಾವ ಸ್ವರೂಪದ್ದು, ಏಕೆ ನೀನು ಭಯಂಕರ ರೂಪಗಳನ್ನು ತಾಳುತ್ತಾ ನನಗೆ ಕಾಣಿಸಿಕೊಳ್ಳುತ್ತಿರುವೆ ಎಂದು ಕೇಳಲಾಗಿ, ದೇವಿಯು "ಯೋಗ ಪುರುಷನಾದ ನಿನಗೆ ನಲ್ಮೆಯ ಪತ್ನಿಯಂತೆ ಕಾಣುವ ಪಾರ್ವತಿಯಾದ ನಾನು ಈ ಜಗತ್ತನ್ನು ಸೃಷ್ಟಿಸುವ, ನಡೆಸುವ ಹಾಗೂ ನಾಶ ಮಾಡುವ ಮಹಾಶಕ್ತಿಯನ್ನು ಪಡೆದಿದ್ದೇನೆ. ಅಲ್ಲದೇ ಅನೇಕಾನೇಕ ರೂಪಗಳನ್ನು ಪಡೆಯುವ ಮಹಾ ಚೇತನ ನಾನಾಗಿದ್ದೇನೆ." ಎಂದು ತಿಳಿಸುತ್ತಾಳೆ. ಶಿವನಿಗೆ ಹತ್ತು ದಿಕ್ಕುಗಳಲ್ಲಿ ಎದುರಾಗಿ ಬಂದ ರೂಪಗಳ ಬಗ್ಗೆಯೂ ವಿವರಿಸುತ್ತಾಳೆ. ಪೂರ್ವದಲ್ಲಿ ಎದುರಾದ ದೇವಿಯ ರೂಪ ಕಾಳಿಯಾಗಿರುತ್ತದೆ. ಆದ್ದರಿಂದಲೇ ಪ್ರಾಯಶಃ ಕಾಳಿಯ ಆರಾಧನೆ ಭಾರತದ ಪೂರ್ವಭಾಗದ ಒರಿಸ್ಸಾ, ಬಂಗಾಳ ಮತ್ತು ಅಸ್ಸಾಂಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಈ ರೂಪದಲ್ಲಿ ಅವಳು ಕಪ್ಪು ಶರೀರ ಹೊತ್ತು ನಾಲಿಗೆ ಚಾಚಿ, ರುಂಡ ಮಾಲೆಗಳನ್ನು ಧರಿಸಿ ಭಯಂಕರವಾಗಿ ಗೋಚರಿಸುತ್ತಾಳೆ. ಪಶ್ಚಿಮ ದಿಕ್ಕಿನಲ್ಲಿ ತಾರಾ ಆಗಿ ಬಿಳಿಯ ಮೇಘ ವರ್ಣದವಳಾಗಿರುತ್ತಾಳೆ. ದಕ್ಷಿಣ ದಿಕ್ಕಿಗೆ ಛಿನ್ನಮಸ್ತ ಎಂಬ ಭಯಂಕರ ಸ್ವರೂಪದಲ್ಲಿ ತನ್ನ ತಲೆಯನ್ನೇ ಕಡಿದು ಕೈಯಲ್ಲಿ ಹಿಡಿದು ರಕ್ತವು ಕುತ್ತಿಗೆಯೊಳಗಿಂದ ಚಿಮ್ಮುವ ಭೀಭತ್ಸ ರೂಪ ಧರಿಸುತ್ತಾಳೆ. ಉತ್ತರದಲ್ಲಿ ಈ ಜಗವನ್ನೇ ಆಳುವ ರೂಪದ ಭುವನೇಶ್ವರಿಯಾಗಿ ಕಂಗೊಳಿಸುತ್ತಾಳೆ.

ಅದರಂತೆಯೇ ಆಗ್ನೇಯ ದಿಕ್ಕಿನಲ್ಲಿ ವಿಧವೆ ಧೂಮವತಿಯಾಗಿ, ನೈರುತ್ಯ ದಿಕ್ಕಿನಲ್ಲಿ ಕಮಲಾ ರೂಪದಲ್ಲಿ. ವಾಯುವ್ಯ ದಿಕ್ಕಿನಲ್ಲಿ ಮಾತಂಗಿಯಾದರೆ ಈಶಾನ್ಯ ದಿಕ್ಕಿನಲ್ಲಿ ಶೋಡಶೀ (ಲಲಿತೆಯ) ರೂಪದಲ್ಲಿ ಪ್ರಕಟಗೊಳ್ಳುತ್ತಾಳೆ. ಈ ಎಂಟು ದಿಕ್ಕುಗಳೇ ಅಲ್ಲದೇ ಶಿವನ ಕೆಳಗೆ, ಭೂಮಿಯ ಮೇಲೆ ಭೈರವಿ ಮತ್ತು ಶಿವನ ತಲೆಯ ಮೇಲೆ ಆಕಾಶದಲ್ಲಿ ಬಗಲಾಮುಖಿಯಾಗಿರುತ್ತಾಳೆ. ಈ ರೀತಿ ದೇವಿಯ ಮಹಾಶಕ್ತಿಯು ದಶದಿಕ್ಕುಗಳಲ್ಲಿ ಪ್ರವಹಿಸಿ ದಶರೂಪಗಳನ್ನು ಹೊಂದಿ ಆಯಾ ರೂಪದಲ್ಲಿ ಆರಾಧನೆಗೊಳ್ಳುತ್ತದೆ. ದೇವಿಯ ಉಪಾಸಕರು ಈ ದಶ ಮಹಾರೂಪಗಳನ್ನು 'ಮಹಾವಿದ್ಯಾ' ಎಂಬ ಸ್ವರೂಪದಲ್ಲಿ ಉಪಾಸನೆ ಮಾಡಿ ಜ್ಞಾನಸಿದ್ಧಿಯನ್ನು ಪಡೆಯುತ್ತಾರೆ. ಭಾಗವತ ಪುರಾಣದಲ್ಲಿ ವಿಷ್ಣುವಿನ ೧೦ ಅವತಾರಗಳು

ದಶಾವತಾರವೆಂದು ಹೇಗೆ ಉಕ್ತವಾಗಿದೆಯೋ ಅದೇ ರೀತಿಯಾಗಿ ಗುಹ್ಯಾತಿಗುಹ್ಯ ತಂತ್ರದಲ್ಲಿ ಹತ್ತು ಮಹಾವಿದ್ಯೆಯರನ್ನು ವಿಷ್ಣುವಿನ ಅವತಾರಗಳಿಗೆ ಸಮೀಕರಿಸಿ ಚರ್ಚಿಸಲಾಗಿದೆ. ಇದರಿಂದ ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀತ್ವದ ಶಕ್ತಿ ಮಹತ್ವದ ಹಿನ್ನೆಲೆಯನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ.

ಮಹಾವಿದ್ಯ ಕಾಳಿ

ಅದುವೆಕಾರಣ ವಿಷ್ಣುಮಾಯೆಯ
ನೊದವಿ ತಿಳಿಯಲಿಕರಿದು ತ್ರಿಗುಣದ
ಉದಿಸಿ ತೋರುವ ಮೂರ್ತಿಗಳು ಮರೆಹೊಕ್ಕುಬದುಕಿದರು
ಕನದಲಿ ಈ ದೇವಿ ಕೊಂದಿಹ
ಅದುಭುತದ ರಕ್ಕಸರನೆಣಿಸಲು
ಸುಧೆ ಶರಧಿ ಮಳಲಿಂಗೆ ಮಿಕ್ಕಿಹರೆಂದ ಸಾಂಬಶಿವ ॥ ೫೪ ॥
ಹರಿಯ ಅವತಾರಗಳು ದೇವಿಯ
ಪರಮ ಅವತಾರಗಳು ಹರಿಗೆಯು
ಗಿರಿಜೆಗೆಯು ಭೇದವನು ಮಾಡವನಾವ ಪಾತಕನು
ಉರುಳುವನು ಮಹಘೋರ ನರಕದಿ
ಹರಿವು ಇಲ್ಲವನಿಂಗೆ ಯಮನವ
ರರಿವರ್ರೈ ಬಳಿಕವನ ಕಲ್ಪಾಂತರರದಿ ಕೇಳೆಂದ ॥ ೫೫ ॥
ಧ್ಯಾನ ಮಾಡುವ ಮೂರ್ತಿವಿವರವ
ನಾನು ವಿವರಿಪೆ ಅಷ್ಟಭುಜವುದ
ಶಾನನವು ಡಮರುಗವು ಶೂಲಾಂಕುಶವು ಶರಚಾಪ
ಪಾನಪಾತ್ರೆಯು ಚಕ್ರವಸಿಸಹ
ಮಾನಸದಿ ಪೂಜಿಸಲು ಬೇಕೈ
ಜ್ಞಾನವಂತನೆ ಅರಿಗುಕೋ ಇದು ಕಾಳಿ ಮೂರ್ತೆಂದ ॥ ೫೬ ॥
ಒಂದು ತಲೆ ಭುಜನಾಲ್ಕು ವಿಸ್ತಾ
ರಂದವದನ ತ್ರಿರಕ್ತನಯನಗ
ಳಿಂದ ಶಿರಮಾಲೆಯು ಕಪಾಲ ಅಸಿತಾಂಗ ವರ್ಣವದು

ಛಂದದಿಂ ಖಟ್ವಾಂಗ ಶೂಲಸಿ
ಖಿಂದ ಬೆಳಗುವ ಮೂರ್ತಿಯದ ಮನ
ದಿಂದ ಧ್ಯಾನಿಸಬೇಕು ಇದುತಾ ಕಾಳಿ ಮುರ್ತಿಂದ ॥ ೫೭ ॥
ಇಟ್ಟರಕ್ತದ ತಿಲಕ ಶೋಣಿತ
ಬೊಟ್ಟು ನೊಸಲಲಿ ವೀರಜಡೆತಾ
ವಷ್ಟಭುಜವು ತ್ರಿವದನ ಶೇಷಾಭರಣ ಶಿರಮಾಲೆ
ಉಟ್ಟರಕ್ತಾಂಬರ ಗದಾಯುಧ
ಕಟ್ಟಿರುವ ಖಟ್ವಾಂಗವಸಿ ಬಹು
ದಿಟ್ಟಮೂರ್ತಿಯ ನೆನೆವುದಿದುತಾ ಕಾಳಿಮೂರ್ತೆಂದ ॥ ೫೮ ॥
ತಲೆಗಳವುತಾಹತ್ತು ಪಾದವು
ತಿಳಿಯಲಿಕ್ಕವು ಹತ್ತು ಭುಜಗಳು
ಬೆಳಗುತಿಹವವು ಹತ್ತು ಸರ್ವಾಯುಧಗಳನೆಧರಿಸಿ
ಬಲು ಶಿರದ ವನಮಾಲೆ ಶೋಣಿತ
ಕೊಳುವ ಪಾತ್ರೆ ತ್ರಿರಕ್ತ ನಯನವು
ತಿಳಿ ವೃಷಭ ಇದು ಧ್ಯಾನ ಮೂರ್ತಿಯು ಕಾಳಿಮೂರ್ತೆಂದ ॥ ೫೯ ॥
ನಂದಿಕೇಳ್ ಮಧೂಕೈಟರಭರತಾ
ಕೊಂದಳೈ ಮಹಕಾಳಿಯಾಗಿಯೆ
ಮುಂದೆ ಮಹಿಷನ ಕೊಂದಳೈ ಮಹಲಕ್ಷ್ಮಿಯನಿಸುತಲಿ
ಮಂದಮತಿ ಶುಂಭಾ ನಿಶುಂಭರ
ನಂದು ಛೇದಿಸಿದಾಕೆ ಭಾರತಿ
ತಂದೆ ಅರಿ ಮೂರಾಗಿ ತೋರಿದಳೀಕೆ ಮಹಗೌರಿ ॥ ೬೦ ॥
ಕೊಂದ ಮಧುಕೈಟಭರ ಪುರುಷನು
ಅಂದು ಆ ಮಹಕಾಳಿ ತಾನೇ
ಅಂದು ಪುರುಷನು ತಾನೆಸ್ತ್ರೀಯಾಗಿಹಳು ಅರಿಯಲಿಕೆ
ಹಿಂದೆ ಪುರುಷಾಕೃತಿಯಲವರನು
ಕೊಂದಳೈ ಮಹಕಾಳಿ ತಾಹರಿ
ಯೆಂದು ಕಾಳಿಯೆ ಹರಿಯು ಇಂತಿರುತಿಹುದು ಸೌಂಜ್ಞೆಂದ ॥ ೬೧ ॥

(ಶ್ರೀ ದೇವಿ ಮಹಾತ್ಮೆ. ಸಂ. ಅ. ರಾ. ಸೇ. Refer P. ೨೩೯–ಶ್ಲೋಕ–೫೪–೫೯ & ೬೪)

ದೇವಿಯ ಎಲ್ಲಾ ರೂಪಗಳ ಲಕ್ಷಣ ಹಾಗೂ ಪ್ರಕಟಗೊಂಡ ರೀತಿಯನ್ನು ಸಮೀಕ್ಷಿಸಿದಾಗ ಕಾಳಿಯ ರೂಪವೇ ಹೆಚ್ಚು ಭಯಂಕರವಾಗಿರುತ್ತದೆ. ದುರ್ಗೆಯಂತೆಯೇ ಕಾಳಿಯೂ ಶಿವನ ಸಹಯೋಗದೊಂದಿಗೆ ವ್ಯವಹರಿಸುತ್ತಾಳೆ. ಅವಳ ಶಕ್ತಿಯು ವಿಕೋಪದೆಡೆಗೆ ಕರೆದೊಯ್ಯುವಂತಹುದು. ಅವಳ ಸಂಹಾರದಾಹ ಎಲ್ಲವನ್ನೂ ಭಕ್ಷಿಸಿ ನಿರ್ನಾಮ ಮಾಡುವಂತಹುದು. ಒಳಿತು ಕೆಡಕುಗಳು ಇಲ್ಲಿ ಗೌಣವಾಗುತ್ತವೆ. ಅವಳ ಆಕ್ರೋಶಕ್ಕೆ ಜಗತ್ತೇ ತತ್ತರಿಸಿ ಕಾಲಕೆಳಗೆ ನಾಶವಾಗತೊಡಗುತ್ತವೆ. ಶಿವನು ಕಾಲನಾಗಿ ಬಂದರೂ ಅವಳನ್ನು ಶಾಂತಸ್ಥಿತಿಗೆ ತರಲಾಗುವುದಿಲ್ಲ. ಆಗ ಅವಳ ಪಾದದ ಕೆಳಗೆ ಬಿದ್ದಾಗ ಕೋಪಾವೇಶದಿಂದ ಉನ್ಮತ್ತಳಾಗಿ ಅವನ ದೇಹದ ಮೇಲೇ ನಿಲ್ಲುತ್ತಾಳೆ. ಆಗ ಅವಳಿಗೆ ಶಿವನ ಅರಿವು ಉಂಟಾಗಿ ಅವಳ ಕ್ರೋಧ ಶಮನವಾಗಿ ತನ್ನ ಭಕ್ತರ, ಅನುಯಾಯಿಗಳ ಪಾಪಗಳನ್ನು ನಾಶ ಮಾಡುವ ಕಾರ್ಯದಲ್ಲಿ ತೊಡಗಿ ದರ್ಶನ ನೀಡುತ್ತಾಳೆ. ಕಾಳಿಯ ರೂಪದಲ್ಲಿ ದೇವಿಯು ರಕ್ತ ಬೀಜಾಕ್ಷರನನ್ನು ಸಂಹರಿಸುತ್ತಾಳೆ. ರಕ್ತಬೀಜಾಸುರನು ಪಡೆದ ವರದ ಪ್ರಕಾರ ಅವನ ದೇಹದಿಂದ ಒಂದು ತೊಟ್ಟು ರಕ್ತ ಬಿದ್ದರೂ ಅಸಂಖ್ಯಾತ ಅಸುರರು ಎಲ್ಲಾ ದಿಕ್ಕುಗಳಲ್ಲಿ ವ್ಯಾಪಿಸಿ ಆಕ್ರಮಣ ಮಾಡುತ್ತಾರೆ. ದೇವಿಯು ಕಾಳಿಯ ರೂಪವನ್ನು ಈ ಕಾರಣಕ್ಕಾಗಿಯೇ ತಾಳಿದಳು. ಯಾವ ಆಯುಧಗಳಿಂದ ಎಷ್ಟು ಬಾರಿ ಸಂಹರಿಸಿದರೂ ಅಸಂಖ್ಯಾತ ರಕ್ತಬೀಜ ಸಂತತಿಯ ರಾಕ್ಷಸರು ಹುಟ್ಟಿಕೊಂಡು ಭೀಕರ ಯುದ್ಧ ಸಂಭವಿಸಿತು. ಕೊನೆಗೆ ಕಾಳಿಯು ಬಹಳ ಯೋಚಿಸಿ, ಕೊನೆಗೆ ತನ್ನ ಬಾಯಿಯನ್ನು ಭಯಂಕರವಾಗಿ ಅಗಲಿಸಿ ರಾಕ್ಷಸರ ರಕ್ತವು ಕೆಳಗೆ ಬೀಳದಂತೆ ತನ್ನ ನಾಲಿಗೆಯನ್ನೇ ಚಾಚಿ ರಕ್ತವನ್ನೆಲ್ಲಾ ಕುಡಿಯುತ್ತ ರಕ್ತಬೀಜನನ್ನು ಕೊಚ್ಚಿಹಾಕಿ ತಿಂದು ಹಾಕಿದಳು. ಹೀಗೆ ಮಹಾಕಾಳಿಯು ನಾಲಿಗೆಯನ್ನು ಹರಡಿ ವಜ್ರಾಯುಧ, ಶೂಲಿ, ಶಕ್ತಿ, ಚಕ್ರ, ಖಟ್ವಾಂಗ, ಖಡ್ಗಗಳಿಂದ ರಾಕ್ಷಸರನ್ನು ಕತ್ತರಿಸಿ ರಕ್ತವನ್ನು ಹೀರಿ ಅವರೆಲ್ಲರನ್ನೂ ತಿಂದು ಮುಗಿಸಿದಳು. ಹೀಗೆ ಕಾಳಿಯು ಸಂಹಾರ ಮಾಡಲು ರಕ್ತಬೀಜಾಸುರರೆಲ್ಲ ನಾಶವಾದರು. ಆದಿರಕ್ತಾಸುರನ ರಕ್ತವನ್ನು ಹೀರಿ ಶೂಲದಿಂದ ಅವನನ್ನು ತಿವಿದು ಆ ಮಹಾಕಾಳಿಯು ಅವನನ್ನೂ ತಿಂದು ಹಾಕಿದಳು. ರಕ್ತ ಬೀಜನ ಅಂತ್ಯವಾಗಿದ್ದರಿಂದ ದೇವಿಗೆ ಆನಂದವಾಯಿತು. (ಕುಮುದ ಪ್ರಿಯ, (ಅನುವಾದಕರು) ಶ್ರೀ ಕಾಳಿಕಾ ಪುರಾಣವೆಂಬ ವಚನ ಶ್ರೀದೇವಿ ಮಹಾತ್ಮೆ, (ಪುಟ ೮೯– ೯೦)

ಇಂತಹ ಒಂದು ಭೀಕರ ರೂಪ ಉದ್ಭವವಾದದ್ದು ಶಿವಕಂಠದಲ್ಲಿ ಹೆಪ್ಪುಗಟ್ಟಿದ ವಿಷದಿಂದ. ಹಾಗೆ ಹೊರ ಬಂದ ಕರಾಳ ರೂಪದ ದೇವಿ ದಾರುಕ ಎಂಬ ರಾಕ್ಷಸನನ್ನೂ ಸಂಹರಿಸುತ್ತಾಳೆ. ಕಾಳಿಯು ಶಿವನ ಪತ್ನಿ ಉಮಾ ಅಥವಾ ಪಾರ್ವತಿಯರಿಂದಲೂ

ಉದ್ಭವವಾಗುತ್ತಾಳೆ. ಲಿಂಗ–ಪುರಾಣದಲ್ಲಿ ತ್ರಿಪುರ ಸಂಹಾರ ಸಂದರ್ಭದಲ್ಲಿ ಶಿವನ ಒಂದೆ ಪಾರ್ವತಿಯು ಕಾಳಿಯ ರೂಪದಲ್ಲಿ ಹೋಗಿ ಯುದ್ಧರಂಗದಲ್ಲಿ ಸಹಕರಿಸುತ್ತಾಳೆ.

ಕಾಳಿಕಾ ಮೂರ್ತಿ ಲಕ್ಷಣದಲ್ಲಿ ಮೂಲತಃ ಭುಜಗಳ ಸಂಖ್ಯೆಯನ್ನು ಮತ್ತು ಆಯುಧಗಳನ್ನು ಗಮನಿಸಿದಾಗ ಸಾಕಷ್ಟು ವಿಭಿನ್ನತೆಯು ಕಂಡುಬರುತ್ತದೆ. ಕಪ್ಪು ವರ್ಣ ದೇಹ, ೫೦ ರುಂಡಗಳುಳ್ಳ ಉದ್ದವಾದ ಮಾಲೆ ಅನೇಕ ಕೈಗಳನ್ನು ಕತ್ತರಿಸಿ ಅದನ್ನೇ ಮೇಖಲೆಯ ರೂಪದಲ್ಲಿ ರಚಿಸಲಾಗಿರುತ್ತದೆ. ಅವಳ ಕುಂಡಲಗಳು ಸತ್ತ ಮಕ್ಕಳು, ಕೈಗಳಲ್ಲಿ ಸರ್ಪಗಳೇ ಮಣಿಕಟ್ಟು, ಅವಳ ಇಷ್ಟವಾದ ಸ್ಥಾನ ಯುದ್ಧರಂಗ ಮತ್ತು ಸ್ಮಶಾನ. ಅವಳ ಶತ್ರುಗಳ ಹಸಿರಕ್ತವನ್ನು ಕುಡಿದು ಹೀರಿ ಕೆಂಪು ತುಟಿಗಳಿಂದ ಪಾನ ಮತ್ತೆಯಾಗಿರುತ್ತಾಳೆ. ಛೇದಿಸಿದ ತಲೆಯನ್ನು ಹಿಡಿದು ವಿವಿಧ ಆಯುಧಗಳನ್ನು ಹಿಡಿದು ಭಯಂಕರ ರೂಪವನ್ನು ದೇವಿಯು ಕಾಳಿಯ ರೂಪದಲ್ಲಿ ಪಡೆದಿರುತ್ತಾಳೆ.

ಮಹಾಕಾಳಿ ಕೋರೆಹಲ್ಲುಗಳನ್ನು ಹೊಂದಿದ್ದು ಅವಳ ಸೊಂಟಕೃಶವಾಗಿರುತ್ತದೆ. ಅವಳ ನಾಲ್ಕು ಕೈಗಳಲ್ಲಿ ಖಡ್ಗ. ಖೇಟಕ (ಬಲ) ಪಾತ್ರೆ ಮತ್ತು ಕಪಾಲ (ಎಡ) ರುಂಡ ಮಾಲೆ ಧರಿಸಿರುತ್ತಾಳೆ, ಹಲವೊಮ್ಮೆ ಎಂಟು ಕೈಗಳೂ ಇರುತ್ತವೆ. ಇನ್ನೂ ಕೆಲವೊಮ್ಮೆ ಅನೇಕ ತಲೆಗಳು, ಕೈಗಳು ಕಾಲ್ಗಳನ್ನೂ ಹೊಂದಿರುವಂತೆ ಚಿತ್ರಿಸಲಾಗುತ್ತದೆ. ಹೆಚ್ಚಿನ ಕೈಗಳಲ್ಲಿ ಚಕ್ರ, ಶಂಖ, ಗದೆ, ಕಲಶ, ಅಂಕುಶ, ಪಾಶ, ಹಲ ಮತ್ತು ವಜ್ರಗಳೂ ಇರುತ್ತವೆ.

ಭದ್ರಕಾಳಿಯು ಸುಂದರರೂಪವನ್ನೂ ಹೊಂದಿರುತ್ತಾಳೆ. ಮೂರು ಕಣ್ಣುಗಳನ್ನು ಹೊಂದಿದ್ದು ಹದಿನೆಂಟು ಕೈಗಳನ್ನು ಅಥವಾ ನಾಲ್ಕು ಕೈಗಳನ್ನು ಹೊಂದಿರುತ್ತಾಳೆ. ಈ ಕೈಗಳಲ್ಲಿ ಅಕ್ಷರಮಾಲೆ, ತ್ರಿಶೂಲ, ಖಡ್ಗ, ಚಂದ್ರ, ಬಾಣ, ಧನುಷ್, ಶಂಖ, ಪದ್ಮ, ಶ್ರುಕ್, ಶ್ರವ, ಕಮಂಡಲು, ದಂಡ, ಶಕ್ತಿ, ಅಗ್ನಿ, ಕೃಷ್ಣಾಂಜಿನ, ಜಲ, ಅಭಯ ಮತ್ತು ರತ್ನ ಖಚಿತ ಪಾತ್ರೆ ಇವುಗಳನ್ನು ಹಿಡಿದಿರುತ್ತಾಳೆ. ಸಾಮಾನ್ಯವಾಗಿ ಭದ್ರಕಾಳಿಯು ರಥದಲ್ಲಿ ಆಸೀನಳಾಗಿರುತ್ತಾಳೆ, ಈ ರಥವನ್ನು ನಾಲ್ಕು ಸಿಂಹಗಳು ಎಳೆಯುತ್ತವೆ. ಅವಳ ಕುಳಿತ ಭಂಗಿಯನ್ನು ಆಲೀಢಾಸನ ಎಂದು ಪರಿಗಣಿಸಲಾಗಿದೆ.

ನೃಸಿಂಹ ಪ್ರಸಾದದಲ್ಲಿ ಹದಿನೆಂಟು ಭುಜಗಳುಳ್ಳ ಭದ್ರಕಾಳಿ ಧ್ಯಾನವನ್ನು ಈ ರೀತಿ ಮಾಡಲಾಗಿದೆ; ಭದ್ರ ಕಾಳಿಯನ್ನು ಹದಿನೆಂಟು ಭುಜಗಳಿರುವಂತೆ ಮನೋಹಾರಿಣಿಯನ್ನಾಗಿ ರಚಿಸಬೇಕು. ನಾಲ್ಕು ಸಿಂಹಗಳಿರುವ ರಥದ ಮೇಲೆ ಆಕೆಯು ಆಲೀಢ (ಬಾಣವನ್ನು ಬಿಡುವ ಭಂಗಿ) ಸ್ಥಾನದಲ್ಲಿ ನಿಂತಿರಬೇಕು. ಅಕ್ಷರಮಾಲೆ, ತ್ರಿಶೂಲ, ಖಡ್ಗ, ಗುರಾಣಿ, ಬಾಣ, ಬಿಲ್ಲು,

ಶಂಖ, ಪದ್ಮ, ಸ್ರುಕ್, ಸ್ರುವ, ದಿವ್ಯ ಕಮಂಡಲ, ದಂಡ, ಶಕ್ತಿ, ಕೃಷ್ಣಾಜಿನ, ಅಗ್ನಿ, ಅಭಯ, ವರದ, ರತ್ನಪಾತ್ರ ಹೀಗೆ ಭದ್ರಕಾಳಿಯ ಹದಿನೆಂಟು ಹಸ್ತಗಳಲ್ಲಿ ಹದಿನೆಂಟು ವಸ್ತು ಲಕ್ಷಣಗಳಿರಬೇಕು. (ಶ್ರೀತತ್ವನಿಧಿ, ಶಕ್ತಿ ನಿಧಿ ಪುಟ –೨೧೫)

ತಂತ್ರೋಪಾಖ್ಯಾನದಲ್ಲಿ ಮಹಾಕಾಳಿ ಸ್ವರೂಪವನ್ನೂ ಈ ರೀತಿ ಹೇಳಲಾಗಿದೆ. ಆಗತಾನೆ, ಕತ್ತರಿಸಿದ ಶಿರಸ್ಸುಗಳ, ಖಡ್ಗವನ್ನು, ಅಭಯ ಮತ್ತು ವರದ ಮುದ್ರೆಯನ್ನು ಧರಿಸಿರುವ, ಘೋರವಾದ ಮುಖವುಳ್ಳ ಶಿರಸ್ಸುಗಳ ಹಾರದಿಂದ ಅತಿಮನೋಹರಳಾದ ಮುಕ್ತಕೇಶ ಸಮೂಹವುಳ್ಳ, ಕಟವಾಯಿಯಿಂದ ರಕ್ತಪ್ರವಾಹವನ್ನು ಹೊಂದಿರುವ, ಸ್ಮಶಾನದಲ್ಲಿ ವಾಸಮಾಡುವ, ಕರ್ಣಗಳಲ್ಲಿ ಶವಾಲಂಕರವನ್ನು ಮಾಡಿಕೊಂಡಿರುವ, ಶ್ಯಾಮವರ್ಣದವಳಾದ ಶವಗಳ ಭುಜಗಳಿಂದ ಸೊಂಟದ ಪಟ್ಟಿಯ ಅಲಂಕಾರವುಳ್ಳ ಕಾಳಿಕಾದೇವಿಯನ್ನೂ ಭಜಿಸುತ್ತೇನೆ – ಶ್ಲೋಕ ಸಂಖ್ಯೆ – ೧೨೮೮ (ಶ್ರೀ ತತ್ವ ನಿಧಿ, ಪುಟ –೨೭೦)

ತಾರಾ

ಶ್ವೇತಾಂಬರಂ ಶಾರದ – ಚಂದ್ರ – ಕಾಂತಿಮ್

ಸದ್ಭೂಷನಂ ಚಂದ್ರ – ಕಲಾ ವತಂಸಂ

ಕ್ರಾಂತಿ–ಕಪೋಲಾನ್ವಿತ – ಪಾಣಿಪದ್ಮಂ

ತಾರಾಮ್ ತ್ರಿನೇತ್ರಂ ಪ್ರಭಜೇಹಿಲಾಧಾರ್ಯೈ

ಎಲ್ಲ ರೀತಿಯ ಯಶಸ್ಸು, ಶುಭ ಫಲಗಳನ್ನು ಪಡೆಯಲು ತ್ರಿನೇತ್ರೆಯಾದ, ಶೀತಲ ಚಂದ್ರಮನಂತಿರುವ, ಚಂದ್ರಕಲೆಯನ್ನು ಶಿರದಲ್ಲಿ ಧರಿಸಿರುವ ತನ್ನ ಕರಕಮಲದಲ್ಲಿ ಕಪಾಲ ಮತ್ತು ಕತ್ತರಿಯನ್ನು ಹಿಡಿದಿರುವ ದೇವಿಯನ್ನು ಈ ಉದ್ದೇಶಕ್ಕಾಗಿ ಪ್ರಾರ್ಥಿಸುತ್ತೇನೆ.

ತಾರಾ ಕಾಳಿಯಂತೆಯೇ ಭಯಂಕರ ಸ್ವರೂಪವನ್ನು ಹೊಂದಿರುವ ದೇವಿ. ತಾರ' ಹೆಸರೇ ಸೂಚಿಸುವಂತೆ ಭವಸಾಗರವನ್ನು ದಾಟಲು, ಮಾನವ ಕೋಟಿಯನ್ನು ರಕ್ಷಿಸಲು ತೊಟ್ಟು ಬಂದಿರುವ ರೂಪ. ಜೀವನದ ಸಂಕಷ್ಟಗಳನ್ನು ನಿಭಾಯಿಸಲು ಪ್ರೇರಕಳು. ಆದ್ದರಿಂದಲೇ ಸಮುದ್ರದಲ್ಲಿ ಸಂಚರಿಸುವ ನಾವಿಕರ ಅಧಿದೇವತೆ. ಸಮುದ್ರದ ಭೀಕರ ಅಲೆಗಳಿಂದ, ನದಿ ದಡದಲ್ಲಿ ಏಳುವ ಪ್ರವಾಹಗಳಿಂದ ಸಂರಕ್ಷಿಸುವ ಮಾತೆ. ಅಲ್ಲದೇ ಈ ಎಲ್ಲ ಜನರ ಆಶೋತ್ತರಗಳನ್ನು, ಭಾವನೆಗಳನ್ನು ಸಮತೋಲನದಲ್ಲಿರಿಸಿ ಕಾಪಾಡುವ ದೇವತೆ.

ಛಿನ್ನಮಸ್ತಾ

ಇನ್ನೊಂದು ಭೀಭತ್ಸರೂಪ ದೇವಿಯದೆಂದರೆ ಛಿನ್ನಮಸ್ತ, ತನ್ನ ಮಸ್ತಕವನ್ನೇ ಛೇದಿಸಿ ಕೈಯಲ್ಲಿ ಹಿಡಿದಂತಹ ವಿಚಿತ್ರ ರೂಪ. ಸೂರ್ಯಮಂಡಲ ಮಧ್ಯದಲ್ಲಿ ಚಲಿಸುತ್ತಾ ತನ್ನ ಶಿರವನ್ನು ಹಿಡಿದ ಖಡ್ಗದಿಂದ ಛೇದಿಸಿ ಕರದಲ್ಲಿ ಹಿಡಿದಿರುತ್ತಾಳೆ. ಛೇದಿಸಿದ ಕತ್ತಿನಿಂದ ಭುಗಿಲೆದ್ದು ಸಲೆಯೊಡೆದಿದೆ ರಕ್ತದ ಕಾರಂಜಿ ಛೇದಿಸಿದ ಮಸ್ತಕದ ತನ್ನ ನಾಲಿಗೆಯಿಂದ ತಾನೇ ಆ ರಕ್ತವನ್ನು ನೆಲಕ್ಕೆ ಬೀಳದಂತೆ ಹೀರುತ್ತಿದ್ದಾಳೆ. ಇನ್ನೊಂದು ಕೈಯಲ್ಲಿ ಪಾನ ಪಾತ್ರೆ ಹಿಡಿದು ಸಿಂಹ-ವಾಹಿನಿಯಾಗಿ ಸಂಚರಿಸುತ್ತಾಳೆ ಅವಳ ಕಾಲ್ಗಳ ಕೆಳಗೆ ರತಿ ಮನ್ಮಥರು ರತಿ ಕ್ರೀಡೆಯಲ್ಲಿ ತೊಡಗಿರುತ್ತಾರೆ. ಜೀವನ, ಲೈಂಗಿಕ ಪ್ರಕ್ರಿಯೆ ಮತ್ತು ಸಾವು ಈ ಮೂರು ಒಂದನ್ನೊಂದು ಅವಲಂಬಿಸಿವೆ ಹಾಗೂ ಒಂದಕ್ಕೊಂದು ಹೆಣೆದುಕೊಂಡಿರುವ ಸಂಕೇತವನ್ನು ಈ ಮೂರ್ತಿರೂಪ ಸಾರುತ್ತದೆ. ಸಾವೂ ಜೀವನದಷ್ಟೇ ಮಹತ್ವವಾದದು, ಲೈಂಗಿಕತೆಯಿಂದ ಮತ್ತೆ ಜೀವನ, ಜೀವನದೊಂದಿಗೆ ಸಾವು ಕೂಡ ಹಿಂಬಾಲಿಸಿರುತ್ತದೆ ಎಂಬ ಕಠೋರ ಸತ್ಯವನ್ನೂ ಛಿನ್ನ ಮಸ್ತ ರೂಪ ಪ್ರತಿಬಿಂಬಿಸುತ್ತದೆ.

ದೇವಿಯ ಛೇದಿಸಿದ ಮಸ್ತಕವು ಜೀವನ್‌ಮುಕ್ತಿಯ ಸಂಕೇತ, ಆರನೇ ಇಂದ್ರಿಯವನ್ನು ಜಾಗೃತಗೊಳಿಸುವಂತಹುದು, ಮನೋನ್ಮಯ ಕೋಶದಲ್ಲಿ ಸ್ಥಾನ, ತನ್ನ ಅಲೌಕಿಕನಾದ ನೃತ್ಯವನ್ನು ಕಾಮನ ದೇಹದ ಮೇಲೆ ನರ್ತಿಸುವಾಗ ಕಾಮವನ್ನು ಗೆಲ್ಲುವ ಸಂಕೇತ. ಮೂರು ರಕ್ತದ ಕಾರಂಜಿಯು ಇಡ, ಪಿಂಗಳ ಮತ್ತು ಸುಶು ಸೂಕ್ಷ್ಮಾತಿಸೂಕ್ಷ್ಮ ಸ್ಥಿತಿಯನ್ನು ಪ್ರತಿನಿಧಿಸುತ್ತವೆ. ಈ ರೀತಿ ಛಿನ್ನಮಸ್ತರೂಪವು ನೋಡಿದ ಕೂಡಲೆ ಭಯಂಕರವೆನಿಸಿದರೂ, ಆ ರೂಪದ ತಾಂತ್ರಿಕ ಮತ್ತು ಪಾರಮಾರ್ಥಿಕ ದೃಷ್ಟಿಯಿಂದ ಮಾರ್ಪಾಟು ಹೊಂದಿ ಭಕ್ತಿ ಭಾವನೆಯುಂಟಾಗಿ ದೇವಿಯ ಕೃಪೆಗೆ ಒಡ್ಡಿಕೊಳ್ಳಬೇಕಾಗುತ್ತದೆ.

ಭುವನೇಶ್ವರಿ

ಭುವನೇಶ್ವರಿಯು ಮಾತೃ ಸ್ವರೂಪಿಣಿ. ಜಗನ್ಮಾತೆ, ಸಮಸ್ತ ಜಗತ್ತಿಗೆ ಒಡತಿ, ರಕ್ಷಕಿ, ತ್ರಿನೇತ್ರೆಯಾಗಿ ಯಾವಾಗಲೂ ವರಗಳನ್ನು ನೀಡುತ್ತಾ ಅಭಯವನ್ನು ನೀಡುತ್ತಿರುತ್ತಾಳೆ. ಫಾಳದಲ್ಲಿ ಅರ್ಧಚಂದ್ರನನ್ನು ಧರಿಸಿರುತ್ತಾಳೆ, ಸ್ತನ ವಸ್ತ್ರವೂ ಯಾವಾಗಲೂ ಉಕ್ಕುವ ಹಾಲಿನಿಂದ ತೊಯ್ದಿರುತ್ತದೆ. ಮಮತೆ ವಾತ್ಸಲ್ಯ ದೃಷ್ಟಿಯಿಂದ ತನ್ನ ಭಕ್ತರನ್ನು ನೋಡಿ ಪೊರೆಯುತ್ತಾಳೆ. ದೇವಿ

ಮಾಹಾತ್ಮೆಯ ಉಲ್ಲೇಖದಂತೆ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ತ್ರಿಮೂರ್ತಿಗಳು ತಮ್ಮತಮ್ಮಲ್ಲಿ ಯಾರು ಹೆಚ್ಚು ಎಂದು ಜಗಳವಾಡಿದರು. ಆಗ ಮಾತೆ ಭುವನೇಶ್ವರಿ ಅವರನ್ನು ತನ್ನ ಮನೆಗೆ ಕರೆದುಕೊಂಡು ಹೋದೊಡನೆ ಮೂವರೂ ದೇವಿಯ ಸೇವಕಿಯರಾಗಿ ಮಾರ್ಪಾಡಾಗುತ್ತಾರೆ. ಆಗ ಅವರು ತಾವುಗಳು ಸೃಷ್ಟಿ, ಸ್ಥಿತಿ ಮತ್ತು ಲಯ ಕಾರಣ ನಿಮಿತ್ತರಾಗಿ ಹುಟ್ಟಿ ರೂಪಗೊಂಡವರು. ತಮ್ಮ ಕಾರ್ಯವನ್ನು ಮರೆತು ಜಗಳವಾಡಿದ್ದಕ್ಕೆ ನಾಚಿಕೆಪಟ್ಟು ದೇವಿಯು ಅವರಿಗೆ ಮನವರಿಕೆ ಮಾಡಿದಂತೆ ತಾವೆಲ್ಲರೂ ಒಂದೇ ಅದರೆ ರೂಪ ಬೇರೆ ಎಂದು ತಿಳಿಯುತ್ತಾರೆ.

ಭುವನೇಶ್ವರಿಯನ್ನು ಜ್ಞಾನ ಮತ್ತು ಪ್ರಜ್ಞೆಯ ಅಧಿದೇವತೆಯೆಂದು ಗುರುತಿಸಲಾಗಿದೆ. ಪದ್ಮಾಲಯೆ, ಪದ್ಮಾಸನೆಯಾಗಿ ತನ್ನ ಭಕ್ತರ, ಅನುಯಾಯಿಗಳ ಹೃದಯ ಚಕ್ರದಲ್ಲಿ ಸಾಮ್ರಾಜ್ಞೆಯಾಗಿ ನೆಲೆಸಿರುತ್ತಾಳೆ. ಭುವನೇಶ್ವರಿಯ ಉಪಾಸನೆಯ ಮೂಲಕ ಉಪಾಸಕನು ತನ್ನ ಸೃಷ್ಟಿಯ, ಪ್ರಪಂಚದ ಸೃಷ್ಟಿಯ ಪರಮ ಅರ್ಥವನ್ನು ಮಾಡಕೊಂಡು ಜೀವನದ ಆಂತರ್ಯವನ್ನು ಗ್ರಹಿಸುವ ಸಾಮರ್ಥ್ಯವನ್ನು ಪಡೆಯುತ್ತಾನೆ.

ಭುವನೇಶ್ವರಿಯು ಉದಯಿಸುವ ಸೂರ್ಯನ ಕೆಂಪು ವರ್ಣವನ್ನು ಹೊಂದಿರುತ್ತಾಳೆ. ಮೂರು ಕಣ್ಣುಗಳನ್ನು ಉಳ್ಳವಳು, ಅವಳ ಕಿರೀಟವು ಅರ್ಧಚಂದ್ರನಿಂದ ಅಲಂಕೃತವಾಗಿರುತ್ತದೆ. ಹಾರ, ಕುಂಡಲಿ, ಒಡ್ಯಾಣ, ಕಂಕಣ ಮುಂತಾದ ಸರ್ವ ಆಭರಣಗಳಿಂದಲೂ ಅಲಂಕೃತಳಾಗಿರುತ್ತಾಳೆ. ಈ ಆಭರಣಗಳು ಮಾಣಿಕ್ಯ ಖಚಿತವಾಗಿರುವವು. ಪದ್ಮಾಸನದಲ್ಲಿ ಕುಳಿತಿರುವ ದೇವಿಯು ಬಲಭಾಗದಲ್ಲಿ ಅಭಯ ಮತ್ತು ಪಾಶಗಳನ್ನು, ಎಡಭಾಗದಲ್ಲಿ ವರದ ಮತ್ತು ಅಂಕುಶವನ್ನು ಹೊಂದಿರುತ್ತಾಳೆ.

ಮಹಾಲಕ್ಷ್ಮೀ ರತ್ನಕೋಶದಲ್ಲಿ ಭುವನೇಶ್ವರಿಯ ಧ್ಯಾನವು ಈ ರೀತಿಯಾಗಿ ಇದೆ: ಉದಯಸೂರ್ಯನಿಗೆ ಸಮಾನವಾದ ಶೋಭೆಯುಳ್ಳ, ಹೊಸದಾಗಿ ಅರಳಿದ ಹಾಸವಾಳದ ವರ್ಣಕಾಂತಿಯುಳ್ಳ ಅರ್ಧಚಂದ್ರನನ್ನು ಶಿರಸ್ಸಿನಲ್ಲಿ ಅಲಂಕರಿಸಿಕೊಂಡಿರುವ, ನಕ್ಷತ್ರಮಾಲೆಯನ್ನು ಧರಿಸಿರುವ, ಮೂರು ಕಣ್ಣುಗಳುಳ್ಳ, ನಾನಾ ಮಣಿಗಳಿಂದ ಶೋಭಿಸುವ ಕರ್ಣಕುಂಡಗಳಿರುವ, ಪದ್ಮದ ಮೇಲೆ ಆಸೀನಳಾಗಿರುವ, ಹಾರ, ಕಂಠಾಭರಣ, ಒಡ್ಯಾಣ, ಮಣಿ ಸಮೂಹಗಳ ಕಂಕಣಗಳಿಂದ ಕೂಡಿರುವ, ಪ್ರಶಸ್ತವಾದ ವಸ್ತುವನ್ನು ಧರಿಸಿರುವ, ಪಾಶ ಅಂಕುಶಗಳನ್ನು, ಅಭಯ, ವರದ ಮುದ್ರೆಗಳನ್ನು ಹಸ್ತಗಳಿಂದ ಧರಿಸಿದ ಆದಿ ಭುವನೇಶ್ವರಿಯನ್ನು ಧ್ಯಾನಿಸುವೆನು.

(ಶ್ರೀ ತತ್ವನಿಧಿ, ಶಕ್ತಿನಿಧಿ ಪುಟ - ೨೧೪) ಈ ರೀತಿ ಭುವನೇಶ್ವರೀ ದೇವಿಯನ್ನು ವಿಶ್ವ ಸಾಮ್ರಾಜ್ಞಿಯ ರೂಪದಲ್ಲಿ ಪರಿಕಲ್ಪಿಸಲಾಗಿದೆ.

ಪೂರ್ವ, ಪಶ್ಚಿಮ, ದಕ್ಷಿಣ ಮತ್ತು ಉತ್ತರ ದಿಕ್ಕುಗಳಲ್ಲಿ ಕ್ರಮವಾಗಿ ಕಾಳಿ, ತಾರಾ, ಛಿನ್ನಮಸ್ತಾ ಮತ್ತು ಭುವನೇಶ್ವರಿಯರು ತಮ್ಮ ತಮ್ಮ ಸ್ಥಾನಗಳಲ್ಲಿ ಮೈದಳೆದಿರುತ್ತಾರೆ. ಇನ್ನು ಉಳಿದ ನಾಲ್ಕು ದಿಕ್ಕುಗಳಲ್ಲಿ ಆಗ್ನೇಯದಲ್ಲಿ ಧೂಮವತಿ, ನೈಋತ್ಯದಲ್ಲಿ ಕಮಲಾ, ಈಶಾನ್ಯದಲ್ಲಿ ಷೋಡಶೀ ಮತ್ತು ವಾಯುವ್ಯದಲ್ಲಿ ಮಾತಂಗಿಯಾಗಿ ದೇವಿಯು ವಿರಾಜಿಸುತ್ತಾಳೆ.

ಧೂಮವತೀ

ಧೂಮವತಿಯ ರೂಪದಲ್ಲಿ ದೇವಿಯು ಮಲಿನ ವಸ್ತ್ರಗಳನ್ನು ತೊಟ್ಟು, ಖೇದ ವದನಳಾಗಿರುತ್ತಾಳೆ. ಮೂರು ಕಣ್ಣುಗಳು ರಕ್ತವರ್ಣಕ್ಕೆ ತಿರುಗಿರುತ್ತವೆ. ಸೂರ್ಯನಂತೆ ಉದರ, ದೊಡ್ಡ ಹಲ್ಲುಗಳು, ಚಂಚಲ ಚಿತ್ತೆ, ಬೆವರಿನಿಂದ ತೊಯ್ದಿರುತ್ತಾಳೆ, ಹಸಿವಿನಿಂದ ಬಳಲಿರುವ ಧೂಮವತಿಯ ಕಪ್ಪುದೇಹ ಒರಟಾಗಿರುತ್ತದೆ, ತಲೆ ಕೂದಲು ದಿಕ್ಕಾಪಾಲಾಗಿ ಹರಡಿರುತ್ತದೆ, ಯಾವಾಗಲೂ ಜಗಳಕ್ಕೆ ಮುಂದಾಗಿರುವ ಈ ದೇವಿಯ ಸ್ವರೂಪ ವ್ಯವಸ್ಥಿತ ರೂಪದ ಅಥವಾ ಚೇತೋಹಾರಿ ಶಕ್ತಿಯನ್ನು ಪ್ರತಿಬಿಂಬಿಸುವುದಿಲ್ಲ.

ಧೂಮವತಿ ಎರಡು ಕೈಗಳನ್ನು ಹೊಂದಿದ್ದು ಒಂದು ಮೊರ (ಶುರ್ಪ)ವನ್ನು ಕೈಯಲ್ಲಿ ಹಿಡಿದು ಧಾನ್ಯವನ್ನು ಹೊಟ್ಟಿನಿಂದ ಬೇರ್ಪಡಿಸುವುದು, ಕೇರುವುದನ್ನು ಮಾಡುತ್ತಿರುತ್ತಾಳೆ. ಸಾಂಕೇತಿಕವಾಗಿ ನಿರರ್ಥಕ ಸಮಯ, ದ್ರವ್ಯ, ಜೀವನಗಳನ್ನು ಹೆಕ್ಕುತ್ತಾಳೆ. ವಯಸ್ಸಾದಂತೆ ಇರುವ ಈ ದೇವಿ ಮಾಟಗಾತಿಯಾಗಿಯೂ ಕಾರ್ಯನಿರ್ವಹಿಸುತ್ತಾಳೆ. ಇವಳನ್ನು ವಿಧವೆಯಾಗಿ ಪರಿಕಲ್ಪಿಸುವ ಕಾರಣವೆಂದರೆ ಅವಳು ದುರಾದೃಷ್ಟವನ್ನು ಪ್ರತಿಬಿಂಬಿಸುತ್ತಾಳೆ. ಧೂಮವತಿ ಸಶಕ್ತ ದೇವಿಯ ವಿಕಲ್ಪರೂಪ. ಇವಳನ್ನು ರುದ್ರಭೂಮಿಯಲ್ಲಿ ಪೂಜಿಸಲಾಗುತ್ತದೆ. ಶತ್ರುಗಳಿಗೆ ಹಾನಿಯನ್ನುಂಟು ಮಾಡಲು, ಯಾರದೇ ಭವಿಷ್ಯವನ್ನು ತಿಳಿಯಲು, ಹಾನಿಕಾರಕ ರೋಗಗಳನ್ನು ನಿರ್ನಾಮಗೊಳಿಸಲು ಧೂಮವತಿಯನ್ನು ಆವಾಹನೆಗೊಳಿಸಲಾಗುತ್ತದೆ. ಹೀಗಾಗಿ ಮಂಗಳಮಯ ಸಂದರ್ಭ, ಸನ್ನಿವೇಶಗಳಲ್ಲಿ ಧೂಮವತಿಯನ್ನು ನೆನೆಯುವ ಗೋಜಿಗೆ ಹೋಗುವುದಿಲ್ಲ. ಆಗ್ನೇಯ ದಿಕ್ಕಿನಲ್ಲಿ ಚಲಿಸುವ ಧೂಮವತಿ ಆಗ್ನೇಯ ಗುಣವಾದ ಹಬೆತಾಳಲಾರದೆ ಪರದಾಡುವ

ಲಕ್ಷಣಗಳನ್ನು ಹೊಂದಿರುವುದನ್ನು ಇಲ್ಲಿ ಸೂಕ್ಷ್ಮವಾಗಿ ಗಮನಿಸಬಹುದೆದು. ಧೂಮಾವತೀ ಕಲ್ಪಿದಲ್ಲಿ ಧೂಮಾವತೀ ಧ್ಯಾನವನ್ನು ಹೀಗೆ ಹೇಳಲಾಗಿದೆ. ಶ್ಲೋಕ – ೭೫೭

ರಕ್ತವರ್ಣದ ವಸ್ತ್ರಗಳನ್ನು ಧರಿಸಿದ, ಆನೆಯ ದಂತದಂತೆ ಹೊಳೆಯುವ ಕುಂಡಲಗಳಿರುವ, ಕೋಪವನ್ನು ಪ್ರದರ್ಶಿಸುವ, ಕೋರೆ ಹಲ್ಲುಗಳಿರುವ, ಕಂಠದಲ್ಲಿ ಕಾಣುವ ರುಂಡ ಮಾಲೆಯಿರುವ, ಸುತ್ತಲೂ ಹೊಳೆಯುವಂತಿರುವ ಕಾಂತಿ ಪೂರ್ಣವಾದ ಪಿಶಾಚ ಸಮೂಹವಿರುವ, ಘೋರಸ್ವರೂಪಳಾದ, ಭಯಾನಕವಾದ ಅಟ್ಟಹಾಸವನ್ನು ಮಾಡುತ್ತಿರುವ, ಹಸ್ತಗಳಲ್ಲಿ ಕಪಾಲ ಹಾಗೂ ಖಡ್ಗವನ್ನು ಧರಿಸಿ, ಭೀಷಣವಾಗಿ ಕಾಣುತ್ತಿರುವ, ಮೂರು ಕಣ್ಣುಗಳುಳ್ಳ, ಶತ್ರು ಪ್ರಾಣಗಳನ್ನು ಹಿಂಸಿಸುವ, ಬಾಲಚಂದ್ರನನ್ನು ಶಿರದಲ್ಲಿ ದರಿಸಿದ ಧೂಮಕಾಳಿಯನ್ನು ಧ್ಯಾನಿಸಬೇಕು (ರಕ್ತವರ್ಣ) (ಶ್ರೀತತ್ವನಿಧಿ, ಪುಟ – ೨೨೪)

ಕಮಲಾ

ನೈಋತ್ಯ ದಿಕ್ಕಿನಲ್ಲಿ ವಿರಾಜಿಸುವ ದೇವಿಯು ಕಮಲಾ ಎನಿಸಿಕೊಳ್ಳುವಳು. ಇವಳ ಲಕ್ಷಣ ಹಾಗೂ ಗುಣಗಳು ಧೂಮವತಿಗೆ ತದ್ವಿರುದ್ಧವಾಗಿರುತ್ತದೆ. ಕಮಲದಂತೆ ನೇತ್ರಗಳು, ಸೌಂದರ್ಯ ಸಾಗರದಂತೆ ಕಂಗೊಳಿಸುವಳು, ಉದಯರವಿಯ ಹೊಂಗಿರಣಗಳನ್ನು ಹೋಲುವ ಶರೀರ, ಸಂತೋಷವಾಗಿ ಕಾಣುವಳು, ಕಮಲ ಪೀಠದ ಮೇಲೆ ಪದ್ಮಾಸನೆಯಾಗಿರುವ ಈ ದೇವಿಯನ್ನು ದರ್ಶಿಸಿ ಪ್ರಾರ್ಥಿಸಿದರೆ ಸಮಸ್ತ ವೈಭವ ಪ್ರಾಪ್ತಿಯಾಗುತ್ತದೆ. ತುಂಬು ಕುಚೆಯಾಗಿರುವ ಈಕೆ ಕಡುಕೆಂಪುವರ್ಣದ ವೇಷಭೂಷಣಗಳನ್ನೂ, ಹಾರ, ಕಿರೀಟ, ಕುಂಡಲಗಳನ್ನು ಧರಿಸಿ ಮೈಗೆಲ್ಲ ಗಂಧವನ್ನು ಪೂಸಿಕೊಂಡು ದರ್ಶನಭಾಗ್ಯ ನೀಡುವಳು. ಕಮಲ ತಾಂತ್ರಿಕ ಲಕ್ಷ್ಮಿಯಾಗಿದ್ದು ಲೋಭವಿಲ್ಲದೇ ಉಪಾಸನೆ ಮಾಡುವವರಿಗೆ ಶಾಂತಿ, ಸುಖ, ಸೌಹಾರ್ದತೆ, ಸಂಪತ್ತು ಎಲ್ಲವನ್ನು ದಯಪಾಲಿಸುತ್ತಾಳೆ. ಆದರೆ ಒಮ್ಮೆ ಅರ್ಧ ಮನಸ್ಕರಾಗಿ ಪ್ರಾರ್ಥಿಸಿದರೆ, ಥಟ್ಟನೆ ಅಲ್ಲಿಂದ ನಡೆದುಬಿಡುತ್ತಾಳೆ. ಅವಳನ್ನು ಒಲಿಸಿಕೊಳ್ಳುವವರು ಜಾಗೃತರಾಗಿದ್ದು ತಾವುಗಳು ಉತ್ತಮ ನಡವಳಿಕೆಯಿಂದ ವ್ಯವಹರಿಸಬೇಕಾಗುತ್ತದೆ. ಯಾವುದೇ ಸಂಕಷ್ಟದಿಂದ ಅಥವಾ ಅವಘಡಗಳಿಂದ ರಕ್ಷಿಸುವ ಕಮಲಾ ಶಾಂತಿ ಮತ್ತು ಸಂಪತ್ತುಗಳಿಗೆ ಅಧಿದೇವತೆ. ಚತುರ್ಭುಜೆಯಾದ ದೇವಿಯು ಪದ್ಮಾಸನೆಯಾಗಿ ದಿವ್ಯಪುಷ್ಕರಿಣಿಯ ಮಧ್ಯದ ಕಮಲದ ಮೇಲೆ ವಿರಾಜಿಸುತ್ತಾಳೆ. ಶ್ರೀಲಕ್ಷ್ಮಿಯ ಗುಣ ವಿಶೇಷಗಳನ್ನು ಕಮಲಾ ಹೊಂದಿದ್ದು ಮೇಲಿನ ಎರಡು ಕೈಗಳಲ್ಲಿ ಅರಳಿದ ಕಮಲಗಳನ್ನೂ ಅಭಯ ಮತ್ತು ವರದ ಹಸ್ತಗಳಿಂದ ತನ್ನ ಉಪಾಸಕರನ್ನು ಪೊರೆಯುತ್ತಾಳೆ.

ಮತಂಗೀ

ಕಮಲದ ಮೇಲೆ ರತ್ನ ಖಚಿತ ಪೀಠದಲ್ಲಿ ಕುಳಿತಿರುವ ಮತಂಗೀ ವೀಣೆಯನ್ನು ನುಡಿಸುತ್ತಾಳೆ. ಕಪ್ಪು ಶರೀರ ರಕ್ತವರ್ಣದ ಪೋಷಾಕು ತೊಟ್ಟು ಖಡ್ಗವನ್ನು ಕಪಾಲವನ್ನೂ ಹಿಡಿದು ಪಾನಮತ್ತೆಯಾಗಿ, ನೀಳಕೇಶದಿಂದ ಮೆರೆಯುವ ದೇವಿಯ ಈ ರೂಪವನ್ನು ಮತಂಗಿ ಎಂದು ಗುರುತಿಸಲಾಗಿದೆ. ತನ್ನ ಸುತ್ತಲಿನ ಪರಿಸರ ಶುಕಗಳ ಉಲಿಯನ್ನು ಕೇಳಿ ಸಂತೋಷಪಡುವ ಈ ದೇವಿಯ ರೂಪ ಮತ್ತು ಬಿರಿಸುವಂತಹುದು. ಇವಳನ್ನು ಸರಸ್ವತಿಯ ಇನ್ನೊಂದು ರೂಪವೆಂದು ಪರಿಗಣಿಸಲಾಗಿದೆ. ಆಕೆಯು ಐದನೇ ಚಕ್ರ (ವಿಶುದ್ಧ)ದ ಅಧಿಪತಿ, ಆಕೆಯ ವೀಣೆಯು ಮಾನವ ದೇಹದ ಸಂಕೇತ, ಎರಡು ಬುರುಡೆಗಳು ಬಿಂಬದ ಎರಡು ಭಾಗಗಳು ಮಧ್ಯದ ದಂಡಿಗೆ ಈ ಎರಡು ಭಾಗಗಳನ್ನು ಸೇರಿಸುವ ಬೆನ್ನು, ಈ ಎರಡು ಬಿಂಬಗಳು ಮೂಲಾಧಾರ ಮತ್ತು ಸಹಸ್ರಾರ ಚಕ್ರಗಳನ್ನು ಪ್ರತಿಬಿಂಬಿಸುತ್ತವೆ. ವೀಣೆಯ ತಂತಿಗಳು ಮಾನವ ದೇಹದ ನರನಾಡಿಗಳು, ಇವುಗಳನ್ನು ಮತಂಗಿಯು ತನ್ನ ಕೈಗಳಿಂದ ಮಿಡಿಯುತ್ತಾಳೆ. ಮತಂಗಿಯು ಅಭಯ ನೀಡುವ, ವಾಕ್ ಚತುರತೆಯನ್ನು ದಯಪಾಲಿಸುವ, ಸೃಜನಶಕ್ತಿ, ಸಂಗೀತ, ಸಾಹಿತ್ಯ, ಲಲಿತಕಲೆಗಳು, ಜ್ಞಾನಶಕ್ತಿಯನ್ನು ನೀಡುವ ಮಹಾವಿದ್ಯೆಯಾಗಿದ್ದಾಳೆ. ಈಕೆಯನ್ನು ರಾಜಮಾತಂಗಿ ಎಂದೂ ಗುರುತಿಸುವುದುಂಟು. ಮತಂಗಿಯು ಶುಕದ ಉಲಿಗಳನ್ನೂ ಕೇಳುತ್ತಾ ಸಂತೋಷಪಡುವವಳು. ಶಿರದಲ್ಲಿ ಅರ್ಧ ಚಂದ್ರ ಸಹಿತ ಸುಂದರ ಮಕುಟವನ್ನು, ನೀಲ ಕಮಲದ ಹಾರವನ್ನೂ, ಹಣೆಯಲ್ಲಿ ತಿಲಕವನ್ನೂ, ಸೂಕ್ತ ಆಭರಣಗಳನ್ನೂ ಧರಿಸಿ ಈ ದೇವಿ ವಿರಾಜಿಸುತ್ತಾಳೆ.

ರಾಜಮಾತಂಗೀ ಕಲ್ಪಿದಲ್ಲಿ ರಾಜ ಮಾತಂಗಿಯನ್ನು ಈ ಲಕ್ಷಣಗಳಿಂದ ಧ್ಯಾನ ಮಾಡಲಾಗುತ್ತದೆ. "ರತ್ನ ನಿರ್ಮಿತವಾದ ಆಸನದಲ್ಲಿ ಕುಳಿತಿರುವ, ಶ್ಯಾಮ ವರ್ಣದ ದೇಹವಿರುವ, ಗಿಳಿಯ ಮಾತುಗಾರಿಕೆಯನ್ನು ಕೇಳುತ್ತಿರುವ, ಕಮಲದ ಮೇಲೆ ಒಂದು ಪಾದವನ್ನಿಟ್ಟಿರುವ, ಅಂದವಾಗಿ ಚಂದ್ರನನ್ನು ಶಿರಃ ಪ್ರದೇಶದಲ್ಲಿ ಅಲಂಕರಿಸಿಕೊಂಡಿರುವ, ವೀಣೆಯನ್ನು ನುಡಿಸುತ್ತಿರುವ, ತಿಲದಿಂದ ಶೋಭಿಸುತ್ತಿರುವ ಹಣೆಯುಳ್ಳ, ಸೌಗಂಧಿಕಾ ಮಾಲೆಯ ಮೊಗ್ಗುಗಳಿಂದ ಅಲಂಕರಿಸಲ್ಪಟ್ಟ ಕೇಶಗಳುಳ್ಳ, ರಕ್ತ ವರ್ಣದ ವಸ್ತ್ರವನ್ನು ಧರಿಸಿರುವ, ಆಭೂಷಣಗಳಿಂದ ಅಲಂಕರಿಸಲ್ಪಟ್ಟ ಮಾತಂಗಿಯನ್ನು ನಾನು ವಂದಿಸುವೆನು." (ಶ್ರೀತತ್ವನಿಧಿ – ಶಕ್ತಿ–ನಿಧಿ, ಪುಟ – ೨೧೩)

ಷೋಡಶೀ

ಷೋಡಶಿಯು ಈಶಾನ್ಯದಿಕ್ಕನ್ನು ವ್ಯಾಪಿಸಿದ್ದಾಳೆ. ಲಲಿತಾ, ಅಂಬಿಕಾ, ಮಹಾಮಾತೆಯೆಂದು ಪರಿಗಣಿಸಲ್ಪಟ್ಟ ಹದಿನಾರರ ಹರೆಯದ ಷೋಡಶಿ ಮುಂಜಾವಿನ ಛಾಯೆಯನ್ನು ಹೊಂದಿದ್ದು ತನ್ನ ನಾಲ್ಕು ಕೈಗಳಲ್ಲಿ ಬಿಲ್ಲು, ಹರಿತವಾದ ಬಾಣಗಳು, ಪಾಶ ಅಂಕುಶಗಳನ್ನು ಹಿಡಿದಿರುತ್ತಾಳೆ. ದಾಸವಾಳ ಬಣ್ಣದ ವಸ್ತ್ರವನ್ನು ಧರಿಸಿರುವ, ದಾಸವಾಳ ಹೂಗಳನ್ನು ಮುಡಿದಿರುವ ದೇವಿಯು ಸಮಸ್ತರನ್ನೂ ಆಕರ್ಷಿಸುತ್ತಾಳೆ. ಶಿವನನ್ನೇ ಆಸನವಾಗಿ ಹೊಂದಿರುವ, ಸಂಭೋಗ ಸುಖವನ್ನು ಸೂಚಿಸುವ ಷೋಡಶೀ ತ್ರಿಪುರಸುಂದರಿಯೆನಿಸುತ್ತಾಳೆ. ಕಾಳಿಯ ನಂತರ ಅತ್ಯಂತ ಜನಪ್ರಿಯತೆಯನ್ನು ಪಡೆದು ಪೂಜಿಸುವ ದೇವಿಯು ಲಲಿತೆಯಾಗಿದ್ದಾಳೆ, ಮತ್ತು ದಶಮಹಾ ವಿದ್ಯೆಯರಲ್ಲಿ ಬಹು ಮುಖ್ಯಸ್ಥಾನ ಪಡೆದಿದ್ದಾಳೆ.

ಭೈರವಿ

ಭೈರವಿ, ತ್ರಿಪುರ ಭೈರವಿ
ಶಿರದಮಾಲೆಯು ಅಸಿತ ಅಂಗವು
ಕರದ ಮಾಂಸವು ರಕ್ತ ಅಂಬರ
ಸುರಿವ ಶೋಣಿತದುಡಿಗೆ ಶಿರತಾನೆರಡು ಸ್ತನವೆರಡು
ಉರುಭುಜಗಳೆಂಟವು ತ್ರಿನೇತ್ರವು
ಶರಧನವು ಖಡ್ಗವನೆ ಬಿದಿರುವ
ವರಭಯಂಕರ ಮೂರ್ತಿ ಭೈರವಿ ಧ್ಯಾನ ಮೂರ್ತೆಂದ ॥ ೮೨ ॥

(ಭೈರವೀ, ಶ್ಲೋಕ, ತಾತ್ಪರ್ಯ – ಶ್ರೀ ದೇವಿಮಹಾತ್ಮೆ ಪುಸ್ತಕ – ಪುಟ – ೨೪೮– ೮೨ನೇ ಪದ್ಯ.)

ಭೈರವ, ಕಾಲಭೈರವನ ರೂಪಗಳನ್ನು ತಾಳುವ ಶಿವನಿಗೆ, ಸರಿಸಾಟಿಯಾಗಿ ಸತಿ ಭೈರವೀರೂಪವನ್ನು ತಾಳುತ್ತಾಳೆ, ಅದೂ ದಶಮಹಾವಿದ್ಯಗಳಲ್ಲಿ ಒಬ್ಬಳಾಗಿ. ಈ ಭೈರವಿಯು ತ್ರಿನೇತ್ರೆ, ಬಿಚ್ಚಿ ಬಿರಿದ ಜಟೆಗೆ ಒಂದೇ ಆಭರಣ, ಅರ್ಧ ಚಂದ್ರ ಲಲಾಟದ ಮೇಲೆ, ಅವಳ ಬಾಯಿ ತುಂಬಾ ಮೊನೆಚಾದ ಹಲ್ಲುಗಳು ಭಯವನ್ನು ಹುಟ್ಟಿಸುತ್ತವೆ. ಹೊಗೆಯ ವರ್ಣವನ್ನು ಹೊಂದಿರುವ ಭೈರವೀ ದಿಗಂಬರೆ, ಸರ್ಪಗಳೇ ಅವಳ ಆಭರಣಗಳು, ರುಂಡ ಮಾಲೆಯನ್ನು ಧರಿಸಿ, ಖಡ್ಗಹಿಡಿದು ಪಾನ ಪಾತ್ರೆ. ಅಭಯ ವರದ ಮುದ್ರೆಗಳನ್ನು ಹಿಡಿದು ನಿಂತ ಮೂರ್ತಿ

ಲಕ್ಷಣ ಭೈರವಿಯದು. ಭೈರವಿಯು ಒಂಭತ್ತನೇ ದಿಕ್ಕು, ಸ್ಥಾನವಾದ ಭೂಮಿಯ ಮೇಲೆ ವಿರಾಜಿಸುತ್ತಾಳೆ.

ತ್ರಿಪುರ ಭೈರವಿಯೆಂದೂ ಕರೆಯಲ್ಪಡುವ ಈ ಮಹಾವಿದ್ಯಾ ಸೃಷ್ಟಿಯು ಅಂತ್ಯವಾದೊಡನೆ ನಾಶವನ್ನು ಸಂಕೇತಿಸುವ ನರ್ತನಗೈಯುತ್ತಾಳೆ. ಭೌತಿಕ, ಪ್ರಾಪಂಚಿಕ ಮತ್ತು ಆಧ್ಯಾತ್ಮಿಕ ಈ ಮೂರೂ ಮಟ್ಟಗಳಲ್ಲಿಯೂ ಭೈರವೀ ವಿಹರಿಸುತ್ತಾಳೆ. ಬುದ್ಧಿ ಮತ್ತು ಚಿಂತನೆಗೆ ಒಂಭತ್ತು ರೀತಿಯ ಅವಘಡಗಳಾದ – ರೋಗಬಾಧೆ, ಅಸಮರ್ಥ್ಯ, ಶಂಕೆ, ಭ್ರಮೆ, ಮತ್ತು ಅಥವಾ ಭ್ರಮಣೆ, ಸಾಧನೆಗೆ ಮನಸ್ಸು ಮಾಡದಿರುವುದು, ಮಂಕುಕವಿದಿರುವುದು, ಸೋಮಾರೀತನ ಮತ್ತು ಸಮಾಧಿಸ್ಥಿತಿಯನ್ನು ತಲುಪದೇ ಇರುವುದು, ಇವುಗಳನ್ನೆಲ್ಲಾ ತ್ರಿಪುರಭೈರವಿ ನಾಶಪಡಿಸುತ್ತಾಳೆ. ಕುಂಡಲಿನೀ ಶಕ್ತಿಯನ್ನು ಮುಂದೆ ಪ್ರವಹಿಸುವಂತೆ ಪ್ರಚೋದಿಸುವ ಭೈರವೀ ಉದಯ ರವಿಯಂತೆ ಮೈದಳೆದು ಆಧ್ಯಾತ್ಮ ಸಾಧನೆಗೆ ಎದುರಾಗುವ ಎಲ್ಲಾ ತೊಡಕುಗಳನ್ನೂ ತೊಡೆದುಹಾಕುತ್ತಾಳೆ. ಹಲವೊಮ್ಮೆ ಭೈರವಿಯು ಪಾಶ ಮತ್ತು ಅಂಕುಶಗಳನ್ನು ಹಿಡಿದು ನಿಗ್ರಹಿಸುತ್ತಾಳೆ.

ತ್ರಿಪುರ ಭೈರವಿಯ ಮೂರ್ತಿ ಲಕ್ಷಣದಲ್ಲಿ ಹಲವು ವ್ಯತ್ಯಾಸಗಳಿವೆ. ಅರ್ಧಚಂದ್ರನನ್ನು ಸಿಕ್ಕಿಸಿರುವ ರತ್ನ ಖಚಿತ ಕಿರೀಟವನ್ನು ತ್ರಿಪುರ ಭೈರವಿಯು ಧರಿಸಿರುತ್ತಾಳೆ. ಅವಳ ವಕ್ಷ ಭಾಗವು ರಕ್ತ ಲೇಪಿತವಾಗಿರುತ್ತದೆ. ಕೈಗಳಲ್ಲಿ ಅಕ್ಷಮಾಲಾ ಮತ್ತು ವಿದ್ಯಾ ಅಂದರೆ ಜ್ಞಾನ ಮುದ್ರ ಅಥವಾ ಪುಸ್ತಿಕೆಯನ್ನು ಹಿಡಿದಿರುತ್ತಾಳೆ. ಇನ್ನೆರಡು ಕೈಗಳನ್ನು ವರದ, ಅಭಯ ರೂಪದಲ್ಲಿ ಹಿಡಿದಿರುತ್ತಾಳೆ.

ಬಗಲಾಮುಖಿ

ಆಕಾಶ, ವ್ಯೋಮವನ್ನು ವ್ಯಾಪಿಸಿ ಪ್ರತಿನಿಧಿಸುವ ಮಹಾವಿದ್ಯಾ ಬಗಲಾಮುಖಿಯೆಂದು ಕರೆಸಿಕೊಳ್ಳುತ್ತಾಳೆ. ಅವಳ ಮುಖವು ಬಗಲಾ (ಕೊಕ್ಕರೆಯ) ರೂಪವಾಗಿರುತ್ತದೆ. ಗಾಳಿಯಂತೆ ಸೂಕ್ಷ್ಮ ಹಾಗೂ ಭೀಕರವಾದಾಗ ಮುನ್ನುಗ್ಗುವ ಶಕ್ತಿ ದೇವತೆ. ಸುವರ್ಣ ಸಿಂಹಾಸನದಲ್ಲಿ ಕುಳಿತು ರಾರಾಜಿಸುತ್ತಾಳೆ. ತ್ರಿನೇತ್ರೆ, ಸರ್ವಾಭರಣ ಭೂಷಿತೆ, ಸ್ವರ್ಣಕಾಂತಿಯಿಂದ ಹೊಳೆಯುವಳು, ಅರ್ಧ ಚಂದ್ರನಿರುವ ಅರ್ಧ ಕಿರೀಟವನ್ನು ಧರಿಸಿರುವ ಬಗಲಾಮುಖಿ ಸಂಪಿಗೆ ಹೂಗಳ ಹಾರವನ್ನು ಧರಿಸಿರುತ್ತಾಳೆ. ಸಾಮಾನ್ಯವಾಗಿ ದ್ವಿಭುಜೆಯಾಗಿದ್ದು ಒಂದು ಕೈಯಲ್ಲಿ ಗಧೆಯನ್ನೂ ಇನ್ನೊಂದು ಕೈಯಲ್ಲಿ ತನ್ನ ಶತ್ರು ಅಸುರನ ನಾಲಿಗೆಯನ್ನು ಹಿಡಿದಿರುತ್ತಾಳೆ.

ಬಗಲಾಮುಖಿಯು ಕಪಟ ತಂತ್ರದ ಸಂಕೇತವಾಗಿರುತ್ತಾಳೆ. ತನ್ನ ಶತ್ರುವಿನ ಸೊಲ್ಲಡಗಿಸಲು ಕಪಟ ತಂತ್ರಗಳನ್ನೂ ನಿಯೋಜಿಸುವ ಸಾಮರ್ಥ್ಯವುಳ್ಳವಳು. ಈ ಶತ್ರುಗಳು ಹೊರಗಿನವರೇ ಅಲ್ಲದೇ ಆಂತರಿಕ ಶತ್ರುಗಳಾದ ಅರಿಶಡ್ವರ್ಗಗಳು, ಅಸತ್ಯ, ನಿಂದನೆ ಮುಂತಾದ ರೂಪದಲ್ಲಿ ಮಾತನಾಡುವ ನಾಲಿಗೆಯನ್ನು ಹಿರಿದು ಹೊರಹಾಕುವ ಶಕ್ತಿಯನ್ನು ಹೊಂದಿರುವವಳು. ಸ್ಪಷ್ಟ ವಾಕ್‌ಸಿದ್ಧಿಗೆ ಉಂಟಾಗುವ ತೊಡಕುಗಳನ್ನು ಶಮನ ಮಾಡುವ ಅಧಿದೇವತೆ. ಬಗಲಾಮುಖಿಯು ವಾಕ್‌ಪಟುವನ್ನು ಮೂಕನನ್ನಾಗಿಯೂ, ಅರಸನನ್ನು ಭಿಕ್ಷುಕನನ್ನಾಗಿಯೂ, ಬಲಶಾಲಿಯನ್ನು ಅಶಕ್ತನನ್ನಾಗಿಯೂ ಮಾಡುವ ಶಕ್ತಿಯನ್ನು ಹೊಂದಿರುವಳು. ಆದರೆ ಬಗಲಾಮುಖಿಯನ್ನು ಮಹಾವಿದ್ಯೆಯಾಗಿ ಉಪಾಸನೆ ಮಾಡುವವರ ಎಲ್ಲಾ ಸಂಕಷ್ಟಗಳನ್ನು ತೊರೆದು ವರ ನೀಡಿ ಯಶಸ್ಸು ಪಡೆಯುವಂತೆ ಅನುಗ್ರಹಿಸುವಳು. ಪ್ರಕಾಶ, ತೇಜಸ್ಸಿನ ಅಧಿದೇವತೆಯಾಗಿ ಪೀತವರ್ಣದವಳಾಗಿರುವಳು.

ಈ ರೀತಿ ದಶಮಹಾವಿದ್ಯಾಗುಂಪಿನಲ್ಲಿ ಬರುವ ಹತ್ತು ದಿಕ್ಕುಗಳಿಗೆ ಅಧಿದೇವತೆಯಾಗಿರುವ ಸತಿಯ ವಿವಿಧ ರೂಪಗಳು ತಾಂತ್ರಿಕ ಆಚರಣೆಗಳಲ್ಲೂ ಹೆಚ್ಚಿನ ವೈಶಿಷ್ಟ್ಯತೆ ಪಡೆದುಕೊಂಡಿವೆ. ಇವುಗಳಲ್ಲಿ ಭೀಕರ ರೂಪದ ಕಾಳೀ, ತಾರಾ, ಧೂಮವತೀ ಮತ್ತು ಛಿನ್ನಮಸ್ತಾ ಮುಖ್ಯವಾಗಿದ್ದರೆ, ಷೋಡಶಿ, ಕಮಲಾ ಮತ್ತು ಮತಂಗಿ ಸೌಂದರ್ಯ ಪ್ರತೀಕವಾಗಿದ್ದರೆ, ಎರಡು ಮುಖದ ಭೈರವೀ, ಕೊಕ್ಕರೆ ಮುಖದ ಬಗಲಾದೇವಿಯರು ವಿಚಿತ್ರ ರೂಪಗಳ ಸಂಕೇತ. ಎಲ್ಲಾ ದೃಷ್ಟಿಗಳಿಂದ ಸಂಪೂರ್ಣ ಸಾಮರಸ್ಯ ರೂಪದ ಮಹಾವಿದ್ಯೆಯು ಭುವನೇಶ್ವರಿಯಾಗಿದ್ದಾಳೆ.

ದೇವಿಯ ದಶಮಹಾವಿದ್ಯಾರೂಪಗಳು ವಿಭಿನ್ನ, ಭಯಂಕರ, ವಿಚಿತ್ರ ಹಾಗೂ ವಿಶಿಷ್ಟ ಗುಣ ಮತ್ತು ಉದ್ದೇಶಗಳಿಗಾಗಿಯೇ ನಿಯೋಜಿತವಾಗಿ ತಾಂತ್ರಿಕ ಪ್ರಯೋಗ ಮತ್ತು ಉಪಾಸನಾ ಕ್ರಮಗಳಲ್ಲಿ ಹೆಚ್ಚಿನ ಸ್ಥಾನವನ್ನು ಪಡೆದುಕೊಂಡವು. ದೇವಿಯ ಈ ರೂಪಗಳು ನಿಗೂಢ ಅರ್ಥಗಳನ್ನೂ ಸ್ಥಾನಮಾನಗಳನ್ನೂ ಪ್ರತಿಪಾದಿಸುತ್ತವೆ. ಆದರೆ ಈ ರೂಪಗಳಿಗೆ ತದ್ವಿರುದ್ಧವಾದ ಕೇವಲ ಲೋಕಕಲ್ಯಾಣವನ್ನೇ ಬಯಸುವ ಮಂಗಳಮಯ ಮೂರ್ತಿಯ ರೂಪದಲ್ಲಿ ದೇವಿಯು ಶಿವನ ಸಹಧರ್ಮಿಣಿಯಾಗಿ ಶೋಭಾಯಮಾನವಾಗಿ ಕಂಗೊಳಿಸುತ್ತಾಳೆ. ಪಾರ್ವತಿಗೂ ಪೂರ್ವ ಸ್ವರೂಪದಲ್ಲಿ ದೇವಿಯು ಸತಿಯಾಗಿ ಜನ್ಮತಾಳುತ್ತಾಳೆ. ದಕ್ಷ ಪ್ರಜಾಪತಿಯ ಮಗಳಾಗಿ ಕಠೋರ ತಪಸ್ವಿ ಶಿವನನ್ನು ಅದೇ ರೀತಿಯ ಕಠಿಣ ತಪಸ್ಸಿನಿಂದ ಒಲಿಸಿಕೊಂಡ ಈ ದಾಕ್ಷಾಯಿಣಿ ತಂದೆಯ ಅವಜ್ಞ ಭಾವಕ್ಕೆ ಬಲಿಯಾಗುವ ಕರುಣಾಜನಕ ಸ್ಥಿತಿಯನ್ನು ದಕ್ಷ ಯಜ್ಞದ ಸಮಯದಲ್ಲಿ ಹೊಂದಬೇಕಾಗುತ್ತದೆ. ಅವಮಾನ ಸಹಿಸದೆ ಯಜ್ಞ-ಕುಂಡಕ್ಕೆ ಹಾರಿದ ಸತಿ ಕಳೇಬರವನ್ನು ಹೊತ್ತ

ಭವ (ಶಿವ) ವೈರಾಗ್ಯ ಭಾವವನ್ನು ತಳೆದಾಗ ಜಗತ್ತು ಅಲ್ಲೋಲ ಕಲ್ಲೋಲವಾಗುತ್ತದೆ. ಸತಿಯ ಕಳೇ ಬರವನ್ನು ಹೆಗಲಮೇಲೆ ಹೊತ್ತ ಶಿವ ಆರ್ತನಾಗಿ ಅಲೆದಾಡುವುದನ್ನು ನೋಡಿ ಶಿವನನ್ನು ಧ್ಯಾನ ಸಮಾಧಿಯತ್ತ ತಿರುಗಿಸಲು ವಿಷ್ಣುವು ಸುದರ್ಶನ ಚಕ್ರವನ್ನು ಸತಿಯ ಕಳೇಬರದ ಮೇಲೆ ಪ್ರಯೋಗಿಸಲು ದೇಹವು ಛಿದ್ರವಾಗಿ ಭಾಗಗಳು ವಿವದೆಡೆಗಳಲ್ಲಿ ಬಿದ್ದವು. ಹೀಗೆ ಸತಿಯ ದೇಹದ ಭಾಗಗಳು ಬಿದ್ದ ಸ್ಥಳಗಳೇ ಮುಂದೆ ಶಕ್ತಿಪೀಠಗಳಾದವು.

ಜಾಲಾಂಧರದಲ್ಲಿ ಆಕೆಯ ಸ್ತನಗಳು ಬಿದ್ದವು, ಉಡ್ಡೀಯಾನದಲ್ಲಿ ತೊಡೆಗಳು ಬಿದ್ದವು. ಪೂರ್ಣಗಿರಿಯಲ್ಲಿ ಕತ್ತು ಮತ್ತು ಭುಜಗಳು, ಕಾಮರೂಪದಲ್ಲಿ (ಕಾಮುಖ್ಯ) ಯೋನಿ ಮಂಡಲ, ದೇವೀಕೂಟದಲ್ಲಿ ಕಾಲುಗಳು, ದಿಕ್ಕರವಾಸಿನಿಯಲ್ಲಿ ನಾಭಿ ಮಂಡಲ, ಲಲಿತಾಂಬಾ ಕ್ಷೇತ್ರದಲ್ಲಿ ತಲೆ ಇವು ಬಿದ್ದವು. ಅಷ್ಟು ಹೊತ್ತಿಗೆ ಶಿವನ ಕ್ಷೋಭೆ, ಮತ್ತು ಶೋಕ ಶಮನವಾಗಿ ಮತ್ತೆ ಕಠೋರ ತಪಸ್ಸಿಗೆ ಕೈಲಾಸ ಪರ್ವತಕ್ಕೆ ತೆರಳುತ್ತಾನೆ. ಒಂದೊಂದು ಶಕ್ತಿ ಪೀಠದಲ್ಲಿಯೂ ಶಿವನು ಒಂದೊಂದು ಅಂಶದಿಂದ ಶಕ್ತಿಯೊಡಗೂಡಿ ಅಂದರೆ ಜಾಲಾಂಧರದಲ್ಲಿ ಜಲೇಶ್ವರನಾಗಿ, ಉಡ್ಡೀಯಾನದಲ್ಲಿ ಜಗನ್ನಾಥನಾಗಿ, ಪೂರ್ಣಗಿರಿಯಲ್ಲಿ ಮಹಾನಾಥನಾಗಿ, ಕಾಮರೂಪದಲ್ಲಿ ಕಾಮೇಶ್ವರನಾಗಿ ಇದ್ದಾನೆ ಎನ್ನುವ ಕಲ್ಪನೆ ಇವೆ. (ಮೂರ್ತಿ ಶಿಲ್ಪ ನೆಲ- ಹಿನ್ನೆಲೆ. ಪು - ೧೭೬)

ಪಾರ್ವತೀ

ಸರ್ವ ಮಂಗಳ ಮಾಂಗಲ್ಯೇ ಶಿವೆ ಸರ್ವಾರ್ಥ ಸಾಧಿಕೆ!

ಶರಣ್ಯೇ ತ್ರಯಂಬಿಕೇ ಗೌರಿ ನಾರಾಯಣಿ ನಮೋಸ್ತುತೇ.

ಮಂಗಳಮಯ ಸ್ವರೂಪದ ಪಾರ್ವತಿ ಶಿವನ ಸಂಗಾತಿ, ಸಹಚಾರಿಣಿ, ಅರ್ಧಾಂಗಿಯಾಗಿ ಒಂದು ಕೌಟುಂಬಿಕ ಜೀವನಕ್ಕೆ ಮಾದರಿಯ ರೂಪವನ್ನು ತಳೆದಿದ್ದಾಳೆ. ಈ ರೂಪದಲ್ಲಿ ಯಾವ ವಿಕಲ್ಪನೆ, ಭಯಂಕರತೆ ಇಲ್ಲದೇ ಅನೇಕ ಹೆಸರುಗಳಿಂದ ದೇವಿಯನ್ನು ಅರ್ಚಿಸಲಾಗುತ್ತದೆ. ಪರ್ವತರಾಜನ ಪುತ್ರಿ ಪಾರ್ವತಿಯಾಗಿ, ಗಿರಿರಾಜನ ಪುತ್ರಿ ಗಿರಿಜೆಯಾಗಿ, ಹಿಮವಂತನ ಕುವರಿ ಹೈಮವತಿಯಾಗಿ, ಮಹೇಶನ ಪತ್ನಿ ಮಹೇಶ್ವರಿಯಾಗಿ, ಶಿವನ ಅರ್ಧಾಂಗಿಯಾಗಿ ಅರ್ಧನಾರೀಶ್ವರಳಾಗಿ, ಶಿವನ ಸಂಗಾತಿ ಶಕ್ತಿಯಾಗಿ, ಶಿವನ ಸಹಧರ್ಮಿಣಿ ಗೌರಿಯಾಗಿ, ಮಹಾದೇವನ ಅನುಚರೆ ಮಹಾಮಾಯೆಯಾಗಿ, ಮೃಡೇಶ್ವರನ ಪತ್ನಿ ಮೃಡಾಣಿಯಾಗಿ ಪರಶಿವನ ಶಕ್ತಿ ಸ್ವರೂಪಿಣಿ ಆದಿ ಪರಾಶಕ್ತಿಯಾಗಿ, ಶಿವನ ಮನೋನ್ಮಯಕೋಶದ ಅಧಿದೇವತೆ ಮನೋನ್ಮಣಿಯಾಗಿ, ಶಿವನ ಶಿವೆಯಾಗಿ, ಉಮೆಯಾಗಿ ಸರ್ವ ಮಂಗಳೆಯಾಗಿ ದೇವಿಯು

ಮಾನವ ಸಮಾಜದಲ್ಲಿ ಒಬ್ಬ ಆದರ್ಶ ಪುತ್ರಿ, ಪತ್ನಿ, ಮಾತೆಯ ಸ್ಥಾನಗಳಲ್ಲಿ ನಿಂತು ಜೀವನದ ನೋವು ನಲಿವುಗಳನ್ನು ಅನುಭವಿಸುವ ರೀತಿಯನ್ನು ತೋರಿಸಿಕೊಟ್ಟಿದ್ದಾಳೆ. ಸರ್ವ ಸೌಭಾಗ್ಯಗಳಿಗೆ ಅಧಿದೇವತೆಯಾಗಿ ಮೈದಳೆದಿದ್ದಾಳೆ. ಸೌಂದರ್ಯದ ಖಣಿಯಾಗಿ ಜಗನ್ಮೋಹಿನಿಯಾಗಿ ಮೆರೆದಿದ್ದಾಳೆ.

ಶಿವಪಾರ್ವತಿಯರು ದಿವ್ಯ ಪ್ರೇಮದ ಸಂಕೇತ. ಶಿವನು ಸತಿಯನ್ನು ಕಳೆದುಕೊಂಡು ಅದೆಷ್ಟೋ ವರ್ಷಗಳ ಕಾಲ ಕಠೋರ ತಪಸ್ಸಿನಲ್ಲಿ ತೊಡಗಿದಾಗ ಮತ್ತೆ ಜಗತ್ತಿನ ಕಾರ್ಯಚಟುವಟಿಕೆಗಳು ಏರುಪೇರಾಗಲು ದೇವಾನುದೇವತೆಗಳು ಸತಿಯೇ ಪಾರ್ವತಿಯ ಜನ್ಮದಲ್ಲಿರುವುದನ್ನು ಮನಗಂಡು ಶಿವನನ್ನು ತಪಸ್ಸಿನಿಂದ ವಿಮುಖನಾಗಿ ಸಂಸಾರಿಯಾಗಲು ಪ್ರೇರೇಪಿಸುವಂತೆ ಪಾರ್ವತಿಯನ್ನು ಪ್ರಾರ್ಥಿಸಿಕೊಳ್ಳುತ್ತಾರೆ. ಶಿವನನ್ನು ತಪಸ್ಸಿನಿಂದಲೇ ಮನವೊಲಿಸಿಕೊಳ್ಳಬೇಕೆಂಬ ರಹಸ್ಯವನ್ನು ಅರಿತ ಪಾರ್ವತಿ ಒಬ್ಬ ಸಾಮಾನ್ಯ ಶಿವಭಕ್ತೆಯಾಗಿ ಶಿವನನ್ನು ಒಲಿಸಿಕೊಳ್ಳುತ್ತಾಳೆ. ಕೈಲಾಸದಲ್ಲಿ ಶಿವನು ಸಂಸಾರಿಯಾಗಿ ಪಾರ್ವತಿಯೊಂದಿಗೆ ಕಳೆಯುವಾಗ ಗಣೇಶ ಮತ್ತು ಕಾರ್ತಿಕೇಯರು ಜನಿಸುತ್ತಾರೆ. ಇವರಿಂದಲೂ ಲೋಕ ಕಂಟಕ ಪರಿಹಾರವಾಗಿ ಕಲ್ಯಾಣವಾಗುತ್ತದೆ.

ಪಾರ್ವತಿಯ ಶಿಲ್ಪವು ಬೇರೆಲ್ಲಾ ದೇವಿ ಶಿಲ್ಪಗಳಿಗಿಂತ ಸ್ವಲ್ಪ ಭಿನ್ನವಾಗಿ ರಚಿತವಾಗಿರುತ್ತದೆ. ಚತುರ್ಭುಜೆಯಾಗಿರುವ ಪಾರ್ವತಿಯ ಕೈಗಳಲ್ಲಿ ಅಕ್ಷರಮಾಲೆ, ಶಿವಲಿಂಗ, ಗಣಪತಿಯ ಪ್ರತಿಮೆ ಮತ್ತು ಕಮಂಡಲು ಇರುತ್ತವೆ. ಆಕೆಯು ಅಗ್ನಿಕುಂಡಗಳ ಬಳಿ ನೆಲೆಸುವ ಪ್ರವೃತ್ತಿಯವಳಾಗಿರುತ್ತಾಳೆ. ಪಾರ್ವತಿಯದೇ ಇನ್ನೊಂದು ರೂಪವಾದ ಗೌರಿ ಒಂದು ಮಕರದ ಮೇಲೆ ನಿಂತು ಅಕ್ಷಸೂತ್ರ, ಪದ್ಮ, ಅಭಯ ಮತ್ತು ವರದ ಹಸ್ತಗಳನ್ನು ಹೊಂದಿರುತ್ತಾಳೆ. ಈಕೆಯ ಪುರೋವೃದ್ಧಿ, ಧನಕನಕ ಸಮೃದ್ಧಿಗೆ ಅಧಿ ದೇವತೆಯಾಗಿರುವುದರಿಂದ ಮನೆಗಳಲ್ಲಿಟ್ಟು ಪೂಜಿಸುತ್ತಾರೆ. ಪಾರ್ವತಿಯ ಮತ್ತೊಂದು ರೂಪ ಉಮಾ, ದೇವಾಧಿದೇವತೆಗಳಿಂದ ಪೂಜನಗೊಳ್ಳುವ ಈ ದೇವಿಯು ಅಕ್ಷರಮಾಲಾ, ದರ್ಪಣ, ಕಮಂಡಲು ಮತ್ತು ಪದ್ಮವನ್ನು ಹಿಡಿದಿರುತ್ತಾಳೆ.

ಶಾರದಾ ತಿಲಕದಲ್ಲಿ ಸರ್ವ ಸೌಭಾಗೀಶ್ವರೀಧ್ಯಾನವನ್ನು ಈ ರೀತಿ ಕೊಡಲಾಗಿದೆ – ಶ್ಲೋಕ –೭೩೧

ಚಂದ್ರಕಲೆಯನ್ನು ಧರಿಸಿದ, ಶುಭ್ರಕಾಂತಿಯುಳ್ಳ, ಸ್ತನಭಾರದಿಂದ ನಮ್ರವಾದ ಅಂಗವುಳ್ಳ, ಧವಳ ಕಮಲದ ಮೇಲೆ ಕುಳಿತಿರುವ, ತನ್ನ ಕರಕಮಲಗಳಿಂದ ಲೇಖನಿ ಮತ್ತು ಪುಸ್ತಕದ

ಬೆಳಕನ್ನು ಹೊರಸೂಸುವ ವಾಗ್ದೇನತೆಯು ಸಮಸ್ತ ಐಶ್ವರ್ಯಗಳನ್ನು ನೀಡಿ ನಮ್ಮನ್ನು ಕಾಪಾಡಲಿ. (ಶಕ್ತಿ ನಿಧಿ. ಪು E– ೨೧೩)

ಮಂಗಳ

ಮಂಗಲಾದೇವಿಯ ರೂಪದಲ್ಲಿ ಪಾರ್ವತಿಯು ಜಟಾಮುಕುಟವನ್ನು ಧರಿಸಿ ಪದ್ಮಾಸನದಲ್ಲಿ ಕುಳಿತಿರುತ್ತಾಳೆ. ಮೂರ್ತಿ ಲಕ್ಷಣದಂತೆ ಹತ್ತು ಕೈಗಳನ್ನು ಉಳ್ಳವಳು. ಶೂಲ, ಅಕ್ಷಮಾಲಾ, ಧನುಸ್, ಧರ್ಪಣ, ಬಾಣ, ಖೇಟಕ, ಖಡ್ಗ ಮತ್ತು ಚಂದ್ರಗಳನ್ನೂ ಉಳಿದ ಎರಡು ಕೈಗಳು ಅಭಯ ಮತ್ತು ವರದ ಮುದ್ರೆಗಳಲ್ಲಿರುತ್ತವೆ. ಮಂದಸ್ಮಿತಳಾಗಿ ಸುಂದರಾಗಿಯಾಗಿ ಸರ್ವಾಭರಣಭೂಷಿತೆಯಾಗಿ ಮಂಗಳೆಯ ಮೂರ್ತಿಯನ್ನು ರಚಿಸಲಾಗುತ್ತದೆ.

ಸರ್ವಮಂಗಳ

ಲೋಕಕಲ್ಯಾಣ ಹಿತಕ್ಕಾಗಿ ಸರ್ವಮಂಗಳೆಯರೂಪದ ದೇವಿಯ ಮೂರ್ತಿಯ ಲಕ್ಷಣ ನಾಲ್ಕು ಕೈಗಳನ್ನು ಹೊಂದಿದ್ದು ಅಕ್ಷಸೂತ್ರ, ಪದ್ಮ, ಶೂಲ ಮತ್ತು ಕಮಂಡಲವನ್ನು ಹಿಡಿದಿರುವ ಪ್ರಶಾಂತ ವದನೆಯಾಗಿ ಸರ್ವಮಂಗಳೆ ಕಂಗೊಳಿಸುತ್ತಾಳೆ.

ಮನೋನ್ಮಣಿ

ಶಿವನ ಮನವನ್ನು ಸೂರೆಗೊಳ್ಳುವ ಮನೋನ್ಮಣಿ ಕಪ್ಪು ಅಥವಾ ನೀಲವರ್ಣದವಳಾಗಿದ್ದು ವಿಶಾಲವಾದ ಮುಖವನ್ನು ಹೊಂದಿದ್ದು ಕೈಗಳಲ್ಲಿ ಕಪಾಲ ಮತ್ತು ಖಡ್ಗವನ್ನೂ ಹಿಡಿದಿರುತ್ತಾಳೆ. ಅವಳ ಭಕ್ತರ ಇಷ್ಟಾರ್ಥಗಳನ್ನು ಪೂರೈಸುವ ಈ ದೇವಿ ಅವರ ಶತ್ರುಗಳನ್ನೂ ನಿಗ್ರಹಿಸುತ್ತಾಳೆ.

ಕಾರಣಾಗಮದಲ್ಲಿ ಮನೋನ್ಮಣಿಯನ್ನು ಈ ರೀತಿ ಧ್ಯಾನಿಸಲಾಗಿದೆ. ೬೭೯–೬೮೦.

ಒಂದು ಮುಖವಿದ್ದು ಮೂರು ಕಣ್ಣುಗಳಿರುವ, ಕಿರೀಟ ಮತ್ತು ಮಕುಟಗಳಿಂದ ಕೂಡಿದ ವರದ ಮತ್ತು ಅಭಯ ಹಸ್ತಗಳಿಂದ ಪೂರ್ಣಳಾಗಿದ್ದಾಳೆ. ನಾಲ್ಕು ಭುಜಗಳಿಂದ ಶೋಭಿಸುವ

ಆಕೆಯು ಮೇಲ್ಭಾಗದ ಎರಡು ಹಸ್ತ-ಕಮಲಗಳಲ್ಲಿ ಎರಡು ನೈದಿಲೆ/ಕಮಲಗಳನ್ನು ಧರಿಸಿರುವಳು. ರೇಷ್ಮೆ ವಸ್ತ್ರಗಳನ್ನುಟ್ಟು ಸಕಲ ಆಭರಣಗಳಿಂದ ಶೋಭಿಸುವಳು. ಪದ್ಮಾಸನದಲ್ಲಿ ಕುಳಿತಿರುವ ಈ ಲಕ್ಷಣಗಳಿಂದ ಕೂಡಿದ ಮನೋನ್ಮಣೀದೇವಿಯನ್ನು ಈ ಪ್ರಕಾರವಾಗಿ ಧ್ಯಾನಿಸಬೇಕು. (ಸುಪ್ರಭೇದಾಗಮನದಲ್ಲಿ ಶುಭ್ರವರ್ಣ) (ಶಕ್ತಿ ನಿಧಿ. ಪು – ೨೧೩)

ದೇವಿಯ ರೂಪಗಳಲ್ಲಿ ಇನ್ನೊಂದು ಪಂಗಡಕ್ಕೆ ಸೇರಿದ ಮಾತೃಕೆಯರ ಪರಿಕಲ್ಪನೆಯು ಅತಿ ವೈಶಿಷ್ಟ್ಯ ಪೂರ್ಣವಾಗಿದೆ. ಗ್ರಾಮ-ದೇವತೆಯರಿಗೆ ಸಂಬಂಧಿಸಿದ ಕಲ್ಪನೆಗಳು ಅಸಂಖ್ಯಾತವಾಗಿವೆ. ಅನೇಕಾನೇಕ ಖಾಯಿಲೆ, ರೋಗ ರುಜಿನಗಳನ್ನು ತಡೆಗಟ್ಟುವ, ಮಕ್ಕಳನ್ನು ದುಷ್ಟಶಕ್ತಿಗಳಿಂದ ರಕ್ಷಿಸುವ ಮತ್ತು ಗ್ರಾಮದಲ್ಲಿ ಕ್ಷಾಮ, ಬೇಗೆಗಳು ಬಾರದಂತೆ ನಿಗ್ರಹಿಸುವಂತಹ ಅನೇಕ ರೀತಿಯ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತಿರುವ ಗ್ರಾಮದೇವತೆಗಳು ಗ್ರಾಮಸ್ಥರ ಶಕ್ತಿ ದೇವತೆ. ಇವುಗಳಿಗೆ ಶಿಷ್ಟ ದೇವತೆಗಳಿಗಿದ್ದಂತೆ ಶಾಸ್ತ್ರೀಯ ಮಟ್ಟದ ಮೂರ್ತಿಲಕ್ಷಣಗಳಿಲ್ಲದಿದ್ದರೂ ಗ್ರಾಮದೇವತೆಗೆ ಒಂದು ಗುಡಿ, ಪೂಜೆ, ಜಾತ್ರೆಗಳು ನಿರಂತರವಾಗಿರುತ್ತವೆ. ಗ್ರಾಮದೇವತೆಯರ ಆಕಾರಗಳು ಒಂದು ಕಲ್ಲುಗುಂಡಿನಿಂದ ಹಿಡಿದು ಬಂಡೆಯಲ್ಲಿಯೇ ಒಡಮೂಡಿರುವಂತಹುದು, ಅಥವಾ ಮೂರ್ತಿ ಲಕ್ಷಣಗಳಿಂದ ನಾಲ್ಕು ಅಥವಾ ಎರಡು ಕೈಗಳ ರಚನೆಯುಳ್ಳದ್ದಾಗಿರುತ್ತವೆ. ಮಾರಿಯಮ್ಮ, ಕರಿಯಮ್ಮ, ಅಣ್ಣಮ್ಮ, ಮುತ್ಯಾಲಮ್ಮ, ಯಕ್ಕಲಮ್ಮ, ಯಲ್ಲಮ್ಮ ಮುಂತಾದ ಗ್ರಾಮದೇವತೆಯರು ಪ್ರಸಿದ್ಧರಾಗಿದ್ದಾರೆ. ಕಾಲಕ್ರಮೇಣ ಇವರಿಗೂ ತ್ರಿಕಾಲ ಪೂಜೆ, ಆಗಮ ರೀತ್ಯ ಪೂಜಾ ವಿಧಿಗಳನ್ನು ಮಾಡಲಾಗುತ್ತಿದೆ.

ಮಾತೃಕೆಯರು

ಸಪ್ತ ಮಾತೃಕೆಯರು ಈ ನೆಲೆಯಲ್ಲಿಯೇ ಮೈದಳೆದವರಂತೆ ಕಾಣುತ್ತದೆ. ಬ್ರಹ್ಮಸಂಹಿತೆಯಲ್ಲಿಯೇ ಅವರ ಹೆಸರುಗಳನ್ನು ಹೇಳದಿದ್ದರೂ ಅವರ ಪ್ರಸ್ತಾಪವೇನೋ ಬರುತ್ತದೆ. ವ್ಯಾಖ್ಯಾನಕಾರನಾದ ಉತ್ಪಲ ಹೆಸರುಗಳನ್ನು ಹೇಳಿದ್ದಾನೆ – ಬ್ರಾಹ್ಮೀ, ವೈಷ್ಣವೀ, ರೌದ್ರಿ (ಮಹೇಶ್ವರಿ), ಕೌಮಾರೀ, ಐಂದ್ರಿ, ಯಮೀ, ವಾರುಣೀ, ಕೌಬೇರೀ, ಇವರು ಕ್ರಮವಾಗಿ ಬ್ರಹ್ಮ, ವಿಷ್ಣು, ಶಿವ, ಸ್ಕಂದ, ಇಂದ್ರ, ಯಮ, ವರುಣ, ಕುಬೇರ ಈ ದೇವತೆಗಳ ಶಕ್ತಿಯರು. ಇವರು ಅಷ್ಟಮಾತೃಕೆಯರು. ಇವರಲ್ಲದೆ ಇತರ ಮಾತೃಗಣಗಳನ್ನು ಉತ್ಪಲನು ಪ್ರಸ್ತಾಪಿಸಿದ್ದಾನೆ. ಮಾರ್ಕಂಡೇಯ ಪುರಾಣದಲ್ಲಿ ದೇವಿಯು ಅಸುರನೊಂದಿಗೆ ಹೋರಾಡಲು ಹೊರಟಾಗ ಬ್ರಹ್ಮ,

ಕಾರ್ತಿಕೇಯ, ವಿಷ್ಣು, ಇಂದ್ರ ಇವರಿಂದ ಶಕ್ತಿಯರು ಹೊರಹೊಮ್ಮಿ ದೇವಿಗೆ ನೇರವಾಗಿ ಹೊರಟ ಉಲ್ಲೇಖವಿದೆ. (ಮೂರ್ತಿ ಶಿಲ್ಪ - ನೆಲೆ ಹಿನ್ನೆಲೆ, ಪುಟ - ೧೭೩)

ಮಾತೃ ಗಣಗಳನ್ನು ಏಳೆಂದೇ ವ್ಯವಹರಿಸುವ ವಾಡಿಕೆಯಿದ್ದರೂ ಎಂಟು, ಒಂಭತ್ತು, ಹದಿನಾರೆಂದು ನಿರ್ದೇಶಿಸುವುದೂ ಇದೆ. ಹದಿನಾರೆನ್ನುವಾಗ ದೇವಸೇನೆ, ಗೌರಿ, ಮೇಧಾ, ಪದ್ಮಾ, ಶಚೀ, ಶಾಂತಿ, ಸಾವಿತ್ರಿ, ಸ್ವಧಾ, ಸ್ವಾಹಾ, ವಿಜಯಾ, ಜಯಾ, ಧೃತಿ, ಪುಷ್ಟಿ, ತುಷ್ಟಿ, ಆತ್ಮದೇವತೆ, ಕುಲದೇವತೆಗಳು ಸೇರುತ್ತಾರೆ. ಇವರನ್ನು ಧಾತ್ರಿಗಳೆಂದೂ ಕರೆದು ಇವರ ಪ್ರೀತಿಗಾಗಿ 'ಧಾತ್ರಿಹವನ'ವನ್ನು ನಡೆಸುವ ಪದ್ಧತಿಯಿದೆ. ಈ ಮಾತೃದೇವತೆಗಳಲ್ಲಿ ಪೂರ್ಣಶಕ್ತಿ, ಅಂಶರೂಪಿಣಿ, ಕಲಾರೂಪಿಣಿ, ಕಲಾಂಶರೂಪಿಣಿ ಎನ್ನುವ ಭೇದವಿದೆ. ತಾರತಮ್ಯ ಕ್ರಮದಲ್ಲಿ ಈ ಮಾತೃದೇವತೆಗಳು ವಿದ್ಯಾದೇವಿಯರ ತರುವಾಯ ಬರತಕ್ಕವರು. ವಿದ್ಯಾದೇವಿಯರೆಂದು ಶಕ್ತಿಯ ಐದು ಅವತಾರಗಳು - ದುರ್ಗಾ, ಲಕ್ಷ್ಮಿ, ಸರಸ್ವತಿ, ರಾಧಾ ಮತ್ತು ಸಾವಿತ್ರಿ, ಸೃಷ್ಟಿಕ್ರಮದಲ್ಲಿ ಪ್ರಕೃತಿಯು ಐದು ವಿಧವಾಗಿ ಕವಲೊಡೆದು ಈ ನಿರ್ದೇಶನಕ್ಕೆ ಮೂಲವೆಂದು ಮಾತಿದೆ. (ಮೂರ್ತಿಶಿಲ್ಪ-ನೆಲೆ ಹಿನ್ನೆಲೆ - ಪುಟ. ೧೭೩)

ಮಾತೃಕೆಯರ ವಿಷಯವಾಗಿ ಈ ರೀತಿಯ ಹಿನ್ನೆಲೆಯಿದ್ದರೂ ಇತಿಹಾಸ ಕಾಲದಲ್ಲಿ ಶಿಲ್ಪರೂಪದಲ್ಲಿ ಹೆಚ್ಚುಮಟ್ಟಿಗೆ ಗುರುತಿಸುವುದು ಸಪ್ತಮಾತೃಕೆಯರನ್ನೇ. ಅಂಧಕಾಸುರನ ವಧೆಯ ಸಮಯದಲ್ಲಿ ಶಿವನು ಅಂಧಕಾಸುರನನ್ನು ತ್ರಿಶೂಲದಿಂದ ಹೆಕ್ಕಿ ಆಕಾಶಕ್ಕೆತ್ತಿದ್ದಾಗ ಅವನ ರಕ್ತವು ನೆಲಕ್ಕೆ ಬೀಳದಂತೆ ತಡೆಯಬೇಕಾದ ಪ್ರಸಂಗ ಬರುತ್ತದೆ. ಒಂದು ವೇಳೆ ಹಾಗೆ ನೆಲಕ್ಕೆ ಬಿದ್ದರೆ ಸಾವಿರಾರು ಅಂಧಕಾಸುರರು ಉದ್ಭವಿಸುತ್ತಾರೆ. ಇದನ್ನು ತಡೆಯಲು ಶಿವನು ತನ್ನ ಶಕ್ತಿಯಿಂದ ಭುಗಿಲೇಳುವ ಅಗ್ನಿಯನ್ನು ಸೃಷ್ಟಿಸಿದಾಗ ಅಲ್ಲಿಂದ ಶಿವನಿಗೆ ಸಹಾಯಕವಾಗಿ ಯೋಗೇಶ್ವರಿಯು ಉದ್ಭವಿಸುತ್ತಾಳೆ. ಅದನ್ನು ಕಂಡ ದೇವತೆಗಳು ತಮ್ಮ ಶಕ್ತಿಯಿಂದಲೂ ಒಂದೊಂದು ದೇವಿಯನ್ನು ಸೃಷ್ಟಿಸುತ್ತಾರೆ. ಬ್ರಹ್ಮನಿಂದ ಬ್ರಹ್ಮಾಣಿ, ಮಹೇಶ್ವರನಿಂದ ಮಹೇಶ್ವರಿ, ಕುಮಾರನಿಂದ ಕೌಮಾರಿ, ವಿಷ್ಣುವಿನಿಂದ ವೈಷ್ಣವಿ, ವರಾಹನಿಂದ ವಾರಾಹಿ, ಇಂದ್ರನಿಂದ ಇಂದ್ರಾಣಿ, ಹಾಗೂ ಯಮನಿಂದ ಚಾಮುಂಡ ಸೃಷ್ಟಿಯಾಗುತ್ತಾರೆ. ಇವರೆಲ್ಲರೂ ತಮ್ಮ ಮೂಲದೇವತೆಗಳ ಆಯುಧಗಳು ಮತ್ತು ವಾಹನಗಳನ್ನೂ ಹೊಂದಿರುತ್ತಾರೆ. ಸಪ್ತಮಾತೃಕೆಯರ ಆದಿಯನ್ನು ಹಿನ್ನೆಲೆಯನ್ನು ಈ ಪ್ರಸಂಗದೊಂದಿಗೆ ಗುರುತಿಸಲಾಗಿದೆ.

ಹೆಚ್ಚಿನಾಂಶ ಆಗಮಗಳೆಲ್ಲಾ ಮೇಲೆ ತಿಳಿಸಿದ ಸಪ್ತಮಾತೃಕೆಯರ ಬಗ್ಗೆಯೇ ಪ್ರಸ್ತಾಪಿಸುತ್ತವೆ. ಆದರೆ ವರಾಹ-ಪುರಾಣವು ಎಂಟು ಮಾತೃಕೆಯರನ್ನು ಉಲ್ಲೇಖಿಸುತ್ತದೆ. ಈ

ಏಳು ಮಾತೃಕೆಯರ ಜೊತೆಗೆ ಶಿವನು ಬೆಂಕಿಯ ಜ್ವಾಲೆಯಿಂದ ಸೃಷ್ಟಿಸಿದ ಯೋಗೇಶ್ವರಿಯನ್ನು ಸೇರಿಸಿ ಎಂಟು ಮಾತೃಕೆಯರ ಬಗ್ಗೆ ತಿಳಿಸುತ್ತದೆ. ಈ ಮಾತೃಕೆಯರು ಎಂಟು ದುಷ್ಟಗುಣಗಳ ಅಧಿದೇವತೆಯರಾಗಿದ್ದಾರೆ. ಅರಿಷಡ್ವರ್ಗಗಳು, ಪೈಶಾಚ ಮತ್ತು ಅಸೂಯೆಗಳನ್ನೂ ಪ್ರತಿನಿಧಿಸುತ್ತಾರೆಂದು ವರಾಹ ಪುರಾಣದಲ್ಲಿ ತಿಳಿಸಲಾಗಿದೆ. ಕೂರ್ಮ – ಪುರಾಣದಲ್ಲಿ ಅಂಧಕಾಸುರವಧೆಯನ್ನು ದೀರ್ಘವಾಗಿ ಪ್ರಸ್ತಾಪಿಸಿ ಶಿವನು ವಧೆಯ ನಂತರ ಭೈರವನನ್ನು ಸೂಚಿಸಿ ಈ ಮಾತೃಕೆಯರನ್ನು ಪಾತಾಳ ಲೋಕಕ್ಕೆ ಕಳಿಸುವಂತೆ ಆಜ್ಞೆನೀಡುತ್ತಾನೆ.

ಸುಪ್ರಭೇಧಾಗಮದ ಪ್ರಕಾರ ಬ್ರಹ್ಮನು ಸಪ್ತಮಾತೃಕೆಯರನ್ನು ನಿರತನೆಂಬ ಅಸುರನನ್ನು ಸಂಹರಿಸಲು ಸೃಷ್ಟಿಸಿದನೆಂದು ತಿಳಿದುಬರುತ್ತದೆ. ಇಲ್ಲಿ ಆಯಾ ಮಾತೃಕೆಯರ ಮೂರ್ತಿ ಲಕ್ಷಣವನ್ನೂ ಹೇಳಲಾಗಿದೆ. ಬ್ರಹ್ಮಾಣಿ ಮಾತೃಕೆಯನ್ನು ಬ್ರಹ್ಮನಂತೆಯೂ, ಮಾಹೇಶ್ವರಿಯನ್ನು ಕುಳ್ಳಗೆ ಸ್ಥೂಲಕಾಯಳಾಗಿ ಕುಪಿತಳಾಗಿರುವಂತೆ, ಹಾಗೂ ನೇಗಿಲನ್ನು ತನ್ನ ಆಯುಧದಂತೆ, ಇಂದ್ರಾಣಿಯನ್ನು ಇಂದ್ರನಂತೆ, ಚಾಮುಂಡಳನ್ನು ಭಯಂಕರ ರೂಪಳಂತೆ, ತ್ರಿಶೂಲ ಮತ್ತು ಖಡ್ಗಗಳನ್ನು ಪ್ರಯೋಗಿಸುತ್ತಿರುವಂತೆ ಶಿಲ್ಪರೂಪದಲ್ಲಿ ಕಂಡರಿಸಬೇಕೆಂದು ಹೇಳಲಾಗಿದೆ. ಎಲ್ಲಾ ಮಾತೃಕೆಯರು ಸಾಲಾಗಿ ಕುಳಿತಿರುವ ಭಂಗಿಯಲ್ಲಿರಬೇಕು ಎಂಬ ವಿವರಗಳನ್ನು ಸುಪ್ರಬೇಧಾಗಮವು ನೀಡುತ್ತದೆ.

ಈ ವಿವರಗಳನ್ನು ಅನುಸರಿಸಿಯೇ ದಕ್ಷಿಣಭಾರತದ ಅನೇಕ ದೇವಾಲಯಗಳ ಭಿತ್ತಿಯ ಮೇಲೆ, ಹೊರ ಅಥವಾ ಒಳಭಾಗದಲ್ಲಿ ಕೋಷ್ಟಕಗಳೊಳಗೆ ಸಪ್ತಮಾತೃಕಾ ಮೂರ್ತಿಗಳನ್ನು ಪದ್ಮಾಸನದಲ್ಲಿ ಕುಳಿತಿರುವಂತೆ ರಚಿಸಲಾಗಿರುತ್ತದೆ. ಎಲ್ಲೋರದ ಕೈಲಾಸ ದೇವಾಲಯದಲ್ಲಿ ಮಾನವಾಕೃತಿ ಗಾತ್ರದ (life-size) ಸಪ್ತಮಾತೃಕಾ ಶಿಲ್ಪಗಳಿಗೆ ಪ್ರತ್ಯೇಕ ಗುಹೆಯನ್ನೇ ಸೃಜಿಸಲಾಗಿದೆ. ಕರ್ನಾಟಕದಲ್ಲಿ ಭಾರತದಲ್ಲೇ ಪ್ರಥಮಬಾರಿಗೆ ಸಪ್ತಮಾತೃಕೆಯರು ಬಾದಾಮಿ ಚಾಲುಕ್ಯರ ಕಾಲದ ಐಹೊಳೆಯ ರಾವಳಫಾಡಿ ಗುಹೆಯಲ್ಲಿ ನಾಟ್ಯಭಂಗಿಗಳಲ್ಲಿರುವುದನ್ನು ನೋಡಬಹುದು. ಇಲ್ಲಿ ಶಿವನು ಮಧ್ಯದಲ್ಲಿ ನಿಂತು ಪಾರ್ವತೀಸಹಿತನಾಗಿ ಸಪ್ತಮಾತೃಕೆಯರಿಗೆ ನಾಟ್ಯವನ್ನು ಕಲಿಸುತ್ತಿರುವಂತೆ ಶಿಲ್ಪಿಯು ಸಪ್ತಮಾತೃಕೆಯರನ್ನು ವಿವಿಧ ನೃತ್ಯಭಂಗಿಗಳಲ್ಲಿ ಪರಿಕಲ್ಪಿಸಿದ್ದಾನೆ. ಅದರಂತೆ ಹಾವೇರಿಯ ಪುರಸಿದ್ದಪ್ಪ ದೇವಾಲಯದ ಭುವನೇಶ್ವರಿಯಲ್ಲಿ ಸಪ್ತಮಾತೃಕೆಯರ ನೃತ್ಯಕ್ಕೆ ಶಿವನು ವೀಣೆಯನ್ನು ನುಡಿಸುತ್ತಿರುವ ಕಲ್ಪನೆ ರಮಣೀಯವಾಗಿದೆ.

ಬ್ರಹ್ಮಾಣೀ

ಬ್ರಹ್ಮಾಣೀ ಮೂರ್ತಿ ರಚನೆಯ ಲಕ್ಷಣವು ಅಂಶುಬೇಧಾಗಮದ ಪ್ರಕಾರ ನಾಲ್ಕು ತಲೆಗಳನ್ನು ಹೊಂದಿದ್ದು, ದೇಹವು ಹೇಮಕಾಂತಿಯಲ್ಲಿರುತ್ತದೆ. ಮೇಲಿನ ಬಲ ಎಡ ಕೈಗಳಲ್ಲಿ ಕ್ರಮವಾಗಿ ಶೂಲ ಮತ್ತು ಅಕ್ಷಮಾಲೆಯಿದ್ದು, ಕೆಳಗಿನ ಎರಡು ಕೈಗಳು ಅಭಯ ವರದದಲ್ಲಿರುತ್ತದೆ. ಕೆಂಪುವರ್ಣದ ಪದ್ಮದ ಮೇಲೆ ಕುಳಿತಿದ್ದು ಹಂಸವನ್ನು ವಾಹನವಾಗಿ ಹೊಂದಿರುತ್ತಾಳೆ. ಕರಂಡ ಮುಕುಟವನ್ನು, ಪೀತಾಂಬರವನ್ನೂ ಮತ್ತು ಹಂಸವನ್ನು ಧ್ವಜವಾಗಿ ಧರಿಸಿರುತ್ತಾಳೆ. ವಿಷ್ಣುಧರ್ಮೋತ್ತರದ ವಾಚಸ್ಪತ್ಯದಂತೆ ಬ್ರಹ್ಮಾಣಿಗೆ ಆರುಕೈಗಳಿದ್ದು ಹೆಚ್ಚಿನ ಎರಡು ಕೈಗಳಲ್ಲಿ ಪುಸ್ತಕ ಮತ್ತು ಕಮಂಡಲವನ್ನು ಕೊಡಲಾಗಿರುತ್ತದೆ ಹಾಗೂ ಶ್ರುಕ್ ಮತ್ತು ಶ್ರವವನ್ನೂ ಕೊಡಲಾಗಿರುತ್ತದೆ. ಆದರೆ ಪೂರ್ವಕರಣಾಗಮವು ಮೊದಲು ತಿಳಿಸಿದ ಚತುರ್ಭುಜವನ್ನೇ ಸಮರ್ಥಿಸುತ್ತದೆ.

ನೃಸಿಂಹಪ್ರಾಸಾದಲ್ಲಿ ಬ್ರಾಹ್ಮೀದೇವತಾಧ್ಯಾನವನ್ನು ಈ ರೀತಿ ಹೇಳಲಾಗಿದೆ. (ಶ್ಲೋಕ-೮೦೪-೮೦೫)ಬ್ರಾಹ್ಮಿಯು ನಾಲ್ಕು ಮೊಗಗಳುಳ್ಳವಳು. ಆರು ಭುಜಗಳಿರುವ ಆದೇವತೆಯು ಹಂಸಾರೂಢೆಯಾಗಿದ್ದಾಳೆ. ಹಳದಿ ವರ್ಣದಿಂದ ಶೋಭಿತೆ. ಭೂಷಣಗಳಿಂದ ಕೂಡಿರುವವಳು, ಕೃಷ್ಣಮೃಗದ ಚರ್ಮವನ್ನು ಉತ್ತರೀಯವಾಗಿ (ಎಡಭುಜದಿಂದ ಹಾಕುವಕ್ರಮ) ಮಾಡಿರುವವಳು ವರದ ಮುದ್ರೆ, ಸೂತ್ರ, ಸ್ರವ(ಯಜ್ಞಸಾಧನಪಾತ್ರ) ಇವುಗಳನ್ನು ಬಲಗೈಯಲ್ಲಿ ಧರಿಸಿರುವವಳು. ಎಡಗೈಯಲ್ಲಿ ಪುಸ್ತಕ ಸಣ್ಣಪಾತ್ರೆ ಹಾಗೂ ಅಭಯಮುದ್ರೆಯನ್ನೂ ಧರಿಸಿರುವಳು. (ಪೀತವರ್ಣ) (ಶ್ರೀ ತತ್ವನಿಧಿ ಪ್ರ - ೨೩೧)

ವೈಷ್ಣವಿ

ವೈಷ್ಣವಿಯು ವಿಷ್ಣುವಿನ ಚೆಲುವನ್ನೇ ಸೂಸುವ ಲಕ್ಷಣವನ್ನು ಹೊಂದಿದ್ದು, ಕಪ್ಪುವರ್ಣ, ಸುಂದರ ನೇತ್ರಗಳಿಂದ ಕಂಗೊಳಿಸುತ್ತಾಳೆ. ಚತುರ್ಭುಜೆಯಾಗಿದ್ದು ಮೇಲಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರವನ್ನು ಧರಿಸಿದ್ದು ಕೆಳಗಿನ ಎರಡು ಕೈಗಳಲ್ಲಿ ಅಭಯ ಮತ್ತು ವರದ ಮುದ್ರೆಯನ್ನು ಧರಿಸಿರುತ್ತಾಳೆ. ಪೀತಾಂಬರವನ್ನೂ, ಕಿರೀಟ ಮುಕುಟಾದಿ ಸರ್ವಾಭರಣಗಳನ್ನು ವಿಷ್ಣು ಧರಿಸಿರುವಂತೆಯೇ ವೈಷ್ಣವಿಯೂ ಧರಿಸಿರುತ್ತಾಳೆ. ಅವಳ ಧ್ವಜ ಮತ್ತು ವಾಹನವು ಗರುಡನಾಗಿದ್ದು ರಾಜವೃಕ್ಷದಡಿ ಕುಳಿತಿರುತ್ತಾಳೆ. ಆದರೆ ವಿಷ್ಣುಧರ್ಮೋತ್ತರದ ಪ್ರಕಾರ

ಬ್ರಹ್ಮಾಣಿಯಂತೆ ವೈಷ್ಣವಿಗೂ ಆರು ಕೈಗಳಿವೆ. ಹೆಚ್ಚಿನ ಎರಡು ಕೈಗಳಲ್ಲಿ ಗಧೆ ಮತ್ತು ಪದ್ಮಗಳಿರುತ್ತವೆ. ದೇವಿಪುರಾಣ ನೀಡುವ ವಿವರದಂತೆ ವೈಷ್ಣವಿಯು ಚತುರ್ಭುಜೆಯಾಗಿದ್ದು ವಿಷ್ಣುವಿನಂತೆ ಶಂಖ, ಚಕ್ರ, ಗಧಾ ಮತ್ತು ಪದ್ಮವನ್ನು ಧರಿಸಿರುತ್ತಾಳೆ. ವಿಷ್ಣುವಿನ ಅತ್ಯಂತ ಪ್ರೀತಿಯ ವನಮಾಲೆಯನ್ನೂ ಧರಿಸಿರುತ್ತಾಳೆ. ಪೂರ್ವಕರಣಾಗಮದಲ್ಲಿಯೂ ಇದೇ ವಿವರಗಳು ಸಿಗುತ್ತವೆ. ನೃಸಿಂಹಪ್ರಸಾದದಲ್ಲಿ ವೈಷ್ಣವೀದೇವತಾ ರೂಪವನ್ನು ಹೀಗೆ ವರ್ಣಿಸಲಾಗಿದೆ. (ಶ್ಲೋಕ–೮೧೧). ವೈಷ್ಣವೀ ದೇವತೆಯು ಗರುಡಗಾಮಿನಿ, ಶ್ಯಾಮವರ್ಣೆ, ಆರುಭುಜಗಳುಳ್ಳವಳು, ವನಮಾಲಾಧಾರಿಣಿ (ಎಂದೆಂದೂ ಬಾಡದ ಮಾಲಿಕೆ ವನಮಾಲೆ) ಬಲಕೈಗಳಲ್ಲಿ ವರದಮುದ್ರೆ, ಗದೆ ಹಾಗೂ ಕಮಲವನ್ನು ಎಡಗೈಗಳಲ್ಲಿ ಶಂಖ, ಚಕ್ರ ಮತ್ತು ಅಭಯ ಮುದ್ರೆಯನ್ನು ಧರಿಸಿರುವವಳು. ಓರೆ ನೋಟದಿಂದ ನೋಡುವವಳು. ಹೊಳೆಯುವ ಭುಜಗಳುಳ್ಳವಳೂ ಆಗಿದ್ದಾಳೆ. (ನೀಲಿವರ್ಣ) (ಶ್ರೀತತ್ವನಿಧಿ.ಪ್ರ – ೨೩೨)

ಮಹೇಶ್ವರಿ

ಮಹೇಶ್ವರಿಯ ಮೂರ್ತಿಲಕ್ಷಣದಂತೆ, ಚತುರ್ಭುಜೆ, ಮೇಲಿನ ಕೈಗಳಲ್ಲಿ ಶೂಲ ಮತ್ತು ಅಕ್ಷಮಾಲವಿದ್ದರೆಕೆಳಗಿನ ಎರಡು ಕೈಗಳಲ್ಲಿ ಅಭಯ ಮತ್ತು ವರದ ಮುದ್ರೆಗಳಿರುತ್ತವೆ. ಈಕೆಯ ಧ್ವಜ ಮತ್ತು ವಾಹನಗಳಲ್ಲಿ ನಂದಿ ಇರುತ್ತದೆ. ವಿಷ್ಣುಧರ್ಮೋತ್ತರದ ಪ್ರಕಾರ ಮಹೇಶ್ವರಿಯು ಐದು ಮುಖಗಳನ್ನು ಹೊಂದಿರುತ್ತಾಳೆ. ಮೂರು ಕಣ್ಣುಳ್ಳವಳು, ಕಿರೀಟದಲ್ಲಿ ಅರ್ಧಚಂದ್ರನನ್ನು ಧರಿಸಿರುತ್ತಾಳೆ. ಶ್ವೇತವರ್ಣೆಯಾಗಿದ್ದು ಆರು ಕೈಗಳನ್ನು ಹೊಂದಿರುತ್ತಾಳೆ. ಮಾಹೇಶ್ವರಿಯು ಸೂತ್ರ, ಢಮರು, ಶೂಲ ಮತ್ತು ಘಂಟೆಯನ್ನು ಉಳಿದ ಕೈಗಳಲ್ಲಿ ವರದ, ಅಭಯ ಮುದ್ರೆ ಹೊಂದಿರುತ್ತಾಳೆ. ಹಾಗೂ ಜಟಾ–ಮುಕುಟವನ್ನು ಧರಿಸಿರುತ್ತಾಳೆ.

ನೃಸಿಂಹಪ್ರಾಸಾದದಲ್ಲಿ ಮಾಹೇಶ್ವರಿಯ ಧ್ಯಾನವನ್ನು ಈ ರೀತಿ ಮಾಡಲಾಗಿದೆ. (ಶ್ಲೋಕ–೮೦೫–೮೦೭). ಮಹೇಶ್ವರಿಯು ಎತ್ತನ್ನು ಏರಿರುವವಳು, ಐದು ಮೊಗಗಳು, ಮೂರು ಕಣ್ಣುಗಳು, ಧವಲ–ವರ್ಣ, ಹತ್ತು ಭುಜಗಳನ್ನು ಹೊಂದಿದ್ದು, ಚಂದ್ರರೇಕೆಯಿಂದ ಅಲಂಕೃತಳಾಗಿದ್ದಾಳೆ. ಕೈಗಳಲ್ಲಿ ಖಡ್ಗ, ವಜ್ರ, ತ್ರಿಶೂಲ, ಕೊಡಲಿ, ಅಭಯಮುದ್ರೆ, ಪಾಶ, ಘಂಟೆ, ಸರ್ಪ, ಅಂಕುಶ ಇವುಗಳನ್ನು ಧರಿಸಿರುವವಳು. (ಶ್ರೀತತ್ವನಿಧಿ, ಪು –೨೩೧)

ಕೌಮಾರಿ

ಕೌಮಾರಿಯು ಕುಮಾರ ಅಂದರೆ ಶಿವ-ಪಾರ್ವತಿಯರ ಪುತ್ರ ಕಾರ್ತಿಕೇಯನಂತೆಯೇ ಇರುವಳು. ಚತುರ್ಭುಜೆಯಾದ ಕೌಮಾರಿಯು ಒಂದು ಕೈಯಲ್ಲಿ ಶಕ್ತಿ, ಇನ್ನೊಂದು ಕೈಯಲ್ಲಿ ಕುಕ್ಕುಟವನ್ನು ಹಿಡಿದಿರುತ್ತಾಳೆ. ಉಳಿದೆರಡು ಕೈಗಳು ಅಭಯಮಯ ಮತ್ತು ವರದ ಮುದ್ರೆಯಲ್ಲಿರುತ್ತವೆ, ಮಯೂರವು ವಾಹನ ಮತ್ತು ಧ್ವಜವಾಗಿರುತ್ತದೆ. ಔಡಂಬರ ಅಥವಾ ಅಂಜೂರ ಗಿಡದಡಿ ಅವಳ ಸ್ಥಾನವಾಗಿರುತ್ತದೆ. ವಿಷ್ಣುಧರ್ಮೋತ್ತರ ಪುರಾಣದ ಪ್ರಕಾರ ಕೌಮಾರಿಯು ಆರು ಮುಖಗಳನ್ನೂ ಹನ್ನೆರಡು ಕೈಗಳನ್ನೂ ಹೊಂದಿರುತ್ತಾಳೆ. ಅವಳ ಹತ್ತು ಕೈಗಳಲ್ಲಿ ಶಕ್ತಿ, ಧ್ವಜ, ದಂಡ, ಧನುಷ್, ಬಾಣ, ಘಂಟಾ, ಪದ್ಮ, ಪಾತ್ರೆ, ಪರಷು ಮತ್ತು ಇನ್ನೆರಡು ಕೈಗಳನ್ನೂ ಅಭಯ ಮತ್ತು ವರದ ಮುದ್ರೆಯಲ್ಲಿ ಹಿಡಿದಿರುತ್ತಾಳೆ. ಇದರೊಂದಿಗೆ ದೇವಿಮಹಾತ್ಮೆಯು ಆಕೆಯು ಕೆಂಪು ವರ್ಣದ ಹೂಗಳ ಹಾರವನ್ನು ಧರಿಸಬೇಕೆಂದು ತಿಳಿಸುತ್ತದೆ.

ನೃಸಿಂಹ ಪ್ರಸಾದದಲ್ಲಿ ಕೌಮಾರೀ ದೇವತಾ ರೂಪವನ್ನು ಈ ರೀತಿ ತೋರಲಾಗಿದೆ- ಶ್ಲೋಕ-೮೦೮-೮೯.

ಕೌಮಾರಿಯು ಆರುಮೊಗದವಳು, ಕೆಂಪು ಮೈಬಣ್ಣ, ಸುಗುಣಾನ್ವಿತೆ, ಹನ್ನೆರಡು ಬಾಹುಗಳುಳ್ಳವಳು, ಮಯೂರವಾಹನೆ, ವರದ ಮುದ್ರೆ, ಶಕ್ತಿ (ಆಯುಧ) ಪತಾಕೆ, ದಂಢ, ಪಾತ್ರ, ಬಾಣ, ಇವುಗಳನ್ನು ಬಲಭುಜಗಳಲ್ಲೂ, ವಾಮಭುಜಗಳಲ್ಲಿ ಬಿಲ್ಲು, ಗಂಟೆ, ಕಮಲ, ಕೋಳಿ, ಪರಶು(ಕೊಡಲಿ) ಹಾಗೂ ಅಭಯ ಮುದ್ರೆಯನ್ನು ಧರಿಸಿರುವಳು (ಪಾಟಲವರ್ಣ) (ಶ್ರೀತತ್ವನಿಧಿ, ಪುಟ -೨೩೧)

ವಾರಾಹಿ

ವಾರಾಹಿಯು ವರಾಹ (ಹಂದಿ) ಮುಖವನ್ನು ಹೊಂದಿರುತ್ತಾಳೆ. ಅವಳ ವರ್ಣವು ಬಿರುಗಾಳಿಯ ಸಮಯದ ಮೋಡಗಳ ವರ್ಣ. ಈಕೆಯು ಕರಂಡ ಮಕುಟವನ್ನು ಧರಿಸಿ ಹವಳದಿಂದ ಮಾಡಿದ ಆಭರಣಗಳನ್ನು ಧರಿಸಿರುತ್ತಾಳೆ. ಕೈಗಳಲ್ಲಿ ನೇಗಿಲು ಮತ್ತು ಶಕ್ತ್ಯಾಯುಧವನ್ನು ಹಿಡಿದು ಝಳಪಿಸುತ್ತಾಳೆ. ಕಲ್ಪಾಕಮರದ ಕೆಳಗೆ ಈಕೆಯ ವಾಸಸ್ಥಾನ. ವಾರಾಹಿಯು ಆನೆಯ ವಾಹನ, ಲಾಂಛನ ಮತ್ತು ಧ್ವಜವನ್ನೂ ಹೊಂದಿರುತ್ತಾಳೆ. ಇನ್ನು ಕೆಲವು

ವಾರಾಹಿಯ ಮೂರ್ತಿ ಲಕ್ಷಣಗಳನ್ನು ವಿಷ್ಣುಧರ್ಮೋತ್ತರವು ತಿಳಿಸುತ್ತದೆ. ಅವಳಿಗೆ ಆರುಕೈಗಳು, ದೊಡ್ಡ ಉದರ (ಹೊಟ್ಟೆ), ನಾಲ್ಕು ಕೈಗಳಲ್ಲಿ ದಂಡ, ಖಡ್ಗ, ಖೇಟಕ, ಪಾಶವನ್ನು ಹಿಡಿದಿದ್ದರೆ, ಉಳಿದೆರಡು ಕೈಗಳು ಅಭಯ ಮತ್ತು ವರದ ಹಸ್ತಗಳಲ್ಲಿರುತ್ತವೆ. ಪೂರ್ವಕರಣಾಗಮದ ಪ್ರಕಾರ ವಾರಹಿಯು ಸಾರಂಗ ಧನಸ್ಸನ್ನೂ ಹಲ ಮತ್ತು ಮುಸಲಗಳನ್ನು ಆಯುಧಗಳಾಗಿ ಧರಿಸಿರುತ್ತಾಳೆ ಮತ್ತು ಕಾಲುಗಳಿಗೆ ನೂಪುರವನ್ನೂ ಧರಿಸಿರುತ್ತಾಳೆ.

ನೃಸಿಂಹ ಪ್ರಸಾದದಲ್ಲಿ ವಾರಾಹೀರೂಪಧ್ಯಾನವನ್ನು ಈ ರೀತಿ ಮಾಡಲಾಗಿದೆ. ಶ್ಲೋಕ–೮॥.

ವಾರಾಹಿಯು ಶ್ಯಾಮವರ್ಣೆ, ಕೋಣನ ಮೇಲೆರಿರುವಳು, ಅವಳು ದೊಡ್ಡ ಹೊಟ್ಟೆಯುಳ್ಳವಳು. ಬಲಗೈಗಳಲ್ಲಿ ವರದ ಮುದ್ರೆ, ದಂಡ, ಖಡ್ಗಳನ್ನೂ ಧರಿಸಿರುವಳು. ಎಡಗೈಗಳಲ್ಲಿ ಗುರಾಣಿ, ಪಾತ್ರೆ, ಅಭಯ ಮುದ್ರೆಗಳನ್ನು ಧರಿಸಿರುವಳು. ಅವಳ ಮುಖವು ಹಂದಿಮುಖದಂತಿದ್ದು ಬಾಹುಗಳು ಕಾಂತಿಯುಕ್ತವಾಗಿವೆ (ಕನಕವರ್ಣ) (ಶ್ರೀತತ್ವನಿಧಿ, ಪುಟ – ೨೩೨).

ಇಂದ್ರಾಣಿ

ಇಂದ್ರಾಣಿ ಮೂರ್ತಿ ಲಕ್ಷಣವು ಈ ರೀತಿ ಇರುತ್ತದೆ. ಮೂರುಕಣ್ಣುಗಳು, ಚತುರ್ಭುಜಗಳು, ಎರಡು ಕೈಗಳು ಅಭಯ ಮತ್ತು ವರದದಲ್ಲಿರುತ್ತವೆ. ಇನ್ನೆರಡು ಕೈಗಳಲ್ಲಿ ವಜ್ರಾಯುಧ ಮತ್ತು ಶಕ್ತ್ಯಾಯುಧಗಳಿರುತ್ತವೆ. ಇವಳು ರಕ್ತವರ್ಣೆ, ಕಿರೀಟ ಮತ್ತು ಸರ್ವಾಭರಣಗಳನ್ನು ಧರಿಸಿರುತ್ತಾಳೆ. ಇಂದ್ರನ ಶಕ್ತಿಯಾದ ಇಂದ್ರಾಣಿಯ ವಾಹನ, ಲಾಂಛನ ಮತ್ತು ಧ್ವಜಗಳು ಆನೆಯಾಗಿರುತ್ತವೆ. ಇವಳೂ ಕಲ್ಪಾಕ ವೃಕ್ಷದಡಿಯಲ್ಲೇ ನೆಲೆಸುತ್ತಾಳೆ. ವಿಷ್ಣು ಧರ್ಮೋತ್ತರವು ತಿಳಿಸುವಂತೆ ಈಕೆಯ ಮೂರ್ತಿಲಕ್ಷಣವು ವಿಶಿಷ್ಟವಾಗಿರುತ್ತದೆ. ಅದರಂತೆ ಇಂದ್ರಾಣಿಯು ಸಹಸ್ರಾಕ್ಷಿ ಅಂದರೆ ಸಾವಿರ ಕಣ್ಣುಳ್ಳವಳು, ಸ್ವರ್ಣವರ್ಣದವಳು, ಆರುಭುಜಗಳನ್ನು ಹೊಂದಿರುವವಳು. ಅವುಗಳಲ್ಲಿ ಸೂತ್ರ, ವಜ್ರ, ಕಲಶ ಮತ್ತು ಪಾತ್ರೆ, ಅಭಯ ವರದಗಳನ್ನು ಹಿಡಿದಿರುತ್ತಾಳೆ. ದೇವಿ ಪುರಾಣದ ಪ್ರಕಾರ ಅಂಕುಶ ಮತ್ತು ವಜ್ರಾಯುಧವನ್ನು ಮಾತ್ರ ಹಿಡಿದಿರುತ್ತಾಳೆ. ಪೂರ್ವ ಕರ್ಣಾಗಮವು ಎರಡು ಕಣ್ಣುಗಳನ್ನು ಮಾತ್ರ ಹೇಳುತ್ತದೆ ಮತ್ತು ಇಂದ್ರಾಣಿಯ ಒಂದು ಕೈಯಲ್ಲಿ ಕಮಲವಿರುತ್ತದೆ.

ನೃಸಿಂಹ ಪ್ರಸಾದದಲ್ಲಿ ಇಂದ್ರಾಣೀದೇವತಾಧ್ಯಾನ–ಶ್ಲೋಕ–೮೧೨. ಇಂದ್ರಾಣಿಯು ಸಾವಿರಕಣ್ಣುಳ್ಳವಳು, ಸೌಮ್ಯ (ಮೃದುಸ್ವಭಾವ) ಗಳಾಗಿ ಚಿನ್ನದಂತೆ ಕಾಂತಿಯುಕ್ತಳಾಗಿದ್ದಾಳೆ. ಆನೆಯನ್ನೇರಿರುವವಳು, ಬಲಗೈಯಲ್ಲಿ ವರದಮುದ್ರೆ, ಸೂತ್ರ ಹಾಗೂ ವಜ್ರ (ಆಯುಧ)ವನ್ನು ಮೇಲ್ಭಾಗದಲ್ಲಿ ಧರಿಸಿರುವಳು. ಎಡಗೈಗಳಲ್ಲಿ ಕಮಲ, ಪಾತ್ರ ಹಾಗೂ ಕೆಳಭಾಗದ ಕೈಗಳಲ್ಲಿ ಅಭಯ ಮುದ್ರೆಯನ್ನು ಧರಿಸಿರುವಳು. (ಕನಕವರ್ಣ) (ಶ್ರೀತತ್ವ ನಿಧಿ, ಪು–೨೩೧).

ಚಾಮುಂಡ

ಸಪ್ತಮಾತೃಕೆ ಶಿಲ್ಪಗಳ ಸಂಯೋಜನೆಯಲ್ಲಿ ಮೇಲುನೋಟಕ್ಕೇ ಅತೀ ವಿಭಿನ್ನವಾಗಿ ಕಾಣುವ ಮೂರ್ತಿ ಚಾಮುಂಡ. ಚತುರ್ಭುಜೆ, ಮೂರುಕಣ್ಣುಗಳುಳ್ಳವಳು, ರಕ್ತವರ್ಣೆ, ವಿಘುಲಕೇಶವನ್ನು ಹೊಂದಿರುವವಳು, ತಲೆಯಮೇಲ್ಭಾಗದಲ್ಲಿ ಎದ್ದು ನಿಂತಿರುತ್ತವೆ. ಒಂದು ಕೈಯಲ್ಲಿ ಕಪಾಲ ಮತ್ತು ಇನ್ನೊಂದು ಕೈಯಲ್ಲಿ ಶೂಲವನ್ನು ಹಿಡಿದಿರುವಳು. ಇನ್ನೆರಡು ಕೈಗಳಲ್ಲಿ ಅಭಯ ಮತ್ತು ವರದ ಮುದ್ರೆಗಳನ್ನು ಹಿಡಿದಿರುವಳು. ರುಂಡಮಾಲೆಯನ್ನು ಯಜ್ಞೋಪವೀತವನ್ನು ಧರಿಸಿ ಪದ್ಮಾಸನೆಯಾಗಿರುತ್ತಾಳೆ. ಹುಲಿಚರ್ಮವನ್ನು ವಸ್ತ್ರ ರೂಪದಲ್ಲಿ ಧರಿಸಿದ್ದು ಅಂಜೂರ ವೃಕ್ಷದಡಿ ನೆಲೆಸಿರುತ್ತಾಳೆ ಎಂದು ಅಂಶು–ಬೇಧಾಗಮವು ಉಲ್ಲೇಖಿಸುತ್ತದೆ. ವಿಷ್ಣುಧರ್ಮೋತ್ತರವು ಚಾಮುಂಡೆಗೆ ಮಾನವಶವವನ್ನೇ ಆಸನವನ್ನಾಗಿಯೂ, ಹಂದರದಂತಹ ದೇಹವನ್ನು, ಗುಳಿಬಿದ್ದ ಕಣ್ಣುಗಳನ್ನೂ, ಕೋರೆಹಲ್ಲುಗಳನ್ನೂ ಹತ್ತು ಕೈಗಳ ಭಯಂಕರ ರೂಪವನ್ನು ನಿರ್ದೇಶಿಸುತ್ತದೆ. ಅವಳ ಕೈಗಳಲ್ಲಿ ಮುಸಲ, ಕವಚ, ಬಾಣ, ಅಂಕುಶ, ಖಡ್ಗ, ಖೇಟಕ, ಪಾಶ, ಧನಸ್ಸು, ದಂಡ ಮತ್ತು ಪರಶುಗಳನ್ನು ಹಿಡಿದಿರುತ್ತಾಳೆ. ಇದರೊಂದಿಗೆ ಪೂರ್ವ ಕರಣಾಗಮವು ಚಾಮುಂಡಗೆ ತೆರೆದಬಾಯಿ, ಶಿವನು ಧರಿಸುವಂತೆ ಅರ್ಧಚಂದ್ರನನ್ನೂ ಗೂಬೆಯನ್ನು ವಾಹನವಾಗಿಯೂ ರಣಹದ್ದನ್ನು ಧ್ವಜವನ್ನಾಗಿಯೂ ಹೊಂದಿರುತ್ತಾಳೆ. ಅವಳ ಕಪಾಲ ಪಾತ್ರೆಯು ಮಾಂಸದಿಂದ ತುಂಬಿರುತ್ತದೆ ಇನ್ನೊಂದು ಕೈಯಲ್ಲಿ ಅಗ್ನಿಯನ್ನು, ಬಲ ಕೈಯಲ್ಲಿ ಒಂದು ಸರ್ಪವನ್ನೂ ಹೊಂದಿರುತ್ತಾಳೆ. ಕಿವಿಗಳಿಗೆ ಶಂಖಗಳನ್ನು ಕುಂಡಲವನ್ನೂ (ಶಂಖ ಪತ್ರ ಅಥವಾ ಕುಂಡಲ) ಧರಿಸುವಳೆಂದು ತಿಳಿಸುತ್ತದೆ. ನೃಸಿಂಹಪ್ರಾಸಾದದಲ್ಲಿ ಚಂಡಿಕಾಧ್ಯಾನವನ್ನು ಹೀಗೆ ತಿಳಿಸಲಾಗಿದೆ. ಶ್ಲೋಕ –೮೧೩.

ಚಂಡಿಕೆಯು ಧವಲವರ್ಣದವಳು. ಮಂಗಳ ಸ್ವರೂಪಿಣಿ, ಸಿಂಹಗಾಮಿನಿ, ಜಟಾಯುತೆ, ದುಂಡಾದ ಮೂರು ಕಣ್ಣುಗಳುಳ್ಳವಳು, ವರದ ಮುದ್ರೆ, ಶೂಲ, ಕರ್ತ್ರೀಕಾ (ಕರ್ತರೀ ಸಣ್ಣ

ಚೂರಿ) ಇವುಗಳನ್ನು ಬಲಗೈಗಳಲ್ಲೂ, ಎಡಗೈಗಳಲ್ಲಿ ಪಾಶ, ಪಾತ್ರ, ಅಭಯ ಮುದ್ರೆ ಇವುಗಳಿಂದ ಕೂಡಿರುವವಳು. (ಶ್ವೇತವರ್ಣ) (ಶ್ರೀತತ್ವ ನಿಧಿ, ಪುಟ -೨೩೨)

ಸಪ್ತ ಮಾತೃಕೆಯರಲ್ಲಿ ನೃಸಿಂಹಪ್ರಸಾದದಂತೆ ಚಾಮುಂಡಾ ಬದಲಿಗೆ ಚಂಡಿಕೆಯೆಂದು ತಿಳಿಸಲಾಗಿದೆ. ಇಲ್ಲಿ ಮಾತೃ ಸ್ವರೂಪವನ್ನು ಭೀಕರವಾಗಿ ರೂಪಿಸದೇ ದಿವ್ಯಮಂಗಳೆಯಾಗಿ ರೂಪಿಸಲು ಚಂಡಿಕೆಯನ್ನು ಸೂಚಿಸಲಾಗಿದೆ ಎಂದು ತೋರುತ್ತದೆ.

ಮಾತೃಕಾ ಗುಂಪಿನ ಮೂರ್ತಿರಚನೆ ಮತ್ತು ಶಿಲ್ಪಗಳಲ್ಲಿ ಸಪ್ತಮಾತೃಕಾ ಶಿಲ್ಪ ರಚನೆಯು ಹಿಂದೂ ದೇವಾಲಯ ಸಂಸ್ಕೃತಿಯಲ್ಲಿ ಹೆಚ್ಚಿನ ಸ್ಥಾನ ಪಡೆದಿದೆ. ಈ ಮಾತೃಕೆಯರ ಇಕ್ಕೆಲಗಳಲ್ಲಿ ಗಣೇಶ ಮತ್ತು ವೀರಭದ್ರರು ನಿಂತಿರುವ ಅಥವಾ ಪದ್ಮಾಸನದಲ್ಲಿ ಕುಳಿತಿರುವಂತೆ ಪರಿಕಲ್ಪಿಸಲಾಗಿದೆ. ಬೃಹತ್ ಪ್ರಮಾಣದ ಸಪ್ತಮಾತೃಕಾ ಶಿಲ್ಪಗಳು ಎಲ್ಲೋರಾದ ಕೈಲಾಸ ಗುಹಾಂತರ ದೇವಾಲಯದ ಪ್ರಾಂಗಣದಲ್ಲಿ ಸಪ್ತ-ಮಾತೃಕಾ ಗುಹೆಯಲ್ಲಿ ಕಂಡುಬರುತ್ತವೆ. ಈ ಶಿಲ್ಪಗಳ ಮೂರ್ತಿ ಲಕ್ಷಣಗಳನ್ನು ಗಮನಿಸಿದಾಗ ಮೇಲೆ ವಿವರಿಸಿದ ಎಲ್ಲಾ ಪ್ರತಿಮಾಲಕ್ಷಣದ ಸ್ವರೂಪಗಳನ್ನು ಈ ಶಿಲ್ಪಗಳಲ್ಲಿ ಕಾಣಬಹುದಾಗಿದೆ. ಆದರೆ ಎಲ್ಲಾ ಪ್ರತಿಮೆಗಳ ಮುಖಲಕ್ಷಣಗಳು, ಭಂಗಿಗಳು ಒಂದೇ ರೀತಿಯದಾಗಿದ್ದು ಅವರ ಲಾಂಛನ, ಧ್ವಜ, ವಾಹನ ಮತ್ತು ಆಯುಧಗಳಿಂದ ಅವರ ವಿವಿಧ ರೂಪವನ್ನು ಗುರುತಿಸಬಹುದು. ಕೆಲವು ಶಿಲ್ಪಗಳ ಕೈಯಲ್ಲಿ ಮಗುವನ್ನು ಕೊಡಲಾಗಿದೆ ಅಥವಾ ಪಕ್ಕದಲ್ಲಿ ಚಿಕ್ಕಮಗುವನ್ನು ನಿಲ್ಲಿಸಲಾಗಿದೆ. ಚಾಮುಂಡಾ ಸುತ್ತಲೂ ರಕ್ತ-ದಾಹದ ಪೈಶಾಚಿಕ ರೂಪಗಳನ್ನು ಸೃಜಿಸಲಾಗಿದೆ.

೬೪ ಯೋಗಿನಿ ರೂಪಗಳು

ದೇವಿಯ ಅಸಂಖ್ಯಾತ ರೂಪಗಳು ಆಳಕ್ಕಿಳಿದು ಅಧ್ಯಯನ ಮಾಡಿದಷ್ಟೂ ತೆರೆದುಕೊಳ್ಳುತ್ತಾ ಹೋಗುತ್ತವೆ. ಇಂತಹ ದೇವಿ ಸಮುಚ್ಚಯದ ಕಲ್ಪನೆಯಲ್ಲಿ ಯೋಗಿನೀ ಶಿಲ್ಪಗಳು ಮುಖ್ಯವಾಗುತ್ತವೆ. ದೇವಿಯು ಸತಿಯಾಗಿ, ಪಾರ್ವತಿಯಾಗಿ, ಮಾಹೇಶ್ವರಿಯಾಗಿ, ಶಿವೆಯಾಗಿ ಮಹಾಯೋಗಿನಿಯ ರೂಪದಲ್ಲಿ ಮೈ ತಳೆದಿದ್ದಾಳೆ. ಉತ್ತರ ಭಾರತದಲ್ಲಿ ಯೋಗಿನಿಯರ ಪ್ರಾಮುಖ್ಯತೆ ಹೆಚ್ಚು. ಭಕ್ತಿ ಪಂಥದ ಬೆಳವಣಿಗೆಯ ಹಂತದಲ್ಲಿ ಹಿಂದೂ ಧರ್ಮದಲ್ಲಿ ಶೈವ – ಶಾಕ್ತ ಸಮಾಗಮದ ಮತ್ತು ಶಾಕ್ತ ಸರ್ವತಮವಾದಾಗ ಪ್ರಬಲವಾಗಿ ಹೊರ ಬಂದ ತಾಂತ್ರಿಕ ವಿಧಿ ವಿಧಾನಗಳು ಸಾಮಾಜಿಕ ಜೀವನದಲ್ಲೂ ಆಳವಾಗಿ ಬೇರೂರಿವೆ. ಈ

ತಾಂತ್ರಿಕ ಪಂಥದ ಪ್ರಭಾವವು ಎಷ್ಟು ಪ್ರಬಲವಾಗಿತ್ತೆಂದರೆ ಬೌದ್ಧ ಮತ್ತು ಜೈನ ಮತಗಳ ಮೇಲೆಯೂ ಸಾಕಷ್ಟು ಪರಿಣಾಮ ಬೀರಿತು. ಅಲ್ಲಿಯೂ ವಿವಿಧ ಸ್ತ್ರೀ ವಿಗ್ರಹಗಳ ರೂಪ ರಚನೆಯು ಪ್ರಾರಂಭವಾಯಿತು. ತಾರಾ, ಢಾಕಿನಿ, ಶಾಕಿನಿ, ಜ್ವಾಲಮಾಲಿನಿ ಮುಂತಾದ ದೇವತೆಯರ ಪರಿಕಲ್ಪನೆ ಹಿಂದೂ ತಾಂತ್ರಿಕ ವಿಧಿ ಆಚರಣೆಗಳ ಮೂಲದಿಂದಲೇ ಬಂದಿರಬೇಕು. ಸುಮಾರು ಮಧ್ಯಯುಗೀನ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಯೋಗಿನಿಯರೆಲ್ಲರೂ ಪ್ರತಿಮಾಲಕ್ಷಣಗಳ ಆಧಾರದಿಂದ ರೂಪುಗೊಂಡು ದೇವಾಲಯಗಳಲ್ಲಿ ಪ್ರತಿಷ್ಠಿತಗೊಂಡರು. ಅಲ್ಲದೇ ಯೋಗಿನಿಯರ ಮೂರ್ತಿ ಲಕ್ಷಣ, ಪೂಜಾವಿಧಿ ವಿಧಾನಗಳು ನಿಖರತೆಯನ್ನು ಪಡೆದುಕೊಂಡವು. ಇವುಗಳಲ್ಲಿ ಅರವತ್ತು ನಾಲ್ಕು ಯೋಗಿನಿಯರ ಒಂದು ಗುಂಪು ಉತ್ತರ ಭಾರತದ ಸಾಂಸ್ಕೃತಿಕ, ಐತಿಹಾಸಿಕ ಮತ್ತು ಸಾಮಾಜಿಕ ಜೀವನದಲ್ಲಿ ಮಹತ್ವ ಪಡೆದುಕೊಂಡಿವೆ.

ಭಾರತದ ಉದ್ದಗಲಕ್ಕೂ ಶಕ್ತಿಪೀಠಗಳು ಹೇಗೆ ಬೆಳೆದು ಬಂದವೋ ಅದರಂತೆಯೇ ಯೋಗಿನಿಯರ ಪೀಠಗಳು ಪ್ರಾರಂಭದಲ್ಲಿ ನಾಲ್ಕು ಬೇರೆ ಬೇರೆ ಸ್ಥಳಗಳಿದ್ದು ಮಧ್ಯಕಾಲದ ಹೊತ್ತಿಗೆ ನೂರೆಂಟು ಯೋಗಿನೀ ಪೀಠಗಳು ಪ್ರಚಾರಕ್ಕೆ ಬಂದವು. ಇವುಗಳಲ್ಲಿ ಅರವತ್ತನಾಲ್ಕು ಯೋಗಿನಿಯರ ಒಂದು ಗುಂಪು ಹೆಚ್ಚು ಜನಪ್ರಿಯವಾಗಿತ್ತು ಎನ್ನಲು ಹಲವು ಶಾಸನಗಳು ಆಧಾರಗಳನ್ನು ಒದಗಿಸುತ್ತವೆ. ಮಹಾರಾಷ್ಟ್ರದ ೧೨ನೇ ಶತಮಾನದ ಒಂದು ಶಾಸನದಲ್ಲಿ ಅರವತ್ತು ನಾಲ್ಕು ಯೋಗಿನಿಯರ ಪೀಠಗಳಿಗೆ ಮಹಾಯೋಗೇಶ್ವರಿ ಉಗ್ರಚಾಮುಂಡ ಅಧಿದೇವತೆಯಾಗಿದ್ದಳೆಂದು ತಿಳಿಸುತ್ತದೆ. ಅದರಂತೆ ಆಂಧ್ರ ಪ್ರದೇಶ ಹಳಗೊಂಡಿ ಎಂಬ ಜಾಗದ ಚಾಲುಕ್ಯರ ಕಾಲದ ಶಾಸನದಲ್ಲಿ ಅರವತ್ತು ನಾಲ್ಕು ಯೋಗಿನೀ ಪೀಠಗಳ ಉಲ್ಲೇಖವಿದೆ. ಆದರೆ ಉತ್ತರ ಭಾಗದಲ್ಲಿ ಅರವತ್ತು ನಾಲ್ಕು ಯೋಗಿನಿಗಳಿಗಾಗಿ ದೇವಾಲಯಗಳನ್ನೇ ನಿರ್ಮಿಸಿರುತ್ತಾರೆ. ಹೀಗಾಗಿ ಅಲ್ಲಿ ಯೋಗಿನೀ ಪಂಥದ ಬಾಹುಳ್ಯ ಮತ್ತು ದೃಢವಾದ ಅಸ್ತಿತ್ವದ ಬಗ್ಗೆ ತಿಳಿದು ಬರುತ್ತದೆ. ಅರವತ್ತು ನಾಲ್ಕು ಯೋಗಿನೀ ಅಂದರೆ ಚೌಷಷ್ಟಿ ಯೋಗಿನೀ ದೇವಾಲಯಗಳಲ್ಲಿ ನಾಲ್ಕು ಬಹಳ ಮಹತ್ವದ್ದಾಗಿವೆ. ಮೊದಲನೆಯದು ಪೂರ್ಣ ಪ್ರಮಾಣದ ಮಧ್ಯ ಪ್ರದೇಶದ ಬೇರಾಘಾಟ್ ದೇವಾಲಯ, ಎರಡನೆಯದಾಗಿ ಮಧ್ಯ ಪ್ರದೇಶದ್ದೇ ಆದ ಖಜುರಾಹೋ ಯೋಗಿನೀ ದೇವಾಲಯ, ಮೂರನೆಯದು ರಾಣೀಪುರ್ ಮತ್ತು ನಾಲ್ಕನೆಯದಾಗಿ ಖುರ್ದಾ ಜಿಲ್ಲೆಯ ಹಿರಾಪುರ್ ದೇವಾಲಯಗಳು ಒರಿಸ್ಸಾ ರಾಜ್ಯದಲ್ಲಿವೆ. ಸುಮಾರು ಏಳನೇ ಶತಮಾನದಿಂದ ಹನ್ನೆರಡನೇ ಶತಮಾನದ ಮಧ್ಯದಲ್ಲಿ ಈ ನಾಲ್ಕೂ ದೇವಾಲಯಗಳನ್ನು ರಚಿಸಲಾಗಿದೆ ಮತ್ತು ಈ ಸಮಯದಲ್ಲಿ ತಾಂತ್ರಿಕ ಪಂಥವು ಮಧ್ಯಪ್ರದೇಶ ಮತ್ತು ಒರಿಸ್ಸಾ

ಆಂದರೆ ಅಂದಿನ ಕಳಿಂಗದಲ್ಲಿ ಹೆಚ್ಚು ಪೋಷಕರನ್ನೂ, ಅನುಯಾಯಿಗಳನ್ನೂ ಪಡೆದು ಜನಪ್ರಿಯವಾಗಿತ್ತೆಂದು ತಿಳಿದು ಬರುತ್ತದೆ.

ಅರವತ್ತನಾಲ್ಕು ಯೋಗಿನಿಯರ ಬಗ್ಗೆ, ಪೀಠಗಳ ವಿಚಾರ ಮತ್ತು ತಾಂತ್ರಿಕ ವಿಧಿ ವಿಧಾನಗಳ ಬಗ್ಗೆ ರುದ್ರಯಮಳ ತಂತ್ರ, ಕುಲಾರ್ಣವತಂತ್ರ, ಅಷ್ಟಾದಶಪೀಠ ಮತ್ತು ಕುಬ್ಜಿಕಾ ತಂತ್ರ ಮುಂತಾದ ತಾಂತ್ರಿಕ ಪಂಥಕ್ಕೆ ಸೇರಿದ ಗ್ರಂಥಗಳು ವಿವರಣೆ ನೀಡುತ್ತವೆ.

ಶ್ರೀತತ್ವನಿಧಿ ಗ್ರಂಥದ ಶಕ್ತಿ ನಿಧಿಯಲ್ಲಿ ರುದ್ರಯಾಮಲದ ಅರವತ್ತನಾಲ್ಕು ಯೋಗಿನಿಯರ ಧ್ಯಾನವನ್ನು ಅವರ ಹೆಸರುಗಳನ್ನು ಎಂಟು ಅಷ್ಟಕಗಳಲ್ಲಿ ನೀಡಲಾಗಿದೆ.

ಅರವತ್ತನಾಲ್ಕು ಯೋಗಿನಿಯರ ಧ್ಯಾನ, ರುದ್ರಯಾಮಲದಲ್ಲಿ ಮೊದಲ ಅಷ್ಟಕದ ದೇವತಾ ಧ್ಯಾನ

ಮೊದಲ ಅಷ್ಟಕವು ಚಿನ್ನದ ಕಾಂತಿಯುಳ್ಳದ್ದಾಗಿದೆ. ಈ ಅಷ್ಟಕದ ದೇವತೆಗಳು ತ್ರಿಶೂಲ, ಡಮರು, ಪಾಶ, ಖಡ್ಗ ಇವುಗಳನ್ನು ಧರಿಸಿರುವರು. ಈ ಅಷ್ಟಕವು ಸರ್ವಾಂಗಸುಂದರವಾಗಿದೆ. ಇದರಲ್ಲಿ ದಿವ್ಯಯೋಗಿ, ಮಹಾಯೋಗಿ, ಸಿದ್ಧಯೋಗಿ, ಮಹೇಶ್ವರಿ, ಪಿಶಾಚಿನಿ, ಡಾಕಿನಿ, ಕಾಲರತ್ರಿ ಮತ್ತು ನಿಶಾಚರಿಗಳಿರುವರು. (ಕನಕವರ್ಣ). ೮೧೪-೮೧೫

ಈ ಎಂಟು ದೇವತೆಗಳೂ ಸಮಾನವಾದ ವರ್ಣವನ್ನು ಹೊಂದಿರುವುದರಿಂದ ಒಂದೇ ಪ್ರತಿಮೆಯನ್ನು ಚಿತ್ರಿಸಲಾಗಿದೆ.

ಎರಡನೆ ಅಷ್ಟಕದ ದೇವತೆಗಳ ಧ್ಯಾನ, ರುದ್ರಯಾಮಲದಲ್ಲಿ

ಅಕ್ಷಮಾಲೆ, ಅಂಕುಶ, ಪುಸ್ತಕ ಮತ್ತು ವೀಣೆಯನ್ನು ಧರಿಸಿದ ಧವಲವರ್ಣದ, ಮಣಿಗಳ ಆಭೂಷಣಗಳಿರುವ ಎರಡನೇ ಅಷ್ಟಕವನ್ನು ಧ್ಯಾನಿಸಬೇಕು. ಈ ಅಷ್ಟಕದಲ್ಲಿ ಕಂಕಾಲೀ, ರೌದ್ರವೇತಾಳೀ, ಹೂಂಕಾರೀ, ಭುವನೇಶ್ವರಿ, ಊರ್ಧ್ವಕೇಶೀ, ವಿರೂಪಾಕ್ಷೀ, ಶುಷ್ಕಾಂಗಿ ಮತ್ತು ನರಭೋಜಿನಿ ಎಂಬ ದೇವತೆಗಳು (ಶ್ವೇತವರ್ಣ). ೮೧೬-೮೧೭

ಈ ಎಂಟು ದೇವತೆಗಳೂ ಸಮಾನವಾದ ರೂಪವನ್ನು ಹೊಂದಿರುವುದರಿಂದ ಲಕ್ಷಣಕ್ಕಾಗಿ ಒಂದೇ ಪ್ರತಿಮೆಯನ್ನು ಬರೆಯಲಾಗಿದೆ.

ಮೂರನೆ ಅಷ್ಟಕದ ದೇವತಾಧ್ಯಾನ, ರುದ್ರಯಾಮಲದಲ್ಲಿ

ಜ್ವಾಲಾ, ಶಕ್ತಿ, ಗದಾ, ಕುಂತ ಇವುಗಳನ್ನು ಧರಿಸಿರುವ ನೀಲವರ್ಣದ ಶುಭಲಕ್ಷಣವುಳ್ಳ, ಶುಭವನ್ನು ನೀಡುವ ಮೂರನೇ ಅಷ್ಟಕವನ್ನು ಧ್ಯಾನಿಸಬೇಕು. ಈ ಅಷ್ಟಕದಲ್ಲಿ ಷಟ್ಕಾರೀ, ವೀರಭದ್ರೀ, ಧೂಮ್ರಾಕ್ಷೀ, ಕಲಹಪ್ರಿಯಾ, ರಕ್ತಾಕ್ಷೀ, ರಾಕ್ಷಸೀ, ಘೋರಾ, ವಿಶ್ವರೂಪಾ ಈ ಎಂಟು ದೇವತೆಗಳಿರುವರು. (ನೀಲವರ್ಣ) ೮೧೮-೮೧೯

ಈ ಎಂಟು ದೇವತೆಗಳೂ ಒಂದೇ ರೂಪವನ್ನುಳ್ಳವರಾದ್ದರಿಂದ ಲಕ್ಷಣಕ್ಕಾಗಿ ಒಂದೇ ಪ್ರತಿಮೆಯನ್ನು ಬರೆಯಲಾಗಿದೆ.

ನಾಲ್ಕನೆ ಅಷ್ಟಕದ ದೇವತಾಧ್ಯಾನ, ರುದ್ರಯಾಮಲದಲ್ಲಿ

ಖಡ್ಗ, ಗುರಾಣಿ, ಪಟ್ಟಸ (ಈ ಹೆಸರಿನ ಆಯಧ) ಪರಶು (ಕೊಡಲಿ) ಇವುಗಳನ್ನು ಧರಿಸಿದ, ಹೊಗೆಯ ಬಣ್ಣವುಳ್ಳ ನಮ್ಮ ಇಷ್ಟವಾದ ಅಷ್ಟಕವನ್ನು ಆದರದಿಂದ ಧ್ಯಾನಿಸಬೇಕು. ಕಾಮಾಕ್ಷಿ, ಉಗ್ರಚಾಮುಂಡೀ, ಭೀಷಣಾ ತ್ರಿಪುರಾಂತಕಾ, ವೀರಕೌಮಾರಿಕಾ, ಚಂಡೀ, ವಾರಾಹೀ, ಭಯಂಕರೀ ಎಂಬ ಎಂಟು ದೇವತೆಗಳು. (ಧೂಮ್ರವರ್ಣ) ೮೨೦

ಈ ಎಂಟು ಸಮಾನ ರೂಪದವುಗಳಾದುದರಿಂದ ಒಂದೇ ಪ್ರತಿಮೆಯನ್ನು ಬರೆಯಲಾಗಿದೆ.

ಐದನೆ ಅಷ್ಟಕದ ದೇವತಾಧ್ಯಾನ, ರುದ್ರಯಾಮಲದಲ್ಲಿ

ಕುಂತ (ಈಟಿ) ಗುರಾಣಿ, ಪರಿಘ (ಹೆಸರಿನ ಆಯುಧ) ಭಿಂದಿವಾಲ (ಈ ಹೆಸರಿನ ಅಯುಧ) ಇದು ಪಂಚಮಾಷ್ಟಕದ ದೇವತಾಯುಧಗಳು. ಈ ಅಷ್ಟಕವು ಧವಲ ಹಾಗೂ ಅತ್ಯಂತ ಮನೋಹರವಾಗಿದೆ. ಮುಂಡಧಾರಿಣೀ, ಭೈರವೀ, ಹಸ್ತಿನೀ, ಕ್ರೋಧದುರ್ಮುಖೀ, ಪ್ರೇತವಾಹಿನೀ, ಖಟ್ವಾಂಗದೀರ್ಘಲಂಬೋಷ್ಠೀ, ಮಾಲತೀ, ಮಂದ್ರಯೋಗಿನೀ ಈ ಎಂಟು ದೇವತೆಗಳು ಈ ಅಷ್ಟಕದಲ್ಲಿರುವರು. (ಶ್ವೇತವರ್ಣ) ೮೨೧-೮೨೨

ಈ ಎಂಟು ದೇವತೆಗಳೂ ಸಮಾನ ವರ್ಣವುಳ್ಳವರಾದ್ದರಿಂದ ಒಂದೇ ಪ್ರತಿಮೆಯನ್ನು ಬರೆಯಲಾಗಿದೆ.

ಆರನೆ ಅಷ್ಟಕದ ದೇವತೆಗಳ ಧ್ಯಾನ, ರುದ್ರಯಾಮಲದಲ್ಲಿ

ಭಿಂದಿವಾಳ, ಪರಿಘ, ಕುಂತ, ಗುರಾಣಿ ಈ ಆಯುಧಗಳನ್ನು ಧರಿಸಿದ ಹಳದಿ ಬಣ್ಣವುಳ್ಳ ಬಹುಚಿತ್ತಾಕರ್ಷವಾದ ಆರನೆಯ ಅಷ್ಟಕವನ್ನು ನಾನು ಧ್ಯಾನಿಸುತ್ತೇನೆ. ಅಸ್ಥಿನೀ, ಚಕ್ರಿಣೀ, ಗ್ರಾಹಾ, ಕಂಕಾಲೀ, ಭುನೇಶ್ವರೀ, ಕಂಟಕೀ, ತಾಟಕೀ, ಶುಭ್ರಾ ಈ ಎಂಟು ದೇವತೆಗಳು ಈ ಅಷ್ಟಕದಲ್ಲಿರುವರು. (ಪೀತವರ್ಣ) ೮೨೩-೮೨೪

ಈ ಎಂಟು ದೇವತೆಗಳೂ ಸಮಾನವರ್ಣವುಳ್ಳವರಾದ್ದರಿಂದ ಒಂದೇ ಚಿತ್ರವನ್ನು ಬರೆಯಲಾಗಿದೆ.

ಏಳನೆ ಅಷ್ಟಕದ ದೇವತೆಗಳ ಧ್ಯಾನ, ರುದ್ರಯಾಮಲದಲ್ಲಿ

ಗುರಾಣಿ, ಈಟಿ, ಪರಿಘ, ಭಿಂಡಿವಾಳ ಇವುಗಳನ್ನು ಧರಿಸಿರುವ ಕೆಂಪು ಬಣ್ಣವುಳ್ಳ ಅತಿಮನೋಹರವಾದ ಋಷ್ಯಷ್ಟಕ (ಸಪ್ತಮಾಷ್ಟಕ)ವನ್ನು ನಾನು ಧ್ಯಾನಿಸುವೆನು. ಕ್ರಿಯಾದೂತೀ, ಕರಾಲಿನೀ, ಶಂಖಿನೀ, ಪದ್ಮಿನೀ, ಕ್ಷೀರಾ, ಅಸಂಘಾ, ಪ್ರಹಾರಿಣೀ, ಲಕ್ಷೀ ಈ ಎಂಟು ದೇವತೆಗಳು ಋಷ್ಯಷ್ಟಕವೆಂಬುದಾಗಿ ಈ ಅಷ್ಟಕದಲ್ಲಿರುವರು. (ರಕ್ತವರ್ಣ). ೮೨೫-೮೨೬

ಈ ಎಂಟು ದೇವತೆಗಳು ಕೂಡಾ ಸಮಾನರೂಪವಾಗಿರುವುದರಿಂದ ಒಂದೇ ಪ್ರತಿಮೆಯನ್ನು ಬರೆಯಲಾಗಿದೆ.

ಎಂಟನೆ ಅಷ್ಟಕದ ದೇವತೆಗಳ ಧ್ಯಾನ ರುದ್ರಯಾಮಲದಲ್ಲಿ

ಪರಿಘ, ಭಿಂಡಿವಾಳ, ಕುಂತ ಮತ್ತು ಗುರಾಣಿ ಧರಿಸಿದ ಮಿಂಚಿನಂತೆ ಹೊಳೆಯುವ, ವಿಭೂಷಣಗಳಿಂದ ಕೂಡಿದ ಮಂಗಳಕರವಾದ ಎಂಟನೇ ಅಷ್ಟಕವನ್ನು ಧ್ಯಾನಿಸಬೇಕು. ಕಾಮುಕೀ, ಲೋಲಕಾಕದೃಷ್ಟಿ, ಅಧೋಮುಖೀ, ಧೂರ್ಜಟಿ, ಮಾಲಿನೀ, ಘೋರಾ, ಕಪಾಲಿ, ವಿಷಭೋಜಿನಿ, ಈ ಪ್ರಕಾರವಾಗಿ ಅರ್ವತ್ತನಾಲ್ಕು ಯೋಗಿನಿಯರು ವರಸಿದ್ಧಿಯನ್ನು ನೀಡುವವರಾಗಿ ಪ್ರಸಿದ್ಧರಾಗಿದ್ದಾರೆ. (ತಡಿದ್ವರ್ಣ) ೮೨೭-೮೨೮

ಈ ಎಂಟು ಯೋಗಿನಿಯರು ಸಮಾನರೂಪದವರಾದ್ದರಿಂದ ಒಂದೇ ಪ್ರತಿಮೆಯನ್ನು ಲಕ್ಷಣಕ್ಕಾಗಿ ಬರೆಯಲಾಗಿದೆ.



ಮಹಿಷಾಸುರಮರ್ಧಿನಿ, ಹೊಯ್ಸಳ ಶೈಲಿ

ಅಧ್ಯಾಯ – ೦೩

ಮಹಿಷಾಸುರಮರ್ಧಿನಿ ದೇವತಾ ಪರಿಕಲ್ಪನೆ

ಅಧ್ಯಾಯ – ೦೩

ಮಹಿಷಾಸುರ ಮರ್ಧಿನಿ ದೇವತಾ ಪರಿಕಲ್ಪನೆ

ಯಾದೇವಿ ಸರ್ವಭೂತೇಷು ಶಕ್ತಿ ರೂಪೇಣ ಸಂಸ್ಥಿತಾ ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋನಮಃ।

ಪರಮ ಮಂಗಳೆಯಾದ ದೇವಿಯ ಭಿನ್ನರೂಪಗಳನ್ನು ಅರಿಯುತ್ತಾ ಹೋದರೆ ಅದಕ್ಕೆ ಮೊದಲು ಎಲ್ಲಿ ಕೊನೆ ಎಲ್ಲಿ ಎನ್ನುವುದನ್ನು ತಿಳಿದುಕೊಳ್ಳುವುದು ಅತೀತವೆನಿಸುವುದು. ಪ್ರತಿಯೊಂದು ರೂಪವೂ ವಿಶಿಷ್ಟ ಹಾಗೂ ವಿಭಿನ್ನ ಉದ್ದೇಶಗಳ ಹಿನ್ನಲೆಯಲ್ಲಿ ಪರಿಕಲ್ಪಿಸಲಾಗಿದೆ. ದಶಮಹಾನಿವ್ಯಾರೂಪಗಳು, ಮಾತೃಕಾ ರೂಪಗಳು ಒಂದೆಡೆಯಾದರೆ, ಇನ್ನೊಂದೆಡೆ ಭಾರತದ ಉದ್ದಗಲಕ್ಕೆ ಅಷ್ಟೇ ಅಲ್ಲದೇ ಇಂಡೋನೇಷಿಯಾ, ಸಿಂಗಾಪುರ, ನೇಪಾಳ, ಮಲೇಷಿಯಾ ಮುಂತಾದ ದೇಶಗಳಲ್ಲೂ ಜನಪ್ರಿಯತೆಯನ್ನು ಪಡೆದಿರುವ ದೇವಿಯ ರೂಪಗಳಿಗೆ ಕಲಶಪ್ರಾಯದಂತಿರುವ ಮಹಿಷಾಸುರ ಮರ್ಧಿನಿಯ ಸ್ವರೂಪದ ಪರಿಕಲ್ಪನೆಯ ವಿಷಯವಾಗಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಮಹಿಷಾಸುರ ಮರ್ಧಿನಿಯ ರೂಪದೊಂದಿಗೆ ದುರ್ಗಾ, ಕಾಳಿ, ನವದುರ್ಗಾ, ಚಾಮುಂಡಾ, ಚಾಮುಂಡಿ, ಸಿಂಹವಾಹಿನಿ, ಷೇರೋವಾಲಿ ಮುಂತಾದ ದೇವಿಯ ವಿವಿಧ ರೂಪಗಳನ್ನು ಸಮಾನವಾಗಿ ತಿಳಿಯಲಾಗುತ್ತದೆ. ಏಕೆಂದರೆ ಈ ಎಲ್ಲಾ ರೂಪಗಳೂ ದೇವಿಯ ಶಕ್ತಿಯನ್ನೂ, ಹಲವೊಮ್ಮೆ ಭೀಕರ ರೂಪವನ್ನು ಪ್ರತಿನಿಧಿಸುವಂತಹುದು. ಆದರೆ ಈ ಪ್ರತಿಯೊಂದು ರೂಪವನ್ನೂ, ನಾಮವನ್ನೂ ಸೂಕ್ಷ್ಮವಾಗಿ ಗಮನಿಸುತ್ತಾ ಹೋದಂತೆ ಈ ಪ್ರತಿಯೊಂದು ದೇವಿಯ ರೂಪವೂ ವಿಭಿನ್ನವೂ, ವಿವಿಧ ರೀತಿಯದೂ ಆಗಿರುವುದು ಗೋಚರವಾಗುತ್ತದೆ. ಈ ಎಲ್ಲಾ ರೂಪಗಳೂ ವಿವಿಧ ಉದ್ದೇಶ ಹಾಗೂ ನೆಲೆ, ಹಿನ್ನೆಲೆಯನ್ನು ಹೊಂದಿದ್ದು, ವಿವಿಧ ಗ್ರಂಥಗಳಲ್ಲಿ, ಶಿಲ್ಪಶಾಸ್ತ್ರಗಳಲ್ಲಿ ವಿವಿಧ ಪ್ರತಿಮಾ ಲಕ್ಷಣಗಳೊಂದಿಗೆ ಸಾಕಾರ ಪಡೆಯುತ್ತಾ ಹೋಗುತ್ತವೆ. ಮಹಿಷಾಸುರ ಮರ್ಧಿನಿಗಿಂತಲೂ ದುರ್ಗಾ, ಕಾಳಿ, ಚಾಮುಂಡ, ಚಾಮುಂಡಿ ಹೇಗೆ ಭಿನ್ನವಾಗಿವೆ ಅವುಗಳ ಪರಿಕಲ್ಪನೆ ಹಾಗೂ ಮೂರ್ತಿ ಲಕ್ಷಣಗಳೇನು ಎಂಬುದನ್ನು ಇಲ್ಲಿ ತಿಳಿಯುವುದು ಅವಶ್ಯಕವೆನಿಸಿದೆ.

ಚಾಮುಂಡಾ

ಸಾಮಾನ್ಯ ಎಣಿಕೆಯಲ್ಲಿ ಚಾಮುಂಡಳನ್ನು ಮಹಿಷಾಸುರಮರ್ಧಿನಿಯಂತೆಯೇ ಕಲ್ಪಿಸಿಕೊಳ್ಳಲಾಗುತ್ತದೆ. ಆದರೆ ಈ ರೂಪದ ಹಿನ್ನೆಲೆ ಮತ್ತು ಪಾತ್ರವನ್ನು ಗಮನಿಸಿ ನೋಡಿದಾಗ ಶಾಕ್ತ ಸಿದ್ಧಾಂತದಲ್ಲಿ ಚಾಮುಂಡ ವಿಶಿಷ್ಟವಾಗಿ ನಿಲ್ಲುತ್ತಳೆ. ಮಾರ್ಕಂಡೇಯ ಪುರಾಣದ ಪ್ರಕಾರ (ಅಧ್ಯಾಯ. ೮೭. ಶ್ಲೋಕ. ೨೫) ಕಾಳಿಯು ಅಂಬಿಕೆಯ ಹಣೆಯಿಂದ ಚಿಮ್ಮಿ ತನ್ನ ರೂಪವನ್ನು ಪಡೆಯುತ್ತಾಳೆ. ರಾಕ್ಷಸರಾದ ಚಂಡಮುಂಡರನ್ನು ಸಂಹಾರ ಮಾಡಿದಾಗ ಅವಳಿಗೆ ಚಾಮುಂಡ ಎಂಬ ನಾಮವು ಪ್ರಾಪ್ತವಾಗುತ್ತದೆ. ಚಾಮುಂಡಳನ್ನು ಪ್ರಳಯದ ಅದಿದೇವತೆಯಾಗಿ ಪರಿಕಲ್ಪಿಸಲಾಗಿದೆ. ಪ್ರಳಯ, ಮೋಹ ಮತ್ತು ಪೈಶುನ್ಯದಂತಹ ಕಲ್ಪನೆಗಳೊಂದಿಗೆ ಅವಳನ್ನು ಜೋಡಿಸಲಾಗಿದೆ. ಭೀಕರ ಸ್ವರೂಪಿಯಾಗಿ ಯಮನನ್ನು ಪ್ರತಿನಿಧಿಸುತ್ತಾಳೆ. ಇವಳಿಗಾಗಿ ಒಂದು ವೇಳೆ ದೇವಾಲಯವನ್ನೂ ಕಟ್ಟಿದರೆ ಅದು ರುದ್ರಭೂಮಿಯಲ್ಲೇ ಇರಬೇಕೆಂದೂ, ನರಬಲಿಯನ್ನು ನೀಡಬೇಕೆಂದೂ ಪೈಶಾಚಿಕ ವಿಧಿ ವಿಧಾನಗಳನ್ನು ಅನುಸರಿಸಿದರೆ ಚಾಮುಂಡ ಸುಪ್ರೀತಳಾಗುವಳೆಂದು ತಿಳಿದು ಬರುತ್ತದೆ. ಭವಭೂತಿ ರಚಿಸಿದ ಮಾಲತೀ ಮಾಧವದಲ್ಲಿ ನಾಯಕಿ ಮಾಲತಿಯನ್ನು ಚಾಮುಂಡಾಗೆ ಬಲಿಕೊಡಲು ಅಪಹರಿಸುವ ಪ್ರಸಂಗವಿದೆ.

ಅಗ್ನಿಪುರಾಣದಲ್ಲಿ ತಿಳಿಸಿರುವಂತೆ ಚಾಮುಂಡಾ ಎಂಟು ವಿಭಿನ್ನ ರೂಪಗಳಲ್ಲಿಯೂ ಮೈದಳೆಯುತ್ತಾಳೆ. ಎಂಟು ಕೈಗಳ ರುದ್ರ ಚಾಮುಂಡಾ, ಆರು ಕೈಗಳ ರುದ್ರಕಾರಿಕಾ, ಅಷ್ಟಭುಜಗಳು, ನಾಲ್ಕು ಮುಖಗಳನ್ನು ಹೊಂದಿರುವ ಮಹಾಲಕ್ಷ್ಮೀ, ದಶಭುಜಗಳ ಸಿದ್ಧಚಾಮುಂಡಾ, ಹನ್ನೆರಡು ಭುಜಗಳ ಸಿದ್ಧಯೋಗೇಶ್ವರೀ, ಹನ್ನೆರಡು ಭುಜಗಳು ಮತ್ತು ಪದ್ಮಾಸನದಲ್ಲಿ ಕುಳಿತ ರೂಪವಿದ್ಯಾ, ದ್ವಿಭುಜಗಳ ಕ್ಷಮಾ ಮತ್ತು ಚಾಮುಂಡಾ ಇವು ಎಂಟು ವಿಭಿನ್ನ ರೂಪಗಳು. ಸಪ್ತ ಮಾತೃಕಾ ಶಿಲ್ಪಗಳಲ್ಲಿ ಭೀಕರ ಮತ್ತು ಮೃತ್ಯುಸ್ವರೂಪಗಳಾಗಿ ಚಾಮುಂಡಾಳನ್ನು ಪರಿಭಾವಿಸಲಾಗಿದೆ. ಪ್ರಾಯಶಃ ಅಸುರಸಂಹಾರ, ಶತ್ರು ಸಂಹಾರ ಮತ್ತು ಸಮರ ಪ್ರಸಂಗಗಳಲ್ಲಿ ದುರ್ಗೆಯು ಅವರ ಮುಂದೆ ನಡುಕ ಹುಟ್ಟಿಸುವಂತಹ ಮೃತ್ಯುದೇವತೆಯ ರೂಪದಲ್ಲಿ ಚಾಮುಂಡಳಾಗಿ ಪ್ರಕಟಗೊಳ್ಳುತ್ತಾಳೆ. ಆದ್ದರಿಂದಲೇ ಅವಳ ಈ ರೂಪವೂ ಮಾನವರಿಗೇ ಅಲ್ಲದೇ ಅಸುರರಿಗೂ ಭೀಕರವೆನಿಸುವಂತೆ ರಚಿತಗೊಂಡಿದೆ.

ಚಾಮುಂಡಿ

ಚಾಮುಂಡಿಯು ದುರ್ಗಾದೇವಿಯ ಸ್ವರೂಪಳಾಗಿದ್ದಾಳೆ. ಈ ಅವತಾರದಲ್ಲಿ ದೇವಿಯು ಚಂಡಮುಂಡರನ್ನು, ಮಹಿಷಾಸುರನನ್ನೂ, ಭಕ್ತರಿಗೆ ಒದಗಿಬರುವ ಎಲ್ಲಾ ಕಷ್ಟಗಳನ್ನೂ ತನ್ನ ಪರಾಕ್ರಮದಿಂದ ಸಂಹಾರ ಮಾಡುವಂತಹ ಮಂಗಳರೂಪಳಾಗಿ ಮೈದಳೆದಿರುತ್ತಾಳೆ. ಚಾಮುಂಡಾಳಂತಹ ಭೀಕರ ರೂಪವನ್ನು ಚಾಮುಂಡಿಯು ಹೊಂದಿರುವುದಿಲ್ಲ. ಹೀಗಾಗಿ ಚಾಮುಂಡಾ ಮತ್ತು ಚಾಮುಂಡಿಯರ ಪ್ರತಿಮಾಲಕ್ಷಣ, ರೂಪ ಸಂಯೋಜನೆಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಚಾಮುಂಡಿಯು ಸಿಂಹವಾಹಿನಿಯಾದ ಸರ್ವಾಂಗ ಸುಂದರಿ ದೇವಿಯಾಗಿದ್ದಾಳೆ. ಇವಳು ಮಹಿಷಾಸುರನನ್ನು ಸಂಹರಿಸುವ ಭಂಗಿಯಲ್ಲಿಲ್ಲದಿದ್ದರೂ ಎಲ್ಲಾ ಯುದ್ಧಾಯುಧಗಳನ್ನು ಹೊಂದಿದ್ದು ಸರ್ವಾಭರಣಭೂಷಿತೆಯಾಗಿ ಸಿಂಹದ ಮೇಲೆ ಕುಳಿತು ವೇಗಗತಿಯಲ್ಲಿ ಚಲಿಸುತ್ತಾಳೆ. ಈ ರೂಪದಲ್ಲಿ ದೇವಿಯು ದುರ್ಗಾ, ತುಳಜಾಭವಾನಿ, ಅಂಬಾಭವಾನಿ, ಸಿಂಹವಾಹಿನಿ ಮತ್ತು ಚಾಮುಂಡಿಯೆಂದು ಭಕ್ತರಿಂದ ಪೂಜೆಗೊಳ್ಳುತ್ತಾಳೆ. ಲೋಕಕಲ್ಯಾಣಕ್ಕಾಗಿ ಹಾಗೂ ಸಾಮಾನ್ಯ ಜನರ ಅಭ್ಯುದಯಕ್ಕಾಗಿ ದೇವಾಲಯಗಳನ್ನು ಕಟ್ಟಿ ಗರ್ಭಗೃಹಗಳಲ್ಲಿ ಪ್ರತಿಷ್ಠಾಪಿಸುವ ಮೂರ್ತಿಯಾಗಿರುತ್ತಾಳೆ ಚಾಮುಂಡಿ.

ಚಾಮುಂಡಿಯ ರೂಪದಲ್ಲಿರುವ ದೇವಿಯನ್ನು ಶ್ರೀತತ್ವನಿಧಿ ಎಂಬ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ರಚಿಸಿದ ಗ್ರಂಥದಲ್ಲಿ ಅನೇಕ ವಿಧವಾಗಿ ಸ್ತುತಿಸಲಾಗಿದೆ. ಈ ಗ್ರಂಥದಲ್ಲಿ ತಿಳಿಸುವಂತೆ ಚಾಮುಂಡಿಯು ಸ್ವರ್ಣಕಾಂತಿಯಂತೆಯೂ ಸೌಂದರ್ಯವತಿಯೂ ಆಗಿರುತ್ತಾಳೆ. ಚಿರಯೌವನೆ, ತ್ರಿನೇತ್ರೆ ಮತ್ತು ಮಂದಯಹಾಸಯುಕ್ತೆಯಾಗಿರುತ್ತಾಳೆ. ಇಪ್ಪತ್ತು ಕೈಗಳಲ್ಲಿ ಸರ್ವಾಯುಧಗಳನ್ನೂ, ಅಭಯ ವರದ ಹಸ್ತಗಳೊಂದಿಗೆ ಶೋಭಿಸುವ ಚಾಮುಂಡಿ ಮೈಸೂರು ಸಂಸ್ಥಾನದ ರಾಜವಂಶದ ಅಧಿದೇವತೆ. ಮೈಸೂರು ನಗರದ ಬೆಟ್ಟದ ಮೇಲೆ ಚಾಮುಂಡಿಗಾಗಿ ಒಡೆಯರ್ ವಂಶದ ಅರಸರು ದೇವಾಲಯವನ್ನು ಕಟ್ಟಿ ಇಂದಿಗೂ ಸರ್ವವಿಧಿಗಳನ್ನು ಪಾಲಿಸುತ್ತಾ ಬಂದಿದ್ದಾರೆ. ಚಾಮುಂಡಿಯು ಅಭಯಪ್ರದಳಾಗಿ ಸರ್ವರನ್ನೂ ಕಾಪಾಡುವ ರೂಪದಲ್ಲಿರುತ್ತಾಳೆ.

ಚಂಡಿಕಾಧ್ಯಾನವನ್ನು ನೃಸಿಂಹ ಪ್ರಸಾದದಲ್ಲಿ ಈ ರೀತಿ ಹೇಳಲಾಗಿದೆ. ಚಂಡಿಕೆಯು ಧವಲ ವರ್ಣವುಳ್ಳವಳು, ಮಂಗಳ ಸ್ವರೂಪಿಣಿ, ಸಿಂಹಗಾಮಿನಿ, ಜಟಾಯುತೆ, ದುಂಡಾದ ಮೂರು ಕಣ್ಣುಳ್ಳವಳು, ವರದ ಮುದ್ರೆ ಶೂಲ, ಕರ್ತ್ರೀಕಾ, ಇವುಗಳನ್ನು ಬಲಗೈಗಳಲ್ಲೂ, ಎಡಗೈಗಳಲ್ಲಿ ಪಾಶ, ಪಾತ್ರ, ಅಭಯಮುದ್ರೆ ಇವುಗಳಿಂದ ಕೂಡಿರುವಳು (ಶ್ವೇತವರ್ಣ) ೮೧೩

ದುರ್ಗಾ:

ಜಯ ಜಯಹೇ ದುರ್ಗಾ, ದುರ್ಗತಿನಾಶಿನಿ ।

ಭಾರತೀಯ ಸಾಂಸ್ಕೃತಿಕ ಜಗತ್ತಿನ ಅಧಿದೇವತೆಯಾಗಿ ದುರ್ಗಾ ಮೇರುಸ್ಥಾನದಲ್ಲಿ ನಿಲ್ಲುತ್ತಾಳೆ. ನಮ್ಮ ದೇಶದ ಮೂಲೆ ಮೂಲೆಯಲ್ಲೂ ದುರ್ಗಾ ಪೂಜನೀಯಳಾಗಿದ್ದಾಳೆ. ಸ್ತ್ರೀ ಪುರುಷರಾದಿಯಿಂದ ಪುರಸ್ಕರಿಸಲ್ಪಡುವ ಸಂಕಟ ನಿವಾರಣೆಗೆ ಕಂಕಣಬದ್ಧಳಾಗಿ ನಿಂತಿರುವ 'ದುರ್ಗಾ' ಸಾವಿರಾರು ದೇವತೆಗಳಲ್ಲಿ ಪ್ರಥಮಸ್ಥಾನ ಪಡೆದುಕೊಂಡಿದ್ದಾಳೆ. ಸರ್ವಶಕ್ತಿಯಾದ ಸಮರ, ಸಂಗ್ರಾಮ, ಯುದ್ಧಗಳ ಅಧಿದೇವತೆಯಾದ ದುರ್ಗೆಯನ್ನು ಕುರುಕ್ಷೇತ್ರ ಯುದ್ಧದ ಸಮಯದಲ್ಲಿ ಅರ್ಜುನನು ದುರ್ಗಾಸ್ತೋತ್ರದ ಮೂಲಕ ಭಕ್ತಿಯಿಂದ ಪ್ರಾರ್ಥಿಸುತ್ತಾನೆ. ಇದಕ್ಕೂ ಮೊದಲು ಪಂಚ-ಪಾಂಡವರು ದ್ರೌಪದೀ ಸಹಿತವಾಗಿ ಹನ್ನೆರಡು ವರ್ಷಗಳ ವನವಾಸವನ್ನೂ ಕಳೆದು ಒಂದು (ಹದಿಮೂರನೇ ವರ್ಷದ) ವರ್ಷ ಅಜ್ಞಾತವಾಸವನ್ನು ಪ್ರಾರಂಭಿಸುವುದಕ್ಕೆ ಮುಂಚೆ ತಮ್ಮೆಲ್ಲರನ್ನೂ ರಕ್ಷಿಸಬೇಕೆಂದು ದುರ್ಗಾದೇವಿಯನ್ನು ಪ್ರಾರ್ಥಿಸುತ್ತಾರೆ.

ಸಾಮಾನ್ಯವಾಗಿ ಯಾವುದೇ ಭಾರತೀಯ ವಿಷಯದ ಆದಿಯನ್ನು ತಿಳಿಯುವಾಗ ವೇದಗಳಲ್ಲಿ ಉಲ್ಲೇಖಿಗೊಂಡಿದೆಯೇ ಎಂಬುದನ್ನು ಗಮನಿಸಿದಾಗ ಅದರ ಮೂಲ ಸ್ವರೂಪದ ಪರಿಚಯವಾಗುತ್ತದೆ. ವೇದಗಳ ಕಾಲದಲ್ಲಿಯೂ ಅಸುರ ನಿಗ್ರಹಕ್ಕಾಗಿ ಶ್ರಮಿಸುವ ಪುರುಷ ದೇವತೆಗಳ ಉಲ್ಲೇಖವಿದೆಯೇ ಹೊರತು, ಯಾವ ಸ್ತ್ರೀ ದೇವತೆಗಳನ್ನೂ ಅಸುರ ನಿಗ್ರಹ ಕಾರ್ಯದ ದೃಷ್ಟಿಯಿಂದ ಉಲ್ಲೇಖಿಸಿರುವುದಿಲ್ಲ. 'ದುರ್ಗಾ ಎಂಬ ದೇವತೆಯನ್ನು ತೈತ್ತಿರೀಯ ಅರಣ್ಯಕದಲ್ಲಿ (ಅ.೧೦,೧.೭) ಸೂಚಿಸಲಾಗುತ್ತದೆ. ಆದರೆ ಪುರಾಣ ಕಾಲದಲ್ಲಿ ದುರ್ಗೆಯನ್ನೂ ಸಮರದೇವತೆಯಾಗಿ ಚಿತ್ರಿಸಿದಂತೆ ವೇದಸಾಹಿತ್ಯದಲ್ಲಿ ಪರಿಕಲ್ಪಿಸಿಲ್ಲ. ಸುಮಾರು ಕ್ರಿ.ಶ. ನಾಲ್ಕನೇ ಶತಮಾನದಿಂದ ಈಚೆಗೆ ದುರ್ಗೆಯನ್ನು ಶಕ್ತಿ ಸ್ವರೂಪಿಣಿಯಾಗಿ ಚಿತ್ರಿಸಲಾಗಿದೆ. ಅಲ್ಲಿಂದ ಸಿಂಹವಾಹಿನಿಯಾಗಿ, ಚಂಡಮುಂಡ ಸಂಹಾರಿಣಿ ಚಾಮುಂಡಿಯಾಗಿ ಮತ್ತು ಮಹಿಷಾಸುರಮರ್ಧಿನಿಯಾಗಿ ಭಾರತದ ಎಲ್ಲಾ ಸಮುದಾಯಗಳಲ್ಲೂ, ಶಿಲ್ಪಕಲೆಯಲ್ಲೂ ಪ್ರಾತಿನಿಧ್ಯ ಪಡೆಯುವುದನ್ನು ಗಮನಿಸಬಹುದು. ಅನೇಕ ಪುರಾಣ ಮತ್ತು ಉಪಪುರಾಣಗಳಲ್ಲಿ ದುರ್ಗಾ ದೇವಿಯ ಅವತಾರ ವೃತ್ತಾಂತಗಳು ಆಸಕ್ತಿಯುತವಾಗಿ ಮೂಡಿಬಂದಿವೆ. ಶಾಕ್ತ ಪಂಥದ ಶಾಸ್ತ್ರೀಯ ಆಚರಣೆಗಳಲ್ಲೇ ಅಲ್ಲದೇ ವಿಂಧ್ಯಾಚಲದ 'ಸಬರ'ವೆಂಬ ಆದಿವಾಸಿ ಪಂಗಡದಲ್ಲೇ ಜನಿಸಿ ಎಲ್ಲಾ ಸಮುದಾಯಗಳ ಶ್ರದ್ಧೆ, ಭಕ್ತಿ ನಂಬುಗೆಗಳಲ್ಲಿ ದುರ್ಗಾ ಜೀವಂತಳಾಗಿದ್ದಾಳೆ.

ಶಾಕ್ತ ಆಗಮಗಳು ಮತ್ತು ಪುರಾಣಗಳು ದುರ್ಗೆಯ ಮೂಲವನ್ನು 'ಆದಿಶಕ್ತಿ' ಮತ್ತು 'ಪರಾಶಕ್ತಿ'ಯೆಂದು ಗುರುತಿಸುತ್ತವೆ. ಪುರುಷ ದೇವತೆಗಳಲ್ಲಿ ಧರ್ಮಪರಿಪಾಲನಾ ಕಾರ್ಯವನ್ನು ಮಹಾವಿಷ್ಣು ನಿರ್ವಹಿಸುವಂತೆ ದುರ್ಗೆಯು ವಿಷ್ಣುವಿನಿಂದ ಪ್ರೇರಿತಗೊಂಡು ಧರ್ಮಪರಿಪಾಲನಾ ಕಾರ್ಯ ಚಟುವಟಿಕೆಗಳಲ್ಲಿ ನಿರತಳಾಗಿರುವಳೆಂದು ಅನೇಕ ಪ್ರಸಂಗಗಳಲ್ಲಿ ಗ್ರಂಥಗಳು ವಿವರಿಸುತ್ತವೆ. ಸ್ಕಂದ ಪುರಾಣವು ತಿಳಿಸುವಂತೆ 'ದುರ್ಗಾ' ಎಂಬ ಅತ್ಯಂತ ಕ್ರೂರಿಯಾದ ಅಸುರನ ಕಾಟವನ್ನೂ ತಡೆಯಲಾರದೆ ಶಿವನು ಪಾರ್ವತಿಯನ್ನು ದುರ್ಗಾಸುರನನ್ನು ಶಿಕ್ಷಿಸುವಂತೆ ತಿಳಿಸುತ್ತಾನೆ. ಪಾರ್ವತಿಯು ಸಮರದೇವತೆಯ ರೂಪವನ್ನು ತಳೆದು ಅಸ್ತ್ರಾಸ್ತ್ರಗಳನ್ನು ತೊಟ್ಟು ದುರ್ಗಾಸುರನನ್ನು ಭೀಕರ ಯುದ್ಧದಲ್ಲಿ ಸೋಲಿಸಿದಾಗ ಅವನು ಮಹಿಷ (ಎಮ್ಮೆ ಅಥವಾ ಕೋಣ)ನ ರೂಪವನ್ನು ಪಡೆಯುತ್ತಾನೆ. ಹೀಗೆ ದುರ್ಗಾಸುರನನ್ನು ಸೋಲಿಸಿದ ಪಾರ್ವತಿ ದುರ್ಗಾ ಆಗುತ್ತಾಳೆ. ದೇವೀ ಮಹಾತ್ಮೆ ಮತ್ತು ವಾಮನ ಪುರಾಣಗಳಲ್ಲಿಯೂ ಶುಂಭ ಮತ್ತು ನಿಶುಂಭ ಎಂಬ ಅಸುರರನ್ನು ಸಂಹರಿಸಲು ಪಾರ್ವತಿಯ ಶರೀರದಿಂದ ಹೊರಹೊಮ್ಮುವ ರೂಪ ಸಮರದೇವತೆಯಾದ ದುರ್ಗಾ ಎಂಬ ಉಲ್ಲೇಖಗಳಿವೆ. ಇವೆಲ್ಲದ್ದಕ್ಕಿಂತ ಹೆಚ್ಚು ರೀತಿಯಲ್ಲಿ ದುರ್ಗೆಯನ್ನು ಮಹಿಷಾಸುರ ಸಂಹಾರ ಪ್ರಸಂಗದ ಜೊತೆಗೇ ಪರಿಕಲ್ಪಿಸಿರುವುದು ಗಣನೀಯ.

ಪರಮ ಪಾತಿವ್ರತ್ಯದ ಸಂಕೇತಳಾಗಿ, ಶಿವನ ಅರ್ಧಾಂಗಿಯಾಗಿ ಪಾರ್ವತಿಯು ಕಂಡು ಬಂದರೆ ಸರ್ವಸ್ವತಂತ್ರ, ಸ್ವಾವಲಂಬಿ ಆತ್ಮಾಭಿಮಾನದ ಸಂಕೇತವಾಗಿ ದುರ್ಗಾ ಕಂಡು ಬರುತ್ತಾಳೆ. ದುರ್ಗೆಯನ್ನು ವಿಷ್ಣುಮಾಯೆಯೆಂಬುದಾಗಿ ಗುರುತಿಸಲಾಗಿದೆ. ಹೀಗಾಗಿ ಪ್ರಾರಂಭದ ಶಿಲ್ಪಗಳಲ್ಲಿ ದುರ್ಗೆಯನ್ನು ಶಂಖ, ಚಕ್ರ, ಅಭಯ, ವರದೆಯಾಗಿ ಚತುರ್ಭುಜಗಳನ್ನು ಹೊಂದಿ ಮಹಿಷನ ತಲೆಯ ಮೇಲೆ ನಿಂತಿರುವಂತೆ ಚಿತ್ರಿಸಲಾಗಿದೆ. ಅಂತೆಯೇ ಆಸನದ ಮೇಲೆ ನಿಂತ ಭಗವತಿಯನ್ನು ವಿಷ್ಣುವಿನ ಶಕ್ತಿಯೆಂದು ಪರಿಗಣಿಸಲಾಗುತ್ತದೆ. ಕೇರಳ ಶಾಕ್ತ ಸಂಪ್ರದಾಯದಲ್ಲಿ ಭಗವತಿಯ ಆರಾಧನೆಗೆ ಮಹತ್ವ ಸ್ಥಾನವಿದೆ. ಅಲ್ಲಿ ಭಗವತಿಗಾಗಿ ದೇವಾಲಯಗಳನ್ನೂ ಕಟ್ಟಲಾಗುತ್ತದೆ. ದುರ್ಗಾದೇವಿಯ ಶಿಲ್ಪಗಳನ್ನು ಅವುಗಳ ಸಂಯೋಜನೆಯನ್ನು ಗಮನಿಸಿದಾಗ ಸಿಂಹವಾಹಿನಿಯಾಗಿ ದುರ್ಗೆ ದರ್ಶನ ನೀಡಿ ರಕ್ಷಿಸುತ್ತಾಳೆ. ಈ ಒಂದು ಭಂಗಿಯಲ್ಲಿ ಅವಳು ಸಮರ ಸನ್ನದ್ಧಳಾಗಿ ಹೊರಟಿದ್ದು ಚಂಡ ಮುಂಡರನ್ನೂ, ಶುಂಭ ನಿಶುಂಭರನ್ನು ಸಂಹರಿಸಿ ಮಹಿಷಾಸುರನೊಡನೆ ಯುದ್ಧಮಾಡಿ ಮಹಿಷಾಸುರ ಮರ್ಧಿನಿಯ ರೂಪ ತಳೆಯುತ್ತಾಳೆ. ಸಮರದ ನಂತರ ಜಯಗಳಿಸಿ ಮಹಿಷನ ಕತ್ತರಿಸಿದ ತಲೆಯ ಮೇಲೆ ಸಮಭಂಗದಲ್ಲಿ ನಿಂತಿರುತ್ತಾಳೆ. ಹೀಗೆ ಮಹಿಷಾಸುರನ ಸಂಹಾರಕ್ಕೆ ಮುನ್ನ ಸಿಂಹವಾಹಿನಿ ದುರ್ಗೆಯಾಗಿ, ಮಹಿಷಾಸುರನೊಡನೆ ಯುದ್ಧವನ್ನು ಮಾಡುವಾಗ ಮಹಿಷಾಸುರ ಮರ್ಧಿನಿ ದುರ್ಗೆಯಾಗಿ

ಹಾಗೂ ಸಮರದ ನಂತರ ಜಯದ ಸಂಕೇತವೆಂಬಂತೆ ಮಹಿಷಾಸುರನ ತಲೆಯ ಮೇಲೆ ವಿಷ್ಣುಮಾಯೆ ದುರ್ಗೆಯಾಗಿ ಶಿಲ್ಪಗಳಲ್ಲಿ ಪ್ರಾಯಶಃ ಪರಿಕಲ್ಪಿಸಿ ಸಂಯೋಜಿಸಲಾಗಿರುತ್ತದೆ.

ದುರ್ಗೆಯ ಪಾರಮ್ಯವನ್ನು ದೇಶದಾದ್ಯಂತ ಆಚರಿಸುವ ದುರ್ಗಾಪೂಜೆಯ ಸಂದರ್ಭದಲ್ಲಿ ಕಾಣಬಹುದಾಗಿದೆ. ಕರ್ನಾಟಕದಲ್ಲಿ ವಿಜಯನಗರ ಕಾಲದಿಂದಲೂ ಸಮರದೇವತೆಯಾದ ದುರ್ಗೆಯ ಉತ್ಸವವನ್ನು ವಿಜೃಂಭಣೆಯಿಂದ ಆಚರಿಸಲು 'ದಸರಾ' ಎಂಬ ನವರಾತ್ರಿ ಉತ್ಸವವನ್ನು ಏರ್ಪಡಿಸುತ್ತಿದ್ದರು. ಈ ನವರಾತ್ರಿಯಲ್ಲಿ ಅಷ್ಟಮಿಯ ದಿನ ದುರ್ಗಾಷ್ಟಮಿಯಾಗಿರುತ್ತದೆ. ಅಂದಿನಿಂದ ನಡೆದು ಬಂದ ದಸರಾ ಮುಂದೆ ಮೈಸೂರಿನ ಅರಸರ ಕಾಲದಲ್ಲಿ ನಾಡಹಬ್ಬವಾಗಿ ಚಾಮುಂಡೇಶ್ವರಿ ಉತ್ಸವ, ದಸರಾ ಮೆರವಣಿಗೆ ಮುಂತಾದ ಅನೇಕ ವಿಧಿ ವಿಧಾನಗಳನ್ನು ಹೊಂದಿ ಆಚರಿಸುವ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಉತ್ಸವವಾಗಿ ನಡೆದು ಬಂದಿದೆ.

'ದುರ್ಗ ಎಂದರೆ ದುರ್ಗಮವಾದ ಕೋಟೆಯೆಂಬ ಅರ್ಥವೂ ಇದೆ. ಅಂತಹ ದುರ್ಗಮವಾದ ಕೋಟೆಗೆ ಅಧಿದೇವತೆ, ರಕ್ಷಕಿ 'ದುರ್ಗಾ' ಎಂದೂ ಪರಿಗಣಿಸಲ್ಪಟ್ಟಿದ್ದಾಳೆ. ವಿಜಯದ ಇನ್ನೊಂದು ಹೆಸರೇ 'ದುರ್ಗಾ' ಆಗಿರುವುದರಿಂದ ಆಳರಸರು ತಮ್ಮ ಕೋಟೆ ಕೊತ್ತಲಗಳನ್ನು ರಕ್ಷಿಸುವ ದೇವತೆ ದುರ್ಗಾ ಎಂದು ತಿಳಿದು ಕೋಟೆಯ ಪ್ರಮುಖ ದ್ವಾರಗಳಲ್ಲಿ ದುರ್ಗೆಯನ್ನು ಸ್ಥಾಪಿಸಿ ಪೂಜಿಸುತ್ತಿದ್ದರು. ಇಷ್ಟೇ ಅಲ್ಲದೇ ನವದುರ್ಗೆಯರ ಪ್ರಸ್ತಾಪವೂ ಇದೆ. ದೇವೀ ಮಹಾತ್ಮೆಯ ಕವಚದಲ್ಲಿ ಶೈಲಪುತ್ರೀ, ಬ್ರಹ್ಮಚಾರಿಣಿ, ಚಂದ್ರಪ್ರಭಾ, ಕೂಷ್ಮಾಂಡಾ, ಸ್ಕಂದಮಾತಾ, ಕಾತ್ಯಾಯಿನೀ, ಕಾಳರಾತ್ರೀ, ಮಹಾಗೌರೀ, ಸಿದ್ಧಶ್ರೀ ಇವರ ಹೆಸರುಗಳಿವೆ. ಕಾಶೀಕ್ಷೇತ್ರದ ನವದುರ್ಗೆಯರೂ ಇವರೇ ಆಗಿರುತ್ತಾರೆ. 'ಪುರಾಣಗಳಲ್ಲಿ ಉಗ್ರಚಂಡಾ, ಪ್ರಚಂಡಾ, ಚಂಡೋಗ್ರಾ, ಚಂಡನಾಯಿಕಾ, ಚಂಡ, ಚಂಡವತೀ, ಚಂಡರೂಪಾ, ಅತಿಚಂಡಿಕಾ, ಉಗ್ರಚಂಡಾ ಎಂಬ ಹೆಸರುಗಳೂ, ಆಗಮನದಲ್ಲಿ ನೀಲಕಂಠಿ, ಕ್ಷೇಮಕಂಕರಿ, ಹರಸಿದ್ಧಿ, ರುದ್ರಾಂಶದುರ್ಗಾ, ವನದುರ್ಗಾ, ಅಗ್ನಿದುರ್ಗಾ, ಜಯದುರ್ಗಾ (ಜಲದುರ್ಗಾ), ವಿಂಧ್ಯವಾಸಿನೀ, ರಿಪುಮಾರೀ ಎಂಬ ಹೆಸರುಗಳೂ ಇವೆ. ಸಸ್ಯ ಪ್ರಪಂಚಕ್ಕೆ ಅಭಿಮಾನಿ ದೇವತೆಯೆನಿಸಿ ಶಾಕಂಭರಿಯಾಗಿರುವುದೂ ಉಂಟು. ಒಂಭತ್ತು ಬಗೆಯ ಸಸ್ಯಗಳನ್ನು ನವದುರ್ಗೆಯರೆಂದು ವ್ಯವಹರಿಸುವ ವಾಡಿಕೆಯೂ ಇದೆ. ಬಾಳೆ (ರಂಬಾ, ಬ್ರಹ್ಮಾಣೀ) ಕಚ್ಚಿ (ಕಾಲಿಕಾ) ಅರಿಶಿನ (ಹರಿದ್ರಾ, ದುರ್ಗಾ) ಜಯಂತೀ (ಕಾರ್ತಿಕೀ) ಬೇಲ (ಶಿವಾ) ದಾಳಿಂಬೆ (ರಕ್ತದಂತಿಕಾ) ಅಶೋಕಾ (ಶೋಕರಹಿತಾ) ಕುಂಬಳಕಾಯಿ (ಚಾಮುಂಡಾ) ಭತ್ತ (ಲಕ್ಷ್ಮೀ), ಬಂಗಾಳದ ಕಡೆ

'ನವಪತ್ರಿಕಾ' ಎನ್ನುವ ವ್ರತಾಚರಣೆಯಲ್ಲಿ ಇವುಗಳ ಬಳಕೆಯಿದೆ. (ಎಸ್.ಕೆ. ರಾಮಚಂದ್ರರಾವ್- ಮೂರ್ತಿ ಶಿಲ್ಪ, ನೆಲೆ-ಹಿನ್ನೆಲೆ, ಪುಟ ೧೭೩-೧೭೪)

ನವದುರ್ಗೆಯರು

ದೇವತಾ ಲಕ್ಷಣಗಳನ್ನು ಮುಖ್ಯವಾಗಿ ತೆಗೆದುಕೊಂಡು ವಿಚಾರ ಮಾಡಿದಾಗ ಆಗಮದಲ್ಲಿ ಕೊಟ್ಟಿರುವಂತಹ ನವದುರ್ಗೆಯರ ಪಟ್ಟಿಯೇ ಹೆಚ್ಚು ಪ್ರಚಲಿತದಲ್ಲಿದೆ. ಆಗಮದಲ್ಲಿ ಅಂದರೆ ಶಾಕ್ತ್ಯಾಗಮದ ಪ್ರಕಾರ ಒಂಭತ್ತು ವಿವಿಧ ರೂಪಗಳಲ್ಲಿ ದುರ್ಗೆಯ ರೂಪಗಳನ್ನು ಮೂರ್ತಿಲಕ್ಷಣಗಳೊಂದಿಗೆ ಶಿಲ್ಪಿಗಳನ್ನು ರಚಿಸುವ ಸಂಪ್ರದಾಯವಿದೆ.

ನೀಲಕಂಠಿದುರ್ಗಾ

ನವದುರ್ಗಾ ಪರಿಕಲ್ಪನೆಯಲ್ಲಿ ಮೊದಲ ರೂಪವೇ ನೀಲಕಂಠಿ. ಈ ದೇವಿಯು ತನ್ನ ಭಕ್ತರಿಗೆ ಸಂಪತ್ತು ಮತ್ತು ಸಂತೋಷವನ್ನು ನೀಡುವ ಕಾಯಕದಲ್ಲಿ ತೊಡಗಿರುತ್ತಾಳೆ. ಇದು ದೇವಿಯ ಶುಭ-ಪ್ರದವಾದ ರೂಪವಾಗಿರುತ್ತದೆ. ಚತುರ್ಭುಜೆಯಾಗಿದ್ದು ತ್ರಿಶೂಲ, ಖೇಟಕ, ಪಾನಪಾತ್ರೆಗಳನ್ನೂ ಮೂರು ಕೈಗಳಲ್ಲೂ, ಹಾಗೂ ನಾಲ್ಕನೇ ಕೈಯನ್ನು ವರದ ಮುದ್ರೆಯಲ್ಲಿ ಹಿಡಿದು ಭಕ್ತರನ್ನು ದೊರೆಯುವ ಭಂಗಿಯಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳುತ್ತಾಳೆ.

ಕ್ಷೇಮಾಂಕರೀ ದುರ್ಗಾ

ಹೆಸರೇ ಸೂಚಿಸುವಂತೆ ಕ್ಷೇಮಾಂಕರಿಯು ಕ್ಷೇಮ, ಸೌಹಾರ್ದ, ಆರೋಗ್ಯದಾಯಿನಿ. ತನ್ನ ಭಕ್ತರ ಕ್ಷೇಮಾಭ್ಯುದಯದ ಉದ್ದೇಶದಿಂದ ಸೂಚನೀಯಳಾಗಿದ್ದಾಳೆ. ಇವಳು ಚತುರ್ಭುಜೆಯಾಗಿದ್ದು ಮೂರು ಕೈಗಳಲ್ಲಿ ಕ್ರಮವಾಗಿ ತ್ರಿಶೂಲ, ಪದ್ಮ ಮತ್ತು ಪಾನಪಾತ್ರೆಯನ್ನು ಹಿಡಿದಿದ್ದು ನಾಲ್ಕನೇ ಕೈಯನ್ನು ಅಭಯಪ್ರಧಾನವಾಗಿ ಹಿಡಿದಿರುತ್ತಾಳೆ. ಸರ್ವಾಭರಣ ಭೂಷಿತೆಯಾಗಿ ಕ್ಷೇಮಾಂಕರಿಯಾಗಿ ತನ್ನ ಭಕ್ತರಿಗೆ ದಿವ್ಯದರ್ಶನ ನೀಡುವಳು.

ಹರಸಿದ್ಧಿದುರ್ಗಾ

ಮೂರ್ತಿ ಲಕ್ಷಣದಲ್ಲಿ ಹರಸಿದ್ಧಿಯು ನೀಲಕಂಠಿ ಮತ್ತು ಕ್ಷೇಮಾಂಕರಿಗಳಿಗಿಂತಲೂ ಭಿನ್ನವಾಗಿರುತ್ತಾಳೆ. ಹರಸಿದ್ಧಿದುರ್ಗಾ ಹರಕೆಹೊತ್ತ ತನ್ನ ಭಕ್ತರ ವಾಂಛಿತ ಫಲಗಳನ್ನೂ ಅವರ ಇಷ್ಟಾರ್ಥಗಳನ್ನೂ ನೀಡಿ ನಡೆಸಿಕೊಡುವ ದೇವಿಯಾಗಿದ್ದಾಳೆ. ಚತುರ್ಭುಜೆಯಾಗಿದ್ದು ನಾಲ್ಕು ಕೈಗಳಲ್ಲಿ ಕ್ರಮವಾಗಿ ಢಮರು, ಕಮಂಡಲು, ಖಡ್ಗ ಮತ್ತು ಪಾನಪಾತ್ರೆಗಳನ್ನು ಹಿಡಿದು ಪದ್ಮಾಸನದಲ್ಲಿ ಕುಳಿತು ತನ್ನ ಭಕ್ತರಿಗೆ ದರ್ಶನ ನೀಡುತ್ತಾಳೆ.

ರುದ್ರಾಂಶದುರ್ಗಾ

ಈ ದೇವಿಯು ಗಾಢ ಬಣ್ಣದವಳಾಗಿದ್ದು, ಕಿರೀಟ ಮಕುಟವನ್ನು ಧರಿಸಿರುತ್ತಾಳೆ, ಎರಡು ಕಣ್ಣುಳ್ಳವಳು, ಮಾಣಿಕ್ಯ (ಕೆಂಪು) ಕೆತ್ತಿದ ಬಂಗಾರದ ಆಭರಣ ತೊಟ್ಟು ಸರ್ವಾಭರಣ ಭೂಷಿತೆಯಾಗಿರುತ್ತಾಳೆ. ಚತುರ್ಭುಜಗಳನ್ನು ಹೊಂದಿದ್ದು ನಾಲ್ಕು ಕೈಗಳಲ್ಲಿ ಕ್ರಮವಾಗಿ ಶೂಲ, ಖಡ್ಗ, ಶಂಖ ಮತ್ತು ಚಕ್ರಗಳನ್ನು ಧರಿಸಿ ಸಿಂಹವಾಹಿನಿಯಾಗಿರುತ್ತಾಳೆ. ದೇವಿಯ ಇಕ್ಕೆಲಗಳಲ್ಲಿ ಸೂರ್ಯಚಂದ್ರರು ಸ್ಥಾನ ಪಡೆದಿರುತ್ತಾರೆ.

ಕರಣಾಗಮದಲ್ಲಿ ರುದ್ರಾಂಶ ದುರ್ಗಾಧ್ಯಾನವನ್ನು ಈ ರೀತಿ ಮಾಡಲಾಗುತ್ತದೆ.

ರಕ್ತವರ್ಣದ ವಸ್ತ್ರವನುಟ್ಟ, ಶ್ಯಾಮಲಕಾಂತಿಯ, ಎರಡು ಕಣ್ಣುಗಳುಳ್ಳ ಕಿರೀಟ, ರತ್ನನಿರ್ಮಿತವಾದ ಭುಜಾಭರಣ ಮತ್ತು ಚಿನ್ನದ ಅಲಂಕಾರಗಳನ್ನು ಹೊಂದಿರುವ, ಶೂಲ, ಖಡ್ಗ, ಶಂಖ ಮತ್ತು ಚಕ್ರಗಳನ್ನು ಧರಿಸಿದ ಸಿಂಹವಾಹಿನಿಯಾಗಿ ಸೂರ್ಯಚಂದ್ರರನ್ನು ಅಲಂಕಾರದಂತೆ ಧರಿಸಿಕೊಂಡ ಇಷ್ಟಾರ್ಥವನ್ನೂ ನೀಡುವ, ದೇವತೆಗಳು ಚರಣಕಮಲಗಳನ್ನು ನಮಿಸುತ್ತಿರುವ ರುದ್ರಾಂಶದುರ್ಗೆಯನ್ನು ಅಂತರಂಗದಿಂದ ನೆನೆಯುತ್ತೇನೆ. (ಶ್ಯಾಮವರ್ಣ) ೬೯೬

ವನದುರ್ಗಾ

ಸಸ್ಯರಾಶಿಗೆ ಜೀವನಿಧಿಯಾಗಿರುವ ವನದುರ್ಗಾ ವನಗಳ ಸಂರಕ್ಷಕಿ. ಹಸಿರು ವರ್ಣದಿಂದ ಕಂಗೊಳಿಸುವ ದೇವಿ ಅಷ್ಟಭುಜಗಳನ್ನು ಹೊಂದಿರುತ್ತಾಳೆ. ಎಂಟೂ ಕೈಗಳಲ್ಲಿ ಕ್ರಮವಾಗಿ ಶಂಖ, ಚಕ್ರ, ಖಡ್ಗ, ಖೇಟಕ, ಬಾಣ, ಧನಸ್ಸು ಮತ್ತು ಶೂಲವನ್ನು ಹಿಡಿದು ಕೊನೆಯ ಒಂದು ಕೈಯನ್ನು ತರ್ಜನೀ ಮುದ್ರೆಯಲ್ಲಿ ಹಿಡಿದು ತನ್ನ ಉಪಸ್ಥಿತಿಯನ್ನು ಸುಚಿಸುತ್ತಾಳೆ. ವನದುರ್ಗೆಯನ್ನು ಸಾಮಾನ್ಯವಾಗಿ ವನಗಳ ಬಳಿ ಸ್ಥಾಪಿಸಿ ಪೂಜಿಸಲಾಗುತ್ತದೆ. ವನದುರ್ಗಾ ಧ್ಯಾನವನ್ನು ಆಮ್ನಾಯದಲ್ಲಿ ಈ ರೀತಿ ಮಾಡಲಾಗುತ್ತದೆ.

ಚಕ್ರ, ಶಂಖ, ಖಡ್ಗ, ಗುರಾಣಿ, ಬಾಣ, ಬಿಲ್ಲು, ಶೂಲ, ತರ್ಜನೀ (ಬೆದರಿಕೆ ಹಾಕುವ ಮುದ್ರೆ) ಇವುಗಳನ್ನು ಧರಿಸಿರುವ, ಕೋಣದ ಶಿರಸ್ಸಿನ ಮೇಲೆ ಆರೂಢಳಾದ, ಚಿಗರು ದೂರ್ವೆಯ (ಗರಿಕೆಹುಲ್ಲು) ವರ್ಣದಂತಿರುವ ದುರ್ಗೆಯು ನನ್ನ ಐಶ್ವರ್ಯಕ್ಕೆ ಕಾರಣವಾಗಲಿ. (ಸುವರ್ಣವರ್ಣ), ೬೯೮– ಶ್ರೀತತ್ವನಿಧಿ.

ಅಗ್ನಿದುರ್ಗಾ

ತ್ರಿನೇತ್ರೆಯಾದ ಅಗ್ನಿ–ದುರ್ಗಾ ಮಿಂಚಿನಂತಹ ಪ್ರಖರತೆಯ ಕಾಂತಿಯುತವಾದ ದೇಹವನ್ನು ಹೊಂದಿರುತ್ತಾಳೆ. ಅಷ್ಟಭುಜ ಮೂರ್ತಿಯಾಗಿದ್ದು ಆರು ಕೈಗಳಲ್ಲಿ ಕ್ರಮವಾಗಿ ಚಕ್ರ, ಖಡ್ಗ, ಖೇಟಕ, ಬಾಣ, ಪಾಶ, ಮತ್ತು ಅಂಕುಶಗಳನ್ನು ಧರಿಸಿದ್ದು ಇನ್ನೆರಡು ಕೈಗಳಲ್ಲಿ ವರದ ಮತ್ತು ತರ್ಜನೀ ಮುದ್ರೆಗಳನ್ನು ಹಿಡಿಯಲಾಗಿರುತ್ತದೆ. ಅರ್ಧಚಂದ್ರವಿರುವ ಕಿರೀಟವನ್ನು ದೇವಿಯು ಧರಿಸಿ ಸಿಂಹವಾಹಿನಿಯಾಗಿ ಭೀಕರ ರೂಪವನ್ನು ಹೊಂದಿರುತ್ತಾಳೆ. ದೇವಿಯ ಇಕ್ಕೆಲಗಳಲ್ಲಿ ಇಬ್ಬರು ದೇವತೆಯರು ಖಡ್ಗ ಮತ್ತು ಖೇಟಕವನ್ನು ಹಿಡಿದು ವಿನಮ್ರತೆಯಿಂದ ನಿಂತಿರುವ ಸಂಯೋಜನೆಯನ್ನು ಅಗ್ನಿದುರ್ಗಾ ಪ್ರತಿಮಾಲಕ್ಷಣದ ಸಂಯೋಜನೆಯು ಸೂಚಿಸುತ್ತದೆ.

ಶಾರದಾ ತಿಲಕದಲ್ಲಿ ಅಗ್ನಿದುರ್ಗಾ ಧ್ಯಾನವನ್ನು ಹೀಗೆ ಮಾಡಲಾಗಿದೆ. ವಿದ್ಯುಲತೆಯಂತೆ ಪ್ರಭೆಯುಳ್ಳ, ಸಿಂಹದ ಹೆಗಲಮೇಲೆ ಕುಳಿತಿರುವ, ಭೂಷಣಕೃತಿಯ, ಖಡ್ಗ ಗುರಾಣಿಗಳನ್ನು ಕೈಗಳಲ್ಲಿ ಧರಿಸಿ ಶೋಭಿಸುತ್ತಿರುವ ಕನ್ಯೆಯರಿಂದ ಸೇವೆಗೊಂಡ, ಚಕ್ರ, ಶಂಖ, ಖಡ್ಗ, ಗುರಾಣಿ, ಬಾಣ, ಪಾಶ, ಅಂಕುಶ ಮತ್ತು ತರ್ಜನೀ ಮುದ್ರೆಯನ್ನು ಕೈಗಳಿಂದ ಧರಿಸಿರುವ ಶಿರಸ್ಸಿನಲ್ಲಿ

ಚಂದ್ರಕಲೆಯನ್ನು ಹೊತ್ತ ಮೂರು ಕಣ್ಣುಗಳಿರುವ, ಸರ್ವಪವಿತ್ರಳಾದ ದುರ್ಗೆಯನ್ನು ಭಜಿಸುವೆನು. (ಕನಕವರ್ಣ) ೭೦೦.

ಜಯದುರ್ಗಾ

ದೇವಿಯು ಜಯದುರ್ಗೆಯ ರೂಪದಲ್ಲಿ ಸಿದ್ಧಿಯನ್ನು ನೀಡುವಳು, ಭಕ್ತರ ಯಶಸ್ಸಿಗೆ ವರದಾಯಕಳಾಗಿರುತ್ತಾಳೆ. ತ್ರಿನೇತ್ರೆ, ಅರ್ಧಚಂದ್ರನನ್ನು ಕೀರಿಟದಲ್ಲಿ ಧರಿಸಿ ಚತುರ್ಭುಜೆ-ಯಾಗಿರುತ್ತಾಳೆ. ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಖಡ್ಗ ಮತ್ತು ತ್ರಿಶೂಲಗಳನ್ನು ಹಿಡಿದು ಸಿಂಹವಾಹಿನಿಯಾಗಿ ಶ್ಯಾಮಲ ವರ್ಣನಾಗಿದ್ದರೂ ಅವಳ ಕಾಂತಿಯ ಪ್ರಖರತೆಯು ಮೂರೂ ಲೋಕಗಳಿಗೆ ಹರಡುವಂತಿರುವ ಮಂಗಳದಾಯಿನಿ ಜಯದುರ್ಗಾ.

ಶಾರದಾತಿಲಕದಲ್ಲಿ ಜಯದುರ್ಗಾ ಧ್ಯಾನ ಶ್ಲೋಕವನ್ನು ಈ ರೀತಿ ನೀಡಲಾಗಿದೆ.

ಶ್ಯಾಮಲವರ್ಣವುಳ್ಳ, ವಿಶಾಲವಾದ ಕಟಾಕ್ಷಗಳುಳ್ಳ (ಕಡೆಗಣ್ಣನೋಟ) ಶತ್ರು ಸಂತಾನಕ್ಕೆ ಭೀತಿಯನ್ನು ನೀಡುವ, ಕಿರೀಟದಲ್ಲಿ ಚಂದ್ರಕಲೆಯನ್ನು ಧರಿಸಿರುವ, ಶಂಖ, ಚಕ್ರ, ಖಡ್ಗ, ತ್ರಿಶೂಲಗಳನ್ನು ಹಸ್ತಗಳಿಂದ ಧರಿಸಿರುವ, ಮೂರುಕಣ್ಣುಗಳುಳ್ಳ, ಸಿಂಹದ ಭುಜವನ್ನು ಏರಿಕುಳಿತಿರುವ, ತನ್ನ ತೇಜಸ್ಸಿನಿಂದ ಸಮಗ್ರ ತ್ರಿಭುನವನ್ನು ತುಂಬುತ್ತಿರುವ, ಸಿದ್ಧಿಯನ್ನು ಬಯಸುವ ದೇವತೆಗಳಿಂದ ಸುತ್ತುವರಿಯಲ್ಪಟ್ಟ ಜಯದುರ್ಗೆಯನ್ನು ಧ್ಯಾನಿಸಬೇಕು. (ಕೃಷ್ಣವರ್ಣ) ೬೯೭ ಶ್ರೀತತ್ವನಿಧಿ, ಪು – ೨೧೬.

ವಿಂಧ್ಯವಾಸಿನಿ ದುರ್ಗಾ

ವಿಂಧ್ಯಪರ್ವತಗಳ ಆದಿವಾಸಿಗಳಾದ 'ಶಬರ' ಸಮುದಾಯದ ಅಧಿದೇವತೆಯಾದ ದುರ್ಗೆಯನ್ನು ವಿಂಧ್ಯವಾಸಿನಿಯೆಂದು ತಿಳಿಸಲಾಗಿದೆ. ಈ ದುರ್ಗೆಯು ಸ್ವರ್ಣಕಮಲದಲ್ಲಿ ಪದ್ಮಾಸನೆಯಾಗಿ ಕುಳಿತು, ನಾಲ್ಕು ಕೈಗಳಲ್ಲಿ ಶಂಖ ಮತ್ತು ಚಕ್ರ, ಅಭಯ ಮತ್ತು ವರದ ಹಸ್ತಗಳನ್ನು ಧರಿಸಿ, ತ್ರಿನೇತ್ರೆಯಾಗಿ ಪ್ರಖರಕಾಂತಿಯಿಂದ ಮಿಂಚಿನಂತೆ ಹೊಳೆಯುತ್ತಾಳೆ. ಕಿರೀಟದಲ್ಲಿ ಚಂದ್ರಕಲೆ, ಹಾರ, ಕುಂಡಲ, ಅಂಗಧ ಮುಂತಾದ ವಿಶೇಷ ಆಭರಣಗಳನ್ನು ಧರಿಸಿ ದರ್ಶನ ನೀಡುತ್ತಾಳೆ. ಅವಳ ಸುತ್ತಲೂ ಇಂದ್ರಾದಿ ದೇವತೆಗಳು ಪ್ರಾರ್ಥನೆಯನ್ನೂ ಸಲ್ಲಿಸುತ್ತಾರೆ.

ದೇವಿಯ ವಾಹನವಾದ ಸಿಂಹದ ಉಪಸ್ಥಿತಿಯು ಸಮೀಪದಲ್ಲಿಯೇ ಇರುತ್ತದೆ. ದುರ್ಗಾ ಕಲ್ಪದಲ್ಲಿ ವಿಂಧ್ಯವಾಸಿನೀ ದುರ್ಗಾಳ ಧ್ಯಾನ ಶ್ಲೋಕವನ್ನು ಈ ರೀತಿ ಕೊಡಲಾಗಿದೆ. ಚಿನ್ನದ ಕಮಲದ ಮಧ್ಯದಲ್ಲಿ ಆಸೀನಳಾಗಿರುವ, ಮೂರು ಕಣ್ಣುಗಳುಳ್ಳ, ಮಿಂಚಿನಂತೆ ಕಾಂತಿಯುಳ್ಳ, ಶಂಖ, ಚಕ್ರ ಹಾಗೂ ವರದ ಮತ್ತು ಅಭಯ ಮುದ್ರಾಧಾರಿಣಿಯಾದ, ಚಂದ್ರ ಕಲೆಯನ್ನು ಹೊತ್ತಿರುವ, ಕಂಠಹಾರ, ಭುಜಾಭರಣ, ಹಾರ, ಕುಂಡಲಗಳನ್ನು ಧರಿಸಿರುವ, ಇಂದ್ರಾದಿಗಳಿಂದ ಸ್ತುತಿಸಲ್ಪಟ್ಟ, ಪಕ್ಕದಲ್ಲಿ ಸಿಂಹವಿರುವ ಚಂದಿರ ವದನೆಯಾದ ವಿಂಧ್ಯವಾಸಿನಿಯನ್ನು ಧ್ಯಾನ ಮಾಡಬೇಕು. (ಕನಕವರ್ಣ) ಶ್ರೀತತ್ವನಿಧಿ– ಪು೧– ೨೧೫.

ರಿಪುಮಾರೀ ದುರ್ಗಾ

ಈ ಸ್ವರೂಪದಲ್ಲಿ ದೇವಿಯು ರಕ್ತವರ್ಣೆಯಾಗಿದ್ದು ಭೀಕರ ರೂಪವನ್ನು ಹೊಂದಿರುತ್ತಾಳೆ. ಒಂದು ಕೈಯಲ್ಲಿ ತ್ರಿಶೂಲವನ್ನೂ ಇನ್ನೊಂದು ಕೈಯನ್ನು ತರ್ಜನೀಮುದ್ರೆಯಲ್ಲಿ ಹಿಡಿದಿರುತ್ತಾಳೆ. ರಿಪುಗಳು ಅಂದರೆ ಶತ್ರುಗಳಿಗೆ ಮಾರಿಯಂತೆ ಇರುವ ಈ ದುರ್ಗಾ ಶತ್ರು ನಿವಾರಿಣಿ. ರಿಪುಮಾರಿ ದುರ್ಗಾ ಮಂತ್ರವನ್ನು ಹತ್ತು ಸಾವಿರ ಸಲ ಪಠಿಸಿದರೆ ಅಂತಹವರ ಶತ್ರುಗಳು ಮತ್ತು ಅವರ ಸಹಚರರೆಲ್ಲಾ ನಾಮ ಶೇಷವಿಲ್ಲದಂತೆ ಒಂದೇ ಬಾರಿಗೆ ನಾಶವಾಗುತ್ತಾರೆ ಎಂದು ಶಾಸ್ತ್ರಗ್ರಂಥಗಳು ತಿಳಿಸುತ್ತವೆ.

ಶಾರದಾ ತಿಲಕದಲ್ಲಿ ರಿಪುಮಾರಿಣೀ ದುರ್ಗಾಳನ್ನು ಧ್ಯಾನಮಾಡುವ ವಿಧಾನವನ್ನು ಈ ರೀತಿ ತಿಳಿಸಲಾಗಿದೆ.

ತರ್ಜನೀ ಮುದ್ರೆಯನ್ನು ಹಾಗೂ ತ್ರಿಶೂಲವನ್ನು ಭುಜಗಳಿಂದ ಧರಿಸಿದ, ಭಯಾನಕಳಾದ, ಸೂರ್ಯ ಬಿಂಬದಂತೆ ರಕ್ತವರ್ಣೆಯಾದ, ರಿಪುಮಾರಿಣಿಯನ್ನು ಧ್ಯಾನಿಸಿ ಹತ್ತು ಸಾವಿರ ಸಂಖ್ಯೆಯಲ್ಲಿ ಮಂತ್ರವನ್ನು ಜಪಿಸಬೇಕು. ಹಾಗೆ ಮಾಡಿದ ತತ್‌ಕ್ಷಣದಲಿ ಬಂಧು ವರ್ಗ ಸಮೇತವಾಗಿ ಶತ್ರುಗಳನ್ನು ಸಂಹರಿಸುವಳು. (ರಕ್ತವರ್ಣ) ೬೯ ಶ್ರೀತತ್ವನಿಧಿ–ಪುಟ ೨೧೬)

ಈ ರೀತಿ ನವದುರ್ಗೆಯರನ್ನು ಆಯಾ ಉದ್ದೇಶಗಳಿಗನುಗುಣವಾಗಿ ಅರ್ಚಿಸಿ, ರೂಪಗಳನ್ನು ಕಂಡರಿಸಿ ಧ್ಯಾನಿಸಿದಾಗ ಆಯಾ ಇಚ್ಛೆಗಳು ಪೂರ್ಣಗೊಂಡು ಜೀವನದಲ್ಲಿ ಶಾಂತಿ ನೆಲೆಸಲು ಸಾಧ್ಯವಾಗುವುದು.

ಮಹಿಷಾಸುರ ಮರ್ಧಿನಿ ದೇವತಾ ಪರಿಕಲ್ಪನೆ

ಭಗವತಿ ಹೇ ಶಿತಿಕಂಠ ಕುಟುಂಬಿನಿ ಭೂರಿ ಕುಟುಂಬಿನಿ ಭೂರಿಕೃತೇ
ಜಯಜಯಹೇ ಮಹಿಷಾಸುರ ಮರ್ಧಿನಿ ರಮ್ಯಕಪರ್ದಿನಿ ಶೈಲಸುತೇ॥

ಹಿಂದೂ ಧರ್ಮದ ಪರಿಕಲ್ಪನೆ, ದೇವತಾ ರೂಪಗಳು, ಕಥಾನಕಗಳು, ಮೂರ್ತಿರೂಪಗಳನ್ನೆಲ್ಲಾ ಅವಲೋಕಿಸಿದಾಗ ಅತ್ಯಂತ ಜನಪ್ರಿಯವೂ ಆಚರಣಯುತವಾದುದು ಯಾವುವೆಂದರೆ ದೇವಿಯು ಮಹಿಷಾಸುರ ಮರ್ಧಿನಿಯ ರೂಪವನ್ನು ತಾಳಿದಂತಹದು. ಭಾರತದ ಎಲ್ಲಾ ಪ್ರಾಂತ್ಯಗಳಲ್ಲೂ ಎಲ್ಲಾ ಸಮುದಾಯಗಳಲ್ಲೂ ಭಯಭಕ್ತಿ ಶ್ರದ್ಧೆಯಿಂದ ಜನರು ಆಬಾಲವೃದ್ಧರಾಗಿ ಪೂಜಿಸುವ ಈ ದೇವೀ ರೂಪವು ಎಲ್ಲರಿಗೂ ಚಿರಪರಿಚಿತ. ಮಹಿಷಾಸುರ ಮರ್ಧಿನಿಯ ರೂಪವನ್ನು ದೇವಿಯು ಹೇಗೆ ಧಾರಣ ಮಾಡಿದಳು, ಅವಳ ಆ ವಿಸ್ತೃತ, ಭವ್ಯ ಆಕಾರ, ರೂಪವು ಹೇಗೆ ಒಡಮೂಡಿತು, ಈ ರೂಪವನ್ನು ತಳೆಯಲು ವಿಶೇಷ ಕಾರಣವೇನಿರಬಹುದೆಂಬುದನ್ನು ಇಲ್ಲಿ ತಿಳಿದುಕೊಂಡು ಮುಂದೆ ಶಿಲ್ಪದ ರಚನೆಯ ಬಗ್ಗೆ ತಿಳಿಯಲು ಪ್ರಯತ್ನ ಮಾಡಲಾಗಿದೆ.

ದೇವಿಯು ಮಹಿಷಾಸುರ ಮರ್ಧಿನಿಯ ಆಕಾರವನ್ನು ಹೇಗೆ ಪಡೆದಳೆಂಬುವ ಬಗ್ಗೆ ಮತ್ತು ಮಹಿಷಾಸುರನ ಸಂಹಾರದ ಬಗ್ಗೆ ಅನೇಕ ಗ್ರಂಥಗಳು ಮೇಲಿಂದ ಮೇಲೆ ತಿಳಿಸುತ್ತವೆ. ಅವುಗಳಲ್ಲಿ ದೇವಿ ಮಹಾತ್ಮ, ದುರ್ಗಾ ಸಪ್ತಶತಿ, ದೇವೀಭಾಗವತ ಕಾಲಿಕಾಪುರಾಣ ಮಹಾನಿರ್ವಾಣತಂತ್ರ ಸ್ಕಾಂದಪುರಾಣ, ವಾಮನಪುರಾಣ ಮತ್ತು ವರಾಹಪುರಾಣ ಎಂಬ ಗ್ರಂಥಗಳು ಮುಖ್ಯವಾಗಿವೆ. ಬ್ರಹ್ಮಪುರಾಣ, ಪದ್ಮಪುರಾಣ, ವಿಷ್ಣುಪುರಾಣ, ಶಿವಪುರಾಣ, ಶ್ರೀಮದ್ಭಾಗವತಪುರಾಣ, ನಾರದಪುರಾಣ, ಮಾರ್ಕಂಡೇಯಪುರಾಣ, ಅಗ್ನಿಪುರಾಣ, ಭವಿಷ್ಯ ಪುರಾಣ, ಬ್ರಹ್ಮವೈವರ್ತಪುರಾಣ, ಲಿಂಗಪುರಾಣ, ವರಾಹಪುರಾಣ, ಸ್ಕಂದಪುರಾಣ, ವಾಮನಪುರಾಣ, ಕೂರ್ಮಪುರಾಣ, ಮತ್ಸ್ಯಪುರಾಣ, ಗರುಡಪುರಾಣ, ಮತ್ತು ಬ್ರಹ್ಮಾಂಡ ಪುರಾಣವೆಂಬ ಹದಿನೆಂಟು ಪುರಾಣಗಳಲ್ಲಿ ಮಾರ್ಕಂಡೇಯಪುರಾಣದ ದೇವಿ ಮಹಾತ್ಮ ಎಂಬ ಅಧ್ಯಾಯವು ಮಹಿಷಾಸುರ ಮರ್ಧಿನಿಯ ವೃತ್ತಾಂತವನ್ನು ವಿಸ್ತೃತವಾಗಿ ತಿಳಿಸುತ್ತದೆ. ನಂತರ ರಚಿಸಲಾದ ಇಪ್ಪತ್ತೇಳು ಉಪಪುರಾಣಗಳಲ್ಲಿ ಕಾಲಿಕಾ, ದೇವೀ ಮತ್ತು ಹರಿವಂಶಗಳಲ್ಲಿ ದೇವಿಯ ವಿವಿಧ ರೂಪಗಳೊಂದಿಗೆ ಮಹಿಷಾಸುರ ಮರ್ಧಿನಿಯ ಅವತಾರ ವರ್ಣನೆ, ವೃತ್ತಾಂತವನ್ನು ನೀಡಲಾಗಿದೆ.

ಶಾಕ್ತ ಸಂಪ್ರದಾಯದ ಎಲ್ಲಾ ಸಾಹಿತ್ಯ ಹಾಗೂ ತಂತ್ರಗ್ರಂಥಗಳು ದೇವಿಯನ್ನೇ ಎಲ್ಲಾ ದೇವ ದೇವತೆಗಳಿಗಿಂತ ಅತ್ಯುನ್ನತ ಸ್ಥಾನದಲ್ಲಿ ನಿಲ್ಲಿಸಿ ದೇವಿಯ ಮಹಿಮೆಯನ್ನು ಕೊಂಡಾಡುತ್ತವೆ. ಈ ಗ್ರಂಥಗಳಲ್ಲಿ ಅದ್ವಿತೀಯವೆನಿಸಿರುವ ದೇವೀ ಭಾಗವತದಲ್ಲಿ ದೇವಿಯೇ ಆದಿಶಕ್ತಿಯಾಗಿ ವಿಜೃಂಭಿಸಿದ್ದಾಳೆ. ಅವಳಿಂದಲೇ ಸೃಷ್ಟಿ, ಸ್ಥಿತಿ, ಲಯಗಳು ನಡೆಯುತ್ತವೆ. ನಮ್ಮ ಪ್ರಾಚೀನ ಋಷಿಗಳ ಅನುಭವದ ಪ್ರಕಾರ ಸೃಷ್ಟಿಯ ಆದಿಯಲ್ಲಿ ಒಂದೇ ಒಂದು ಪರಮತತ್ವವಿತ್ತು. ಅದೇ ನಿರ್ಗುಣ, ನಿರ್ವಿಶೇಷ, ನಿರಾಕಾರ ಪರಬ್ರಹ್ಮ. ಪರಬ್ರಹ್ಮನಲ್ಲಿ ಸೃಷ್ಟಿಯ ಇಚ್ಛೆಯು ಉದಯಿಸಿದೊಡನೆ ಬಿಂದು ಎರಡಾಯಿತು. ಪರಬ್ರಹ್ಮನಿಂದ ಪ್ರಕಟವಾದವಳೇ ಆದಿಶಕ್ತಿ. ಅವಳೇ ಈ ಅನಂತಕೋಟಿ ಬ್ರಹ್ಮಾಂಡಗಳಿಗೆ ಕಾರಣಳು, ಪಾಲಕಳು, ಸಂಹಾರಕಳು. ಪರಬ್ರಹ್ಮನನ್ನು ಆಧರಿಸಿದ ಪರಾಶಕ್ತಿಯಿಂದಲೇ ಎಲ್ಲವೂ ನಡೆಯುವುದು. ಪರಾಶಕ್ತಿಯಿಲ್ಲದಿದ್ದರೆ ಉಳಿಯುವುದು ಶೂನ್ಯವೊಂದೇ. (ಅನು. ನಾಗೇಶ ರಂಗೋ ಕುಲಕರ್ಣಿ, ಶ್ರೀವೇದವ್ಯಾಸ ವಿರಚಿತ ಶ್ರೀಮದ್‌ದೇವೀ ಭಾಗವತ, ಪುಟ ೯)

ಮುಂದೆ ಶ್ರೀಮದ್ ದೇವೀ ಭಾಗವತವು ಈ ರೀತಿ ತಿಳಿಸುತ್ತದೆ. ಸೃಷ್ಟಿಯ ಆದಿಯಲ್ಲಿ ಒಬ್ಬಳೇ ದೇವಿಯಿದ್ದಳು. ಅವಳೇ ಈ ಬ್ರಹ್ಮಾಂಡವನ್ನು ಸೃಷ್ಟಿಸಿದಳು. ಆ ಪರಾಶಕ್ತಿಯಿಂದಲೇ ಬ್ರಹ್ಮ, ವಿಷ್ಣು, ರುದ್ರರು ಉತ್ಪನ್ನರಾದರು. ಅವಳಿಂದಲೇ ಮರುದ್ಗಣರು, ಗಂಧರ್ವರು, ಅಪ್ಸರೆಯರು, ಕಿನ್ನರರು ಪ್ರಕಟರಾದರು. ಎಲ್ಲಾ ಭೋಗ್ಯಪದಾರ್ಥಗಳೂ, ಅಂಡಜ, ಸ್ವೇಜ, ಉದ್ಭಿಜ, ಜರಾಯುಜ, ಸ್ಥಾವರ, ಜಂಗಮ, ಮನುಷ್ಯಾದಿ ಪ್ರಾಣಿಮಾತ್ರವೆಲ್ಲವೂ ಆ ಪರಾಶಕ್ತಿಯಿಂದಲೇ ಉದ್ಭವವಾದವು. ಆ ಪರಾಶಕ್ತಿಯು ಸರ್ವಸಾಮರ್ಥ್ಯದಿಂದ ಯುಕ್ತಳಾದವಳೂ ಪ್ರತ್ಯಕ್ಷ ಕಾಣುವವಳೂ ಆಗಿದ್ದಾಳೆ. ಪರಾಶಕ್ತಿಯನ್ನುದ್ದೇಶಿಸಿ ಭಗವಾನ್ ವಿಷ್ಣುವೇ ಈ ರೀತಿ ಹೇಳುತ್ತಾನೆ. "ಬ್ರಹ್ಮನು ಸೃಷ್ಟಿಯನ್ನು ರಚಿಸುತ್ತಾನೆ. ವಿಷ್ಣು ಪಾಲಿಸುತ್ತಾನೆ. ಮತ್ತು ರುದ್ರನು ಸಂಹಾರ ಮಾಡುತ್ತಾನೆ. ಈ ಮಾತು ಲೋಕಪ್ರಸಿದ್ಧವಾದುದು. ಆದರೆ ನಿನ್ನ ಇಚ್ಛೆಯಿಂದಲೇ ನಮ್ಮಲ್ಲಿ ಶಕ್ತಿಯು ಬರುತ್ತದೆ. ಆಗ ನಾವು ಈ ಕಾರ್ಯವನ್ನು ನಿರ್ವಹಿಸುವಲ್ಲಿ ಸಮರ್ಥರಾಗುತ್ತೇವೆ. ಈ ಜಗತ್ತಿನಲ್ಲಿ ಭಗವತಿಯ ಕೃಪೆಯಿಲ್ಲದಿದ್ದರೆ ಜೀವನವು ದುಸ್ಸಾಧ್ಯ. ಅವಳು ನಾನಾರೂಪಗಳಿಂದ, ನಾನಾ ಗುಣಗಳಿಂದ, ನಾನಾ ಶಕ್ತಿಗಳಿಂದ ಈ ಜಗದಲ್ಲಿ ತುಂಬಿಕೊಂಡು ತನ್ನ ಮಾಯೆಯಿಂದ ಈ ಜಗವನ್ನು ತುಂಬಿ ಲೀಲಾಮಯಳಾಗಿ ವಿಹರಿಸುತ್ತಾಳೆ. ಈ ರೀತಿ ಶ್ರೀಮದ್ ದೇವಿ ಭಾಗವತವು ದೇವಿಯ ನಾನಾ ಅವತಾರಗಳನ್ನು ಸಾಕ್ಷೀಭೂತವಾಗಿ ವಿವರಿಸುತ್ತಾ ಪಂಚಮಸ್ಕಂದದಲ್ಲಿ ಮಹಿಷಾಸುರನ ಜನ್ಮವೃತ್ತಾಂತ ಮತ್ತು ಮಹಿಷಾಸುರ ಮರ್ಧಿನಿಯು ಆವಿರ್ಭವಿಸಿದುದನ್ನು ವೃತ್ತಾಂತ ರೂಪದಲ್ಲಿ ನೀಡುತ್ತದೆ.

ಉಪಪುರಾಣವಾದ ಕಾಳಿಕಾಪುರಾಣವೆಂಬ ಗ್ರಂಥವನ್ನು ಆಧರಿಸಿ ಕನ್ನಡದಲ್ಲಿ ಶ್ರೀ ಚಿದಾನಂದ ಗುರುವರ್ಯರ ಶಿಷ್ಯ ಶ್ರೇಷ್ಠರಾದ ಶ್ರೀ ಚಿದಾನಂದಾವದೂತರಿಂದ ರಚಿತವಾದ ಷಟ್ಪದೀ ಕಾವ್ಯ 'ಶ್ರೀ ದೇವಿಮಹಾತ್ಮೆಯೆಂದು ಪ್ರಸಿದ್ಧಿ ಪಡೆದಿದೆ. ಗ್ರಂಥಕರ್ತರು ಇದನ್ನು 'ಪಾರ್ವತೀ ಮಹಾತ್ಮೆ' ಎಂದು ಕರೆದಿದ್ದಾರೆ. ಇದರಲ್ಲಿ ಹದಿನೆಂಟು ಅಧ್ಯಾಯಗಳಿವೆ. ಶ್ರೀ ದುರ್ಗಾಸಪ್ತಶತಿಯಲ್ಲಿದ್ದಂತೆ ಪ್ರಥಮ ಚರಿತ್ರೆ, ದ್ವಿತೀಯ ಚರಿತ್ರೆ ಮತ್ತು ತೃತೀಯ ಚರಿತ್ರೆಗಳಲ್ಲಿ ಈ ಹದಿನೆಂಟು ಅಧ್ಯಾಯಗಳು ಅಡಕವಾಗಿರುತ್ತವೆ. ಇದರಲ್ಲಿ ಮಹಿಷಾಸುರ ಸಂಹಾರವು ಕೇಂದ್ರ ವಸ್ತುವಾಗಿದೆ. ನಾಲ್ಕನೇ ಅಧ್ಯಾಯದಲ್ಲಿ ದೇವಿಯು ಮಹಿಷಾಸುರನ ಸಂಹಾರ ಕಾರಣಕ್ಕಾಗಿ ಆವೀರ್ಭವಿಸುವ ಪ್ರಸಂಗ, ಮಹಿಷಾಸುರನ ಸೈನ್ಯ ಸಂಹಾರದ ವಿವರಗಳಿವೆ. ಐದು, ಆರು ಮತ್ತು ಏಳನೇ ಅಧ್ಯಾಯದಲ್ಲಿ ರಸಿಲೋಮ, ರುದ್ರಗ, ಚಿಕ್ಷುರ ಮತ್ತು ಬಿಡಾಲನ ವಧೆ. ಎಂಟನೆಯ ಅಧ್ಯಾಯವನ್ನು ಮಹಿಷಾಸುರನ ವಧೆಗೆ ಮೀಸಲಿಡಲಾಗಿದೆ. ಇದೇ ರೀತಿ ದೇವಿ ಮಹಾತ್ಮೆಯನ್ನು ಆಧರಿಸಿ ಭಾರತದ ಎಲ್ಲಾ ಮುಖ್ಯ ಭಾಷೆಗಳಲ್ಲಿ ಗದ್ಯ ಮತ್ತು ಪದ್ಯರೂಪಗಳ ಕೃತಿಗಳು ಆಯಾ ಕಾಲದಲ್ಲಿ ಹಸ್ತ ಪ್ರತಿಗಳ ರೂಪದಲ್ಲಿ ಸಾಕಷ್ಟು ಹೊರಬಂದಿವೆ. ಇವುಗಳಲ್ಲಿ ಹಲವು ಸಚಿತ್ರ ಹಸ್ತಪ್ರತಿಗಳಾಗಿದ್ದು ಕೆಲವು ಪ್ರಕಟಗೊಂಡಿವೆ.

ಮಹಿಷಾಸುರ ಮರ್ಧಿನಿಯ ಸಂಪೂರ್ಣ ವೃತ್ತಾಂತವನ್ನು ಮೂರು ಭಾಗಗಳಲ್ಲಿ ಪರಿಕಲ್ಪಿಸಿಕೊಳ್ಳಲು ಸಾಧ್ಯವಿದೆ. ಮೊದಲ ಭಾಗದಲ್ಲಿ ದೇವಿಯು ಮಹಿಷಾಸುರನ ಸಂಹಾರಕ್ಕಾಗಿ ಆವೀರ್ಭವಿಸುವ ಪ್ರಸಂಗ ಎರಡನೆಯ ಭಾಗದಲ್ಲಿ ಮಹಿಷಾಸುರನ ಶಕ್ತಿ ಬಲವರ್ಧನೆ, ಅವನ ದುರುದ್ದೇಶ, ದುರಾಲೋಚನೆ, ಅವನ ಮಹಾಸೇನಾಪತಿಗಳು ದೇವಿಯೊಂದಿಗೆ ಸಮರಕ್ಕಿಳಿದು ಒಬ್ಬಬ್ಬರೇ ನಿರ್ನಾಮವಾಗುವುದು ಇನ್ನು ಕೊನೆಯ ಭಾಗದಲ್ಲಿ ದುರ್ಗೆ, ಚಾಮುಂಡಿಯಾಗಿ ಮಹಿಷಾಸುರನನ್ನು ಎದುರಿಸಿ ಸೆಣಸಾಡಿ ಮಹಿಷಾಸುರನನ್ನು ಸಂಹರಿಸಿ, ಮರ್ಧಿಸಿ 'ಮಹಿಷಾಸುರ ಮರ್ಧಿನಿ'ಯೆಂಬ ರೂಪದಲ್ಲಿ ಪ್ರಕಟಗೊಳ್ಳುವುದು. ನಂತರ ದೇವತೆಗಳ ಪ್ರಾರ್ಥನೆ. ಈ ವಿಷಯಗಳನ್ನೊಳಗೊಂಡ ಮೂಲವೃತ್ತಾಂತವು ಮಾರ್ಕಂಡೇಯ ಪುರಾಣದ ದೇವಿ ಮಹಾತ್ಮೆ ಎಂಬ ಭಾಗದಲ್ಲಿ ಪ್ರಥಮಬಾರಿಗೆ ಬರೆದ ದಾಖಲೆಯನ್ನೂ ಹೊಂದಿದ್ದು ಉಳಿದ ಗ್ರಂಥಗಳು ಅಂದರೆ ಮಹಿಷಾಸುರ ಮರ್ಧಿನಿಯನ್ನು ಕುರಿತಾಗಿ ರಚಿಸಿರುವುದೆಲ್ಲಾ ಸಾಹಿತ್ಯವು ಈ ಮೂಲ ಆಧಾರವನ್ನೇ ಅನುಸರಿಸಿರುವುದರಿಂದ ಇವುಗಳ ನಿವೇದನೆ ನಿರೂಪಣೆಗಳಲ್ಲಿ ಹೆಚ್ಚಿನ ವ್ಯತ್ಯಾಸಗಳೇನು ತೋರುವುದಿಲ್ಲ.

ಆದರೆ ಸ್ಕಾಂದಪುರಾಣ ಮತ್ತು ವರಾಹ ಪುರಾಣಗಳಲ್ಲಿ ಮೊದಲ ಭಾಗದ ಅಂದರೆ ದೇವಿಯು ಮಹಿಷಾಸುರನನ್ನು ಎದುರಿಸುವುದಕ್ಕೆ ಮುಂಚೆ ಇರುವ ಭಾಗವನ್ನು ಸ್ವಲ್ಪ ಭಿನ್ನವಾಗಿ ಚಿತ್ರಿಸಲಾಗಿದೆ. ಸ್ಕಾಂದ ಪುರಾಣದಲ್ಲಿ ದುರ್ಗೆಯು ಕನ್ಯೆಯಾಗಿ ಒಂದು ಸುಂದರ ಪ್ರದೇಶವನ್ನು ಆರಿಸಿಕೊಂಡು ಮಹಾಶಿವನನ್ನು ಕುರಿತು ಘೋರ ತಪಶ್ಚರ್ಯದಲ್ಲಿ ತೊಡಗುತ್ತಾಳೆ. ತನ್ನಿಂದಲೇ ಉದ್ಭವವಾದ ನಾಲ್ಕು ಸ್ತ್ರೀ ರೂಪಗಳನ್ನು ವಟುಕರೆಂದು ಕರೆದು ನಾಲ್ಕೂ ದಿಕ್ಕುಗಳಲ್ಲಿ ಆ ಪ್ರದೇಶವನ್ನು ಕಾಯಲು ನಿಯೋಜಿಸುತ್ತಾಳೆ. ಬೇಸಿಗೆಯಲ್ಲಿ ತನ್ನ ಸುತ್ತ ಬೆಂಕಿಯನ್ನು ನಿರ್ಮಿಸಿ ಮಧ್ಯದಲ್ಲಿ ನಿಂತು ತಪಸ್ಸು ಮಾಡಿದರೆ, ಚಳಿಗಾಲದಲ್ಲಿ ಕುತ್ತಿಗೆಯವರೆಗೂ ನೀರಿನಲ್ಲಿ ನಿಂತು ಹಾಗೂ ಮಳೆಗಾಲದಲ್ಲಿ ಸತತ ಸುರಿಯುವ ಮಳೆಯ ಮಧ್ಯೆ ಅಲುಗಾಡದೆ ನಿಂತು ತಪಸ್ಸುಗೈಯ್ಯುವಳು. ಮೂರು ದಿನಗಳಿಗೆ ಒಮ್ಮೆ ಒಂದು ಹೊತ್ತು ಆಹಾರ ಸೇವಿಸುತ್ತಾ ಕಟುವಾಗಿ ತಪೋ ಮಾರ್ಗವನ್ನು ಪಂಚಾಕ್ಷರೀ ಮಂತ್ರ ಜಪಿಸುತ್ತಾ ಸವಿಸುತ್ತಿದ್ದಳು. ಒಮ್ಮೆ ಈ ಸುಂದರ ಪ್ರದೇಶದ ಮಾರ್ಗದಲ್ಲಿ ಹಾದು ಹೋಗುತ್ತಿದ್ದ ಭಂಟರು ಆ ಪ್ರದೇಶದ ರಮ್ಯತೆಗೆ ಮನಸೋತು ಒಳಗೆ ಪ್ರವೇಶಿಸಲು ವಟುಕರು ತಡೆದು, ಅವರನ್ನು ದೇವಿಯ ಈ ಸೀಮೆಯೊಳಗೆ ಪ್ರವೇಶಿಸುವ ಸಾಹಸ ಮಾಡದೇ ಹೊರಡಿರೆಂದು ಹೇಳಲು, ಆ ಭಂಟರು ಹೋದಂತೆ ಮಾಡಿ ಪಕ್ಷಿಗಳ ರೂಪದಲ್ಲಿ ಒಳಗೆ ದೇವಿಯು ತಪಸ್ಸುಗೈಯ್ಯುತ್ತಿದ್ದ ಜಾಗದಲ್ಲಿ ಬಂದು ನೋಡಿ ಆಕೆಯ ಪ್ರತಿ ಚೆಲುವನ್ನು ತಮ್ಮ ಒಡೆಯನಿಗೆ ನಿವೇದಿಸಿ ಅವಳನ್ನು ಪಡೆಯುವಂತೆ ತಿಳಿಸಲು ವಾಪಸ್ಸು ಹೋಗಿ, ಎಲ್ಲಾ ವಿವರಗಳನ್ನು ತಿಳಿಸಲು ಮಹಿಷಾಸುರನು ಒಬ್ಬ ಮುನಿಯ ವೇಷಧರಿಸಿ ಆಶ್ರಮವನ್ನು ಪ್ರವೇಶಿಸಿ ದುರ್ಗೆಯನ್ನು ನೋಡಿ ತನ್ನ ಮನದಿಂಗಿತ ತಿಳಿಸಿ 'ನೀನು ಗೈಯ್ಯುತ್ತಿರುವ ತಪಸ್ಸಿನ ಫಲ ನಾನೇ ಆಗಿದ್ದೇನೆ ವರಿಸು' ಎಂದು ಹೇಳಲು, ದೇವಿಯು 'ನೀನು ಪರಾಕ್ರಮಿಯಾಗಿದ್ದರೆ ಮೊದಲು ನನ್ನೊಡನೆ ಸಮರಕ್ಕೆ ನಿಲ್ಲು' ಎಂದು ಅವನನ್ನು ಪ್ರೇರೇಪಿಸಿ ಯುದ್ಧ ಮಾಡುತ್ತಾಳೆ, ಸಿಂಹವಾಹಿನಿ ದುರ್ಗೆಯಾಗಿ ಅಸಂಖ್ಯಾದಿ ತೋಳುಗಳಲ್ಲಿ ಆಯುಧಗಳನ್ನು ಧರಿಸಿ ಮಹಿಷಾಸುರನನ್ನು ಸಂಹರಿಸಿ 'ಮಹಿಷಾಸುರ ಮರ್ಧಿನಿ'ಯಾಗುತ್ತಾಳೆ.

ವರಾಹ ಪುರಾಣದಲ್ಲಿ ನೀಡಿರುವ ವಿವರಗಳು ಇದಕ್ಕಿಂತ ಸ್ವಲ್ಪ ಭಿನ್ನವಾಗಿವೆ. ಇಲ್ಲಿ ಮಹಿಷಾಸುರನ ಜನ್ಮ ಮಾಹಿಷ್ಮತಿಯೆಂಬ ಋಷಿ ಕನ್ಯೆಯು ಒಂದು ಸುಂದರವಾದ ಆಶ್ರಮವನ್ನು ತನ್ನ ಅಧೀನಪಡಿಸಿಕೊಳ್ಳಲು ಆ ಆಶ್ರಮದ ಮುನಿಗಳನ್ನು ಓಡಿಸಲು ತನ್ನ ಸಹಚರಿಯರೊಂದಿಗೆ ಮಹಿಷಿಯರ ರೂಪ ತಳೆದು ಪ್ರಯತ್ನಿಸುತ್ತಾರೆ. ಆಗ ಆ ಮುನಿಯು ಅವರಿಗೆ ಅದೇ ರೂಪ ಸ್ಥಿರವಾಗಲೆಂದು ಶಾಪ ನೀಡುತ್ತಾರೆ. ನಂತರ ಶಾಪಪರಿಹಾರವನ್ನು ಮಹೀಷ್ಮತಿಯು ಒಂದು ಮಹಿಷನಿಗೆ ಜನ್ಮವಿತ್ತಾಗ ಆಗುವುದೆಂದು ಮುನಿಯು ತಿಳಿಸುತ್ತಾನೆ. ನರ್ಮದಾ ನದಿಯ ತೀರದಲ್ಲಿ

ಮೇಯುತ್ತಾ ನದಿಯಲ್ಲಿ ಈಜಾಡುತ್ತಾ ಮಾಹಿಷ್ಮತಿ ತನ್ನ ಸಹಚರರೊಂದಿಗೆ ಮಹಿಷಿಯ ರೂಪದಲ್ಲಿ ಜೀವಿಸಿರುತ್ತಾಳೆ. ಒಮ್ಮೆ ಸಿಂಧೂದ್ವೀಪವೆಂಬ ಋಷಿಯು ಅಪ್ಸರೆಯನ್ನು ಬಯಸಿ ಅವಳನ್ನು ಕೂಡ ಬಯಸಲು ಮುಂದಾದಾಗ ಅವಳು ಅಲ್ಲಿಂದ ಹಾರಿ ಹೋಗುತ್ತಾಳೆ. ಅವನ ವೀರ್ಯಾಣು ನರ್ಮದಾ ನದಿಯಲ್ಲಿ ಬಿದ್ದು ಮಾಹಿಷ್ಮತಿ ಅದನ್ನು ಕುಡಿದಾಗ ಅವಳು ಗರ್ಭಧರಿಸುತ್ತಾಳೆ. ನಂತರ ಮಹಿಷಾಸುರನಿಗೆ ಜನ್ಮವಿತ್ತು ಶಾಪದಿಂದ ಮುಕ್ತಳಾಗುತ್ತಾಳೆ. ಅಂತೆಯೇ ಮಂದಾರ ಪರ್ವತದ ಸುಂದರ ತಾಣದಲ್ಲಿ ವೈಷ್ಣವಿಯು ಮಂದರ ಪರ್ವತದಲ್ಲಿ ತಪಸ್ಸನ್ನು ಆಚರಿಸುತ್ತಿದ್ದಾಗ ಅವಳ ಮಗ್ನತೆಗೆ ಕುಂದುಂಟಾದಾಗ ಅವಳ ದೇಹದಿಂದ ನೂರಾರು ಸುಂದರ ಸ್ತ್ರೀಯರು ಹೊರಬಂದರು. ಮತ್ತೆ ವೈಷ್ಣವಿಯು ಕಟುವಾದ ತಪಸ್ಸಿನಲ್ಲಿ ಮಗ್ನಳಾದಳು. ನಾರದನು ದೇವಿಯು ಏಕಾಂಗಿ ಸ್ತ್ರೀ ತನ್ನೊಡನೆ ಸುಂದರ ಬಾಲೆಯರೊಂದಿಗೆ ಮಂದಾರ ಪರ್ವದಲಿ ಬೀಡು ಬಿಟ್ಟಿರುವುದಾಗಿ ಮಹಿಷಸುರನಿಗೆ ಅವಳನ್ನು ಪಡೆದುಕೋ ಎಂದು ತಿಳಿಸುತ್ತಾನೆ. ಹೀಗಾಗಿ ಮಹಿಷಾಸುರನು ದೇವಿಯ ಮುಂದೆ ಯುದ್ಧಕ್ಕೆ ನಿಲ್ಲುತ್ತಾನೆ.

ವಾಮನ ಪುರಾಣದಲ್ಲಿ ದೇವೀ ಮಹಾತ್ಮ್ಯೆಯಂತೆ ದೇವಿಯು ಹರಿಹರ ಬ್ರಹ್ಮಾದಿ ಹಾಗೂ ಇತರ ಎಲ್ಲಾ ದೇವತೆಗಳ ತೇಜಸ್ಸಿನಿಂದ ಹೊರಹೊಮ್ಮಿ ಹತ್ತು ಭುಜಗಳನ್ನು ಪಡೆದು ಎಲ್ಲಾ ದೇವತೆಗಳಿಂದ ದಿವ್ಯಾಸ್ತ್ರಗಳನ್ನು ಪಡೆದ ಸುಂದರ ಕಾತ್ಯಾಯಿನಿ ರೂಪವನ್ನೂ ತಾಳುತ್ತಾಳೆ. ಅವಳನ್ನು ಪಡೆಯಬೇಕೆಂಬ ಬಯಕೆಯಿಂದ ಮಹಿಷಾಸುರ ಚಂಡ ಮುಂಡರನ್ನು ಕಳುಹಿಸುತ್ತಾನೆ. ಕಾತ್ಯಾಯಿನಿಯು ಅವರನ್ನು ತರಿದು ಬಿಸುಡಿ ಚಾಮುಂಡಿಯಾದಳು. ನಂತರ ಅವನನ್ನು ವಧಿಸಿ 'ಮಹಿಷಾಸುರ ಮರ್ಧಿನಿಯಾದಳು.

ಈ ತರಹದ ಹಲವು ವ್ಯತ್ಯಾಸಗಳನ್ನು ಬಿಟ್ಟರೆ ಉಳಿದ ಮುಖ್ಯ ರಚನೆ, ವೃತ್ತಾಂತಗಳಲ್ಲಿ ಅಷ್ಟಾಗಿ ವ್ಯತ್ಯಾಸಗಳು ಕಂಡು ಬರದೆ, ಆಸಕ್ತಿಯುತವಾಗಿ ಮುಂದುವರೆಯುತ್ತದೆ.

ಮಹಿಷಾಸುರನ ಪರಿಕಲ್ಪನೆ

ಮಹಿಷಾಸುರನ ಪೂರ್ವಜರು ದಿತಿಮುನಿಯ ವಂಶಕ್ಕೆ ಸೇರಿದವರು. ದ್ವಿತೀಯ ಪುತ್ರರಾದ ರಂಭ ಮತ್ತು ಕುರುಂಭ ಎಂಬುವರಿಗೆ ಸಂತತಿಯಿಲ್ಲದ ಕಾರಣ ಇಬ್ಬರೂ ಸಂತತಿ ಪ್ರಾಪ್ತಿಗಾಗಿ ಪಂಚಾಗ್ನಿಯ ಮಧ್ಯದಲ್ಲಿ ನಿಂತು ಘೋರ ತಪವನ್ನಾಚರಿಸಿದರು. ಇಂದ್ರನು ಇವರ ತಪಕ್ಕೆ ಅಂಜಿ ಅವರಿಗೆ ಫಲಸಿದ್ಧಿಯಾಗದಿರಲೆಂದು ಅವರೊಡನೆ ಕಾಳಗಮಾಡಿ ಕುರುಂಭನನ್ನು

ಕೊಂದನು. ರಂಭನು ಅಗ್ನಿದೇವನ ಕೃಪೆಗೆ ಪಾತ್ರನಾಗಿ ತ್ರಿಲೋಕ ವಿಜಯಿ ಪುತ್ರನನ್ನು ಪಡೆಯುವಂತೆ ವರವನ್ನು ಪಡೆದನು. ಆದರೆ ಅವನು ಅಂತಹ ಪುತ್ರನನ್ನು ಪಡೆಯಲು ಸನ್ಮಾರ್ಗವನ್ನು ಅನುಸರಿಸದೆ ದುರ್ಮಾರ್ಗಿಯಾಗಿ ಕಾಮಾಂಧನಾಗಿ ಪಶುಭಾವನೆಯಿಂದ ಕೂಡಿದವನಾಗಿ ಪ್ರಾಯದ ಮದವೇರಿ ಬಂದ ಮಹಿಷಿಯನ್ನು ಪಾಶವೀವೃತ್ತಿಯಿಂದ ಸಂಯೋಗ ಹೊಂದಿದನು. ಮಹಿಷಿಯು ಗರ್ಭಧಾರಣೆ ಮಾಡಿತು. ಅದೇ ಸಮಯದಲ್ಲಿ ಇನ್ನೊಂದು ಮಹಿಷವು ಬಂದಿತ್ತು ಅದನ್ನು ಕೊಲ್ಲಲು ರಂಭನು ಶಸ್ತ್ರಧಾರಣೆ ಮಾಡಿ ಬರುವುದರೊಳಗೆ ಮಹಿಷವು ಅವನನ್ನು ಕೊಂಬುಗಳಿಂದ ಇಂದು ಕೊಂದುಹಾಕಿತು. ರಂಭನಿಗೆ ಚಿತಾಸಂಸ್ಕಾರ ಮಾಡುವಾಗ ರಂಭನಿಂದ ಗರ್ಭಧಾರಣೆ ಮಾಡಿದ್ದ ಮಹಿಷಿಯು ಚಿತೆಯನ್ನು ಪ್ರವೇಶಿಸಿತು. ಆ ಅಗ್ನಿಜ್ವಾಲೆಯಿಂದ ಮಹಿಷಿಯ ಗರ್ಭದಲ್ಲಿದ್ದ ಆಕಾರವು ಮಹಿಷಾಸುರನ ರೂಪವನ್ನು ತಳೆದು ಅಗ್ನಿಯಿಂದ ಹೊರಬಂದಿತು ಮತ್ತು ರಂಭನು ರಕ್ತಬೀಜ ಅಸುರನಾಗಿ ಹೊರ ಬಂದನು. ಹೀಗೆ ಮಹಿಷಾಸುರನ ಮೂಲವೇ ಪಾಶವೀವೃತ್ತಿ ಮತ್ತು ಭಯಂಕರ ರೂಪವಾಗಿದ್ದುದರಿಂದ ಮತ್ತು ಮಹಾಶಕ್ತಿಯನ್ನು ಪಡೆದುದರಿಂದ ಅವನಿಗೆ ಮೂರು ಲೋಕಗಳಲ್ಲಿ ಪ್ರತಿಸ್ಪರ್ಧಿಗಳೇ ಇಲ್ಲದಂತಾಯಿತು.

ಇಷ್ಟೇ ಅಲ್ಲದೇ ಬ್ರಹ್ಮನನ್ನು ಕುರಿತು ಘೋರ ತಪವನ್ನಾಚರಿಸಲು ಬ್ರಹ್ಮದೇವನಿಂದ ಪ್ರಬಲವರಗಳನ್ನು ಪಡೆದಿದ್ದನು. ಜಗತ್ತಿನಲ್ಲಿ ಯಾವ ಪುರುಷ ಶಕ್ತಿಯಿಂದಲೂ ಅವನಿಗೆ ಮೃತ್ಯುವುಂಟಾಗುವುದಿಲ್ಲವೆನ್ನುವುದು ಬಹುಮುಖ್ಯವಾದದು. ಇಂತಹ ಹಿನ್ನೆಲೆಯಿರುವಂತಹ ಮಹಿಷಾಸುರನು ಎಲ್ಲಾ ದೇವತೆಗಳಿಗೂ ಪ್ರತಿಸ್ಪರ್ಧಿಯಾಗಿ ದೇವೇಂದ್ರ ಮೊದಲಾದ ಎಲ್ಲಾ ದೇವತೆಗಳನ್ನು ಅವರ ಸ್ಥಾನಗಳಿಂದ ಅಟ್ಟಿ ಭೂಲೋಕ, ಸ್ವರ್ಗಲೋಕ ಮತ್ತು ಪಾತಾಳ ಲೋಕಗಳಿಗೆ ಅಧಿಪತಿಯಾಗಿ ಸೊಕ್ಕಿನಿಂದ ಮೆರೆಯತೊಡಗಿದನು. ದೇವತೆಗಳೊಂದಿಗೆ ಯುದ್ಧಮಾಡುವ ಸಮಯದಲ್ಲಿ ಮಹಿಷಾಸುರನು ಇಂದ್ರ, ಯಮ ಮುಂತಾದ ದೇವತೆಗಳನ್ನು ಎದುರಿಸಲು ಚಿಕ್ಷುಕ, ಬಿಡಾಲ ಮತ್ತು ತಾಮ್ರನೆಂಬ ತನ್ನ ಸೇನಾಪತಿಗಳನ್ನು ಕಳುಹಿಸಿದನು. ದೇವತೆಗಳ ಆಯುಧ ಪ್ರಹಾರಗಳನ್ನು ಎದುರಿಸಲು ಸಾಧ್ಯವಾಗದೆ ಇವರೆಲ್ಲರೂ ಮೂರ್ಛೆ ಹೊಂದಿದಾಗ ಮಹಿಷಾಸುರನು ತಾನೇ ಬಂದು ಸಾವಿರಾರು ಮಾಯಾ ಮಹಿಷಾಸುರರನ್ನು ಸೃಷ್ಟಿಸಿ ಕಾಳಗಕ್ಕೆ ಬಿಟ್ಟನು. ವಿಷ್ಣುವು ತನ್ನ ಸುದರ್ಶನ ಚಕ್ರದಿಂದ ಎಲ್ಲಾ ಮಾಯಾ ಮಹಿಷಾಸುರರನ್ನೆಲ್ಲಾ ಕೊನೆಗೊಳಿಸಿದನು. ನಂತರ ಭಯಂಕರ ಸೇನೆಯೊಂದಿಗೆ ಮಹಿಷಾಸುರನು ಇಂದ್ರನ ಮೇಲೆ ದಿಗ್ವಿಜಯ ಸಾಧಿಸಿ ದೇವತೆಗಳನ್ನೆಲ್ಲಾ ಅವರ ಲೋಕಗಳಿಂದ ಅಟ್ಟಿದನು. ಯಾವ ಪುರುಷ ದೇವತೆಗಳೂ ಅವನಿಗೆ ಸರಿಸಮನಾಗಿ ನಿಲ್ಲಲು ಸಾಧ್ಯವಾಗದಾಯಿತು.

ದೇವಿಯು ಮಹಿಷಾಸುರ ಮರ್ಧಿನಿಯ ರೂಪದಲ್ಲಿ ಆವಿರ್ಭವಿಸಿದ ಪರಿಕಲ್ಪನೆ

ಮೂರು ಲೋಕಗಳಲ್ಲೂ ಮಹಿಷಾಸುರ ಮತ್ತು ಅವನ ಸಹಚರರಾದ ಅಸುರರ ಬಾಧೆ, ಉಪಟಳಗಳು ತಾಳದಾಯಿತು. ಇಂದ್ರಾದಿ ದೇವತೆಗಳು, ಅಷ್ಟದಿಕ್ಪಾಲಕರು, ಗಂಧರ್ವ, ಕಿನ್ನರರು, ಸಿದ್ಧರು, ಚಾರಣರು, ಋಷಿಮುನಿಗಳು, ಸಾತ್ವಿಕಜನ, ಸಾಧಕರಾದಿಯಾಗಿ ಎಲ್ಲರೂ ಶಿವ ಮತ್ತು ಬ್ರಹ್ಮನನ್ನು ತಮಗೆ ದಾರಿ ತೋರಲು ಪ್ರಾರ್ಥಿಸಿದರು. ಬ್ರಹ್ಮ ಮತ್ತು ಶಿವನ ಮುಂದಾಳತ್ವದಲ್ಲಿ ಎಲ್ಲರೂ ವಿಷ್ಣುವನ್ನು ಪ್ರಾರ್ಥಿಸಲು ವೈಕುಂಠಕ್ಕೆ ಬಂದು ಮಹಿಷಾಸುರನು ತಮ್ಮೆಲ್ಲರನ್ನೂ ಹಿಯ್ಯಾಳಿಸಿದ ರೀತಿಯನ್ನು ವಿವರಿಸಿದರು. ದೇವತೆಗಳ ದೂರನ್ನು ಕೇಳುತ್ತಿದ್ದಂತೆ ಮಹಾವಿಷ್ಣುವು ಕೋಪಾವಿಷ್ಟನಾದಾಗ ಕಣ್ಣುಗಳಿಂದ ಕಿಡಿಹಾರಿತು, ಅವನ ಮುಖದಿಂದ ಅಗ್ನಿಯಂತಹ ತೇಜಸ್ಸು ಹುಟ್ಟಿತು. ಆ ಕ್ಷಣವೇ ಬ್ರಹ್ಮನ ಮುಖದಿಂದಲೂ ಕೋಪದ ಜ್ವಾಲೆ ತೇಜಸ್ಸು ಹೊರಟಿತು. ಶಿವನ ಮುಖವೂ ಕೋಪದಿಂದ ಜ್ವಾಲಾಮಯವಾಯಿತು. ಇಂದ್ರ, ಯಮ, ಅಗ್ನಿ, ವರುಣರೆಲ್ಲರ ಮುಖಗಳಲ್ಲಿ ಕೋಪದ ತೇಜಸ್ಸು ಹುಟ್ಟಿತು. ಇಷ್ಟೇ ಅಲ್ಲದೇ ಸರ್ವಸನಕಾದಿಗಳ, ಪ್ರಮಥರ, ಸರ್ವಭೂತಗಳ, ಕ್ಷೇತ್ರಗಳ, ಋಷಿಗಳ, ಸಿದ್ಧರ, ಸುರರ ಹಾಗೂ ಸರ್ವರ ದೇಹಗಳಲ್ಲಿನ ತೇಜಸ್ಸು ಹೊರ ಬಂದು ಒಂದು ತೇಜಃ ಪುಂಜವಾದ ಪರ್ವತದ ಆಕಾರದಲ್ಲಿ ಝುಗಿಝುಗಿಸುತ್ತಾ ನಿಂತಿತು. (ಅನು. ಕುಮುದ ಪ್ರಿಯ ಶ್ರೀ ಕಾಳಿಕಾ ಪುರಾಣವೆಂಬ ವಚನ ಶ್ರೀ ದೇವೀ ಮಹಾತ್ಮೆ, ಪುಟ ೩೭ ಮತ್ತು ೩೮)

ಇಂತಹ ತೇಜೋಮಯರಾಶಿಯಿಂದ ಆವಿರ್ಭವಿಸಿದ ಆಕಾರವು ಥಳಥಳನೆ ಹೊಳೆಯುವಂತಹ ಒಂದು ಸ್ತ್ರೀ ರೂಪವನ್ನು ಪಡೆಯಿತು. ಸಮರದೇವತೆಯಾಗಿ ಕ್ರಿಯಾಶಕ್ತಿಯಾಗಲು ಯಾವ ಯಾವ ದೇವತೆಗಳು ತಮ್ಮ ಆಯುಧ ಮತ್ತು ಆಭರಣಗಳನ್ನೂ ನೀಡಿ ಹೇಗೆ ಕೃತಾರ್ಥರಾದರು ಎಂಬುದನ್ನು ದೇವೀ ಮಹಾತ್ಮೆ ಮತ್ತು ದೇವೀ ಭಾಗವತ ಗ್ರಂಥಗಳು ತಿಳಿಸುತ್ತವೆ.

ಶಿವನಿಂದ ಹೊರಹೊಮ್ಮಿದ ತೇಜಸ್ಸು ಆಕೆಯ ಕೇಶವಾದರೆ, ಮಹಾವಿಷ್ಣುವಿನ ತೇಜಸ್ಸು ಆಕೆಯ ಅನೇಕ ಭುಜಗಳಾದವು. ಕುಬೇರನ ತೇಜಸ್ಸು ಆಕೆಯ ಮೂಗಾಯಿತು, ಸೂರ್ಯ, ಚಂದ್ರ ಮತ್ತು ಅಗ್ನಿ ಇವರ ತೇಜಸ್ಸು ತ್ರಿನೇತ್ರಗಳಾದವು. ಬ್ರಹ್ಮನ ತೇಜಸ್ಸು ಆಕೆಯ ಬಾಯಿ ಹಲ್ಲುಗಳಾದವು, ಯಮನ ತೇಜಸ್ಸು ಹುಬ್ಬುಗಳಾದವು, ನಿರ್ಮಲವಾದ ವಾಯುವಿನ ತೇಜಸ್ಸು ಕಿವಿಗಳಾದವು, ಇಂದ್ರನ ತೇಜಸ್ಸು ಆಕೆಯ ಕಟಿಯಾಯಿತು, ಬುಧನ ತೇಜಸ್ಸು ದೇವಿಯ ಸ್ತನವಾಯಿತು, ವರುಣನ ತೇಜಸ್ಸು ಜಂಘೆಗಳಾದವು, ಬ್ರಹ್ಮನಿಂದ ಬಂದ ಅಧಿಕ ತೇಜಸ್ಸು

ಪಾದಗಳಾದವು, ಕುಜನ ತೇಜದಿಂದ ನಿತಂಬವಾಯಿತು, ಅಷ್ಟವಸುಗಳ ತೇಜಸ್ಸಿನಿಂದ ದೇವಿಯ ಕೈಬೆರಳುಗಳಾದವು. ಹೀಗೆ ದೇವತೆಗಳ ತೇಜಸ್ಸಿನಿಂದ ದೇವಿಯ ಅವಯವಗಳು ರೂಪಗೊಂಡು ಸರ್ವಾಂಗ ಸುಂದರಳಾಗಿ ಝಗಝಗಿಸುತ್ತಿತ್ತು ದೇವಿಯ ಮೂರ್ತಿ.

ನಿರ್ಗುಣ, ನಿರಾಕಾರ ದೇವಿಯು ಸರ್ವರ ಆತ್ಮಜ್ಯೋತಿ ತೇಜಸ್ಸುಗಳಿಂದ ದಿವ್ಯ ಅಂಗಾಂಗಳನ್ನು ಪಡೆದು ಸಾಕಾರ ರೂಪಜ್ಯೋತಿರ್ಗಮಯಳಾದಳು. ಈಗ ವಿವಿಧ ಆಭರಣ ಮತ್ತು ಆಯುಧಗಳಿಂದ ಹೇಗೆ ಶೋಭಾಯಮಾನಳಾದಳೆಂದು ದೇವೀ ಮಹಾತ್ಮೆಯಾದಿಯಾಗಿ ಎಲ್ಲಾ ಗ್ರಂಥಗಳು ಉಲ್ಲೇಖಿಸುತ್ತವೆ. ಮೊದಲು ಶಿವನು ತನ್ನ ಚಂದ್ರಹಾರವನ್ನೂ, ಪಾಶುಪತಾಸ್ತ್ರವನ್ನೂ, ಡಮರುಗ, ಶೂಲಛಕ್ಕೆಯನ್ನು ದೇವಿಗೆ ಕೊಟ್ಟನು. ಮಹಾವಿಷ್ಣುವು ಶಂಖ, ಚಕ್ರ ಗದೆಗಳನ್ನು ಕೊಟ್ಟು ಬಲವೃದ್ಧಿಸಿದನು. ವರುಣನು ಪಾಶುವನ್ನೂ, ಅಗ್ನಿಯು ಶಕ್ತಿಯನ್ನೂ, ವಾಯುದೇವನು ಅದ್ಭುತವಾದ ಧನಸ್ಸನ್ನೂ, ಮರುತನು ಬಿಲ್ಲು ಬಾಣಗಳನ್ನು, ಇಂದ್ರನು ವಜ್ರಾಯುಧವನ್ನೂ, ಯಮನು ಹಲಗೆ, ಖಡ್ಗ, ದಂಡಾಯುಧಗಳನ್ನೂ, ಬ್ರಹ್ಮನು ಅಕ್ಷಮಾಲೆ, ಕಮಂಡಲವನ್ನೂ ಭಕ್ತಿಯಿಂದ ನಮಸ್ಕರಿಸಿ ಕೊಟ್ಟರು. ನಿರುತಿಯು ಕುಂತವನ್ನೂ, ಕುಬೇರನು ಭಯಂಕರವಾದ ಖಡ್ಗವನ್ನೂ, ಶ್ರೇಷ್ಠವಾದ ಪಾತ್ರೆಯನ್ನೂ ಸೂರ್ಯನು ಚಕ್ರವನ್ನೂ, ಇಂದ್ರನು ಜಗತ್ತೇ ಬಿರಿಯುವಂತೆ ಧ್ವನಿಮಾಡುವ ಐರಾವತದ ಘಂಟೆಯನ್ನೂ, ವಿಶ್ವಕರ್ಮನು ಗಂಡುಗೊಡಲಿಯನ್ನೂ ಕೊಟ್ಟರು. ಇಷ್ಟೆಲ್ಲಾ ಆಯುಧಗಳನ್ನು ದೇವಿಯು ಮಹಿಷಾಸುರ ವಧೆಗಾಗಿ ತನ್ನ ಅಸಂಖ್ಯಾತ ಭುಜಗಳಲ್ಲಿ ತೊಟ್ಟು ಸನ್ನದ್ಧಳಾಗುವ ಪ್ರಸಂಗವು ಈ ಕಥಾನಕದಲ್ಲಿ ಮುಖ್ಯವಾಗುತ್ತದೆ.

ತೇಜೋಮಯಳಾಗಿ ದಿವ್ಯ ಅಸ್ತ್ರಾಸ್ತ್ರಗಳನ್ನು ತೊಟ್ಟು ನಿಂತ ದೇವಿಯನ್ನು ಸರ್ವಾಲಂಕಾರ ಭೂಷಿತೆಯನ್ನಾಗಿ ಮಾಡಲು ಎಲ್ಲಾ ದೇವತೆಗಳು ತಮ್ಮ ತಮ್ಮ ಕಡೆಯಿಂದ ದಿವ್ಯಾಭರಣಗಳನ್ನು ದೇವಿಗೆ ನೀಡುತ್ತಾರೆ. ಮಹಾವಿಷ್ಣುವು ಪೀತಾಂಬರವನ್ನು ಕೊಟ್ಟನು. ಶಿವನು ವ್ಯಾಘ್ರಾಜಿನ (ಹುಲಿಧರ್ಮ) ವನ್ನು ಕೊಟ್ಟನು. ಬ್ರಹ್ಮನು ಮುತ್ತಿನ ಹಾರವನ್ನೂ, ಮಣಿ ಖಚಿತವಾದ ಭೂಷಣಾದಿಗಳನ್ನು ಕೊಟ್ಟನು. ಶಿವನು ಮತ್ತೆ ತನ್ನ ಅರ್ಧಚಂದ್ರವನ್ನೂ ಸರ್ಪಭೂಷಣವನ್ನೂ ಕೊಟ್ಟನು. ವಿಷ್ಣುವು ದೇವಿಗೆ ಕೌಸ್ತುಭ ಮಣಿಯನ್ನು ನೀಡಿದನು. ಕ್ಷೀರಸಮುದ್ರದೇವನು ದಿವ್ಯವಸ್ತ್ರವನ್ನೂ, ಚೂಡಾಮಣಿ ಮತ್ತು ಕುಂಡಲಗಳನ್ನು ಅರ್ಪಿಸಿದನು. ವಿಶ್ವಕರ್ಮನು ಕೇಯೂರಗಳನ್ನೂ, ಕಂಕಣಗಳನ್ನೂ ಕೊಟ್ಟನು, ತ್ವಷ್ಟ್ರನು ಕಂಠಹಾರವನ್ನೂ ಉಂಗುರಗಳನ್ನೂ ಕೊಟ್ಟನು. ವರುಣನು ಎಂದೂ ಬಾಡದ ಕಮಲಮಾಲೆಯನ್ನೂ, ವೈಜಯಂತೀಹಾರವನ್ನೂ

ಸಮರ್ಪಿಸಿದನು. ಹಿಮವಂತನು ಬಲಿಷ್ಠವಾದ ಸಿಂಹವನ್ನೂ ಕೊಟ್ಟನು. ಅನಂತರ ನಾಗಾದಿಗಳು ನಾನಾರತ್ನಗಳನ್ನಿತ್ತು ಆಕೆಯನ್ನು ಪರಿಮಳ, ಗಂಧ, ಹೂಮಾಲೆಗಳಿಂದ ಅಲಂಕರಿಸಿದರು. ಸಮಸ್ತ ದೇವತೆಗಳೂ ಯಜ್ಞೋಪವೀತವನ್ನು ಹಾಕಿ. ಶೇಷಪಣಿಗೆ ಅಕ್ಷತೆಯನ್ನಿಟ್ಟು ಜೈಕಾರ ಮಾಡಿದರು. ದೇವಿಯು ದೇಹದಲ್ಲಿ ನಾನಾ ಆಯುಧಗಳೂ, ರತ್ನ ವಜ್ರ ಆಭರಣಗಳೂ ಶೋಭಿಸಿ ಆಕೆಯ ರೋಮ ರೋಮಗಳಲ್ಲೂ ಸೂರ್ಯನು ತನ್ನ ಪ್ರಕಾಶವನ್ನು ಬೀರಿದನು.

ಸಮಸ್ತ ದೇವತೆಗಳೆಲ್ಲರೂ ಒಕ್ಕೊರಲಿನಿಂದ ದೇವಿಯನ್ನು ಪ್ರಾರ್ಥಿಸಿದರು. ಶಿವೇ, ಕಲ್ಯಾಣಿ, ರುದ್ರಾಣೀ, ಕಾಲರಾತ್ರಿ, ಇಂದ್ರಾಣಿ, ಸಿದ್ಧಿ, ಬುದ್ಧಿ, ವೈಷ್ಣವೀ, ಭಗವತೀ ಜಗದಂಬೇ, ನಿನಗೆ ಅನಂತ ಪ್ರಣಾಮಗಳು. ನೀನು ಸೃಷ್ಟಿ. ಸ್ಥಿತಿ. ಲಯಾದಿಗಳಿಗೆ ಕಾರಣಳಾಗಿರುವೆ. ನೀನು ಈ ಸೃಷ್ಟಿಯಲ್ಲೆಲ್ಲಾ ವ್ಯಾಪಿಸಿರುವೆ. ನಾವು ಮಹಿಷಾಸುರ ದಾನವನಿಂದ ಗಂಡಾಂತರಕ್ಕೆ ಒಳಗಾಗಿರುವೆವು. ನಮ್ಮನ್ನು ನೀನೇ ಪಾರು ಮಾಡಬೇಕು. ಈ ಜಗತ್ತಿನಲ್ಲಿ ಆ ದುಷ್ಟ ದಾನವನನ್ನು ನಾಶಮಾಡುವ ಸಾಮರ್ಥ್ಯವು ನಿನ್ನ ಹೊರತು ಯಾರಲ್ಲಿಯೂ ಇಲ್ಲ. ನಿನ್ನಿಂದಲೇ ದೇವತೆಗಳ ಉದ್ಧಾರವಾಗಬೇಕಾಗಿದೆ. ಮಹಾದೇವಿ! ನೀನು ನಮ್ಮೆಲ್ಲರ ಮೇಲೆ ಕೃಪೆ ಮಾಡಬೇಕು' ಎಂದು ಸ್ತುತಿ ಮಾಡಿ ದಿವ್ಯಾರತಿಯನ್ನು ದೇವಿಗೆ ಮಾಡಿದರು. (ಶ್ರೀಮದ್ ದೇವೀ ಭಾಗವತ, ಪುಟ. ೮೧)

ಮಹಿಷಾಸುರನೊಡನೆ ಸಮರ

ಮಹಾದೇವಿಯು ಈ ರೀತಿ ರೂಪಧಾರಣ ಮಾಡಿದ ಪ್ರಸಂಗವು ಮಹಿಷಾಸುರ ಮರ್ಧಿನಿಯ ಅವತಾರವನ್ನು ಎತ್ತಿದ ರೀತಿಯ ಸ್ಪಷ್ಟ ಚಿತ್ರಣವನ್ನು ನೀಡುತ್ತದೆ. ಮಹಿಷಾಸುರನ ವಧೆಗಾಗಿಯೇ ಆವೀರ್ಭವಿಸಿದ ರೂಪವಿದಾಗಿದೆ. ಸಮರ ಸಾರಿ ಮಹಿಷಾಸುರನ ಬೃಹತ್ ಸೈನ್ಯ ಬಲವನ್ನು ಬಡಿದು ಬಗ್ಗಿಸಲು ದೇವಿಯು ತೋರುವ ರಣನೀತಿ, ಯುದ್ಧ ವೈಖರಿಯು ದೇವೀ ಮಹಾತ್ಮ್ಯ ಕಥಾನಕದ ಕೇಂದ್ರ ಬಿಂದುವಾಗಿದೆ. ದೇವಿಯನ್ನು ಹುರಿದುಂಬಿಸಲು ದುಂದುಭಿಗಳು ಭೋರ್ಗರೆದವು. ಸಹಸ್ರಾರು ಧನಸ್ಸುಗಳನ್ನು ಹೆಗಲಿಗೇರಿಸಿ ದೇವಿಯು ಬಾಣಗಳನ್ನು ಹೆದೆಗೇರಿಸಿ ಬಿಡತೊಡಗಿದಳು. ಆಧನಸ್ಸಿನ ಠೇಂಕಾರ ಬ್ರಹ್ಮಾಂಡದಲ್ಲೆಲ್ಲಾ ಭಯಂಕರ ಶಬ್ದದೊಡನೆ ಮೊಳಗಿತು.

ಮಹಿಷಾಸುರನಿಗೆ ಈ ಭಯಂಕರ ಶಬ್ದವು ಒಂದು ರೀತಿಯ ಭೀತಿ ಹುಟ್ಟಿಸಿತು. ತನ್ನೆಲ್ಲಾ ಅಸುರ ಸೈನ್ಯವನ್ನು ಒಟ್ಟುಗೂಡಿಸಿ ತನ್ನ ಮಹಾಸೇನಾಪತಿಗಳ ನೇತೃತ್ವದಲ್ಲಿ ವಿವಿಧ ಪಂಗಡಗಳನ್ನು ಮಾಡಿ ಒಂದೊಂದೇ ಗುಂಪನ್ನು ದೇವಿಯ ಮೇಲೆ ಎರಗುವಂತೆ ರಣನೀತಿಯನ್ನು

ರೂಪಿಸಿದನು. ತನ್ನ ಒಬ್ಬ ನಂಬಿಕಸ್ಥ ಮಂತ್ರಿಯನ್ನು ದೇವಿಯ ಬಳಿಗೆ ಕಳುಹಿಸಿದನು. ಆ ಮಂತ್ರಿಯು ದೇವಿಯನ್ನು ನೋಡಿ ಅಂಜಿದರೂ ತನ್ನ ಸ್ವಾಮಿನಿಷ್ಠೆಯನ್ನು ದೇವಿಯ ಮುಂದೆ ತೋರುವ ಸಾಹಸವನ್ನು ಮಾಡಿದನು. ತನ್ನ ಒಡೆಯನ ಪೌರುಷ, ಶೂರತ್ವವನ್ನು ದೇವಿಯ ಮುಂದೆ ವರ್ಣಿಸಿ 'ದೇವಿ ನೀನು ಯಾರು? ದೇವತೆಗಳ ಸೈನ್ಯದಲ್ಲಿ ಪ್ರವೇಶಿಸಿದ ಉದ್ದೇಶವೇನು? ನನ್ನ ಒಡೆಯನಿಗೆ ನೀನು ಪಟ್ಟದ ರಾಣಿಯಾಗು' ಎಂದು ಹೇಳಿದನು. ಜಗದಂಬೆಯು ಕೋಪಾವಿಷ್ಟಳಾದೊಡನೆ ಪ್ರಪಂಚವೇ ನಡುಗಿತು. ಅವಳ ಉತ್ತರವು ಈ ರೀತಿಯಿತ್ತು. 'ನಾನು ಈ ಎಲ್ಲಾ ದೇವತೆಗಳ ಜನನಿಯು, ಎಲ್ಲಾ ದಾನವರನ್ನೂ ಸಂಹರಿಸಿ, ದೇವತೆಗಳ ಸಂಕಟ ನಿವಾರಣೆ ಮಾಡಬೇಕೆಂದು ಇಲ್ಲಿಗೆ ಬಂದಿರುವೆನು. ನಿನ್ನ ಸ್ವಾಮಿಯು ಜೀವವನ್ನು ಉಳಿಸಿಕೊಳ್ಳಬೇಕಾದರೆ, ಈಗಲೇ ದೇವಲೋಕವನ್ನು ತ್ಯಜಿಸಿ ಪಾತಾಳಕ್ಕೆ ಹೋಗಬೇಕು. ಸಂಗ್ರಾಮವನ್ನು ಅಪೇಕ್ಷಿಸುತ್ತಿದ್ದರೆ ಅದಿನ್ನೂ ಒಳಿತು. ಬ್ರಹ್ಮದೇವನ ವರವನ್ನು ಸತ್ಯಮಾಡುವುದಕ್ಕಾಗಿ ನಿರ್ಗುಣ, ನಿರಾಕಾರಳಾದ ನಾನು ಸ್ತ್ರೀ ರೂಪವನ್ನು ಧರಿಸಿಕೊಂಡು ಬಂದಿರುವೆನು. ಈ ಸಮರಭೂಮಿಯಲ್ಲಿ ಮಹಿಷಾಸುರನನ್ನು ಒಳಗೊಂಡು ಎಲ್ಲಾ ದಾನವಕುಲವನ್ನು ವಿಧ್ವಂಸಗೊಳಿಸಲು ನಿರ್ಧಾರ ಮಾಡಿರುವೆನು. ನಿನ್ನ ಸ್ವಾಮಿಯು ಮಹಿಷಿಯ ಪುತ್ರನಿರುವುದರಿಂದ ತನ್ನ ಕುಲಕ್ಕನುಗುಣವಾಗಿ ಪಶುವೃತ್ತಿಯಿಂದ ನಡೆಯುವವನಿದ್ದಾನೆ. ನೀನು ಅವನ ಮಂತ್ರಿಯಾಗಿರುವುದರಿಂದ ಅದೇ ಸ್ವಭಾವದವನಿದ್ದಂತೆ ತೋರುತ್ತೀಯೆ. ಅವನಿಗೆ ಪ್ರಾರಬ್ಧವು ಪ್ರತಿಕೂಲವಾಗಿರುವುದು. ಇಂತಹ ಸಮಯದಲ್ಲಿ ಹುಲ್ಲು ಕಡ್ಡಿಯೂ ಸಹ ವಜ್ರಾಯುಧದಂತೆ ಅಪ್ರತಿಹತ ಶಕ್ತಿಯನ್ನು ಹೊಂದುವುದು. ದೈವವು ನಿನ್ನೊಡೆಯನಿಗೆ ಎಂತಹ ಮೃತ್ಯುವು ಒದಗಬೇಕೆಂದು ಸಂಕಲ್ಪಿಸಿರುವುದೋ ಅಂತಹ ಮೃತ್ಯುವು ಅವನಿಗೆ ಅನಿವಾರ್ಯ, ನೀವೆಲ್ಲಾ ದಾನವರು ರಸಾತಲಕ್ಕೆ ಹೊರಟುಹೋಗಿ ಜೀವನವನ್ನು ಜತನಮಾಡಿಕೊಳ್ಳಿರಿ. ಇದಕ್ಕೆ ವಿಪರೀತವಾಗಿ ಸಂಗ್ರಾಮಕ್ಕೆ ಅಣಿಯಾದರೆ ನೀವೆಲ್ಲರೂ ನಾಶಹೊಂದುವಿರಿ ಎಂದು ಗರ್ಜಿಸಿದಳು. (ಶ್ರೀಮಹಾದೇವಿ ಭಾಗವತ. ಪುಟ–೮೩)

ಮಹಿಷಾಸುರನ ಸೈನ್ಯಬಲ ಸಂಹಾರ

ಭಗವತೀ ಭವಾನಿಯು ಈ ರೀತಿ ಹೇಳಿದ ಕೂಡಲೇ ಮಂತ್ರಿಯು ಮಹಿಷಾಸುರನ ಬಳಿಗೆ ಬಂದು ದೇವಿಯು ಹೇಳಿದ ಮಾತುಗಳನ್ನು ತಿಳಿಸಿದನು. ಹಾಗೆಯೇ ಅವಳ ಸೌಂದರ್ಯ ಹಾಗೂ ಭೀತಿಹುಟ್ಟಿಸುವ ಅವಳ ನಿಲುವು ವೈಖರಿಯನ್ನು ವರ್ಣಿಸಿ, ಸಂಗ್ರಾಮಕ್ಕೆ ಸಿದ್ಧವಾಗಬೇಕು ಇಲ್ಲವೇ ರಸಾತಳಕ್ಕೆ ಪಲಾಯನ ಮಾಡಬೇಕೆಂದು ವಿವರಿಸಿದನು. ಆಗ ಕುಪಿತನಾದ

ಮಹಿಷಾಸುರನು ತನ್ನ ಶೂರ ಸೇನಾಪತಿಗಳಾದ ವಿರೂಪಾಕ್ಷ, ದುರ್ಧರ್ಷ, ತಾಮ್ರ ಮೊದಲಾದವರನ್ನು ಕರೆಯಿಸಿ ರೂಪವತಿಯಾದ ದೇವಿಯನ್ನು ಸರ್ಪರಜ್ಜುವಿನಿಂದ ಬಂಧಿಸಿ ತರಲು ಆಜ್ಞಾಪಿಸಿದನು. ದೈವಸಂಕಲ್ಪವನ್ನು ಮೀರಲು ಯಾರಿಗೂ ಸಾಧ್ಯವಿಲ್ಲವೆಂದು ತಿಳಿಸುತ್ತಾ ತಾಮ್ರನು ತಾನು ದೇವಿಯ ಮನ ಒಲಿಸಿ ಕರೆತರುವುದಾಗಿ ಸೂಚಿಸಿ ಹೊರಟನು. ಸಮರ ಭೂಮಿಯಲ್ಲಿ ಸಿದ್ಧಳಾಗಿ ನಿಂತಿದ್ದ ದೇವಿಯನ್ನು ಕಂಡು ಮೃತ್ಯುಸೂಚನೆ ಅನುಭವಿಸಿದರೂ ಅವಳನ್ನು ತನ್ನ ಸ್ವಾಮಿಯ ಒಳಿತಿಗಾಗಿ ಹೀಗೆ ಪ್ರಾರ್ಥಿಸತೊಡಗಿದನು. 'ದೈತ್ಯರ ರಾಜನಾದ ಮಹಿಷಾಸುರನು ನಿನ್ನ ರೂಪಗುಣಗಳಿಗೆ ಮುಗ್ಧನಾಗಿ ತನ್ನನ್ನೇ ಅರ್ಪಿಸಿಕೊಂಡಿದ್ದಾನೆ. ಅವನು ದೇವತೆಗಳಿಗೆ ಅಜೇಯನಾಗಿರುವನು. ಅವನನ್ನು ಪತಿರೂಪದಲ್ಲಿ ಪರಿಗ್ರಹಿಸಿ ಆನಂದದಿಂದ ಬದುಕುವ ಅವಕಾಶವನ್ನು ವ್ಯರ್ಥಮಾಡಿಕೊಳ್ಳಬೇಡ. ಇಷ್ಟೆಲ್ಲಾ ಶಸ್ತ್ರಾಸ್ತ್ರಗಳ ಅವಶ್ಯಕತೆಯು ನಿನಗೆ ಇರುವುದಿಲ್ಲ. ಸಂಸಾರದಲ್ಲಿ ಸಂಗ್ರಾಮವು ದುಃಖಕ್ಕೆ ಮೂಲವಾಗಿವೆ. ಎಲ್ಲ ದೇವತೆಗಳೂ ದಾನವರೂ ನಮ್ಮ ಮಹಾರಾಜನಿಗೆ ಸನ್ಮಾನ ಮಾಡುತ್ತಿರುವರು. ನೀನು ಅವನನ್ನು ಸ್ವಾಮಿಯಾಗಿ ಸ್ವೀಕರಿಸಿ ನಿನ್ನ ಮನೋರಥವನ್ನು ಪೂರ್ಣಗೊಳಿಸಿಕೋ. ನೀನು ನಮ್ಮ ಮಹಾರಾಜನ ಪಟ್ಟದ ರಾಣಿಯಾಗಿ ಬಹುಕಾಲದವರೆಗೆ ಸೌಖ್ಯವನ್ನನುಭವಿಸು' ಎಂದನು.

ತಾಮ್ರ ಸೇನಾಪತಿಯ ಮಾತುಗಳನ್ನು ಕೇಳಿದ ದೇವಿಯು ಅತ್ಯಂತ ಕೋಪಾವಿಷ್ಟಳಾಗಿ 'ತಾಮ್ರಾ, ನಿನ್ನ ಒಡೆಯನ ಜನ್ಮದಾತೆಯು ಮಹಿಷಿಯು, ಆದುದರಿಂದ ಅವನಲ್ಲಿ ಪಶುವೃತ್ತಿ ನೆಲೆಗೊಂಡಿದೆ. ನಾನು ಬ್ರಹ್ಮ, ವಿಷ್ಣು, ಮಹೇಶ್ವರನನ್ನು ಸಹ ಪತಿಯನ್ನಾಗಿ ಸ್ವೀಕರಿಸಲು ಒಪ್ಪುವುದಿಲ್ಲ. ನಾನು ಪತಿಯನ್ನು ಹೊಂದುವ ಸ್ತ್ರೀಯಲ್ಲ. ನಿರ್ಗುಣ, ನಿರ್ಮಮ, ನಿರಾವಲಂಬ, ಸರ್ವಜ್ಞ, ಪೂರ್ಣ, ಕಲ್ಯಾಣ ಸ್ವರೂಪ ಶ್ರೀ ವಿಗ್ರಹವು ಸರ್ವತ್ರ ವಿರಾಜಮಾನವಾಗಿದೆ. ಅಂತಹ ಚಿಚ್ಛಯ ಪರಮೇಷ್ಠಿಯು ನನ್ನ ಪತಿಯು! ತಾಮ್ರಾ, ನೀವೆಲ್ಲರೂ ಇಲ್ಲಿಂದ ತೊಲಗಿ ಹೋಗದಿದ್ದರೆ ಕಾಲನಿಗೆ ಆಹಾರವಾಗುವಿರಿ! ಎಂದು ಹೇಳಿ ಆದಿಮಾಯೆಯು ದಿಕ್ತಟಗಳು ಅದರುವಂತೆ ಗರ್ಜಿಸಿದಳು. ಆ ಗರ್ಜನೆಯನ್ನು ಕೇಳಿ ತಾಮ್ರನು ತನ್ನ ಸೈನ್ಯ ಬಲದೊಂದಿಗೆ ಪಲಾಯನ ಮಾಡಿದನು. (ದೇವಿ ಭಾಗವತೆ. ಪು. ೮೫)

ನಂತರ ದೇವಿಯನ್ನು ಸೆರೆಹಿಡಿದು ತರುವಂತೆ ಮಹಿಷಾಸುರನು ತನ್ನ ಬಲಾಢ್ಯ ಇಬ್ಬರು ಸೇನಾಪತಿಯರಾದ ಬಾಷ್ಕಲ ಮತ್ತು ದುರ್ಮುಖರನ್ನು ಕಾಳಗಕ್ಕೆ ಕಳುಹಿಸಿದನು. ದೇವಿಯು ಬಾಷ್ಕಲನನ್ನು ಸಂಗ್ರಾಮದಲ್ಲಿ ಎದುರಿಸುತ್ತಾ ಆಯುಧಗಳಿಂದ ಭೀಕರ ಪ್ರಹಾರ ಮಾಡತೊಡಗಿದಳು. ಕೊನೆಗೆ ತನ್ನ ತ್ರಿಶೂಲದಿಂದ ಪ್ರಹಾರ ಮಾಡಿದೊಡನೆ ಭಾಷ್ಕಲನು ಧರೆಗೆ

ಉರುಳಿ ಮೃತನಾದನು. ಮತ್ತೆ ದುರ್ಮುಖನು ತೀಕ್ಷ್ಣವಾದ ಬಾಣಗಳಿಂದ ದೇವಿಯನ್ನು ಸುತ್ತುವರಿಯಲು ತೊಡಗಿದನು. ದೇವಿಯು ಅವನ ಧನಸ್ಸನ್ನೇ ಕಡಿದು ಖಡ್ಗದಿಂದ ಅವನ ತಲೆಯನ್ನೇ ಕಡಿದು ಹಾಕಿದಳು. ಸಮರ ಭೂಮಿಯೆಲ್ಲಾ ದಾನವರ ರಕ್ತದಲ್ಲಿ ತೊಯ್ದುಹೋಯಿತು.

ತನ್ನ ಬಲಾಢ್ಯ ಸೇನಾಪತಿಗಳಾಗಿದ್ದ ಬಾಷ್ಕಲ ಮತ್ತು ದುರ್ಮುಖರು ಒಬ್ಬ ಸುಕುಮಾರಿ ಕನ್ಯೆಯಿಂದ ಹತರಾದದ್ದನ್ನು ನೋಡಿ ಮಹಿಷಾಸುರನು ತಡೆಯದಾದನು. ತನ್ನ ಸೈನ್ಯಾಧ್ಯಕ್ಷನಾದ ಚಿಕ್ಷುರಾಖ್ಯನನ್ನು ಯುದ್ಧದ ನೇತೃತ್ವ ವಹಿಸಲು ಕಳುಹಿಸಿದನು. 'ನನ್ನಂಥ ಸಮರ್ಥ ಮಹಾರಥಿಗೆ ಒಂದು ಹೆಂಗಳೆಯು ಸಮವೇ, ಒಬ್ಬ ಸುಕುಮಾರ ಯುವತಿಯ ಎದುರು ತಾನು ಯುದ್ಧ ಮಾಡಬೇಕಾಯಿತಲ್ಲಾ ಎಂದು ವಿಷಾದಿಸುತ್ತಾ, ನಿರರ್ಥಕವಾಗಿ ನನ್ನಿಂದ ಪ್ರಾಣ ಕಳೆದುಕಲೊಳ್ಳಬೇಡ ಎಂದು ದೇವಿಗೆ ಬುದ್ಧಿಹೇಳತೊಡಗಿದನು. ಆಗ ದೇವಿಯ ಕೋಪವು ಎಲ್ಲೆ ಮೀರಿ ಈ ರೀತಿ ಗರ್ಜಿಸಿದಳು. 'ಮಹಿಷಕುಮಾರನ ದಾಸರಾದ ನೀವೆಲ್ಲರೂ ಪಶುಗಳಂತೆಯೇ ವರ್ತಿಸುತ್ತಿರುವಿರಿ. ನಿಮ್ಮೆಲ್ಲರನ್ನೂ ಬಲಿಪಶುಗಳನ್ನಾಗಿ ಮಾಡಿ ತಾನು ಹೇಡಿಯಂತೆ ನಿಮ್ಮೊಡೆಯ ಹಿಂದೆ ಕುಳಿತಿದ್ದಾನೆ ಎಂದು ಮೂದಲಿಸುತ್ತಾ ದೇವಿಯು ಹರಿತವಾದ ಖಡ್ಗದಿಂದ ಚಿಕ್ಷುರಾಖ್ಯನ ಶಿರವನ್ನು ಕತ್ತರಿಸಿ ಉರುಳಿಸಿದಳು.

ತನ್ನ ಪರಾಕ್ರಮೀ ಸೇನಾಪತಿಗಳು ಹತರಾದಂತೆ ಮಹಿಷಾಸುರನ ಕ್ರೋಧವು ಇಮ್ಮಡಿಯಾಗಿ ರಣರಂಗದಿಂದ ಹಿಂದೆಗೆಯುವ ಪ್ರಮೇಯವೇ ಇಲ್ಲವೆಂದು ನಿರ್ಧರಿಸಿ ಅವನ ನಾಮಾಂಕಿತ ಯೋಧರಾದ ಅಸಿಲೋಮ ಮತ್ತು ಬಿಡಾಲಾಕ್ಷರೆಂಬ ಇಬ್ಬರು ನಾಯಕರನ್ನು ದೇವಿಯ ಎದುರಿಗೆ ಸೆಣೆಸಲು ಕಳುಹಿಸಿದನು. ಅಸಿಲೋಮನು ಧೈರ್ಯದಿಂದ ಭಗವತೀ ಚಂಡಿಕಾದೇವಿಯ ಸಮ್ಮುಖದಲ್ಲಿ ಬಂದು 'ಸಿಂಹವಾಹಿನಿಯಾದ ದೇವಿ, ನೀನು ಯಾವ ಉದ್ದೇಶದಿಂದ ಇಷ್ಟು ಕಷ್ಟಪಡುತ್ತಿದ್ದೀಯೆ? ದೈತ್ಯರಾದ ನಾವು ಯಾವ ಅಪರಾಧ ಮಾಡಿರುವೆನೆಂದು ನೀನು ದಾನವರೊಡನೆ ಕಾದಾಡುತ್ತಿದ್ದೀಯೆ, ನಿನ್ನೊಡನೆ ಸಂಧಿಮಾಡಿಕೊಳ್ಳಲು ನಾನು ಸಿದ್ಧನಿರುವೆ, ನಿನಗೆ ಧನ, ಕನಕ, ಆಭರಣಗಳನ್ನು ಅರ್ಪಿಸುವೆ, ನೀನು ಕಾಳಗದಿಂದ ಕಾಲ್ತೆಗೆದು ಶಾಂತಿ–ಸುಖಗಳನ್ನು ನೀನೂ ಅನುಭವಿಸು, ಇತರರಿಗೂ ನೀಡು, ಅಂಭಿಕೆ ನೀನು ಮಹಾಸಮರ್ಥಳು, ನಿಷ್ಪಕ್ಷಪಾತಿಯಾಗಿ ವರ್ತಿಸು ಎಂದು ವಿಧ ವಿಧವಾಗಿ ಪ್ರಾರ್ಥಿಸಿದನು.

ಅಸಿಲೋಮನ ಪ್ರಾರ್ಥನೆಗೆ ದೇವಿಯು ಈ ರೀತಿ ಉತ್ತರ ನೀಡುತ್ತಾಳೆ. "ಈ ವಿಫುಲ ದೈತ್ಯ ಸಮೂಹದಲ್ಲಿ ಸ್ವಲ್ಪ ವಿಚಾರವಂತನನ್ನು ಭೇಟಿಯಾಗಿರುವೆನು, ಸಂತೋಷವಾಯಿತು. ನಾನು

ಯಾರನ್ನೂ ದ್ವೇಶಿಸುವುದಿಲ್ಲ. ಧರ್ಮದ ಮರ್ಯಾದೆಯನ್ನು ಕಾಪಾಡುವುದಕ್ಕಾಗಿಯೂ, ಸಾಧುಜನರ ಸಂರಕ್ಷಣೆಗಾಗಿಯೂ, ನಾನು ಪರಿಭ್ರಮಣ ಮಾಡುವೆನು. ದುಷ್ಟನಿಗ್ರಹ, ಶಿಷ್ಟಪರಿಪಾಲನೆಯೇ ನನ್ನ ಕರ್ತವ್ಯ, ಇದಕ್ಕಾಗಿ ನಾನು ಅನೇಕ ಅವತಾರಗಳನ್ನು ಕೈಗೊಳ್ಳುತ್ತಿರುವೆ. ಮಹಿಷಾಸುರ ಅತ್ಯಂತ ನೀಚ, ಸುರರ ದ್ರೋಹಿ, ಅವನನ್ನು ವಧಿಸಲೆಂದೇ ನಾನು ಈ ಅವತಾರವನ್ನು ತಾಳಿರುವೆನು. ನೀವೆಲ್ಲರೂ ಮರಳಿಹೋಗಿ ನಿಮ್ಮ ಒಡೆಯನನ್ನು ರಣರಂಗಕ್ಕೆ ಕಳುಹಿಸಿಕೊಡಿ. ಅವನು ಯುದ್ಧ ಮಾಡಬೇಕು ಇಲ್ಲವೇ ಪ್ರಹ್ಲಾದನಿದ್ದ ಪಾತಾಳಕ್ಕೆ ತೆರಳಬೇಕು. ಎರಡರಲ್ಲಿ ಒಂದನ್ನು ಆರಿಸಿಕೊಳ್ಳಲಿ' ಎಂದು ಹೇಳಿದಳು.

ಅಸಿಲೋಮ ಮತ್ತು ಬಿಡಾಲಾಕ್ಷರು ತಮ್ಮೊಳಗೆ ವಿಚಾರ ವಿನಿಮಯ ಮಾಡಿಕೊಂಡರು. ಮಹಿಷಾಸುರನು ಸಂಧಿಗೆ ಖಂಡಿತಾ ಒಪ್ಪುವುದಿಲ್ಲವೆಂದು ತಿಳಿದಿದ್ದ ಅವರು ಯುದ್ಧದಿಂದ ಪಲಾಯನ ಮಾಡಿದರೆಂಬ ಅಪವಾದಕ್ಕಿಂತ ಸಂಗ್ರಾಮ ಸಾರಿ ದೇವಿಯ ಕೈಯಲ್ಲಿ ಹತರಾಗುವುದೇ ಲೇಸೆಂದು ಕಾದಾಡತೊಡಗಿದರು. ದೇವಿಯು ಭಯಂಕರವಾದ ಶಸ್ತ್ರಾಸ್ತ್ರಗಳಿಂದ ಅಸಿಲೋಮ ಮತ್ತು ಬಿಡಾಲಾಕ್ಷರ ಸೈನ್ಯಬಲ ಮತ್ತು ಶಕ್ತಿಬಲವನ್ನು ಕುಗ್ಗಿಸುತ್ತಾ ಕೊನೆಗೆ ಇಬ್ಬರನ್ನೂ ಹತಗೊಳಿಸಿದಳು.

ದೇವಿಯು ಭಯಂಕರವಾಗಿ ಗರ್ಜನೆ ಮಾಡುತ್ತ ಕೈಯಲ್ಲಿ ಶಂಖವನ್ನು ಹಿಡಿದು ಊದಿದಳು, ದಶದಿಕ್ಕುಗಳೂ ಕಂಪಿಸತೊಡಗಿದವು. ತನ್ನ ಸ್ವಾಮಿಯ ರಕ್ಷಣೆಗೆಂದು ದುರ್ಧರನೆಂಬ ಸೇನಾ ನಾಯಕನು ಮುನ್ನುಗ್ಗಿ ಬಂದನು. ದೇವಿಯ ಮೇಲೆ ಶರವೃಷ್ಟಿ ಮಾಡ ತೊಡಗಿದನು, ದೇವಿಯು ಅವನ ಧನಸ್ಸನ್ನೇ ಕತ್ತರಿಸಿ ತೀಕ್ಷ್ಣವಾದ ಬಾಣಗಳಿಂದ ಅವನನ್ನು ಘಾಸಿಗೊಳಿಸಿದಳು. ದುರ್ಧರನು ತತ್ತರಿಸುತ್ತಾ ಕೆಳಗುರುಳಿದನು. ಇದನ್ನು ನೋಡಿ ಬಲಾಢ್ಯ ಸೇನಾನಾಯಕನಾದ ಅಂಧಕನು ದೇವಿಯನ್ನು ಕ್ಷಣಗಳಲ್ಲಿಯೇ ಮುತ್ತಿದನು. ಜಗದಂಬೆಯು ಉಗ್ರವಾದ ಬಾಣಗಳ ಮಳೆಯನ್ನೇ ಅವನ ಮೇಲೆ ಕರೆದಳು. ಇಬ್ಬರ ನಡುವೆ ಉಗ್ರವಾದ ಕಾಳಗವೇ ನಡೆದು ಕೊನಗೆ ಅಂಧಕನೂ ಅಸುನೀಗಿದನು.

ಮಹಿಷಾಸುರನ ಸಂಹಾರ–ಮಹಿಷಾಸುರ ಮರ್ಧಿನಿಯ ರೂಪ

ಮಹಿಷಾಸುರನು ತನ್ನ ಎಲ್ಲಾ ಬಲಾಢ್ಯ ಸೇನಾಪತಿಗಳ ಪರಾಭವ, ಹತ್ಯೆಯಿಂದ ಹತಾಶನಾದನು. ಅವನಿಗೆ ದಿಕ್ಕು ತೋಚದಾಯಿತು. ಯುದ್ಧವೊಂದೇ ಅವನಿಗೆ ದಾರಿಯಾಯಿತು. ತನ್ನ ಸಾರಥಿಯನ್ನು ಕರೆದು 'ಚಕ್ರಯುಂಗಧರಗಳು ಬಲಿಷ್ಠವಿರುವ ರಥಕ್ಕೆ ಒಂದು ಸಾವಿರ ಗಾರ್ದಭಗಳನ್ನು ಹೂಡಿ, ಹೇರಳ ಶಸ್ತ್ರಾಸ್ತ್ರ, ಮಹಾಧನಸ್ಸುಗಳನ್ನು ಶೇಖರಿಸಿ ಸಿದ್ಧಗೊಳಿಸೆಂದು

"ಆಜ್ಞಾಪಿಸಿದನು. ಮಹಿಷಾಸುರನು ಕೋಪೋದ್ರಿಕ್ತನಾಗಿ ಗುಡುಗಿದನು. ಕಣ್ಣುಗಳಿಂದ ಕಿಡಿಗಳು ತೂರಬಂದವು. ದೇವತೆಗಳೆಲ್ಲಾ ತತ್ತರಿಸಿದರು. ಅವನ ಘಾತಕ್ಕೆ ಭೂಮಿಯು ಆದುರ ತೊಡಗಿತು. 'ಇವನು ಘೋರವಾದ ರಾಕ್ಷಸ, ಇವನು ಮಹಾಮಾರಿಯಲ್ಲದೇ ಅಸುರನಲ್ಲ, ದೇವಿಯು ಇವನೊಡನೆ ಹೇಗೆ ಹೋರಾಡುವಳೋ ಎಂದು ಬ್ರಹ್ಮ, ಶಿವದೇವತೆಗಳು ಚಿಂತಾಕ್ರಾಂತರಾದರು.

ಮಹಿಷಾಸುರನು ರಥಾರೂಢನಾಗಿ ರಣಭೂಮಿಗೆ ಬಂದನು. ಅವನು, ತನ್ನ ಮಹಿಷನ ರೂಪದ ಬದಲು ಸುಂದರ ರೂಪ ತಾಳಿದನು. ತಲೆಯ ಮೇಲಿನ ಕೋಡುಗಳನ್ನು ಮಾಯಾಮಾಡಿ ಹಾರ, ಕೇಯೂರ, ಕುಂಡಲ, ಕಿರೀಟಗಳನ್ನು ಧರಿಸಿದನು. ಅವನು ದೇವಿಯ ಸಮ್ಮುಖದಲ್ಲಿ ನಿಂತು ಅವಳ ಸುಂದರ ರೂಪವನ್ನು ನೋಡಿ ಮೋಹಗೊಂಡು "ದೇವಿ ನಾನು ಜಗದೇಕವೀರ. ದೇವತೆಗಳನ್ನು ಸದೆಬಡಿದು ಓಡಿಸಿರುವೆನು. ಸ್ವರ್ಗಲೋಕವು ನನ್ನ ಅಧೀನವಾಗಿದೆ. ನೀನು ನನ್ನ ಪಟ್ಟದರಾಣಿಯಾಗಿ ವೈಭವವನ್ನು ಅನುಭವಿಸು. ನಾನು ನಿನ್ನ ಸೇವಕನಾಗಿ ಸೌಖ್ಯದ ಶಿಖರಕ್ಕೆ ಏರಿಸುವೆನು" ಎಂದು ಪ್ರಲಾಪಿಸುತ್ತಾ ಅಂಗಲಾಚಿದನು. ಮಹಿಷಾಸುರನು ಕಾಮಾಂಧನಾಗಿ ಮಾತನಾಡುವುದನ್ನು ನೋಡಿ ದೇವಿಯು ಕ್ಷುದ್ರಳಾದಳು. ಕ್ರೋಧ ಪೂರ್ಣದೃಷ್ಟಿಯಿಂದ ಅವನನ್ನು ನೋಡುತ್ತಾ 'ದುರಾತ್ಮನಾದ ಮಹಿಷಾಸುರ, ನೀನು ಕಾಮಾಂಧನಾಗಿರುವೆ ನಾನು ಯಾರೆಂಬುದನ್ನು ನೀನು ಅರಿಯೆ, ಈ ಜಗತ್ತನ್ನು ಸೃಷ್ಟಿಸುವವಳು ನಾನು, ಪರಮಪುರುಷನೂ, ವಿಶ್ವದ ಆತ್ಮನೂ ಆಗಿರುವ ನಿರಾಕಾರ, ನಿರ್ಗುಣ ಬ್ರಹ್ಮನ ಪ್ರಕೃತಿಯೇ ನಾನು. ದುಷ್ಟದಂಡನೆ, ಶಿಷ್ಟ-ಪರಿಪಾಲನೆಗಾಗಿ ನಾನು ಸಗುಣರೂಪ ತಾಳುವೆನು. ನೀನು ಸುಖರೂಪವಾಗಿ ಪಾತಾಳಕ್ಕೆ ಹೋಗುವೆಯೋ, ಸಂಗ್ರಾಮದಲ್ಲಿ ಆತ್ಮ ಬಲಿದಾನ ಮಾಡುವೆಯೋ, ಇವೆರಡರಲ್ಲಿ ಒಂದನ್ನು ಆರಿಸಿಕೋ", ಎಂದು ಹೇಳಿ ಭಯಂಕರವಾಗಿ ಗರ್ಜನೆ ಮಾಡತೊಡಗಿದಳು. (ಶ್ರೀಮದ್ ದೇವೀ ಭಾಗವತ)

ಇದನ್ನು ಕೇಳಿ ಮಹಿಷಾಸುರನು ಗರ್ಜಿಸಿದೊಡನೆಯೇ ದುರ್ಗೆಯ ವಾಹನ ಸಿಂಹವು ಬೆದರಿತು. ಪ್ರಮಥರ ಹಾಗೂ ದೇವಾದಿದೇವತೆಗಳ ಪ್ರಾಣವೇ ಹಾರಿಹೋದಂತಾದವು. ಹರಿಹರರೂ ನಡುಗಿದರು. ಬ್ರಹ್ಮಾಂಡವೇ ಬೆದರಿ ಕಂಗೆಟ್ಟಿತು. ಸಾವಿರದ ಏಳನೂರು ಅಕ್ಷೋಹಿಣಿಯ ರಾಜರಿಂದಲೂ, ಅಸುರರಿಂದಲೂ ಕೂಡಿ ಮಹಿಷಾಸರುರನು ದೇವಿಯನ್ನು ಮುತ್ತಿದನು. ಬಾಣಗಳ ಜಾಲವನ್ನೇ ಸೃಷ್ಟಿಸಿದನು. ದೇವಿಯ ಮೇಲೆ ಬರಸಿಡಿಲಿನಂತೆ ಬಾಣಗಳನ್ನು ಹೂಡತೊಡಗಿದನು. ಆ ಬಾಣಗಳನ್ನು ತಡೆಯಲು ದೇವಿಗಲ್ಲದೇ ಹರಿಹರ

ಬ್ರಹ್ಮಾದಿಗಳಿಗೂ ಸಾಧ್ಯವಿಲ್ಲದಾಯಿತು. ದೇವಿಯು ಎಲ್ಲಾ ತರಹದ ಶರಗಳನ್ನು ಮಿಂಚಿನಂತೆ ಕಡಿದುಹಾಕಿದಳು, ಅಸುರರ ರಥಗಳನ್ನೂ, ಕುದುರೆಗಳನ್ನೂ, ಸಾರಥಿಗಳನ್ನೂ ಧ್ವಂಸಮಾಡಿದಳು.

ದೇವಿಯ ಪರಾಕ್ರಮವನ್ನು ನೋಡಿ ಮಹಿಷಾಸುರನು ಪಾಶದಿಂದ ಅವಳನ್ನೂ, ಸಿಂಹವನ್ನೂ ಬಂಧಿಸಲು ಮುನ್ನುಗ್ಗಿದನು. ಅವನು ಬೀಸಿದ ಪಾಶವು ಸಿಂಹವನ್ನು ಬಂಧಿಸಿತು, ದೇವಿಯನ್ನೂ ಹಿಡಿಯಿತು. ಆಗ ಜಗನ್ಮಾತೆಯು ಪಾಶವನ್ನು ಕಡಿದು ಪುಡಿಪುಡಿ ಮಾಡಿದಳು. ಆಗ ದುಷ್ಟ ಮಹಿಷಾಸುರನು ತನ್ನ ಭೀಕರವಾದ ಖಡ್ಗದಿಂದ ಸಿಂಹವನ್ನೂ ದೇವಿಯನ್ನೂ ಹೊಡೆದನು. ದೇವಿಯು ಆ ಆಘಾತದಿಂದ ತಪ್ಪಿಸಿಕೊಂಡು ಅವನನ್ನು ಗಧೆಯಿಂದ ಅಪ್ಪಳಿಸಿದಳು. ಮಹಿಷನು ಅದನ್ನು ತಪ್ಪಿಸಿಕೊಂಡು ಕತ್ತಿಯಿಂದ ಹೊಡೆದನು. ಆಗ ಪರದೇವಿಯು ವಜ್ರಾಯುಧದಿಂದ ಮಹಿಷನ ಕತ್ತಿ ಗುರಾಣಿಗಳನ್ನು ಪುಡಿಮಾಡಿದಳು. ಅವೆಲ್ಲವೂ ಛಿದ್ರವಾಗಿ ನಾನಾ ದಿಕ್ಕುಗಳಿಗೆ ಸಿಡಿದು ಬಿದ್ದವು.

ಅಡರಿದನು ಮಹಗಜನ ಸಿಂಹದ
ಬುಡಕೆ ಅನಿಸಿ ಆ ಪರಾಂಬನ
ಮುಡಿಯ ಮೇಲೆಯೇ ಹೊಯ್ದು ಖಡ್ಗದಿ ಮುತ್ತು ಸೂಸಲಿಕೆ
ಕಡಿದಳು ಖಡ್ಗವನು ಅವನನು
ಕೆಡಹಿದಳು ಗಜದಿಂದ ಶೂಲದಿ
ಮಡಿದುದು ಮಹಾಗಜವು ಸಿಂಹದ ಕರದಿ ಕೇಳೆಂದ.
(ಚಿದಾನಂದ ಅವಧೂತ ವಿರಚಿತ ಶ್ರೀ ದೇವಿ ಮಹಾತ್ಮ್ಯ)

ಈ ರೀತಿ ಯುದ್ಧವು ತಾರಕಕ್ಕೇರತೊಡಗಿತು. ಮಹಿಷಾಸುರನು ಒಂದು ದೊಡ್ಡ ಮದಭರಿತ ಆನೆಯ ಮೇಲೇರಿ ಬಂದು ಸಿಂಹದ ಹತ್ತಿರ ನಿಂತು ದೇವಿಯ ತಲೆಯ ಮೇಲೆ ಖಡ್ಗದಿಂದ ಹೊಡೆದನು. ದೇವಿಯು ಅವನ ಖಡ್ಗವನ್ನು ಶೂಲದಿಂದ ಕಡಿದು ಆನೆಯಿಂದ ಕೆಳಕ್ಕೆ ತಳ್ಳಿದಳು. ಈ ಹೊಡದಾಟದಲ್ಲಿ ದೇವಿಯ ಆಭರಣದ ಮುತ್ತುಗಳೆಲ್ಲಾ ಚೆಲ್ಲಾಡಿದವು. ಸಿಂಹವು ಸಮಯಕ್ಕೆ ಸರಿಯಾಗಿ ಅವನ ಆನೆಯನ್ನು ಛಿದ್ರಛಿದ್ರವನ್ನಾಗಿ ಮಾಡಿತು.

ಪೇಳ್ವೆನೇನ್ ಮಹಿಷಂಗೆ ದೇವಿಗೆ
ಕಾಳಗವು ಬಹಳಾಯ್ತು ಸಾವಿರ
ತೋಳಿನಿಂದಲಿ ಕಾದಿದೊಡೆ ಹರಿಯದು ಮಹಾಯುದ್ಧ
ಮೇಲೆ ಮೇಲೆಯು ಒತ್ತಿ ದೇವಿಯ
ಕಾಲುಗಳನಿಡಿಸಿದನು ಹಿಂದಕೆ
ಸೀಳುವೆನು ಬಿಡೆನೆನುತ ಬೊಬ್ಬೆಯಿಕ್ಕಿದನು ಮಹಿಷ.
(ಚಿದಾನಂದಾವಧೂತ ವಿರಚಿತ ಶ್ರೀದೇವಿ ಮಹಾತ್ಮ್ಯ ಪುಟ ೧೨೦)

ಮಹಿಷಾಸುರನು ಪರಮವೀರ ಯೋಧ, ಯುದ್ಧಕಲೆಯಲ್ಲಿ ನಿಪುಣ, ದೈವಾನುಗ್ರಹವನ್ನೂ ಪಡೆದವ ಆದರೆ ಅವನ ಅಹಂಕಾರ, ದುರಾಗ್ರಹ ಹಾಗೂ ಕಾಮಾಂದತೆ ಅವನ ಶತ್ರುಗಳು. ಈ ಗುಣಗಳಿಂದ ದೇವತೆಗಳನ್ನೆಲ್ಲಾ ಅಡಗಿಸಿ ಅಟ್ಟಹಾಸ ಬೀರುತ್ತಾ ದೇವಿಯನ್ನು ವಶಪಡಿಸಿಕೊಳ್ಳಲು ಸತತ ಪ್ರಯತ್ನವನ್ನು ಮಾಡಿದ. ಹಾಗಾಗಿ ದೇವಿಗೂ ಮಹಿಷನಿಗೂ ಯುದ್ಧವು ಭರದಿಂದ ಸಾಗಿತು. ದೇವಿಯು ಸಾವಿರ ತೋಳುಗಳಿಂದ ಯುದ್ಧ ಮಾಡಿದರೂ ತೀರಲಿಲ್ಲ. ಮಹಿಷನು ಮತ್ತೆ ಮತ್ತೆ ದೇವಿಯ ಮೇಲೇರಿ ಬಂದು ಅವಳು ಕಾಲುಗಳನ್ನು ಹಿಂದಿಡುವಂತೆ ಮಾಡಿ, 'ನಿನ್ನನ್ನು ಇನ್ನು ಬಿಡುವುದಿಲ್ಲ, ಸೀಳಿ ಹಾಕುತ್ತೇನೆ' ಎಂದು ಭಯಂಕರವಾಗಿ ಬೊಬ್ಬೆಹಾಕುತ್ತಾ ತನ್ನ ಚತುರ ನೀತಿಯನ್ನು ಪ್ರಯೋಗಿಸತೊಡಗಿದನು. ಮಹಿಷಾಸುರನು ದೇವಿಯ ಮೇಲೆ ಎಡಬಿಡದೆ ಒತ್ತಿ ಬಂದು ಭಯಂಕರವಾದ ಖಡ್ಗವನ್ನು ಎತ್ತಿದನು. ಆಗ ದೇವಿಯು ವಿವಿಧ ದೇವತೆಗಳಿಂದ ಪಡೆದುಕೊಂಡಿದ್ದ ವಿಧವಿಧವಾದ ಪರಶು, ಕಕ್ಕಡೆ, ಕುಂತ, ಮುದ್ಗರ, ಸುರಗಿ, ಭಲ್ಲೆ, ಮುಸಲ, ಶೂಲ, ಚಕ್ರ, ಡೊಂಕಣಿ, ಬಾಣ, ಗಧೆ, ಮುಸಂಡಿ ಮೊದಲಾದ ಸಹಸ್ರಾರು ಶಸ್ತ್ರಗಳನ್ನು ಮಹಿಷಾಸುರನ ಮೇಲೆ ಎಡೆಯಿಲ್ಲದೇ ಪ್ರಯೋಗಿಸಿದಳು. ಆದರೆ ಈ ಯಾವ ಮಹಾ ಆಯುಧಗಳೂ ಮಹಿಷನ ಮೇಲೆ ಫಲಿಸಲಿಲ್ಲ. ಜಗನ್ಮಾತೆಯು ಆಯುಧಗಳನ್ನು ಪ್ರಯೋಗಿಸಿ ಬೇಸತ್ತಳು.

ಈ ಘನಘೋರ ಯುದ್ಧವನ್ನು ಯಾರಿಂದಲೂ ನೋಡಲಾಗಲಿಲ್ಲ. ದೇವತೆಗಳೂ ಮೂರ್ಛಿತರಾಗಿ ಮೈಮರೆತರು. ಈ ಯುದ್ಧವನ್ನು ಪ್ರತಿಹಂತದಲ್ಲೂ ನೋಡಿದವರೆಂದರೆ ಹರಿ, ಹರ, ಬ್ರಹ್ಮರು ಮಾತ್ರ. ಅವರು ಈ ಅಪ್ರತಿಮ ವೀರತೆಯನ್ನು ತೋರುವ ಕಾಳಗವನ್ನು ನೋಡಿ ಹೊಗಳತೊಡಗಿದರು. ಆ ಮಹಿಷಾಸುರನ ಶರಗಳಿಂದ ಭೂಮಿ ಝುರ್ಝುರಿತವಾಯಿತು. ಕಿಡಿಗಳು ಸರ್ಪ ನದಿಯನ್ನೆಲ್ಲಾ ಕುಡಿದು, ಆಗಲೂ ಅವುಗಳ ಬಾಯಾರಿಕೆ ಹಿಂಗದಿರಲು

ಸಮುದ್ರಗಳನ್ನೇ ಬತ್ತಿಸಿದವು. ಹಾಲಾಹಲ ಉರಿಯು ಬ್ರಹ್ಮಾಂಡದಷ್ಟು ಅಗಲಕ್ಕೂ ಸುತ್ತಿಕೊಂಡಿತು. ದೇವಿಯು ಬಲವಾಗಿ ಮಹಿಷಾಸುರನ ಮೇಲೆ ಗಧಾಪ್ರಹಾರ ಮಾಡಿದಳು. ಆ ಪೆಟ್ಟಿನಿಂದ ಅವನು ಮೂರ್ಛೆಗೊಂಡನು. ಸ್ವಲ್ಪದರಲ್ಲೇ ಚೇತರಿಸಿಕೊಂಡು ದೇವಿಯು ಹತ್ತಿರುವ ಸಿಂಹದ ಮೇಲೆ ಬಲವಾಗಿ ಗಧಾ ಪ್ರಹಾರ ಮಾಡಿದನು. ಸಿಂಹವು ಆ ಪೆಟ್ಟಿನಿಂದ ಖತಿಗೊಂಡು ಅವನ ಮೇಲೆ ಹಾರಿ ಅವನ ದೇಹವನ್ನು ಬಲವಾಗಿ ಪರಚತೊಡಗಿತು. ಆಗ ಮಹಿಷಾಸುರನು ಮಾಯೆಯಿಂದ ಸಿಂಹನಾಗಿ ಅದರ ಕೂಡ ಕಾದಾಡತೊಡಗಿದನು. ದೇವಿಯು ಅವನ ಮೇಲೆ ತೀಕ್ಷ್ಣವಾದ ಬಾಣಗಳನ್ನು ಒಂದೇ ಸಮನೆ ಎಸೆಯ ತೊಡಗಿದಳು. ಮತ್ತೆ ಮಹಿಷನು ಆನೆಯ ರೂಪದಲ್ಲಿ ದೇವಿಯ ಮೇಲೆ ಎರಗಿದನು. ದೇವಿಯ ಸಿಂಹವು ಆನೆಯ ಗಂಡ–ಸ್ಥಳದ ಮೇಲೆ ನಖ ಪ್ರಹಾರ ಮಾಡತೊಡಗಿತು. ಆಗ ಮಹಿಷನು ಶರಭವೇಷ ಧಾರಣ ಮಾಡಿದನು. ದೇವಿಯು ಖಡ್ಗದಿಂದ ಬಲವಾಗಿ ಪ್ರಹಾರ ಮಾಡಿದಳು. ಆಗ ಮಹಿಷನು ಘೋರ ಪುರುಷಾಕಾರವನ್ನು ತಾಳಿದನು. ಅಸಂಖ್ಯಾತ ಗಿರಿಗಳನ್ನು ಕಿತ್ತು ದೇವಿಯ ಮೇಲೆ ಎಡಬಿಡದೆ ಎಸೆಯತೊಡಗಿದನು. ದೇವಿಯು ನಿಮಿಷ ಮಾತ್ರದಲ್ಲಿ ಎಲ್ಲವನ್ನೂ ಪುಡಿಪುಡಿ ಮಾಡಿ ಹಾಕಿದಳು ಹಾಗೂ ಅವನನ್ನು 'ಎಲವೋಮೂಢ ಮತ್ತೆ ಮತ್ತೆ ಯಾಕೆ ಹೀಗೆ ಬರುತ್ತೀ ಸುರಾಪಾನವನ್ನು ಮಾಡಿ ಘರ್ಜಿಸು' ಎಂದು ಅಬ್ಬರಿಸಿದಳು.

ಪಾನಮಾಡು ಪರಾಂಚಿ ಮಧುವನು
ಈ ನಿಶಾಟನವೇನು ನಿಮಿಷಕೆ
ತಾನು ಒರಗುವನೆಂದು ಹರಿಹರರಾಗ ಕೂಗಿಡಲು
ತಾನು ಕೊಂಡಳು ಮಧುವ ಕಂಗಳೊ
ಳಾನಿತ್ತೈ ಬಹುಕೆಂಪು ಪರವಶ
ತಾನೆ ಆದಳು ಹೂಂಕರಿಸಿದಳು ಕೋಪದಲಿ ದೇವಿ.
(ಶ್ರೀದೇವಿ ಮಹಾತ್ಮ್ಯ – ಪುಟ. ೧೨೩)

ಆಗ ಹರಿಹರರು 'ತಾಯೇ! ಈ ನಿಶಾಟನವೇನು। ಮಧುಪಾನ ಮಾಡು. ಅದರಿಂದ ನೀನು ಈ ರಾಕ್ಷಸನನ್ನು ನಿಮಿಷಾರ್ಧದಲ್ಲಿ ನೆಲಕ್ಕೆ ಒರಗಿಸಬಹುದು ಎಂದು ಕೂಗಿದರು. ಅದರಂತೆ ದೇವಿಯು ಮಧುವನ್ನು ಸೇವಿಸಿದಳು. ಒಡನೆ ಕಣ್ಣುಗಳು ಕೆಂಪೇರಿದವು. ಆಕೆ ಪರವಶಳಾಗಿ ಕೋಪದಿಂದ ಹೂಂಕರಿಸತೊಡಗಿದಳು. ದೇವಿಯು ತಾನೇ ತಾನಾದಳು.

ದೇವಿಯು ಈ ಅವಸ್ಥೆಯನ್ನು ಕಂಡು ಮಹಿಷಾಸುರನು ಒಳ್ಳೆಯ ಬಲಿಷ್ಠವಾದ ಮಹಿಷವೇಷ, ತನ್ನ ಸ್ವಂತ ಜನ್ಮವೇಶವನ್ನು ಧಾರಣೆ ಮಾಡಿ ಕೋಡುಗಳಿಂದ ದೇವಿಯ ಎದೆಗೆ ತಿವಿಯಲು ಹೋದನು.

ನಡೆದು ಒದೆದಳು ರಕ್ಕಸನ ಕಾ
ಲಡಿಯೊಳಗೆ ಕೆಡಹಿದಳು ಶೂಲದ
ಲೊಡನೆ ತಿವಿದಳು ಎದೆಯ ಕಂಠವನೊತ್ತಿ ಪಾದದಲಿ
ಕಡಿದಳಾ ಖಡ್ಗದಲಿ ತಲೆಯನು
ಮಡಿದ ಮಹಿಷಾಸುರನು ದೇವ್ತೆ
ಗಳಡಿಗಡಿಗೆ ಎಚ್ಚೆತ್ತ ರೈ ಜಯಜಯತು ಜಯವೆನುತ.

(ಶ್ರೀ ದೇವಿ ಮಹಾತ್ಮ್ಯ- ಪುಟ – ೧೨೯)

ಈ ರೀತಿ ಕೋಪದಿಂದ ಹೂಂಕರಿಸಿ ಮುಂದೆ ನುಗ್ಗಿ, ಮಹಿಷಾಸುರನನ್ನು ಕಾಲಲ್ಲಿ ಒದ್ದು ಕಾಲ ಕೆಳಗೆ ಕೆಡಪಿ, ಶೂಲದಿಂದ ತಿಪಿದು ಅವನ ಎದೆಯ ಮೇಲೆ ಕಾಲನ್ನಿಟ್ಟು ನಿಂತು, ಅವನ ತಲೆಯನ್ನು ಖಡ್ಗದಿಂದ ಕಡಿದು ಹಾಕಿದಳು. ಮಹಿಷನ ರೂಪದಲ್ಲಿ ಮಹಾಸುರನು ದೇಹದಿಂದ ರುಂಡ ಬೇರೆಯಾಗಿ ಸತ್ತು ಬಿದ್ದ. ಆ ಕೋಣನ ತಲೆಯ ಮೇಲೆ ದೇವಿಯು ಶಂಖಚಕ್ರ, ಗಧಾಧಾರಿಯಾಗಿ ನಿಂತು ದರ್ಶನ ನೀಡಿದಳು. ಮಹಿಷಾಸುರನು ಹತನಾದೊಡನೆ ರಾಕ್ಷಸರು ತಮಗೆ ಉಳಿವಿಲ್ಲವೆಂದು ಪಲಾಯನ ಮಾಡತೊಡಗಿದರು. ದೇವಿಯು ಅವರೆಲ್ಲರನ್ನೂ ತಡಿದು ಹಾಕಿದಳು. ರಕ್ತದ ಹೊಳೆ, ಹೆಣಗಳ ರಾಶಿಯಿಂದ ಧರೆ ತುಂಬಿತು. ದೇವಿಯ ಆ ಘೋರ ರೂಪ ಸಾಕೆಂದು ದೇವತೆಗಳು ಬೇಡಿಕೊಂಡರು.

ದೇವಿಯು ದುಷ್ಟ ನಿಗ್ರಹ ಮತ್ತು ಶಿಷ್ಟ ಪರಿಪಾಲನಾ ಸಂಕೇತವಾಗಿ ದೇವತೆಗಳಿಗೆಲ್ಲಾ ದರ್ಶನ ನೀಡಿದಳು. ದೇವತೆಗಳೆಲ್ಲಾ ಅವಳ ಈ ವಿಜಯೋತ್ಸವವನ್ನು ನೆನೆದು ಪ್ರಾರ್ಥನೆ ಸಲ್ಲಿಸಿದರು. ಜಯಕಾರ ಮಾಡುತ್ತಾ ದೇವಿಯ ದರ್ಶನ ಭಾಗ್ಯವನ್ನೂ ಪಡೆದರು. ಈ ಭೀಕರ ಸಮರಕ್ಕಾಗಿಯೇ ಅವತಾರವನ್ನು ತಳೆದದೇವಿ ಮಹಿಷಾಸುರನ ಸಂಹಾರ ಮಾಡಿ ಮಹಿಷಾಸುರಮರ್ಧಿನಿಯೆಂದು ಶಾಶ್ವತವಾಗಿ ಕರೆಯಲ್ಪಟ್ಟಳು. ದೇವತೆಗಳಿಂದಲೂ ಮಾನವರಿಂದಲೂ ಈ ರೂಪದಲ್ಲಿ ಪೂಜೆಗೊಳ್ಳುತ್ತಾಳೆ. ಸೈನ್ಯಪಡೆಯ ರಕ್ಷಣೆ, ವಿರೋಚಿತ ಮುನ್ನಡೆ ಮತ್ತು ಬಲವರ್ಧನೆ ಹಾಗೂ ಬೆಳವಣಿಗೆಗೆ ಸಿಂಹವಾಹಿನಿಯಾಗಿ ಬಂದ ದುರ್ಗೆ,

ಚಂಡಮುಂಡರನ್ನು ಸಂಹರಿಸಿ ಚಾಮುಂಡಿಯಾಗಿ, ಮಹಿಷಾಸುರನನ್ನು ಸಂಹರಿಸಿದ ಮಹಿಷಾಸುರ ಮರ್ಧಿನಿಯಾಗಿ ಪೊರೆಯುವ ಸಮರದೇವತೆಯಾಗಿದ್ದಾಳೆ.

ಮಾರ್ಕಂಡೇಯ ಪುರಾಣದ ದೇವೀ ಮಹಾತ್ಮೆಯ ಕಥಾ ಭಾಗದಲ್ಲಿ ಎಂಟನೇ ಅಧ್ಯಾಯದಲ್ಲಿ ದೇವಿಯು ಮಹಿಷಾಸುರ ಮರ್ಧಿನಿಯ ರೂಪವನ್ನು ಧಾರಣ ಮಾಡಲು ಹಿನ್ನೆಲೆ, ಉದ್ದೇಶ, ಫಲವನ್ನು ದೀರ್ಘವಾಗಿ ನೀಡಲಾಗಿದೆ. ಈ ಕಥಾನಕದ ಪಠಣವನ್ನು ನವರಾತ್ರಿ ಸಮಯದಲ್ಲಿ ದುರ್ಗಾ ಅಷ್ಟಮಿಯ ದಿನ ಪಠಿಸುವ ಪದ್ಧತಿ ಇದೆ. ಅಲ್ಲದೇ ದೇವಿ ದೇವಾಲಯದಲ್ಲಿ ಅಂದು ದೇವಿಯನ್ನು ಮಹಿಷಾಸುರ ಮರ್ಧಿನಿಯ ರೂಪದಲ್ಲಿಯೇ ಅಲಂಕಾರ ಮಾಡಲಾಗುವುದು. ಇಂತಹ ವೀರಸ್ತ್ರೀ ರೂಪವನ್ನು ವೈಷ್ಣವ, ಶೈವ, ಶಾಕ್ತ ಸಮುದಾಯಗಳಲ್ಲಿ ಅತ್ಯಂತ ಶ್ರದ್ಧಾಭಕ್ತಿಯಿಂದ ಆರಾಧಿಸುತ್ತಾರೆ. ಅನೇಕ ಸ್ತುತಿಗಳನ್ನು ಈ ಅವತಾರವನ್ನು ಕುರಿತು ರಚಿಸಿ ಹಾಡಲಾಗುತ್ತದೆ. ಮುಮ್ಮಡಿ ಕೃಷ್ಣರಾಜರೊಡೆಯರಿಂದ ಹಿಡಿದು ಅನೇಕ ಜನ ಭಕ್ತರು ಮಹಿಷಾಸುರಮರ್ಧಿನಿಯ ಬಗ್ಗೆ ಅನೇಕ ರಚನೆಗಳನ್ನು, ಸಾಹಿತ್ಯ ಕೃತಿಗಳನ್ನೂ ರಚಿಸಿದ್ದಾರೆ. ದೇವಿಯ ಈ ರೂಪವು ಚೇತೋಹಾರಿಯಾಗುತ್ತದೆ.



ಹೊಯ್ಸಳ ಶೈಲಿಯ ಮಹಿಷಾಸುರ ಮರ್ಧಿನಿಯ ಶಿಲ್ಪ

ಅಧ್ಯಾಯ — ೦೪

ವಿವಿಧ ಗ್ರಂಥಗಳಲ್ಲಿ ಮಹಿಷಾಸುರಮರ್ಧಿನಿಯ ಸ್ವರೂಪದ ವಿವರಣೆ

ಮಹಿಷಾಸುರಮರ್ಧಿನಿಯ ಮೂರ್ತಿ ಶಿಲ್ಪದ ವಿವರಗಳು

ವಿವಿಧ ಗ್ರಂಥಗಳಲ್ಲಿ – ಮೂಲಗಳಲ್ಲಿ

ಭಾರತೀಯ ಶಿಲ್ಪಕಲೆಯ ಬೆಳವಣಿಗೆ ಒಂದು ವಿಸ್ಮಯ ರೂಪದಲ್ಲಿ ಮೂಡಿಬಂದಿದೆ. ಅಸಂಖ್ಯಾತ ದೇವಾಲಯಗಳ ರಚನೆಯಲ್ಲಿ ಶಿಲ್ಪಗಳದೇ ಮೇಲುಗೈಯಾಗಿರುತ್ತದೆ. ಶಿಲ್ಪಗಳ ರಚನೆಯು ವಾಸ್ತು ಶಿಲ್ಪ ರಚನೆಯಷ್ಟೇ ಪ್ರಮುಖವೂ ಆಗಿರುತ್ತದೆ. ಶಿಲ್ಪಗಳಿಲ್ಲದ ದೇವಾಲಯಗಳು ವಿರಳ. ಅಸಂಖ್ಯಾತ ದೇವತೆಗಳ ಪರಿಕಲ್ಪನೆಯನ್ನು ಪಿಂಡೀಕರಣ ಮಾಡುತ್ತಾ ಬಂದಾಗ ಆಕಾರ ರೂಪದಲ್ಲಿ ಹಲವು ಲಕ್ಷಣಗಳನ್ನೂ ಸಾಂಕೇತಿಕವಾಗಿ ಪ್ರತಿನಿಧಿಸುವ ಶಿಲ್ಪಗಳು ಸ್ಪಷ್ಟವಾಗತೊಡಗುತ್ತವೆ. ಶಿಲ್ಪ ರಚನೆ ಸುಲಭ ಸಾಧ್ಯವಲ್ಲ. ಮನಸ್ಸಿನಲ್ಲಿ ಹೆಸರಿಗೊಂದು ಆಕಾರವನ್ನು ಕಲ್ಪಿಸಿಕೊಳ್ಳಬಹುದು. ಆದರೆ ಕೈಯಿಂದ ಅದನ್ನು ಮಾಡುವುದು ಕಷ್ಟ. ಭಾವನೆಯಲ್ಲಿ ಎಷ್ಟೋ ದೇವತಾ ಮೂರ್ತಿಗಳಿರಬಹುದು. ಶಿಲ್ಪದಲ್ಲಿ ಇಳಿಯುವವು ಮಾತ್ರ ಕೆಲವೇ. ಆಕಾರಕ್ಕೆ ಅರ್ಥವನ್ನೂ, ಭಾವವನ್ನೂ ಚೆಲುವನ್ನೂ ಸೇರಿಸಬೇಕೆಂಎದರೆ ಸುಲಭವಲ್ಲ. ಕೈ ಕೆಲಸಕ್ಕೆ ಮಿತಿಯಿಲ್ಲವೇ? ಕಲೆಗೊಂದು ಖಚಿತವಾದ ಚೌಕಟ್ಟು ಇರಬೇಡವೇ? ಶಿಲ್ಪ ಕಲೆಯೂ ಶಿಲ್ಪ ಶಾಸ್ತ್ರವೂ ಮೈದಳೆದು ಬೆಳೆಯತೊಡಗಿದಾಗ ದೇವತೆಗಳ ಸಂಖ್ಯೆ ಕಡಿಮೆಯಾಗಬೇಕಾಯಿತು. ಉಳಿದು ಕೊಂಡ ದೇವತೆಗಳ ಸ್ವರೂಪ ನಿರ್ಧಿಷ್ಟವಾಗಬೇಕಾಯಿತು. ಹೀಗೆ ಮಾಡುವಾಗ ಸಹಜವಾಗಿಯೇ ನೂರಾರು ದೇವತೆಗಳ – ವೈಯಕ್ತಿಕ ಗುಣಧರ್ಮಗಳು ಪ್ರತಿಮೆ (ಮಾಡಲ್)ಗಳಲ್ಲಿ ಅಡಗಬೇಕಾಯಿತು. (ಎಸ್.ಕೆ. ರಾಮಚಂದ್ರರಾವ್, 'ಮೂರ್ತಿ ಶಿಲ್ಪ ನೆಲೆ ಮತ್ತು ಹಿನ್ನೆಲೆ'. ಪುಟ – ೫೨)

ಶಿಲ್ಪಕಲೆಯು ಸೃಜನಾತ್ಮಕ ಕಲೆಯಾಗಿದ್ದರೂ ಶಾಸ್ತ್ರ ಮತ್ತು ಲಕ್ಷಣ ಗ್ರಂಥಗಳ ಚೌಕಟ್ಟಿನಲ್ಲಿ, ಒಳಪಟ್ಟು ರಚನೆಯಾಗುತ್ತಿದ್ದಂತೆ ಹೆಚ್ಚು ಅರ್ಥಪೂರ್ಣವಾಗುತ್ತದೆ. ಈ ಕಲೆಯು ಹೊಸ ಹೊಸ ಪ್ರಯೋಗಗಳ ನೆಲೆಯಲ್ಲಿ ಬೆಳೆಯುವುದಕ್ಕಿಂತಲೂ ಹೆಚ್ಚಾಗಿ ವಿಚಾರಾತ್ಮಕ ನೆಲೆಯಿಂದ ಹೊರಟ ಆಕಾರ, ರೂಪ, ಲಕ್ಷಣಗಳನ್ನು ಪ್ರತಿನಿಧಿಸುವ ನೆಲೆಯಲ್ಲಿ ಬೆಳೆದುಬಂದಿದೆ. ಇದರಲ್ಲಿ ಮೂಲವಾಗಿ ಪೂಜಿಸುವ ಮೂರ್ತಿಗಳನ್ನು ರಚಿಸಬೇಕಾದರಂತೂ ಪ್ರತಿಮಾ ಲಕ್ಷಣವನ್ನು ಚಾಚೂ ತಪ್ಪದೆ ಅನುಸರಿಸಬೇಕಾಗುತ್ತದೆ. ಇದನ್ನು ವಿಗ್ರಹಶಾಸ್ತ್ರವೆಂತಲೂ, ಪ್ರತಿಮಾಶಾಸ್ತ್ರ ಅಥವಾ ಮೂರ್ತಿಶಾಸ್ತ್ರ, ಪ್ರತಿಮಾಲಕ್ಷಣವೆಂದು ತಿಳಿಯಲಾಗುತ್ತದೆ. ಪ್ರತಿಯೊಂದು ದೇವತೆಗೂ ಪ್ರತ್ಯೇಕವಾದ ಪ್ರತಿಮಾ ಲಕ್ಷಣವಿರುತ್ತದೆ. ಮುಖ್ಯವಾಗಿ ನಿಂತಿರುವ, ಕುಳಿತಿರುವ ಅಥವಾ ಶಯನ ರೂಪದಲ್ಲಿರುವ ಭಂಗಿ,

ಭುಜಗಳ ಸಂಖ್ಯೆ, ಕೈಗಳಲ್ಲಿ ಹಿಡಿದಿರುವ ಆಯುಧಗಳು ಮತ್ತು ಇತರ ಪರಿಕರಗಳು, ಧರಿಸುವ ಆಭರಣಗಳು, ಉಪಯೋಗಿಸುವ ವಾಹನಗಳು, ಲಾಂಛನಗಳು, ಕಿರೀಟ ಮತ್ತು ಶಿಖೆಯನ್ನು ಕಟ್ಟುವ ರೀತಿ, ಸಹದೇವತೆಗಳು ಈ ರೀತಿ ಎಲ್ಲಾ ವಿಷಯಗಳನ್ನೂ ವೇದ, ಉಪನಿಷತ್ತು, ಪುರಾಣ, ಇತರ ಶಾಸ್ತ್ರ ಗ್ರಂಥಗಳನ್ನು ಆಧರಿಸಿ ಪ್ರತಿಮಾ-ಲಕ್ಷಣ ರೂಪದಲ್ಲಿ ತಿಳಿಸಲಾಗುತ್ತದೆ. ಆಯಾ ದೇವತೆಯ ಪ್ರತಿಮಾಲಕ್ಷಣಗಳು ನಿರ್ಧಾರಗೊಂಡು ಶಾಸ್ತ್ರಗಳಲ್ಲಿ ಮೂಡಿಬಂದಾಗಿನಿಂದಲೂ ಅದನ್ನು ಅನುಸರಿಸಿ, ಅರ್ಥಮಾಡಿಕೊಂಡೇ ವಿಗ್ರಹಗಳನ್ನು ರಚಿಸಲಾಗಿರುತ್ತದೆ. ಆದ್ದರಿಂದಲೇ ಆ ಶಾಸ್ತ್ರ ಗ್ರಂಥವು ಚಾಲ್ತಿಯಲ್ಲಿರುವ ಕಡೆಗಳಲ್ಲೆಲ್ಲಾ ಪ್ರತಿಮಾ ರಚನೆಯಲ್ಲಿ ಒಮ್ಮತವಿರುತ್ತದೆ. ಹಲವೊಮ್ಮೆ ಭಿನ್ನಮತಗಳೂ ಇರುತ್ತವೆ. ಅಲ್ಲದೇ ಕೆಲವೊಮ್ಮೆ ಆಗಾಗ ಲಕ್ಷಣಗಳು ಪರಿಷ್ಕಾರಗೊಂಡು ಮೂರ್ತಿಗಳು ರಚಿತವಾಗುತ್ತವೆ. ಆದ್ದರಿಂದ ಆಕಾರಗಳನ್ನು ಸೇರಿಸಿ, ವಿವಿಧ ಪರಿಕಲ್ಪನೆಗಳನ್ನು ಸಂಯೋಜಿಸಿ ರಚಿಸುವ ಪದ್ಧತಿಯು ಶಿಲ್ಪಶಾಸ್ತ್ರ ಮತ್ತು ಕಲಾ ಬೆಳವಣಿಗೆಯಲ್ಲಿ ಸಾಕಷ್ಟು ಹಳೆಯದಾಗಿದೆ.

ಪ್ರೊ. ರಾಮಚಂದ್ರರಾವ್ ಅವರು ವ್ಯಾಖ್ಯಾನಿಸುವಂತೆ 'ಸರ್ವದೇವ' ನಮಸ್ಕಾರಃ ಕೇಶವಂ ಪ್ರತಿಗಚ್ಛತಿ', ಹಾಗೂ ಏಕೋ ದೇವಃ ಕೇಶವೋ ವಾ ಶಿವೋ ವಾ' ಮೊದಲಾದ ಕಲ್ಪನೆಗಳು ಜನರ ಭಾವನೆಗಳಲ್ಲಿ ಮೂಡತೊಡಗಿದಂತೆ ಶಿಲ್ಪಗಳಲ್ಲಿಯೂ ಸಂಯೋಜನೆಗೊಂಡು ಪಿಂಡೀಕರಣದ ಪ್ರವೃತ್ತಿಯಾಗಿ ಭಾರತದ ಎಲ್ಲೆಡೆಗೂ ಪಸರಿಸಿತು. ಹೇಗೆಂದರೆ, ದ್ವಾದಶಾದಿತ್ಯರು ಒಬ್ಬ ಸೂರ್ಯನಲ್ಲಿ, ಏಕಾದಶರುದ್ರರು ಒಬ್ಬ ಶಿವನಲ್ಲಿ, ಚತುರ್ವಿಂಶತಿ ವ್ಯೂಹಮೂರ್ತಿಗಳು ಒಬ್ಬ ವಿಷ್ಣುವಿನಲ್ಲಿ ಕೊನೆಗೊಂಡರು. ಅವರಂತೆ ನೂರಾರು ದೇವೀ ರೂಪಗಳು ಒಬ್ಬ ದುರ್ಗೆಯಲ್ಲಿ, ದೇವಿಯ ಅನೇಕ ಕರಾಳ ರೂಪಗಳು ಕಾಳಿಯಲ್ಲಿ ಒಂದಾದವು. ಜೈನರ ಚತುರ್ವಿಂಶತಿ ತೀರ್ಥಂಕರರು ಒಬ್ಬ ಜಿನನಲ್ಲಿ ಅಡಗಿದರು. ವಿಷ್ಣುವಿನ ದಶಾವತಾರಗಳು ಪ್ರಭಾವಳಿಯಲ್ಲಿ ಸೇರಿಕೊಂಡವು. ನವಗ್ರಹಗಳು ಒಂದೆಡೆ ಕಲೆತರು, ಅಷ್ಟದಿಕ್ಪಾಲಕರು, ಮತ್ತು ಸಪ್ತಮಾತೃಕೆಯರು ದೇವಾಲಯದ ನವರಂಗದಲ್ಲಿ ಒಂದೇ ಫಲಕದಲ್ಲಿ ಮೂಡಿಕೊಂಡು ಬಂದರು. ಒಂದೇ ಲಿಂಗದ ಕೆಳಭಾಗ ಬ್ರಹ್ಮ ಭಾಗವಾಯಿತು. ನಡುವಣಭಾಗ ವಿಷ್ಣು ಭಾಗವಾಯಿತು ಹಾಗೂ ಮೇಲ್ಭಾಗ ರುದ್ರಭಾಗವಾಯಿತು. ಲಕ್ಷ್ಮೀ ವಿಷ್ಣುವಿನ ವಕ್ಷಸ್ಥಳದಲ್ಲಿ ಅಡಗಿಹೋದಳು, ಪಾರ್ವತಿ ಅರ್ಧಾಂಗಿಯಾಗಿ ಶಿವನ ಅರ್ಧನಾರೀ ರೂಪವಾದಳು. ಇಂತಹ ಎಲ್ಲಾ ಕಲ್ಪನೆಗಳೂ ಸೂಕ್ತವಾದ ಹಿನ್ನೆಲೆಯನ್ನು ಪಡೆದುಕೊಂಡು ಮೂರ್ತಿ ಶಿಲ್ಪ ಲಕ್ಷಣಗಳನ್ನು ಉಳಿಸಿಕೊಂಡು ಶಾಸ್ತ್ರ ಗ್ರಂಥಗಳಲ್ಲಿ, ಶಿಲ್ಪಿಯ ಮನದಲ್ಲಿ, ಕೈಗಳಲ್ಲಿ ಪ್ರಧಾನವಾಗಿ ಉಳಿದುಕೊಂಡವು.

ದೇವಶಿಲ್ಪಗಳು ಮೂರ್ತಿಲಕ್ಷಣ ಅಥವಾ ವಿಗ್ರಹಶಾಸ್ತ್ರದ ಲಕ್ಷಣಗಳನ್ನು ಅನುಸರಿಸಿ ರಚನೆಗೊಳ್ಳುತ್ತಾ ಹೇಗೆ ಭಾವಶಿಲ್ಪಗಳಾಗುತ್ತವೆ. ಹಾಗೂ ಭಕ್ತನಲ್ಲಿ ಹೇಗೆ ಭಕ್ತಿಭಾವನೆಗೆ ಕಾರಣವಾಗುತ್ತವೆ ಎಂದು ತಿಳಿಯುವುದು ಸ್ವಾರಸ್ಯಕರವಾಗಿದೆ. ಶಿಲ್ಪಶಾಸ್ತ್ರದಲ್ಲಿ ಪ್ರತಿಮೆಗಿಂತಲೂ ಪ್ರಮುಖವಾದುದು ಧ್ಯಾನ ಶ್ಲೋಕ. ಯಾವುದಾದರೊಂದು ದೇವತೆಯನ್ನು ಕುರಿತು ಸಿದ್ಧವಾದ ಶ್ಲೋಕದಲ್ಲಿ ದೇವತೆಯ ರೂಪದ ನಿರ್ದೇಶನವಿರುತ್ತದೆ. ಭಂಗಿಯ, ಆಯುಧಗಳ ವಿವರಗಳೂ ಇರುತ್ತವೆ. ಈ ಧ್ಯಾನ-ಶ್ಲೋಕ ಶಿಲ್ಪಿಗೂ ಮುಖ್ಯ, ಭಕ್ತನಿಗೂ ಮುಖ್ಯ. ಶಿಲ್ಪಿಯಾದವನು ತನ್ನ ಶಿಕ್ಷಣ ಕ್ರಮದಲ್ಲಿ ಪ್ರತಿಮಾ ಲಕ್ಷಣವನ್ನು ಧ್ಯಾನಶ್ಲೋಕದ ಮುಖಾಂತರ ತಿಳಿದುಕೊಳ್ಳುವುದು ಅಗತ್ಯವಾಗುತ್ತದೆ. ಇವುಗಳು ಅವರಿಗೆ ನಿರ್ದೇಶಕ ಸೂತ್ರಗಳಿದ್ದಂತೆ. ಈ ಸೂತ್ರಗಳನ್ನು ಮೇಲಿಂದ ಮೇಲೆ ಶಿಲ್ಪಿಯಾದವನು ಪ್ರತಿಮೆ ರಚಿಸುವ ಮೊದಲು ಮನನ ಮಾಡಿಕೊಳ್ಳಬೇಕು. ಶಾಸ್ತ್ರಗಳಲ್ಲಿ ಸೂಚಿಸಿರುವ ವಿಧಾನ ಸ್ವಾರಸ್ಯವಾದುದು. ಪ್ರಾಚೀನ ಪರಂಪರೆಗೆ ಸೇರಿದ ಶಿಲ್ಪಿಗಳು ಈಗಲೂ ಈ ಕ್ರಮವನ್ನು ಅನುಸರಿಸುತ್ತಾರೆ. ಶಿಲ್ಪಿಯು ತಾನು ಯಾವ ಮೂರ್ತಿಯನ್ನು ನಿರ್ಮಾಣ ಮಾಡಬೇಕೋ ಆ ಮೂರ್ತಿಗೆ ಸಂಬಂಧಿಸಿದ ಧ್ಯಾನಶ್ಲೋಕವನ್ನು ವಿಧ್ಯುಕ್ತವಾಗಿ ಪಠಿಸುತ್ತಾ, ಆ ದೇವತೆಗೆ ವಿಶಿಷ್ಟವಾದ ಮಂತ್ರವನ್ನು ಪುನಶ್ಚರಣೆ ಮಾಡುತ್ತಿದ್ದಂತೆ ಮನಸ್ಸಿನಲ್ಲಿ ಆ ದೇವತಾಮೂರ್ತಿ ಕ್ರಮಕ್ರಮವಾಗಿ ಮೈದಳೆಯುತ್ತದೆ. ಇದನ್ನೇ 'ಮಂತ್ರಮೂರ್ತಿಯೆಂದು ಕರೆಯುವರು. ಧ್ಯಾನದಿಂದಲೇ ಆ ರೂಪವನ್ನು ಶಿಲ್ಪಿಗಳು ಕಾಣುತ್ತಾರೆ-ಧ್ಯಾನೇನೈವ ಪಶ್ಯಂತಿ ತದ್ರೂಪಂ'. ಹೀಗೆ ಶಿಲ್ಪಿಯು ತನ್ನೊಳಗೆ ಸ್ಫುಟವಾಗಿ ಕಂಡ ಆಕಾರವನ್ನೇ ಮರದಲ್ಲೊ, ಕಲ್ಲಿನಲ್ಲಿಯೋ ಕಡೆಯುತ್ತಾನೆ. ಮೇಣದಲ್ಲಿ ಮಾಡುತ್ತಾನೆ ನಂತರ ಲೋಹದಲ್ಲಿ ಎರಕ ಹೊಯ್ಯುತ್ತಾನೆ. (ಎಸ್.ಕೆ. ರಾಮಚಂದ್ರರಾವ್, ಮೂರ್ತಿಶಿಲ್ಪಿ ನೆಲೆ, ಹಿನ್ನೆಲೆ. ಪುಟ – ೫೫-೫೬)

ಭಾರತೀಯ ಶಿಲ್ಪಿಗೆ ಪ್ರತಿಮಾ ಲಕ್ಷಣದ ಮನನವಿರುತ್ತದೆಯೇ ಹೊರತು ಅಂದರೆ ಪಾಶ್ಚಾತ್ಯರು ರಚಿಸುವ ಕ್ರಮದಂತೆ ಒಂದು ರೂಪದರ್ಶಿ ಅಥವಾ ಮಾಡೆಲ್ ಇರುವುದಿಲ್ಲ. ಶಿಲ್ಪಿಯು ತನ್ನ ಸ್ವಂತ ಅನುಭವದ ಸಹಾಯದಿಂದಲೇ ಮೂರ್ತಿಯನ್ನು ಪರಿಕಲ್ಪಿಸುತ್ತಾನೆ. ದೇವತಾ ಮೂರ್ತಿಯನ್ನು ಮಾಡುವ ಶಿಲ್ಪಿಗೆ ಹೆಚ್ಚಿನ ಜವಾಬ್ದಾರಿಗಳಿರುತ್ತವೆ. ಅವನು ರಚಿಸಿದ ಕಲಾಕೃತಿ ಪೂಜೆಗೆ ಯೋಗ್ಯವಾಗಿಯೂ, ಭಕ್ತನಿಗೆ ದೈವಿಕ ಶ್ರದ್ಧೆಯನ್ನು ಹುಟ್ಟಿಸುವಂತಿರಬೇಕು.

೨೦ನೇ ಶತಮಾನದ ಪೂರ್ವಭಾಗದಲ್ಲಿ ಫ್ರಾನ್ಸ್ ದೇಶದಲ್ಲಿ ಪ್ರಭಾವೀ ಶಿಲ್ಪಿಯಾಗಿದ್ದ ಆಗಸ್ಟ್ ರೋಡಿನ್ ಈ ರೀತಿ ಹೇಳುತ್ತಾನೆ. 'ದೇವನಿಗೆ ತನ್ನ ನಿಮಾಣವನ್ನು ತಾನೇ ನೋಡುವ ಬಯಕೆಯಾಯಿತಂತೆ ಆಗ ಅವನು ಶಿಲ್ಪಿಯನ್ನು ಸೃಷ್ಟಿಸಿದ. ಶಿಲ್ಪಿಯ ಕೈಯಿಂದ ತನ್ನ

ನಿರ್ಮಾಣದ ಪ್ರಕ್ರಿಯೆಯನ್ನು ಅನುಭವಿಸಿದ'. ಇದೇ ರೀತಿಯ ಅಭಿಪ್ರಾಯಗಳು, ಅನುಭವಗಳು ನಮ್ಮ ಶಾಸ್ತ್ರ ಪ್ರಮಾಣಗಳಲ್ಲೂ ಧ್ವನಿಸಿವೆ. ಶಿಲ್ಪ ಕೃತಿ ಅಥವಾ ಮೂರ್ತಿ ನಿರ್ಮಾಣವು ಧ್ಯಾನದ ಫಲದಿಂದ ಮನಸ್ಸಿನಾಳದಿಂದ ಹೊರಟು ಮೈದಳೆದ ಮೊದಲ ಆಕಾರದ ಮೇಲೆ ನಿರ್ಧರಿತವಾಗಿರುತ್ತದೆ. ಅಂದರೆ ಶಿಲ್ಪಿಯೊಳಗೇ ದೇವತಾಮೂರ್ತಿ, ದೇವತಾಮೂರ್ತಿಯೊಳಗೇ ಶಿಲ್ಪಿ ಎಂದರ್ಥ ಕೊಡುತ್ತದೆ. ಅಂತಹ ಒಂದು ಮಹತ್ವ ಮಟ್ಟದ ತನ್ಮಯತೆಯ ಅವಶ್ಯವಿರುತ್ತದೆ ಒಂದು ಶಿಲ್ಪ ಕೃತಿ ರಚಿಸಲು, ಆದ್ದರಿಂದ ಮೂರ್ತಿ ಶಿಲ್ಪವು ಧ್ಯಾನ ತಂತ್ರವಾದುದು, ಶಿಲ್ಪಿಯು ರಚಿಸುವ ಆಕಾರವು ಶಿಲ್ಪಿನಿಷ್ಠವಾದುದು. ಭಾಗವತ ಪುರಾಣದ ಶ್ರೀಧರೀಯ ವ್ಯಾಖ್ಯಾನದಲ್ಲಿ ಶಿಲ್ಪಿಯನ್ನು ಆಕಾರದ ಒಡೆಯ–ಆಕೃತೀ ಪತಿಃ ಶಿಲ್ಪಾಚಾರ್ಯ ಎಂದು ಸಮರ್ಥಿಸಲಾಗಿದೆ.

ಶಿಲ್ಪ ಶಾಸ್ತ್ರಾನುಸಾರ ಮೂರ್ತಿ ರಚನೆಯ ಕ್ರಮದಲ್ಲಿ ದೀಕ್ಷೆಗೆ ಹೆಚ್ಚು ಪ್ರಾಶಸ್ತ್ಯವನ್ನು ನೀಡಲಾಗಿದೆ. ಶಿಲ್ಪಿಯು ತನ್ನ ಕಾರ್ಯವನ್ನು ಪ್ರಾರಂಭ ಮಾಡುವುದಕ್ಕೆ ಪೂರ್ವದಿಂದಲೂ, ರಚನಾಕಾರ್ಯ ನಡೆಯುತ್ತಿರುವಾಗಲೂ, ಕೊನೆಗೆ ಮುಗಿಯುವವರೆಗೂ ತನ್ಮಯತೆಯಿಂದ ಮಂತ್ರಗಳನ್ನು ಪಠಿಸುತ್ತಲೇ ಇರಬೇಕಾಗುತ್ತದೆ. ಕಶ್ಯಪಶಿಲ್ಪದಲ್ಲಿ ಹೇಳಿರುವಂತೆ–

'ಸಂಪೂರ್ಣ ದೀಕ್ಷಿತಾಂ ಕುರ್ಯಾತ್ತತ್ತ ದಂಗ ಪ್ರಕಲ್ಪಿತಂ।
ತತ್ತನ್ಮಂತ್ರೋಚ್ಚಾರಣೇನ ಕುರ್ಯಾಲಿಂಗಾಧಿಕ ಭುವಿ॥

ಇದಕ್ಕೆ ಬೇಕಾಗುವ ಸಂಸ್ಕಾರ, ವ್ರತ ಗ್ರಹಣ ಎರಡೂ ದೀಕ್ಷೆಯಿಂದ ಒದಗುತ್ತದೆ.

ಪ್ರೊ. ರಾಮಚಂದ್ರರಾಯರು ತಮ್ಮ 'ಮೂರ್ತಿಶಿಲ್ಪ ನೆಲೆಹಿನ್ನೆಲೆ ಎಂಬ ಗ್ರಂಥದಲ್ಲಿ ಶಿಲ್ಪಿಯ ಪ್ರತಿಭೆಯ ಬಗ್ಗೆ, ಮೂರ್ತಿಶಿಲ್ಪ ರಚನಾತಂತ್ರಗಳ ಬಗ್ಗೆ ಅನೇಕ ಉಲ್ಲೇಖಗಳನ್ನು ನೀಡುತ್ತಾ ವಿಷದವಾಗಿ ತಿಳಿಯಪಡಿಸಿದ್ದಾರೆ. ಅದರಂತೆ ಮೂರ್ತಿಶಿಲ್ಪಕ್ಕೆ ಪೂರ್ವಸಿದ್ಧತೆಯಾಗಿ ದೇವಶಿಲ್ಪ, ಭಾವಶಿಲ್ಪಗಳಿರಬೇಕು. ಹೀಗಿಲ್ಲವಾದರೆ ಶಿಲ್ಪಿಯು ಕೈಕೊಂಡ ಕೆಲಸ ಊರ್ಜಿತವಾಗದು. ಅನುಭವದಿಂದಲೂ ಪರಿಶ್ರಮದಿಂದಲೂ ಜಾಣತನದಿಂದಲೂ ಪ್ರತಿಮೆಯನ್ನು ಲಕ್ಷಣವಾಗಿ ಮುಗಿಸಿದರೂ ಕಳೆಕೂಡಲಾರದು. ಆದ್ದರಿಂದ ದೀಕ್ಷೆಯನ್ನು ಸರಿಯಾದ ರೀತಿಯಲ್ಲಿ ಪಾಲಿಸಬೇಕು. ರುದ್ರಯಮಾಳದ ವಾಸ್ತುತಂತ್ರವೆಂಬ ಭಾಗವು ಶಿಲ್ಪಿಯು ಇಂತಹ ದೀಕ್ಷೆಯನ್ನು ಪಾಲಿಸಿದರೆ ಮಾತ್ರ ಜಡವಾದ ಕಲ್ಲು, ಮಣ್ಣು, ಮರ ಇವುಗಳಲ್ಲಿ ಜೀವ ಕಳೆಯನ್ನು ತುಂಬಿಸಿಯಾನು. ಇಂತಹ ಶಿಲ್ಪಿಯನ್ನು ಧೀರನೆಂದಿದ್ದಾರೆ ಅಂದರೆ ಅವನು ಧ್ಯಾನಶೀಲ.

ಪ್ರತಿಮಾ ಲಕ್ಷಣದ ವಿವಿಧ ಅಂಗಗಳು:

ಸಾಮಾನ್ಯವಾಗಿ ಒಂದು ಮೂರ್ತಿಶಿಲ್ಪವನ್ನು ಗಮನಿಸಿದಾಗ ಅದು ನಿಂತ, ಕುಳಿತ ಭಂಗಿ, ತಳೆದಿರುವ ಸ್ಥಾನಕಗಳು (ಪುರುಷ ಮತ್ತು ಸ್ತ್ರೀ), ಭುಜಗಳ ಸಂಖ್ಯೆ, ಹಿಡಿದಿರುವ ಹಸ್ತ-ಮುದ್ರೆ, ಆಯುಧಗಳನ್ನು ತೊಟ್ಟಿರುವ ರೀತಿ, ಆಭರಣಗಳನ್ನು ಧರಿಸಿರುವ ರೀತಿ ಇವುಗಳು ಮುಖ್ಯವಾಗುತ್ತವೆ. ಇವುಗಳನ್ನು ಮನಬಂದಂತೆ ಚಿತ್ರಿಸುವಂತಿಲ್ಲ. ಯಾವುದೇ ಶಾಸ್ತ್ರ, ಗುರುಪರಂಪರೆಯ ದೀಪಿಕೆಯನ್ನು ಅನುಸರಿಸಿ ರಚಿಸುವ ರೀತಿ ನೀತಿಗಳನ್ನು ಒಳಗೊಂಡಿರುವ ಒಂದು ಸಂಪ್ರದಾಯ ಪ್ರತಿಮಾಲಕ್ಷಣಶಾಸ್ತ್ರವೆನಿಸಿಕೊಳ್ಳುತ್ತದೆ. ಕೈಬೆರಳುಗಳ ವಿನ್ಯಾಸ, ಹಿಡಿಯುವ ರೀತಿ ಮತ್ತು ಅದರ ಹಿಂದೆ ಅಡಗಿರುವ ಅರ್ಥ ಮತ್ತು ವಿನಿಯೋಗ ಮೂರ್ತಿಶಿಲ್ಪ, ನೃತ್ಯ ಶಿಲ್ಪಗಳಲ್ಲಿ ಮಹತ್ವಸ್ಥಾನವನ್ನು ಪಡೆದಿರುತ್ತವೆ. ಸಾಮಾನ್ಯವಾಗಿ ದೇವಿಶಿಲ್ಪಗಳಲ್ಲಿ ಅಭಯ, ವರದ, ಸೂಚಿ, ಡೋಲ ಮುದ್ರೆಗಳು ಮುಖ್ಯವಾಗಿರುತ್ತವೆ.

ದೇವತಾ ಮೂರ್ತಿಗಳನ್ನು ರಚಿಸುವಾಗ ಎರಡು ಕೈಗಳಿಗಿಂತ ಹೆಚ್ಚು ಸಂಖ್ಯೆಗಳ ಕೈಗಳನ್ನು ಮತ್ತು ಆ ಕೈಗಳಲ್ಲಿ ಶಸ್ತ್ರಾಸ್ತ್ರ ವಿವಿಧ ಆಯುಧಗಳನ್ನು ಸಂಯೋಜಿಸಲಾಗುತ್ತದೆ. ಇವೇ ಅಲ್ಲದೇ ಶುಭ ಸಂಕೇತ ಲಾಂಛನಗಳನ್ನೂ, ಸಂಗೀತ ವಾದ್ಯಗಳನ್ನೂ ಈ ಕೈಗಳಲ್ಲಿ ಕೊಡಲಾಗುತ್ತದೆ. ಹೀಗೆ ಅನೇಕ ಭುಜಗಳನ್ನು ಹೊಂದಿರುವ ಮೂರ್ತಿಗಳು ವಿವಿಧ ಮುದ್ರೆಗಳನ್ನು, ಆಯುಧಗಳನ್ನೂ, ಶುಭಸಂಕೇತ ಲಾಂಛನ ಹಾಗೂ ವಾದ್ಯಗಳನ್ನೂ ಪ್ರತಿಪಾದಿಸುವುದರಿಂದ ಇವುಗಳು ಪ್ರತಿಮಾ ಲಕ್ಷಣ ಶಾಸ್ತ್ರಕ್ಕನುಗುಣವಾಗಿ ರಚನೆಯಾಗಿರುತ್ತವೆ. ಇಷ್ಟೇ ಅಲ್ಲದೆ ಶಿಲ್ಪಿಯು ಮೂರ್ತಿಶಿಲ್ಪವನ್ನು ರಚಿಸುವಾಗ ಸುಪ್ರಸನ್ನ ಚಿತ್ತನಾಗಿ ಕಲಾತ್ಮಕವಾಗಿ ಅಲಂಕಾರಯುತವಾಗಿ ಒಂದೊಂದೇ ಲಕ್ಷಣಗಳನ್ನು ಬಿಡಿಸುತ್ತಾ ಹೋಗುತ್ತಾನೆ. ಮೂಲಭೂತವಾದ ಈ ಲಕ್ಷಣಗಳೆಲ್ಲವೂ ಬರಬರುತ್ತಾ ಶೈಲೀಕೃತಗೊಂಡಿರುವುದನ್ನು ನಾವು ವಿವಿಧ ಭಾಗಗಳ ಶಿಲ್ಪಗಳನ್ನು ಗಮನಿಸಿದಾಗ ಕಂಡುಬರುತ್ತವೆ.

ಇವುಗಳೊಂದಿಗೆ ಆಭೂಷಣಗಳು ಮೂರ್ತಿಶಿಲ್ಪದ ಸೌಂದರ್ಯವನ್ನು ಹೆಚ್ಚಿಸುತ್ತವೆ. ಪೂಜೆಮಾಡುವಂತಹ ವಿಗ್ರಹಗಳನ್ನೂ ಸ್ವಲ್ಪವೂ ನ್ಯೂನ್ಯತೆಯಿಲ್ಲದೆ ಆಭೂಷಣಗಳಿಂದ ಅಲಂಕರಿಸಿ ಕಂಡರಿಸಿದಾಗ ಅದರಲ್ಲಿ ಒಂದು ರೀತಿಯ ಅಸಾಧಾರಣ ಶಕ್ತಿಯು ಬಿಂಬಿತವಾಗುತ್ತದೆ. ಆ ಶಕ್ತಿಯು ಭಕ್ತನ ಮತ್ತು ಸಮಾಜದ ಒಳಿತಿಗೆ ಪ್ರತಿಧ್ವನಿಸುತ್ತದೆ. ಆದ್ದರಿಂದ ಶಿಲ್ಪಿಯು ಮೂರ್ತಿ ರಚನಾ ತಂತ್ರದಲ್ಲಿ ಆಭೂಷಣ ಕೌಶಲ್ಯಕ್ಕೆ ಲಕ್ಷವನ್ನು ಕೊಡಬೇಕಾಗುತ್ತದೆ. ವಿವಿಧ ರೀತಿಯ

ಮುಕುಟಗಳ, ಹಾರ, ಕಂಕಣ, ಕೇಯೂರ, ಮೇಖಲ, ಕಟಿ ಆಭರಣಗಳನ್ನು ಆಯಾ ಮೂರ್ತಿ ಲಕ್ಷಣಗಳಿಗನುಗುಣವಾಗಿ ಪ್ರಯೋಗಿಸಬೇಕಾಗುತ್ತದೆ.

ತಾಳಮಾನ

ಪ್ರತಿಮಾಲಕ್ಷಣಗಳೊಂದಿಗೆ ಮೂರ್ತಿಶಿಲ್ಪ ರಚನೆಯಲ್ಲಿ ತಾಳಮಾನವು ಅತಿಮುಖ್ಯವಾಗುತ್ತದೆ. ಸ್ತ್ರೀ ಮತ್ತು ಪುರುಷ ಮೂರ್ತಿಗಳ ತಾಳಮಾನದಲ್ಲಿ ವ್ಯತ್ಯಾಸವಿರುತ್ತದೆ. ತಾಳಮಾನವನ್ನು ಅನುಸರಿಸಿದಾಗ ಶಿಲ್ಪಗಳು ಹೆಚ್ಚು ಪ್ರಮಾಣ ಬದ್ಧವಾಗಿರುತ್ತವೆ. ಶಿಲ್ಪಶಾಸ್ತ್ರಕ್ಕನುಗುಣವಾದ ತಾಳಮಾನವಿಲ್ಲದ ಮೂರ್ತಿಗಳು ಪೂಜಾರ್ಹವಲ್ಲ ಮತ್ತು ದೇವಾಲಯ ಪರಿಸರದಲ್ಲಿ ಸ್ಥಾನವನ್ನು ಪಡೆಯಲಾರವು.

ತಾಳಮಾನವು ಶಿಲ್ಪಗಳಲ್ಲಿ ವೈಜ್ಞಾನಿಕ ಪಾತ್ರವಹಿಸಿದರೆ, ಅದರಲ್ಲಿಯ ಚಲನಾಶೀಲತೆ, ಆಭರಣ, ಆಯುಧಗಳ ಸಂಯೋಜನೆಯು ಕಲಾತ್ಮಕ ರೂಪವನ್ನು ಶಿಲ್ಪಗಳಿಗೆ ಕೊಡುತ್ತವೆ. ಇವೆಲ್ಲವನ್ನೂ ಅನುಸರಿಸಿ ರಚಿಸಲು ಆಯಾ ಶಿಲ್ಪಕ್ಕಾಗಿಯೇ ಧ್ಯಾನಶ್ಲೋಕವನ್ನು ನೀಡಲಾಗುತ್ತದೆ. ಇದೆಲ್ಲವನ್ನೂ ಮಾಡಿ ಮುಗಿಸಿದ ನಂತರ ಮೂರ್ತಿಗೆ ಜೀವಶಕ್ತಿಯನ್ನು ನೀಡಲು ಮೂರ್ತಿಯ ಕಣ್ಣುಗಳನ್ನು ವಿಧಿಯಾನುಸಾರ ತೆರೆಯಬೇಕಾಗುತ್ತದೆ. ಮತ್ತು ಶಿಲ್ಪಿಯು ತನ್ನ ಸತ್ವವನ್ನು ಮೂರ್ತಿಯಲ್ಲಿ ಬಿಂಬಿಸಬೇಕಾಗುತ್ತದೆ. ತಾಳಮಾನದ ವಿವರಗಳನ್ನು ನೀಡುವ ಗ್ರಂಥಗಳು ಸಾಮಾನ್ಯವಾಗಿ ಶಿಲ್ಪಿಗಳ ಕೈಪಿಡಿಯಂತಿದ್ದು ಗುರುವಿನಿಂದ ಶಿಷ್ಯನಿಗೆ ಅಥವಾ ಮುಖ್ಯಸ್ತಪತಿಯಿಂದ ಶಿಲ್ಪಿಗೆ ದೊರೆತಿರುತ್ತವೆ.

ಶಿಲ್ಪಶಾಸ್ತ್ರ ಗ್ರಂಥಗಳಲ್ಲಿ ದೇವಾಲಯ ಶಿಲ್ಪಗಳನ್ನು ರಚಿಸಲು ಅನುವಾಗುವಂತಹ ತಾಳಮಾನದ ವಿವರಗಳನ್ನು ಪ್ರತಿಮಾ-ಲಕ್ಷಣ ಗ್ರಂಥಗಳೆಂದು ಗುರುತಿಸಲಾಗಿದೆ. ಇವುಗಳಲ್ಲಿ ಮುಖ್ಯವಾದವು-

ಸಕಲಾಧಿಕಾರ

ಮಾನಸಾರ

ಕಾಶ್ಯಪಶಿಲ್ಪ

ಸರಸ್ವತೀಯಂ

ಮಯಮತಂ

ಬಿಂದ್ರಮತಂ

ವಿಶ್ವಕರ್ಮೀರ್ಯಯಂ

ಶಿಲ್ಪರತ್ನಂ

ಪೂರ್ವಕರ್ಣಾಗಮ

ಕುಮಾರತಂತ್ರ

ಅಜಿತಾಗಮ

ಸುಪ್ರಬೇಧಾಗಮ ಮುಂತಾದವು.

ಈ ಗ್ರಂಥಗಳನ್ನು ಗುರುಪರಂಪರೆಯ ಅಭಿಮತದಂತೆ ಪಾಲಿಸಲಾಗುವುದು.

ದೇವಾಲಯ ರಚನೆಯಲ್ಲಿ ಮೂಲದೇವರ ತಾಳಮಾನವನ್ನು ನಿರ್ಧರಿಸಿದ ನಂತರ ಅದಕ್ಕೆ ಅನುಗುಣವಾಗಿ ಗರ್ಭಗುಡಿ, ದ್ವಾರ, ಮಂಟಪ, ಕಂಭಗಳು, ಶಿಖರಗಳು ಮುಂತಾದವನ್ನೂ ಮೂರುಪಟ್ಟು, ಆರುಪಟ್ಟು, ಹನ್ನೆರಡುಪಟ್ಟು, ಹದಿನಾರು, ಇಪ್ಪತ್ತನಾಲ್ಕು ಪಟ್ಟು ಪ್ರಮಾಣವನ್ನು ಹೆಚ್ಚಿಸುತ್ತಾ ಹೋಗಬೇಕಾಗುತ್ತದೆ. ಮೂರ್ತಿಯ ಎತ್ತರವನ್ನು ಆಧಾರವಾಗಿರಿಸಿ ಅವನ್ನು ಉತ್ತಮತಾಳ, ಮಧ್ಯಮತಾಳ ಮತ್ತು ಅಧಮತಾಳವೆಂದು ವರ್ಗೀಕರಿಸಲಾಗಿದೆ. ಶೈವದೇವಾಲಯವಾದರೆ ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸುವ ಲಿಂಗದ ತಾಳಮಾನಕ್ಕನುಗುಣವಾಗಿ ಇಡೀ ಕಟ್ಟಡ ಪ್ರಮಾಣ ಮತ್ತು ಅಳತೆಯನ್ನು ಪಡೆದುಕೊಳ್ಳುತ್ತದೆ. ಅದರಂತೆ ವೈಷ್ಣವ ದೇವಾಲಯವಾದರೆ ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸುವ ಸ್ಥಾನಕ, ಆಸೀನ ಮತ್ತು ಶಯನ ಭಂಗಿಯ ವಿಷ್ಣುವಿನ ಮೂರ್ತಿಗೆ ಅನುಗುಣವಾದ ತಾಳಮಾನ ರೂಪಗೊಳ್ಳುತ್ತದೆ. ಅದನ್ನು ಅನುಸರಿಸಿ ದೇವಾಲಯದ ವಿವಿಧ ಭಾಗಗಳು ಪ್ರಮಾಣವನ್ನು ಪಡೆದು ರೂಪಗೊಳ್ಳುತ್ತಾ ಹೋಗುತ್ತವೆ.

ತಾಳಮಾನಗಳ ಪ್ರಕಾರಗಳು

ಉತ್ತಮಂ ದಶತಾಳೇನ ಬ್ರಹ್ಮವಿಷ್ಣು ಮಹೇಶ್ವರಾಃ ।

ಬ್ರಹ್ಮ, ವಿಷ್ಣು ಮತ್ತು ಮಹೇಶ್ವರನ ಮೂರ್ತಿಗಳು ಉತ್ತಮ ದಶತಾಳದಲ್ಲಿ ರಚಿತವಾಗಬೇಕು ಎಂದು ಶಿಲ್ಪರತ್ನದ ಉತ್ತರಭಾಗದ ನಾಲ್ಕನೇ ಅಧ್ಯಾಯದಲ್ಲಿ ಉಲ್ಲೇಖವಾಗಿದೆ. ಮೂರ್ತಿ ರಚನೆಯಲ್ಲಿ ಷನ್ಮಾನಗಳು ಅಂದರೆ ಆರು ರೀತಿಯ ಮಾನಗಳು ಮುಖ್ಯವಾಗುತ್ತವೆ. ೧. ಉದ್ದವನ್ನು ಮಾನವೆನ್ನಲಾಗುತ್ತದೆ. ೨. ಅಗಲವನ್ನು ಪ್ರಮಾಣವೆನ್ನಲಾಗುವುದು. ೩. ಎತ್ತರವನ್ನು

ಉನ್ಮಾನವೆಂತಲೂ ೪. ಹೊರಗಿನ ಸುತ್ತಳತೆಯನ್ನು ಪರಿಮಾನವೆಂತಲೂ ೫. ಒಂದು ಭಾಗದಿಂದ ಇನ್ನೊಂದು ಭಾಗದ ಮಧ್ಯದ ಅಳತೆಯನ್ನು ಉಪಮಾನವೆಂದೂ ೬. ಮೂರ್ತಿಯಲ್ಲಿ ಮುಂಚೆ ಚಾಚಿಕೊಂಡಿರುವ ಭಾಗವು ಲಂಬಮಾನವೆಂದು ಪರಿಗಣಿಸಲಾಗುತ್ತದೆ. ಇದಲ್ಲದೆ ಲಂಬಸೂತ್ರ ಅಥವಾ ಪ್ರಲಂಬಸೂತ್ರವೆಂಬ ಒಂದು ಕಾಲ್ಪನಿಕ ರೇಖೆಯು ತಲೆಯ ತುದಿಯಿಂದ ಕಾಲಿನವರೆಗೂ ಹರಿದು ಬರುತ್ತದೆ. ಈ ಸೂತ್ರವಿಲ್ಲದಿದ್ದರೆ ಮೂರ್ತಿಯು ನಿಶ್ಚಿತ ಪ್ರಮಾಣವನ್ನು ಪಡೆಯಲು ವಿಫಲವಾಗುತ್ತದೆ. (V. Ganapati sthapati, Indian Sculpture and Iconography - forms and Measurements, Aurobindo Society - Pondichery, ೨೦೦೨. ka.೨೭೨)

ದಶತಾಳಮೂರ್ತಿಶಿಲ್ಪ: ದಶತಾಳ ಮೂರ್ತಿಗಳು ಹೆಚ್ಚು ಎತ್ತರವಾಗಿರುತ್ತವೆ. ಇದರಲ್ಲಿ ಉತ್ತಮದಶತಾಳ, ಮಧ್ಯಮದಶತಾಳ ಮತ್ತು ಅಧಮದಶತಾಳವೆಂಬ ಮೂರು ಪ್ರಕಾರಗಳಿವೆ. ಬ್ರಹ್ಮ, ವಿಷ್ಣು, ಶಿವ, ಅರ್ಧನಾರೀಶ್ವರ, ದತ್ತಾತ್ರೇಯ, ಬುದ್ಧ, ಮಹಾವೀರ, ವಾಸುದೇವ ಮೂರ್ತಿಗಳನ್ನು ಉತ್ತಮದಶತಾಳದಲ್ಲಿ ರಚಿಸಲಾಗುವುದು. ಈ ಮೂರ್ತಿಗಳ ಭಕ್ತನಿಗೆ ಮುಕ್ತಿ ರೂಪದಲ್ಲಿ ಕಂಡುಬರುತ್ತವೆ. ಅಂದರೆ ಇವು ಸಾಯುಜ್ಯಮೂರ್ತಿರೂಪ.

ಮಧ್ಯಮದಶತಾಳ: ಉಮಾ, ಲಕ್ಷ್ಮೀ, ಸರಸ್ವತೀ, ದುರ್ಗಾ, ಭೂದೇವಿ, ಶ್ರೀರಾಮ, ಸಪ್ತಮಾತೃಕೆಯರನ್ನು ಮಧ್ಯಮದಶತಾಳದಲ್ಲಿ ರಚಿಸಲಾಗುವುದು. ಈ ಮೂರ್ತಿಗಳು ಬಾಹ್ಯ ಲಕ್ಷಣಗಳಿಂದ ಹೆಚ್ಚು ಪ್ರಭಾವ ನೀಡುತ್ತವೆ. ಇವು ಸಾರೂಪ್ಯ ಮೂರ್ತಿರೂಪಗಳು.

ಅಧಮದಶತಾಳ: ಇಂದ್ರ, ಅಗ್ನಿ, ವರುಣ, ಅಶ್ವಿನಿ, ಸ್ಕಂದ, ವೀರಭದ್ರ, ಕ್ಷೇತ್ರ ಪಾಲಿ, ಈಶಾನ, ಸೂರ್ಯ, ಚಂದ್ರ, ಯಮ, ವಾಯು, ಚಂಡಿಕೇಶ್ವರ, ದ್ವಾದಶ ಆದಿತ್ಯ, ಏಕಾದಶರುದ್ರ, ಭೃಗು ಮಹರ್ಷಿ, ಮಾರ್ಕಂಡೇಯ ಆರ್ಯ, ಲಕ್ಷ್ಮಣ, ಈ ಮೂರ್ತಿಗಳನ್ನು ಅಧಮದಶತಾಳದಲ್ಲಿ ನಿರ್ಮಿಸಲಾಗುವುದು. ಇವು ಮೂಲ ಮೂರ್ತಿಯ ಸಾಮೀಪ್ಯ ಬಯಸುವುದರಿಂದ ಇವು ಸಾಮೀಪ್ಯ ರೂಪಗಳು.

ನವತಾಳ ಮೂರ್ತಿಗಳು: ಇವು ಒಂಭತ್ತು ತಾಳಪ್ರಮಾಣವನ್ನು ಹೊಂದಿರುತ್ತವೆ. ಇಲ್ಲಿಯೂ ಉತ್ತಮ ನವತಾಳ, ಮಧ್ಯಮನವತಾಳ ಮತ್ತು ಅಧಮನವತಾಳ ಮೂರ್ತಿಗಳೆಂದು ಪರಿಗಣಿಸಲಾಗಿದೆ.

ಉತ್ತಮನವತಾಳ: ದೇವ ಮತ್ತು ದೇವಿ ಮೂರ್ತಿಗಳು, ಅಷ್ಟಮೂರ್ತಿ, ಲೋಕಪಾಲ, ನಿರುತಿ, ಕುಬೇರ, ಮನ್ಮಥ, ನಾಗೇಂದ್ರ, ಗರುಡ, ವಶಿಷ್ಟ, ವಿಶ್ವಾಮಿತ್ರ, ಭಾರ್ಗವ, ಗುರು, ಶುಕ್ರ, ಶನಿ, ರಾಹು, ಮುಂತಾದ ಮೂರ್ತಿಗಳು ದೈವ ಪ್ರಜ್ಞಾಭೂತವಾದ್ದರಿಂದ ಅವು ಸಾಲೋಕ್ಯ ರೂಪವಾಗಿರುತ್ತವೆ.

ಮಧ್ಯಮನವತಾಳ: ಅಷ್ಟಮೂರ್ತಿ, ಯಕ್ಷ, ಅಪ್ಸರ, ಮಾರುತಗ್ನ, ವಿದ್ಯಾಧರ ಮುಂತಾದವು.

ಅಧಮನವತಾಳ: ಅಸುರ, ಸಿದ್ದರು, ಗಂಧರ್ವ, ಪಿತೃ ಮುಂತಾದವುಗಳನ್ನು ಅಧಮತಾಳದಲ್ಲಿ ರಚಿಸಲಾಗುವುದು.

ಇವಲ್ಲದೇ ಅಷ್ಟತಾಳದಲ್ಲಿ ಮಾನವರು, ಆಳ್ವಾರ್ ಮೂರ್ತಿಗಳನ್ನೂ ಸಪ್ತತಾಳದಲ್ಲಿ ಅಗಸ್ತ್ಯ ಮತ್ತು ಹನುಂತನ ಮೂರ್ತಿಗಳನ್ನೂ, ಶಟ್ತಾಳದಲ್ಲಿ ಕುಬ್ಜ ಗಣ, ಯಕ್ಷ ಮುಂತಾದ ಮೂರ್ತಿಗಳನ್ನೂ, ಪಂಚತಾಳದಲ್ಲಿ-ಉತ್ತಮದಲ್ಲಿ ವಿನಾಯಕ, ಬಾಲಸ್ಕಂದ ಮತ್ತು ವಾಮನ ಮೂರ್ತಿಯನ್ನೂ, ಮಧ್ಯಮದಲ್ಲಿ ಭೂತಗಳನ್ನೂ, ಆಧಮದಲ್ಲಿ ಬಾಲಕೃಷ್ಣನನ್ನೂ, ಚತುಷ್ತಾಲದಲ್ಲಿ ಕೋತಿಗಳನ್ನೂ, ತ್ರಿತಾಳದಲ್ಲಿ ಕಿನ್ನರಿ ಕಿಂಪುರುಷರನ್ನೂ, ದ್ವಿತಾಳದಲ್ಲಿ ಮತ್ಸ್ಯ, ಕೂರ್ಮಾದಿ ಮೂರ್ತಿಗಳನ್ನೂ ಹಾಗೂ ಏಕತಾಳದಲ್ಲಿ ಆಮೆ, ಅಂಡಾಕಾರ, ತಲೆಯಿಲ್ಲದ ಆಕಾರಗಳನ್ನೂ ರಚಿಸಲು ಶಾಸ್ತ್ರ ಗ್ರಂಥಗಳು ವಿಧಿಸುತ್ತವೆ. ಈ ಹತ್ತು ತಾಳಗಳೇ ಅಲ್ಲದೇ ನವಾರ್ಧತಾಳವೆಂಬ ಪ್ರಕಾರವೂ ಇದೆ. ಇದು ದಶ ಮತ್ತು ನವತಾಳಗಳ ಮಧ್ಯದ ಅಳತೆಯಾಗಿರುತ್ತದೆ. ಇದರಲ್ಲಿಯೂ ದಶತಾಳದಂತೆ ಎಲ್ಲಾ ಮೂರ್ತಿಗಳನ್ನು ರಚಿಸಬಹುದೆಂದು ಶಿಲ್ಪಶಾಸ್ತ್ರ ಗ್ರಂಥಗಳು ನಿರ್ದೇಶಿಸುತ್ತವೆ. (Ibid)

ದೇವಿ-ದುರ್ಗಾ, ಮಹಿಷಾಸುರ ಮರ್ಧಿನಿ ಶಿಲ್ಪದ ಮೂರ್ತಿಲಕ್ಷಣ, ಮತ್ತು ತಾಳಮಾನ

ಮಧ್ಯಮೇ ದಶತಾಲೇನ ತಥೈವೋಮಾ ಸರಸ್ವತೀ ।
ಉಷಾಭೂಮಿಶ್ಚ ದುರ್ಗಾಚ ಲಕ್ಷ್ಮೀ ಜೇಷ್ಠಾ ಚ ಮಾತರಃ ॥
ಮಧ್ಯಮಂ ದಶತಾಲೇನ ವಾತ್ರಿಮೂರ್ತೀನ ಪ್ರಕಲ್ಪಯೇತ್ ।
(ಶಿಲ್ಪರತ್ನ-ಅಧ್ಯಾಯ-೪)

ಮಧ್ಯಮ ದಶತಾಳದಲ್ಲಿ ಮುಖ್ಯವಾಗಿ ಉಮಾ, ಸರಸ್ವತೀ, ಭೂಮಿ-ಭೂದೇವಿ, ದುರ್ಗಾ, ಲಕ್ಷ್ಮೀ, ಜ್ಯೇಷ್ಠಾದೇವಿ ಹಾಗೂ ಇತರ ಸ್ತ್ರೀದೇವತೆಗಳನ್ನು ರಚಿಸಲಾಗುತ್ತದೆ. ಅಲ್ಲದೇ ತ್ರಿಮೂರ್ತಿ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರನ್ನೂ ಇದೇ ಅಳತೆ ಪ್ರಮಾಣಗಳಿಂದ ಮಧ್ಯಮ ದಶತಾಳದಲಿ ನಿರ್ಮಿಸಲು ಸಾಧ್ಯ

ಉತ್ತಮದಶತಾಳವು ಹಿಂದೆ ಸೂಚಿಸಿದಂತೆ ಮೂಲತಃ ಪುರುಷ ದೇವತೆಗಳನ್ನು ರಚಿಸಲು ಬಳಸಲಾಗುವುದರಿಂದ ದೇವೀಮೂರ್ತಿಶಿಲ್ಪಗಳನ್ನು ಮಧ್ಯಮದಶತಾಳ ಪ್ರಮಾಣದಲ್ಲಿಯೇ ರಚಿಸಲಾಗುವುದು. ಯಾವ ಮೂರ್ತಿಯನ್ನು ಸ್ತ್ರೀ ಅಥವಾ ಪುರುಷನಾದರೂ ಶಕ್ತಿಯ ಅನುಷ್ಠಾನವಿರುತ್ತದೆಯೋ ಅಂತಹ ಶಿಲ್ಪವನ್ನು ಮಧ್ಯಮದಶತಾಳದಲ್ಲಿಯೇ ನಿರ್ಮಿಸಲಾಗುವುದು. ಮಧ್ಯಮ ದಶತಾಲದಲ್ಲಿ ಸ್ತ್ರೀ ಶಿಲ್ಪಗಳಿಗಾಗಿಯೇ ಪ್ರತ್ಯೇಕ ತಾಳಮಾನವಿರುತ್ತದೆ. ದುರ್ಗಾ, ಪಾರ್ವತಿ, ಮಹಿಷಾಸುರ ಮರ್ಧಿನಿ ಈ ಶಿಲ್ಪಗಳನ್ನು ರಚಿಸುವಾಗ ಅನುಸರಿಸಬೇಕಾದ ಮಧ್ಯಮ ದಶತಾಲಮಾನವನ್ನು ಶಿಲ್ಪಶಾಸ್ತ್ರ ಗ್ರಂಥಗಳಾದ ಸಕಲಾಧಿಕಾರ, ಶಕ್ತಿದೇವತೆಯರಾದ ಕಾಶ್ಯಪ, ಸರಸ್ವತೀಯಂ, ಬ್ರಹ್ಮೀಯಂ, ಪ್ರಮಾಣ ಅಳತೆಗಳನ್ನು ಅನುಸರಿಸುತ್ತವೆ. ಅದರಲ್ಲಿ ಅಷ್ಟಾಗಿ ಯಾವ ವ್ಯತ್ಯಾಸಗಳೂ ಕಾಣುವುದಿಲ್ಲವೆಂದು ಶ್ರೀ ಗಣಪತಿ ಸ್ಥಪತಿಯವರು ಅಭಿಪ್ರಾಯ ಪಡುತ್ತಾರೆ. ಅವರ ಅಭಿಪ್ರಾಯದಂತೆ ಶಕ್ತಿದೇವತೆಯ ಮೂರ್ತಿಶಿಲ್ಪದ ತಾಳಮಾನ ಈ ರೀತಿಯಾಗಿದೆ.

ಶಕ್ತಿದೇವತೆಯ ತಾಳಮಾನ

ತಲೆಯ ಮೇಲ್ಭಾಗ	೪' – ೦"	೧೩' – ೦"
ಕೂದಲಿನಿಂದ ಕಣ್ಣಿನ ಮಟ್ಟ	೪' – ೬"	
ಕಣ್ಣಿನಿಂದ ಮೂಗಿನ ತುದಿಗೆ	೪' – ೬"	
ಮೂಗಿನ ತುದಿಯಿಂದ ಗಲ್ಲದ ವರೆಗೆ	೩' – ೬"	
ಗಲ್ಲದಿಂದ (ಚೆಬುಕ) ಕಂಠದವರೆಗೆ	೪' –೦"	
ಕತ್ತಿನಿಂದ ವಕ್ಷದವರೆಗೆ	೧೩' – ೦"	

ವಕ್ಷದಿಂದ ನಾಭಿಯವರೆಗೆ	೧೩' – ೦"	
ನಾಭಿಯಿಂದ ಪುಷ್ಪವನ್ನು ಸೇರಿ	೧೩' – ೦"	
ಊರು (ತೊಡೆ) ಭಾಗ	೨೬' – ೦"	
ಮಂಡಿಯ ಭಾಗ	೪' – ೦"	
ಕಣಕಾಲು ಸೇರಿದಂತೆ	೨೬' – ೦"	
ಪಾದಭಾಗ	೪' – ೦"	
ಒಟ್ಟು ಅಳತೆ ಎಲ್ಲಾ ಭಾಗ ಸೇರಿ	೧೨೦' – ೦"	

ಇದಲ್ಲದೇ ವಿವಿಧ ಭಾಗಗಳ ಸುತ್ತಳತೆ ಪ್ರತಿಯೊಂದು ಅವಯವಗಳ ಮಧ್ಯದ ಅಳತೆಗಳನ್ನು ತಾಳಮಾನದ ಪ್ರಕಾರ ಲಕ್ಷದಲ್ಲಿಟ್ಟುಕೊಂಡು ಶಕ್ತಿದೇವತೆಯ ಮೂರ್ತಿಗಳನ್ನು ರಚಿಸಲಾಗುತ್ತದೆ.

ಸ್ಥಾನಕ

ಮಹಿಷಾಸುರಮರ್ಧಿನಿಯ ಮೂರ್ತಿ ಮತ್ತು ಶಿಲ್ಪ ರಚನೆಗಳಲ್ಲಿ ಕಂಡು ಬರುವ ಪ್ರಮುಖ ಸ್ಥಾನಕಗಳೆಂದರೆ ಗರುಡಾಸನ, ವೈಶಾಖಸ್ಥಾನಕ, ವೈಷ್ಣವ ಸ್ಥಾನಕ, ಸಮಪಾದ, ಸ್ವಸ್ತಿಕ ಸ್ಥಾನಕ, ಆಲೀಡ, ಪ್ರತ್ಯಾಲೀಢ, ಊರ್ಧ್ವಜಾನು, ಈ ಸ್ಥಾನಕಗಳನ್ನು ಚಲನಾತ್ಮಕವಾಗಿ ಮತ್ತು ಹೆಚ್ಚು ಶಕ್ತಿಯುತವಾಗಿ ಶಿಲ್ಪಗಳಲ್ಲಿ ಸೃಜಿಸಲಾಗಿರುತ್ತದೆ.

ಹಸ್ತ–ಮುದ್ರೆ–ಶಿಲ್ಪಶಾಸ್ತ್ರ ಮತ್ತು ನಾಟ್ಯಶಾಸ್ತ್ರಗಳಲ್ಲಿ ಹಸ್ತ–ಮುದ್ರೆಗಳನ್ನು ಅವುಗಳ ವಿನಿಯೋಗವನ್ನು ಹಿನ್ನೆಲೆಯ ಅರ್ಥ ಮತ್ತು ಪ್ರಯೋಗಕ್ಕನುಗುಣವಾಗಿ ವಿಧಿಸಲಾಗಿರುತ್ತದೆ. ಆ ಹಸ್ತ–ಮುದ್ರೆಗಳಲ್ಲಿ ಮಹಿಷಾಸುರಮರ್ಧಿನಿ, ದುರ್ಗಾದೇವಿಯರನ್ನು ಕಂಡರಿಸುವಾಗ ಕೆಲವು ವಿಶಿಷ್ಟ ಹಸ್ತ – ಮುದ್ರೆಗಳನ್ನು ವಿನಿಯೋಗಿಸಲಾಗುತ್ತದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ, ಭಕ್ತನನ್ನು ಸದಾ ಕಾಪಾಡಿ ರಕ್ಷಿಸುವ ಅಭಯ ಮುದ್ರೆ, ಭಕ್ತನಿಗೆ ವರಗಳನ್ನು ನೀಡಲು ವರದ

ಮುದ್ರೆ, ಕಟಕಹಸ್ತವು ವಿಶೇಷವಾಗಿ ಆಯುಧಗಳನ್ನು ಇತರ ವಸ್ತುಗಳನ್ನು ಹಿಡಿಯಲು ಉಪಯೋಗಿಸುವಂತಹದು. ಕೈಬೆರಳುಗಳನ್ನು ವೃತ್ತಾಕಾರವಾಗಿ ಹಸ್ತದೊಳಕ್ಕೆ ತಿರುಗಿಸುವ ಮುದ್ರೆಯನ್ನು ಸಿಂಹಕರ್ಣ ಎಂದು ಹೆಸರಿಸಲಾಗಿದೆ. ಇದನ್ನು ಕಮಲದ ಹೂ, ಶುಕ ಮುಂತಾದ ಹಗುರ ವಸ್ತುಗಳನ್ನು ಹಿಡಿದುಕೊಳ್ಳಲು ವಿನಿಯೋಗಿಸಲಾಗುತ್ತದೆ. ಸೂಚಿಮುದ್ರೆಯನ್ನು ಅಲ್ಲಿಗೆ ಎಂದು ತೋರಿಸಲು ಉಪಯೋಗಿಸಲಾಗುವುದು. ಎಚ್ಚರಿಕೆಯ ಭಾವವನ್ನು ಸೂಚಿಸಲು ತರ್ಜನೀಮುದ್ರೆ, ದೈವಲೀಲೆಯನ್ನು ವಿಸ್ಮಯಗೊಳ್ಳುವಂತೆ ತೋರುವ ಹಸ್ತ ವಿಸ್ಮಯ ಹಸ್ತವಾಗುತ್ತದೆ. ಅರ್ಧಚಂದ್ರ ನಡುವನ್ನು ಹಿಡಿದುನಿಲ್ಲಲು, ಮುಷ್ಠಿ ಮುದ್ರೆ ಭಾರವಾದ ಆಯುಧಗಳನ್ನು ಹಿಡಿಯಲು, ಪಲ್ಲವಹಸ್ತ ಜಯವನ್ನು ಸೂಚಿಸಲು, ಕಟಿಹಸ್ತವನ್ನು ಕಟಿಭಾಗದಲ್ಲಿ ನಿಲ್ಲಿಸಲು, ತಾಡನ ಹಸ್ತ ಪ್ರಖರವಾಗಿ ತಟ್ಟುತ್ತೇನೆಂದು ತೋರಲು, ಧನಸ್ಸನ್ನು ಹಿಡಿಯಲು ಧನುಹಸ್ತವನ್ನು ಮತ್ತು ಅಕ್ಷಮಾಲೆಯನ್ನು ಹಿಡಿಯಲು ಸಂದಂಶಮುದ್ರೆ ವಿನಿಯೋಗವಾಗುತ್ತದೆ.

ಆಯುಧಗಳ ವಿನ್ಯಾಸ

ಮಹಿಷಾಸುರ ಮರ್ಧಿನಿಯು ಸಮರದೇವತೆ. ಭೀಕರ ಸಮರಕ್ಕಾಗಿ ಪೂರ್ವ ತಯಾರಿ ಮಾಡಿಕೊಂಡೆ ವಿವಿಧ ಆಯುಧಗಳನ್ನು ತೊಟ್ಟವಳು. ಅಗ್ನಿಪುರಾಣ, ಭವಿಷ್ಯಪುರಾಣ, ವಿಷ್ಣುಧರ್ಮೋತ್ತರ, ಪೂರ್ವ ಕಾಮಿಕಾಗಮ, ಶಿಲ್ಪರತ್ನ, ರೂಪಮಂಡನ ಮುಂತಾದ ಅನೇಕ ಗ್ರಂಥಗಳನ್ನು ಸಮೀಕ್ಷಿಸಿದಾಗ ಅನೇಕ ಆಯುಧಗಳು ಉಲ್ಲೇಖಗೊಂಡಿವೆ. ತ್ರಿಶೂಲ, ಧನಸ್ಸು, ಬಾಣ, ಖಡ್ಗ, ಶಂಖ, ಚಕ್ರ, ವಜ್ರ, ಘಂಟೆ, ಕೊಡಲಿ, ಪರಶು, ಈ ಆಯುಧಗಳನ್ನು ಎಲ್ಲಾ ಗ್ರಂಥಗಳೂ ಹೆಸರಿಸುತ್ತವೆ. ಇನ್ನು ಉಳಿದುದನ್ನು ಹಲವು ಗ್ರಂಥಗಳು ಮಾತ್ರ ಉಲ್ಲೇಖಿಸುತ್ತವೆ. ಶಾಸ್ತ್ರಗ್ರಂಥಗಳು ಮತ್ತು ಶಿಲ್ಪಗಳನ್ನು ಅವಲೋಕಿಸಿದಾಗ ಸುಮಾರು ೩೦ ತರಹದ ಶಸ್ತ್ರಾಸ್ತ್ರಗಳು ಗಮನಕ್ಕೆ ಬರುತ್ತವೆ. ಶಿಲ್ಪಗಳಲ್ಲಿ ಆಯುಧಗಳನ್ನು ಚಿತ್ರಿಸುವಾಗ ಕಲಾತ್ಮಕವಾಗಿ, ಅಲಂಕಾರಯುತವಾಗಿ ಬಿಡಿಸುವ ಪದ್ಧತಿಯುಂಟು. ಪ್ರಾಚೀನ ಶಿಲ್ಪಗಳನ್ನು ಗಮನಿಸಿದಾಗ ಆಯುಧಗಳು ಸರಳವಾಗಿ ಕಂಡುಬರುತ್ತವೆ. ಬರಬರುತ್ತಾ ಜಟಿಲವಾಗುತ್ತಾ ಹೋಗುತ್ತವೆ. ಹೊಯ್ಸಳ ಶೈಲಿಯ ಶಿಲ್ಪಗಳಲ್ಲಿ ಆಯುಧಗಳನ್ನು ಎಲ್ಲಿದೆಯೆಂದು ಹುಡುಕಬೇಕಾಗುತ್ತದೆ. ಕಾರಣ ಶಿಲ್ಪಗಳ ಸಂಯೋಜನೆಯಲ್ಲಿ ಪ್ರಭಾವಳಿ ಕುಸುರಿ ಕೌಶಲ್ಯದ ಮಧ್ಯದಲ್ಲಿ ಆಯುಧಗಳನ್ನೂ ಆಭರಣಗಳಂತೆಯೇ ಅಲಂಕಾರಗೊಳಿಸಲಾಗುವುದು. ಹೊಯ್ಸಳ ದೇವಾಲಯದ ಭಿತ್ತಿಯಲ್ಲಿರುವ ಮಹಿಷಾಸುರಮರ್ಧಿನಿ ಶಿಲ್ಪಗಳಲ್ಲಿ ಇಂತಹ ಗುಣಲಕ್ಷಣಗಳನ್ನು ಕಾಣಬಹುದಾಗಿದೆ.

ಮಹಿಷಾಸುರಮರ್ಧಿನಿಯನ್ನು ಕುರಿತಾದ ಮೂರ್ತಿಲಕ್ಷಣ ಗ್ರಂಥಗಳಲ್ಲಿ ಕೈಗಳ ಸಂಖ್ಯೆಯಲ್ಲಿ ಭೇಧಗಳನ್ನು ಕಾಣುತ್ತೇವೆ. ದೇವಿಯು ಸಮಸ್ತ ಆಯುಧಗಳನ್ನು ಧರಿಸಲು ಅನೇಕ ತೋಳು ಬಲ, ಭುಜ ಒಲವಿರಬೇಕಲ್ಲವೆ. ಸಿಂಹವಾಹಿನಿ ದುರ್ಗೆಯಾಗಿ ಬರುವಾಗಲೂ ದೇವಿಯು ಸಮರಕ್ಕೆ ಎದುರಾಳಿಯನ್ನು ಎದುರಿಸಲು ಸಜ್ಜಾಗಿಯೇ ಬರುತ್ತಾಳೆ. ಹೀಗಾಗಿ ಆರು, ಎಂಟು, ಹತ್ತು, ಹನ್ನೆರಡು, ಹದಿನಾಲ್ಕು, ಹದಿನಾರು ಭುಜಗಳನ್ನು ಹೊಂದಿದ್ದು ಆಯುಧಗಳನ್ನೂ ತೊಟ್ಟಿರುತ್ತಾಳೆ. ಅದರಂತೆ ಸಮರದಲ್ಲಿ ತೊಡಗಿದಾಗ, ಮಹಿಷಾಸುರನನ್ನು ವಧಿಸುತ್ತಿರುವ ಭಂಗಿಯಲ್ಲಿ ಆಯುಧಗಳ ಪ್ರಯೋಗವನ್ನು ಅನೇಕ ಬಾಹುಗಳ ಮೂಲಕ ಸತ್ವಯುತವಾಗಿ ಶಿಲ್ಪಿಗಳು ಪ್ರತಿಬಿಂಬಿಸುತ್ತಾರೆ. ಆಯುಧಗಳನ್ನು ಹಿಡಿಯುವ ಬಾಹುಗಳ ಸಂಖ್ಯೆ ಹಿಡಿಯುವ ರೀತಿ, ಸಂಹರಿಸುವ ಭಂಗಿ, ಧರಿಸಿರುವ ಆಭರಣಗಳು, ಆಯುಧಗಳನ್ನು ರಚಿಸುವ ರೀತಿಯಲ್ಲಿ ಕಾಲದಿಂದ ಕಾಲಕ್ಕೆ ಬದಲಾವಣೆಗೊಂಡು ಶೈಲೀಕೃತವಾಯಿತು. ಚಾಲುಕ್ಯರ ಶೈಲಿ, ಹೊಯ್ಸಳಶೈಲಿ, ಚೋಳರ ಶೈಲಿ, ಪಲ್ಲವರಶೈಲಿ ಮುಂತಾದವು. (ಮುಂದಿನ ಅಧ್ಯಾಯದಲ್ಲಿ ಈ ವಿಷಯದ ಬಗ್ಗೆ ಹೆಚ್ಚು ವಿವರಗಳನ್ನು ನೀಡಲಾಗಿದೆ) ಸ್ಥಾನಕ, ಆಸೀನ ಮತ್ತು ಶಯನ ಮೂರ್ತಿಗಳ ಕೈಗಳಲ್ಲಿ ಕೊಡುವ ಆಯುಧ ಪ್ರಯೋಗವನ್ನು ಸೂಚಿಸುವುದಿಲ್ಲ. ಅಲ್ಲಿ ಆಯುಧಗಳು ಒಂದು ಮೂರ್ತಿಯಿಂದ ಇನ್ನೊಂದು ಮೂರ್ತಿಯ ಮಧ್ಯದ ಸಾಂಕೇತಿಕ ವ್ಯತ್ಯಾಸಗಳನ್ನು ಸೂಚಿಸುತ್ತವೆ ಹಾಗೂ ಲಾಂಛನಗಳಂತೆ ಇರುತ್ತವೆಯೇ ಹೊರತು ಸಕ್ರಿಯವಾಗುವುದಿಲ್ಲ, ಆದರೆ ಮಹಿಷಾಸುರಮರ್ಧಿನಿಯ ಶಿಲ್ಪದಲ್ಲಿಯ ಆಯುಧಗಳು ಶಸ್ತ್ರಾಸ್ತ್ರಗಳೇ ವಿನಹ ಲಾಂಛನಗಳಲ್ಲ. ಏಕೆಂದರೆ ಇಲ್ಲಿ ದೇವಿಯು ಚಲನಾಶೀಲಳಾಗಿ ಆಯುಧಗಳನ್ನು ಸತ್ವಯುತವಾಗಿ ಬಳಸುವ ರೀತಿಯಲ್ಲಿ ಕಂಡರಿಸಲಾಗುತ್ತದೆ. ಉದಾಹರಣೆಗೆ, ಚಕ್ರ ಲಾಂಛನದಂತೆ ಇದ್ದಾಗ ಸ್ಥಿತ ಚಕ್ರವೆನಿಸಿಕೊಳ್ಳುತ್ತದೆ. ಆದರೆ ಅದು ಪಕ್ಕಕ್ಕೆ ತಿರುಗಿಸಿದಾಗ ಪ್ರಯೋಗ ಚಕ್ರವಾಗುತ್ತದೆ.

ಒಟ್ಟಿನಲ್ಲಿ ಮಹಿಷಾಸುರಮರ್ಧಿನಿಯು ತೊಟ್ಟಿರುವ ಆಯುಧಗಳು ವಿಶಿಷ್ಟವೂ ಹೆಚ್ಚಿನ ಸಂಖ್ಯೆಯಲ್ಲೂ ಇರುತ್ತವೆ. ಅವುಗಳೆಂದರೆ ಶಕ್ತಿ ಆಯುಧ, ತ್ರಿಶೂಲ, ವಜ್ರಾಯುಧ, ಪಾಶ, ಅಂಕುಶ, ಗದೆ, ಬಿಲ್ಲು, ಪರಶು, ಶಂಖ, ಸ್ಥಿತಿಚಕ್ರ, ಪ್ರಯೋಗ ಚಕ್ರ, ಶೂಲ, ಢಮರು, ಛತ್ರಿ, ಕಾರ್ಮುಕ, ಕೃಪಾಣ, ತಂದ, ಮಾನವರುಂಡ, ಖಡ್ಗ, ಖೇಟಕ, ದೊಣ್ಣೆ, ಘಂಟೆ, ಕಲಶ, ಕೊಡಲಿ, ಬಾಹಾ, ಪಾನಪಾತ್ರೆ, ಧ್ವಜ, ಜಪಮಾಲೆ, ಕಮಲ, ದಂಡ, ದರ್ಪಣ, ಮುದ್ಗರ, ಸತ್ಯಾಯುಧ, ಕಾರ್ಮುಕ, ಕೃಪಾಣ ಮತ್ತು ಖಟ್ವಾಂಗ. ಇಷ್ಟೆಲ್ಲಾ ಆಯುಧಗಳನ್ನು ದೇವಿಯು ವಿವಿಧ ದೇವತೆಗಳಿಂದ ಪಡೆಯುವ ಬಗ್ಗೆ ದೇವಿ ಮಹಾತ್ಮೆಯು ಸ್ಪಷ್ಟವಾದ ವಿವರಗಳನ್ನು ನೀಡುವುದರ ಜೊತೆಗೆ ದೇವಿಯು ಅವುಗಳನ್ನೆಲ್ಲಾ ತೊಟ್ಟು ಸಜ್ಜಾಗಿ ಮಹಿಷಾಸುರನ ಸಂಹಾರಕ್ಕೆ

ಮೊರಟ ರೀತಿಯನ್ನು ಅಷ್ಟೇ ಸ್ಪಷ್ಟವಾಗಿ ಚಿತ್ರಿಸುತ್ತದೆ. ಮುಂದೆ ಅದೇ ವೃತ್ತಾಂತದಲ್ಲಿ ಮಹಿಷಾಸುರನ ಸೈನ್ಯ, ಅವನ ಬಲಿಷ್ಠ ಸೇನಾಪತಿಗಳು ಮತ್ತು ಖುದ್ದಾಗಿ ಮಹಿಷಾಸುರ ದೇವಿಯ ಆಯುಧ ಬಲ ಮತ್ತು ಅವಳ ಶಕ್ತಿಯಿಂದ ಹೇಗೆ ನಾಶವಾದರೆಂಬ ವಿವರವು ದೇವಿಗೆ ಇಷ್ಟೊಂದು ಆಯುಧಗಳ ಅವಶ್ಯಕತೆಯನ್ನು ಸ್ಪಷ್ಟೀಕರಿಸುತ್ತದೆ. ಕೊನೆಗೆ ದೇವಿಯು ಪಾನಪಾತ್ರೆ, ಚಕ್ರ, ತ್ರಿಶೂಲಗಳನ್ನು ಉಪಯೋಗಿಸುತ್ತಾಳೆ.

ತಾನು ಸುರಾಪಾನ ಮಾಡಿದ ಪಾತ್ರೆಯು ಅವಳ ಕೈಯಲ್ಲೇ ಇರುತ್ತದೆ. ವಿಷ್ಣುವು ನೀಡಿದ ಪ್ರಯೋಗ ಚಕ್ರವನ್ನು ಉಪಯೋಗಿಸಿ ಅವನ ರುಂಡವನ್ನು ಶರೀರದಿಂದ ಬೇರ್ಪಡಿಸಿ ಅವನ ಎದೆಯ ಮೇಲೆ ತನ್ನ ಕಾಲನ್ನು ಬಲವಾಗಿ ನೆಟ್ಟಿ ಎದೆಯನ್ನು ಶಿವನು ನೀಡಿದ ತ್ರಿಶೂಲದಿಂದ ಇರಿಯುವ ಭಂಗಿಯು ಮಹಿಷಾಸುರಮರ್ಧಿನಿಯ ಪ್ರತಿಮಾಲಕ್ಷಣ ಭಂಗಿಯಾಯಿತು.

ಶಕ್ತಿದೇವತೆಯನ್ನು ತೋರಿಸುವ ಅವಕಾಶ ಪದೇ ಪದೇ ಎಲ್ಲಾ ರಾಜ್ಯಭಾರಕಾಲದಲ್ಲಿಯೂ ದೊರೆಯಲಾರಂಭಿಸಿತು. ಆಗ ಪ್ರತಿಮಾಲಕ್ಷಣದ ಅನ್ವಯವಾಗಿ ದೇವಿಯ ಈ ರೂಪವನ್ನು ಕಂಡರಿಸಬೇಕಾಯಿತು. ಅನೇಕ ಗ್ರಂಥಗಳು ದೇವಿಯ ಈ ರೂಪದ ಮೂರ್ತಿ ಲಕ್ಷಣವನ್ನು ನಿದರ್ಶಿಸುತ್ತವೆ. ಈ ಶ್ಲೋಕಗಳನ್ನೇ ಮಂತ್ರೋಚ್ಛಾರಣೆಯಂತೆ ಶಿಲ್ಪಿಯು ಜಪಿಸುತ್ತಾ ಧ್ಯಾನಿಸುತ್ತಾ ತದೇಕಚಿತ್ತನಾಗಿ ಚಿತ್ರಿಸಿಕೊಳ್ಳುತ್ತಾ ಶಿಲ್ಪವನ್ನು ರಚಿಸುತ್ತಾನೆ.

ವೇಷಭೂಷಣಗಳು

ದೇವಿಯನ್ನು ಸ್ತುತಿಸುವ ಎಲ್ಲಾ ಸಾಹಿತ್ಯರಚನೆಯಲ್ಲೂ ದೇವಿಯ ಆಭೂಷಣವನ್ನು ಅನೇಕ ಉಪಮಾನ ಉಪಮೇಯಗಳೊಂದಿಗೆ ಸುಂದರವಾಗಿ ವರ್ಣಿಸಿದ್ದಾರೆ. ಆದಿಶಂಕರಾಚಾರ್ಯರು ಸೌಂದರ್ಯಲಹರಿಯಲ್ಲಿ ಮಂಗಳಮಯಿಯಾಗಿ ಸರ್ವಾಲಂಕಾರ ಭೂಷಿತೆಯಾಗಿ ದೇವಿಯನ್ನು ಪರಿಪರಿಯಾಗಿ ನಿಲ್ಲಿಸಿತೋರಿಸಿದ್ದಾರೆ.

ದೇವಿ ಭಾಗವತದ ಒಂದು ಭಾಗವಾದ ಗಾಯತ್ರಿಮಹಾತ್ಮದಲ್ಲಿ ದೇವಿಯು ರತ್ನಖಚಿತವಾದ ಆಭರಣಗಳನ್ನು ಧರಿಸುವ ಪ್ರಸ್ತಾಪವಿದೆ. ಗಾಯತ್ರಿಯ ಇಪ್ಪತ್ತನಾಲ್ಕು ವರ್ಣಮಯ ರೂಪಗಳನ್ನು ವಿವರಿಸುವಾಗ ರತ್ನಗಳಾದ ಪದ್ಮರಾಗ, ಇಂದ್ರನೀಲಮಣಿ, ವೈಢೂರ್ಯ ಮತ್ತು ಸೂರ್ಯಕಾಂತ ಮುಂತಾದವುಗಳ ಪ್ರಭೆಗಳಿಗೆ ಹೋಲಿಸಲಾಗಿದೆ. ದೇವಿಯ ಐದು ಮುಖಗಳು ರತ್ನಗಳ ಕಾಂತಿಯಿಂದ ದೇದೀಪ್ಯಮಾನವಾಗಿ ಹೊಳೆಯುತ್ತದೆ. ಅಲ್ಲಿ

ಬಳಸಿರುವ ರತ್ನಗಳು ಮುತ್ತು, ಹವಳ, ಸುವರ್ಣ (ಮಣಿ), ನೀಲಮಣಿ ಮತ್ತು ಉಜ್ವಲಪ್ರಭೆ ಚಂದ್ರ ಪ್ರಕಾಶದಡಿಯಲ್ಲಿ ಆಕೆಯ ರತ್ನಖಚಿತ ಕಿರೀಟವು ಸೌಂದರ್ಯದಿಂದ ಕಂಗೊಳಿಸುತ್ತಿತ್ತು ಎಂಬುದಾಗಿ ಈ ಗ್ರಂಥವು ಉಲ್ಲೇಖಿಸುತ್ತದೆ. (ಚೂಡಾಮಣಿ ನಂದಗೋಪಾಲ್, ದೇವಾಲಯ ಸಿರಿವಂತಿಕೆ ಸಂಪುಟ-೨, ದೇವಾಲಯ ಆಭೂಷಣ, ಪು - ೩೫) ಇದರಂತೆ ವಿಗ್ರಹಶಾಸ್ತ್ರವು ಪ್ರತಿಯೊಬ್ಬ ದೇವತೆಗೂ ಸೂಕ್ತವಾದ ಆಭರಣಗಳನ್ನು ವಿಧಿಸುತ್ತದೆ. ನವಗ್ರಹಗಳು, ಅಷ್ಟದಿಕ್ಪಾಲಕರು, ರಾಶಿದೇವತೆಗಳು, ಸಪ್ತಮಾತೃಕೆಯರು, ಅರವತ್ತನಾಲ್ಕು ಯೋಗಿನಿ ಮುಂತಾದ ಶಿಲ್ಪಬಂಧಗಳಲ್ಲಿ ಮೂರ್ತಿಗಳನ್ನು ರಚಿಸುವಾಗ ಆಭರಣಗಳ ಪ್ರತಿಪಾದನೆಗೆ ಶಿಲ್ಪಿಗಳು ವಿಶೇಷ ಗಮನವಿತ್ತಿದ್ದಾರೆ.

ಸಮಸ್ತ ಆಭರಣಗಳಲ್ಲಿ ಶಿರೋಆಭರಣ ಪ್ರಾಮುಖ್ಯತೆಯನ್ನು ಪಡೆದಿದೆ. ಶಿಲ್ಪಿಯು ಪ್ರತಿಮಾಲಕ್ಷಣದ ಮೂಲಅಂಶಗಳನ್ನು ಗಮನದಲ್ಲಿರಿಸಿಕೊಂಡು ಕಿರೀಟಗಳಲ್ಲಿ ವೈವಿಧ್ಯತೆಯನ್ನೂ ಹಿರಿಮೆಯನ್ನೂ ತೋರುತ್ತಾನೆ. ಸ್ತ್ರೀ ದೇವತೆಗಳು ಹೆಚ್ಚಿನ ಸಂಖ್ಯೆಯಲ್ಲಿ 'ಕರಂಡ' ಮುಕುಟವನ್ನೇ ಧರಿಸುವಂತೆ ತಿಳಿಸಲಾಗಿದೆ. 'ಕರಂಡ'ವೆಂದರೆ ತಿರುಗಿ ಹಾಕಿದ ದುಂಡನೆಯ ಆಕಾರವಿರುವ ಪಾತ್ರೆ. ಇದು ಎತ್ತರದಲ್ಲಿ ವಿಷ್ಣುವಿನ ವಿಗ್ರಹದ ಕಿರೀಟ ಮುಕುಟಕ್ಕಿಂತ ಚಿಕ್ಕದಾಗಿರುತ್ತದೆ. ಇದು ಆಶ್ರಿತ ಸ್ಥಾನವನ್ನು ಸಂಕೇತಿಸುತ್ತದೆ. ದೇವಿಯ ಅದರಲ್ಲೂ ಮಹಿಷಾಸುರಮರ್ಧಿನಿ ಮೂರ್ತಿಶಿಲ್ಪದ ಮುಕುಟ ಆಭರಣವು ವಿಶಿಷ್ಟವಾಗಿದ್ದು ಎಲ್ಲಾ ಶಿಲ್ಪಗಳಲ್ಲಿಯೂ ಕರಂಡ ಮುಕುಟ ರೂಪದಿಂದ ಪ್ರಾರಂಭವಾಗಿ ಸ್ವಲ್ಪ ಹೆಚ್ಚು ಎತ್ತರಕ್ಕೆ ಹೋಗಿರುತ್ತದೆ. ಇದು ಶಿಲ್ಪರಚನೆಯಲ್ಲಿ ಎದ್ದು ಕಾಣುತ್ತಿರುತ್ತದೆ. ತಲೆಯ ಕೂದಲನ್ನು ಕಿರೀಟದ ಕೆಳಗೆ ಇಳಿಬಿಟ್ಟು ಹಿಂದೆ ಕಿರೀಟಕ್ಕೆ ಸೇರಿದಂತೆ ಶಿರಚಕ್ರವನ್ನೂ, ಚೂಡಾಮಣಿಯೆಂಬ ಅಗ್ರ ಆಭೂಷಣವನ್ನು ಚಾಮುಂಡಿ ಮತ್ತು ಮಹಿಷಾಸುರಮರ್ಧಿನಿ ಶಿಲ್ಪಗಳ ತಲೆಯ ಹಿಂಭಾಗವನ್ನು ಅಲಂಕರಿಸಲಾಗುತ್ತದೆ. ಚೂಡಾಮಣಿ ಎಂಬ ಶಿರೋ ಆಭರಣವು ಅತ್ಯಂತ ಶ್ರೇಷ್ಠವಾದುದು. ಈ ಆಭರಣವನ್ನು ಹೆಚ್ಚಿನ ಪರಿಶ್ರಮದಿಂದ ತಯಾರಿಸಲಾಗುತ್ತದೆ. ಚೂಡಾಮಣಿ ಎಂಬ ಈ ಆಭರಣವು ಮೈಸೂರಿನ ಶ್ರೀ ಚಾಮುಂಡೇಶ್ವರೀ ದೇವಾಲಯದಲ್ಲಿ ದೇವಿಗೆ ವಿಶೇಷ ದಿನಗಳಲ್ಲಿ ತೊಡಿಸಲಾಗುತ್ತದೆ. ಇದರಲ್ಲಿ ಹೆಚ್ಚಿನಾಂಶ ಮಾಣಿಕ್ಯವೇ ಇದ್ದು ಅಲ್ಲಲ್ಲಿ ವಜ್ರ ಮತ್ತು ಪಚ್ಚೆಗಳನ್ನು ಉಪಯೋಗಿಸಿ ವಿನ್ಯಾಸದಲ್ಲಿ ವೈವಿಧ್ಯತೆ ತರಲಾಗಿದೆ. ಇದು ಮುಮ್ಮಡಿ ಕೃಷ್ಣರಾಜ ಒಡೆಯರ ಕಾರ್ಯಾಗಾರದಲ್ಲಿ ತಯಾರಿಸಲಾದ ಆಭರಣ. ದೇವಿ ಚಾಮುಂಡೇಶ್ವರಿಗೆ ಸಮರ್ಪಿಸಿದ ಈ ದಿವ್ಯಾಭರಣವನ್ನು ದಸರಾ ಸಮಯದಲ್ಲಿ ದೇವಿಗೆ ತೊಡಿಸಲಾಗುತ್ತದೆ.

ಮಹಿಷಾಸುರ ಮರ್ಧಿನಿಯು ಸಮರದಲ್ಲಿ ತೊಡಗುವುದರಿಂದ ಆಭರಣಗಳು ಸರಳವಾಗಿಯೂ ಅವು ದೇಹಕ್ಕೆ ಹೊಂದಿಕೊಂಡಂತೆ ರಚಿಸಲಾಗುತ್ತದೆ. ಕಿವಿಯಲ್ಲಿ ದೊಡ್ಡಗಾತ್ರದ ಓಲೆಗಳು, ಐಹೊಳೆಯ ದುರ್ಗಾದೇವಾಲಯದ ಮಹಿಷಾಸುರ ಮರ್ದಿನಿ ಶಿಲ್ಪದ ಕಿವಿಯನ್ನು ದೊಡ್ಡದಾದ ಉತ್ತಮ ಕೆತ್ತನೆಯಿಂದ ಕೂಡಿದ ಓಲೆ ಅಲಂಕರಿಸಿದೆ. ಅದರಂತೆ ಚಿದಂಬರಂನ ಮಹಿಷಾಸುರಮರ್ಧಿನಿಯ ಶಿಲ್ಪದಲ್ಲೂ ಇಂತಹದೇ ದೊಡ್ಡಗಾತ್ರದ ಓಲೆಯು ಕಂಡು ಬರುತ್ತದೆ. ಇದಲ್ಲದೇ ಪತ್ರಕುಂಡಲ, ಮತ್ತು ರತ್ನಕುಂಡಲಗಳನ್ನೂ ಹಲವು ಶಿಲ್ಪಗಳಲ್ಲಿ ಗಮನಿಸಬಹುದು. ನಂತರ ಮುಖ್ಯವಾದ ಆಭರಣಗಳು ಕಂಠಾಭರಣಗಳು ಮತ್ತು ಮಾಲಿಕೆಗಳು. ಇವುಗಳಲ್ಲಿ ಕಂಠಿ, ವೇಷ್ಟಿತ, ವಿತತ, ಕುಕ್ತಕ, ಮಂಜರಿ, ಸ್ತನಕ ಮುಂತಾದವು ಮುಖ್ಯವಾದವು. ಉಪಗ್ರೀವವೆಂಬ ಮೇಲುಕತ್ತಿನ ಕಂಠಾಭರಣವು ದೊಡ್ಡದಾಗಿದ್ದು ದೇವಿಯ ಕತ್ತನ್ನು ಅಲಂಕರಿಸುತ್ತದೆ. ಸರಪಳಿ ಎಂಬುದು ಅದರ ಕೆಳಗೆ ಧರಿಸುವಂತಹುದು. ಹಲವು ವೇಳೆ ಸರಪಳಿಯೊಂದಿಗೆ ತಾಳಿಯನ್ನೂ ಸಂಯೋಜಿಸಲಾಗುತ್ತದೆ. ಏಕಾವಳಿ, ದ್ವಿವಳಿ, ತ್ರಿವಳಿ, ಪಂಚವಳಿ, ಸಪ್ತವಳಿ ಹಾರಗಳು ಎಳೆಗಳನ್ನು ಸೂಚಿಸುತ್ತವೆ.' ಇದು ಕೆಳಗೆ ಹಾರರೂಪದಲ್ಲಿ ಧರಿಸಲಾಗುತ್ತದೆ. ಇದರೊಂದಿಗೆ ಉದ್ದವಾದ ವನಮಾಲೆಯನ್ನೋ, ರುಂಡಮಾಲೆಯನ್ನೊ ಚಾಮುಂಡಿ, ದುರ್ಗಾ ಮತ್ತು ಮಹಿಷಾಸುರಮರ್ಧಿನಿ ಶಿಲ್ಪದಲ್ಲಿ ಕಾಣಬಹುದು. ನಕ್ಷತ್ರಮಾಲಿಕ ಎಂಬ ವಿಶೇಷಹಾರವು ಇಪ್ಪತ್ತೇಳು ನಕ್ಷತ್ರಾಕಾರದ ದೊಡ್ಡ ಪದಕಗಳಿಂದ ರಚಿಸಲಾಗಿರುತ್ತದೆ. ಶಿಲ್ಪಗಳಲ್ಲೇ ಅಲ್ಲದೆ ಮೈಸೂರಿನ ಚಾಮುಂಡೇಶ್ವರೀ ದೇವಾಲಯದಲ್ಲಿ ಅಪರೂಪದ ನಕ್ಷತ್ರಹಾರವನ್ನೂ ರುಂಡಮಾಲೆಯನ್ನೂ ವಿಶೇಷ ಸಂದರ್ಭಗಳಲ್ಲಿ ದೇವಿಗೆ ತೊಡಿಸಲಾಗುತ್ತದೆ.

ನಕ್ಷತ್ರಮಾಲಿಕೆಯನ್ನು ಅತ್ಯಂತ ಕಲಾತ್ಮಕವಾಗಿ ರಚಿಸಲಾಗಿದೆ. ನಕ್ಷತ್ರಾಕಾರದ ಬಂಗಾರದ ಇಪ್ಪತ್ತೇಳು ಬಿಲ್ಲೆಗಳನ್ನು ಹಾರದ ರೂಪದಲ್ಲಿ ದೊಡ್ಡ ಪದಕದೊಂದಿಗೆ ವಿನ್ಯಾಸಗೊಳಿಸಲಾಗಿದೆ. ಈ ಪ್ರತಿಯೊಂದು ನಕ್ಷತ್ರದ ಮೇಲೆಯೂ ದೇವಿಯ ನಾಮವನ್ನು ಕೆತ್ತಲಾಗಿದೆ. ಮೂವತ್ತು ಶ್ಲೋಕಗಳನ್ನು ಇದರ ಮೇಲೆ ಬರೆಯಿಸುವುದರ ಜೊತೆಗೆ ಶಕವರ್ಷ ಒಂಭತ್ತನೇ ದಿನಾಂಕ ಕಾರ್ತಿಕಮಾಸ ಮಂಗಳವಾರ ಶಕವರ್ಷ ಸಾವಿರದ ಏಳನೂರ ಎಪ್ಪತ್ತೊಂಭತ್ತರಲ್ಲಿ ಅಂದರೆ ಇಪ್ಪತ್ತೇಳು ಅಕ್ಟೋಬರ್ ಸಾವಿರದ ಎಂಟನೂರ ಐವತ್ತೇಳರಂದು ಈ ಹಾರವನ್ನು ಮುಮ್ಮಡಿ ಕೃಷ್ಣರಾಜ ಒಡೆಯರು ಚಾಮುಂಡಿದೇವಿಗೆ ಸಮರ್ಪಿಸಿದರು. ತಾವೇ ರಚಿಸಿರುವ ಚಾಮುಂಡಿ ಸ್ತುತಿಯನ್ನು ಈ ಹಾರದ ಪ್ರತಿಯೊಂದು ನಕ್ಷತ್ರ ಫಲಕದಲ್ಲಿ ಕೆತ್ತಿಸಲಾಗಿದೆ. ದೇವಿಯ ಸ್ತುತಿಯು ನಕ್ಷತ್ರದಂತೆ ಈ ಮಾಲಿಕೆಯಲ್ಲಿ ಹೊಳೆಯಲಿ ಎಂಬ ಭಾವನೆ ಈ ಮಹಾಭಕ್ತನದು.

ಅದರಂತೆಯೇ ಶ್ರೀ ಚಾಮುಂಡೇಶ್ವರಿ ದೇವಾಲಯದ ಆಭರಣಗಳ ಸಂಗ್ರಹದಲ್ಲಿ ಒಂದು ಅಪರೂಪ ಸ್ವರ್ಣ ರುಂಡಮಾಲೆಯಿಂದೆ. ಶಕ್ತಿಯ ಅವತಾರದಲ್ಲಿ ಚಾಮುಂಡಿ ಹಾಗೂ ಮಹಿಷಾಸುರಮರ್ಧಿನಿಯರು ಹಾಗೂ ತಮ್ಮ ಭೀಕರ ರೂಪಗಳಲ್ಲಿ, ಕಾಣಿಸಿಕೊಳ್ಳುವಾಗ ರುಂಡಮಾಲೆಯನ್ನು ಧಾರಣ ಮಾಡಿಕೊಳ್ಳುವರು. ಈ ಬಂಗಾರದ ರುಂಡಮಾಲೆಯನ್ನು ಕಲಾತ್ಮಕವಾಗಿ ವಿನ್ಯಾಸಗೊಳಿಸಲಾಗಿದೆ. ರಾಕ್ಷಸನ ರುಂಡಗಳ ಮಧ್ಯೆ ಕಪ್ಪೆ ಚಿಪ್ಪಿನಾಕಾರದ ಪದಕಗಳು ಕಿವಿಯ ಆಭರಣದಂತೆ ತೋರುತ್ತದೆ. ಮುಖದ ಲಕ್ಷಣಗಳನ್ನು ಭಾವಾತ್ಮಕವಾಗಿ ಸೃಜಿಸಲಾಗಿದೆ. ಈ ದೊಡ್ಡ ರುಂಡಮಾಲೆಯನ್ನು ವಿಶೇಷ ದಿನಗಳಲ್ಲಿ ದೇವಿಗೆ ತೊಡಿಸುತ್ತಾರೆ.

ಮಹಿಷಾಸುರಮರ್ಧಿನಿಯ ಶಿಲ್ಪದಲ್ಲಿ ಕುಚಬಂಧವನ್ನು ಕೆತ್ತಲಾಗುತ್ತದೆ. ಇಲ್ಲವೇ ಬಿಗಿಯಾದ ಕುಪ್ಪಸ ತೊಡಿಸಲಾಗುತ್ತದೆ. ಹಲವೊಮ್ಮೆ ಸ್ತನಹಾರ ಅಥವಾ ಚನ್ನವೀರವನ್ನು ಸೃಜಿಸಲಾಗುತ್ತದೆ. ಭುಜಗಳಿಗೆ ಒಪ್ಪವಾದ ಭುಜ – ಕೀರ್ತಿ, ತೋಳುಬಂಧಿಗಳನ್ನೂ ಕೈಗಳಿಗೆ ಕಡಗ, ದೊಡ್ಡದಾದ ಮಣಿಕಟ್ಟು, ದಪ್ಪವಾದ ಬಳೆಗಳನ್ನೂ, ಸೊಂಟಕ್ಕೆ ಸುಂದರವಾದ ಪಟ್ಟಿ, ಕೆಳಗೆ ಮೇಖಲೆಯನ್ನೂ ಕಾಲಿಗೆ ಕಡಗ ಮತ್ತು ರುಳಿ, ಸರಪಳಿಗಳನ್ನೂ ರಚಿಸಿ ಸೊಂಟದ ಕೆಳಗೆ ಬಿಗಿಯಾಗಿ ಕಚ್ಚೆಯ ರೂಪದ ವಸ್ತ್ರವನ್ನೂ ಮೊಳಕಾಲಿನವರೆಗೂ ರಚಿಸಿ ಶಿಲ್ಪವನ್ನೂ ಸರ್ವಾಂಗ ಸುಂದರ ರೂಪದಲ್ಲಿ ನಿರ್ಮಿಸಲಾಗುತ್ತದೆ.

ಅಕ್ಷಿಮೋಚನ ಅಥವಾ ನೇತ್ರೋನ್ಮಿಲನ

ದೇವತಾ ಹಾಗೂ ದೇವಿ ಮೂರ್ತಿಗಳನ್ನು ಹಿಂದೆ ಚರ್ಚಿಸಿದ ಶಿಲ್ಪಶಾಸ್ತ್ರೋಕ್ತ ಮೂರ್ತಿಲಕ್ಷಣಗಳನ್ನು ಅಳವಡಿಸಿ, ತಾಳಮಾನದ ಪ್ರಕಾರ ರಚಿಸಿದ ಮೇಲೆ ಇನ್ನೊಂದು ಅತ್ಯಂತ ಪ್ರಮುಖವಾದ ವಿಧಿಯೊಂದಿರುತ್ತದೆ. ಅದೆಂದರೆ ಅಕ್ಷಿಮೋಚನಾ. ಅಂದರೆ ದೇವತಾಮೂರ್ತಿಗಳ ನೇತ್ರಗಳನ್ನು ತೆರೆಯಿಸುವುದು. ಶಿಲ್ಪಿಯು ಮೂರ್ತಿಯನ್ನು ಪೂರ್ಣವಾಗಿ ರಚಿಸಿದರೂ ಕಣ್ಣುಗಳ ಭಾಗವನ್ನು ಕಂಡರಿಸಿರುವುದಿಲ್ಲ. ಕಣ್ಣುಗಳ ರಚನೆ ಮತ್ತು ಅದಕ್ಕೆ ಜೀವ ತುಂಬಿ ತೆರೆಯಿಸುವುದನ್ನು ವಿಧಿಪೂರ್ವಕವಾಗಿ ಉತ್ತಮವಾದ ದಿನ, ನಕ್ಷತ್ರವನ್ನು ಆರಿಸಿ ಪುರೋಹಿತರು, ಪೋಷಕ, ಆಚಾರ್ಯರ ಸಮಕ್ಷಮದಲ್ಲಿ ಶಿಲ್ಪಿಯು ಶಿಲ್ಪಶಾಸ್ತ್ರದಲ್ಲಿ ನಿರ್ದೇಶಿಸಿರುವಂತೆ ಮತ್ತು ಗುರುಪದ್ಧತಿಯನ್ನು ಅನುಸರಿಸಿ ಧ್ಯಾನಶ್ಲೋಕವನ್ನು ಪಠಿಸಿ ಕಣ್ಣುಗಳನ್ನು ರಚಿಸುತ್ತಾನೆ. ನಂತರ ವಿಧಿಪೂರ್ವಕವಾಗಿ ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಿ, ಅಥವಾ ಆವರಣ, ಕೋಷ್ಟಕಗಳಲ್ಲಿ ಪೀಠವನ್ನು ಸ್ಥಾಪಿಸಿ ಅದರ ಮೇಲಿಟ್ಟು ಪ್ರತಿಷ್ಠಾಪನಾವಿಧಿಗೆ ಸಂಬಂಧ ಪಟ್ಟ ಎಲ್ಲಾ ಹಂತಗಳನ್ನೂ

ಪಾಲಿಸಿದಾಗ ಮಾತ್ರ ಶಿಲ್ಪಿ ರಚಿಸಿದ ಮೂರ್ತಿಯು ಪೂಜೆಗೆ ಅರ್ಹತೆಯನ್ನು ಪಡೆದುಕೊಳ್ಳುತ್ತದೆ. ಹೀಗಾಗಿ ದೇವಿಯ ದೃಷ್ಟಿ ತೆರೆಯಿಸುವ ಕಾರ್ಯಕ್ರಮವು ಬಹಳ ಮಹತ್ವವನ್ನು ಪಡೆದುಕೊಂಡಿರುತ್ತದೆ.

ಸಮಭಂಗದಲ್ಲಿ ದೇವಿಯ ಮೂರ್ತಿಗಳಿದ್ದರೆ ಸಮದೃಷ್ಟಿಯಲ್ಲಿರುತ್ತದೆ. ಅಭಂಗ, ಅತಿಭಂಗ ಮತ್ತು ಅಭಾಸ ಭಂಗಗಳಲ್ಲಿ ಇದ್ದರೆ ಯಾವ ಕಡೆಗೆ ದೇವಿಯ ಕಟಿಯು ವಾಲಿರುತ್ತದೆಯೋ ಅತ್ತಕಡೆ ದೃಷ್ಟಿ ಇರುವಂತೆ ರಚಿಸಲಾಗುತ್ತದೆ.

ಮಹಿಷಾಸುರಮರ್ಧಿನಿಯ ಮೂರ್ತಿಶಿಲ್ಪ ರಚನೆಯ ಬಗ್ಗೆ ಅನೇಕ ಆಗಮ, ಪುರಾಣ, ಶಿಲ್ಪ ಶಾಸ್ತ್ರ ವಾಸ್ತುಶಾಸ್ತ್ರ ಹಾಗೂ ಪ್ರತಿಮಾಲಕ್ಷಣ ಗ್ರಂಥಗಳು ಸಾಕಷ್ಟು ವಿವರಗಳನ್ನು ನೀಡಿವೆ. ಅವುಗಳಲ್ಲಿ ಮುಖ್ಯವಾಗಿ ಅಗ್ನಿಪುರಾಣ, ಭವಿಷ್ಯತ್‌ಪುರಾಣ, ವಿಷ್ಣುಧರ್ಮೋತ್ತರಪುರಾಣ, ಮತ್ಸ್ಯಪುರಾಣ, ಮಾರ್ಕಂಡೇಯಪುರಾಣದ ದೇವಿ ಮಹಾತ್ಮೆ, ದೇವಿ ಭಾಗವತಪುರಾಣ, ಕಾಲಿಕಾಪುರಾಣ, ವಾಮನಪುರಾಣ, ವರಾಹಪುರಾಣ, ಮಯದೀಪಿಕಾ, ಪ್ರತಿಮಾವಿಜ್ಞಾನ, ಶಿಲ್ಪರತ್ನ, ರೂಪಮಂಡನ, ಕಾಮಿಕಾಗಮ, ಸುಪ್ತಬೇಧಾಗಮ, ಪೂರ್ವಕರ್ಣಾಗಮ, ಶಾರದಾತಿಲಕತಂತ್ರ ಮುಂತಾದವು. ಈ ಮೂಲಗಳಲ್ಲಿ ಮಹಿಷಾಸುರಮರ್ಧಿನಿಯು ನಿಂತಿರುವ ಭಂಗಿ, ಭುಜಗಳ ಸಂಖ್ಯೆ, ವಿವಿಧ ಆಯುಧಗಳು, ಧರಿಸಿರುವ ವಸ್ತ್ರದ ಬಣ್ಣ, ಆಭರಣಗಳು, ಸಿಂಹದ ಸ್ಥಾನ ಪಾತ್ರ, ಮಹಿಷನ ರೂಪ, ಅವನು ಕೊನೆಗೊಳ್ಳುತ್ತಿರುವ ರೀತಿ ಇವುಗಳ ಬಗ್ಗೆ ವಿವರಗಳಿರುತ್ತವೆ. ಇವೇ ಧ್ಯಾನಶ್ಲೋಕಗಳಾಗಿವೆ. ಇಲ್ಲಿ ಆ ಗ್ರಂಥಗಳಿಂದ ಆಯ್ದ ಮೂಲಪಾಠವನ್ನು ಕೊಡಲಾಗಿದೆ. ಅದರೊಂದಿಗೆ ಈ ಮೇಲೆ ತಿಳಿಸಿರುವ ಮೂರ್ತಿಲಕ್ಷಣಗಳನ್ನು ಒಂದು ಪಟ್ಟಿಯ ರೂಪದಲ್ಲಿಯೂ ನೀಡಲಾಗಿದೆ. ಇದರಿಂದ ಒಂದು ಗ್ರಂಥದಿಂದ ಇನ್ನೊಂದಕ್ಕೆ ಶಿಲ್ಪರಚನೆಯ ಲಕ್ಷಣಗಳಲ್ಲಿ ಕಂಡು ಬರುವ ವಿವಿಧ ವ್ಯತ್ಯಾಸಗಳನ್ನು ನೋಡಬಹುದಾಗಿದೆ. ಮುಂದಿನ ಅಧ್ಯಾಯದಲ್ಲಿ ಐತಿಹಾಸಿಕ ಕಾಲ ಘಟ್ಟದಲ್ಲಿ ಈ ಮೂರ್ತಿರಚನಾ ಧ್ಯಾನಶ್ಲೋಕಗಳನ್ನು ಬಳಸಿಕೊಂಡು ಶಿಲ್ಪಿಗಳು ಯಾವ ರೀತಿ ಯಾವ ಶೈಲಿಯಲ್ಲಿ ಮಹಿಷಾಸುರಮರ್ಧಿನಿಯ ಶಿಲ್ಪಗಳನ್ನು ರಚಿಸಿದರೆಂದು ತಿಳಿಯಬಹುದಾಗಿದೆ.

ಮುಮ್ಮಡಿ ಕೃಷ್ಣರಾಜ ಒಡೆಯರ್ ವಿರಚಿತ ಶ್ರೀತತ್ವನಿಧಿಯ ಶಕ್ತಿನಿಧಿಯಲ್ಲಿ ಶ್ರೀ ಚಾಮುಂಡೇಶ್ವರೀ ಅಥವಾ ಮಹಿಷಾಸುರಮರ್ಧಿನಿಯ ಧ್ಯಾನವನ್ನು ನೃಸಿಂಹಪ್ರಸಾದವೆಂಬ ಗ್ರಂಥದನ್ವಯವಾಗಿ ಕೊಟ್ಟಿರುವುದು ಈ ರೀತಿಯಿದೆ.

ಚಂಡಿಯು ಚಿನ್ನದ ಕಾಂತಿಯನ್ನು ಹೊಂದಿದ ಸುಂದರಾ ಕೃತಿಯನ್ನುಳ್ಳವಳಾಗಿದ್ದಾಳೆ. ಈಕೆ ಮೂರು ಕಣ್ಣುಗಳುಳ್ಳವಳು, ಯುವತಿ, ಕೋಪಗೊಂಡಿದ್ದಾಳೆ. ಆದರೆ ಮಂದಹಾಸವಿರುವಂತೆ ಕಾಣುವಳು. ಸಣ್ಣ ನಡುವಿದ್ದು, ಅಗಲವಾದ ಕಣ್ಣುಗಳುಳ್ಳ ಈಕೆಗೆ ಸುಂದರವಾದ ಪುಷ್ಟವಾದ ಸ್ತನಗಳಿವೆ. ಒಂದು ಮುಖ, ಸುಂದರವಾದ ಕಂಠ, ಇಪ್ಪತ್ತು ಬಾಹುಗಳನ್ನು ಹೊಂದಿದ್ದಾಳೆ. ಶೂಲ, ಖಡ್ಗ, ಶಕ್ತಿ, ಚಕ್ರ, ಬಾಣ, ಶಂಖ, ವಜ್ರಾಯುಧ, ಅಭಯ, ಡಮರು, ಚೂರಿ ಎಂಬ ಆಯುಧಗಳನ್ನು ಬಲಗೈಗಳಿಂದ ಮೇಲಿನಿಂದ ಕೆಳಕ್ಕೆ ಬರುವ ಕ್ರಮದಲ್ಲಿ ಧರಿಸಿರುವ ಆ ದೇವಿಯು ಸದಾ ಮಂಗಳರೂಪಿನಿ.

ಎಡಭಾಗದ ಹತ್ತು ಕೈಗಳಲ್ಲಿ ಅವಳು ಕ್ರಮವಾಗಿ ನಾಗ, ಪಾಶ, ಗುರಾಣಿ, ಕೊಡಲಿ, ಅಂಕುಶ, ಬಿಲ್ಲು, ಘಂಟೆ, ಧ್ವಜ, ಗದೆ ಮತ್ತು ಕನ್ನಡಿ ಇವುಗಳನ್ನು ಹಿಡಿದಿರುವ ಕಾಮರೂಪಿಣಿಯಾಗಿದ್ದಾಳೆ. ಚಂಡಿಯ ಕಾಲಿನ ಕೆಳಗೆ ತುಂಡಾಗಿ ಕೆಳಗೆ ಬಿದ್ದ ತಲೆಯುಳ್ಳಂಥ ಕೋಣವು ಇರುತ್ತದೆ. ಆ ಕೋಣದ ಕುತ್ತಿಗೆಯಿಂದ ಉದ್ಭವಿಸಿದ ಪುರುಷನು ಹೆದರಿದಂತೆ ಕಾಣುತ್ತಿದ್ದು ಕೈಯನ್ನು ಮೇಲಕ್ಕೆ ಎತ್ತಿರುತ್ತಾನೆ. ಅವನು ಶೂಲದಿಂದ ತಿವಿಯಲ್ಪಟ್ಟಿದ್ದರಿಂದ ರಕ್ತವನ್ನು ಕಕ್ಕುತ್ತಾನೆ. ಅವನ ಹುಬ್ಬು, ಮೀಸೆ, ಕಣ್ಣುಗಳು ಕೆಂಪಾಗಿವೆ. ಸಿಂಹವು ಅವನನ್ನು ತಿನ್ನುತ್ತಿದೆ. ಅವನ ಕತ್ತನ್ನು ಪಾಶವು ಬಿಗಿಯಾಗಿಸುತ್ತಿದೆ. ಚಂಡಿಯು ಬಲಗಾಲನ್ನೂ ಸಿಂಹದ ಮೇಲಿಟ್ಟು ಇನ್ನೊಂದು ಕಾಲಿನಿಂದ ರಾಕ್ಷಸನನ್ನು ಮೆಟ್ಟ ನಿಂತಿದ್ದಾಳೆ. ಶಸ್ತ್ರಗಳನ್ನು ಎತ್ತಿಹಿಡಿದರುವ ಚಂಡಿ ಸಮಸ್ತ ಶತ್ರುಗಳನ್ನು ನಾಶಮಾಡಬಲ್ಲವಳು–ಸುವರ್ಣವರ್ಣ. ಶ್ಲೋಕ– ೧೭–೨೩

ಲೋಕೋಪಕಾರಕ್ಕಾಗಿ ದುರ್ಗಾಪೂಜೆ ಇಲ್ಲವೇ ಮಹಿಷಾಸುರ ಮರ್ಧಿನಿಯ ಪೂಜೆಯನ್ನು ಮಾಡಬೇಕೆಂದು ಉತ್ತರ ಕಾಮಿಕಾಗಮ ಎಂಬ ಗ್ರಂಥವು ತಿಳಿಸುತ್ತದೆ. ಯಾವ ಮಾಸಗಳಲ್ಲಿ ಮತ್ತು ಯಾವ ವೇಳೆಯಲ್ಲಿ ದೇವಿಯ ಈ ರೂಪದ ಪೂಜೆ ಮಾಡಬೇಕು, ಮಹಿಷವನ್ನು ಬಲಿಕೊಡಬೇಕೆಂಬುದನ್ನು ಇಲ್ಲಿ ನಿರ್ಧರಿಸಲಾಗಿದೆ. ಮಹಿಷ ಮುಂತಾದವನ್ನು ಬಲಿಕೊಟ್ಟಾಗ ನಮಗೆ ಪಾಪವಿಲ್ಲ. ಬದಲು ಆ ಪ್ರಾಣಿಗಳು ಪುಣ್ಯ ಹಾಗೂ ಮುಕ್ತಿಯನ್ನು ಪಡೆಯುತ್ತವೆ. ಈ ಗ್ರಂಥದ ಏಳನೇ ಅಧ್ಯಾಯದಲ್ಲಿ ಮಹಿಷಾಸುರ ಮರ್ಧಿನಿಯ ವಿಗ್ರಹವನ್ನು ಸ್ವರ್ಣ, ರಜತ, ಮರ, ಕಾಷ್ಟ, ತಾಮ್ರ ಮತ್ತು ಶಿಲೆ ಈ ಯಾವುದಾದರೊಂದರಿಂದ ರಚಿಸಬೇಕು. ಮಹಿಷಾಸುರ ಸಂಹಾರಿಯು ಅಷ್ಟಭುಜಗಳನ್ನು ಹೊಂದಿದ್ದು ಶೂಲವನ್ನು ಎತ್ತಿಹಿಡಿದಿರಬೇಕು. ಕಪಾಲಿ, ಶೂಲ, ಬಿಲ್ಲು, ಬಾಣ, ಚೂರಿಕಾ, ಶಂಖ, ಚಕ್ರ, ವರದಹಸ್ತ ಇವುಗಳನ್ನು ಹಿಡಿದಿರಬೇಕು. ಸರ್ವಾಭರಣ ಭೂಷಿತೆಯಾಗಿ ಕಂಗೊಳಿಸಬೇಕು. ಇಲ್ಲಿ ಗಂಟೆಯ ಪ್ರಸ್ತಾಪವಿಲ್ಲ.

ಸಿಂಹಾರೂಢಳಾಗಿ, ತ್ರಿನೇತ್ರೆಯಾಗಿ ನಾಲ್ಕು ಕೈಗಳನ್ನು ಹೊಂದಿರುವ ರೂಪವನ್ನೂ ಉತ್ತರಕಾಮಿಕಾಗಮ ತಿಳಿಸುತ್ತದೆ. ನಾಲ್ಕು ಕೈಗಳಿದ್ದರೆ ಶಂಖ, ಚಕ್ರ, ಜಪಮಾಲೆ ಮತ್ತು ವರದ ಹಸ್ತವಿರಬೇಕು. ಉತ್ತಮ ಆಭರಣಗಳನ್ನು ಧರಿಸಿರುವಂತೆ ಚಿತ್ರಿಸಬೇಕು.

ಉತ್ತರಕಾಮಿಕಾಗಮ ಉಲ್ಲೇಖಿಸುವಂತೆ ಮಹಿಷಾಸುರಮರ್ಧಿನಿಯು ಸರ್ವಶತ್ರು ವಿನಾಶಿನಿ, ಶತ್ರು ಸಂಹಾರ ಮಾಡಿ ನೆಮ್ಮದಿಯನ್ನು ನೆಲೆಗೊಳಿಸಿದ ಸಂಕೇತವೇ ಈ ದೇವಿಯರೂಪ, ಮಹಿಷಾಸುರ ಮರ್ಧಿನಿಯನ್ನು ನೀಲೋತ್ಪಲ ಮತ್ತು ತುಂಬೇ ಹೂಗಳಿಂದ ಪೂಜಿಸಬೇಕು. ಕರ್ಪೂರದಾರತಿ ಮಾಡಬೇಕು. ಹಣ್ಣು, ಹೂವು, ಚಂದನ, ಧೂಪ ದೀಪಗಳನ್ನು, ಕುಂಕುಮ, ಕೇಸರೀ ನೈವೇದ್ಯವಿಡಬೇಕು. ಅರುಣೋದಯದ ಸಮಯದಲ್ಲಿ ೧೦೦, ೫೦, ೨೫, ೧೨ ಮಹಿಷಗಳನ್ನು ಯಾವುದೇ ಸಂಖ್ಯೆಗನುಗುಣನಾಗಿ ಬಲಿಕೊಡಬೇಕು. ನವಮಿಯ ದಿನದಂದು ಮಹಿಷಾಸುರಮರ್ಧಿನಿಯನ್ನು ರಥದಲ್ಲಿ ಕುಳ್ಳಿರಿಸಿ ಉತ್ಸವ ಆಚರಿಸಬೇಕು. ಎಂಬ ವಿಷಯಗಳ ಮೇಲೆ ಉತ್ತರ ಕಾಮಿಕಾಗಮ ಗ್ರಂಥವು ಬೆಳಕು ಚೆಲ್ಲುತ್ತದೆ.

ಮಹಿಷಾಸುರಮರ್ಧಿನಿಯ ವಿಗ್ರಹಗಳನ್ನು ಯಾವ ರೀತಿ ಪರಿಕಲ್ಪಿಸಿ ಕಡೆಯಬೇಕೆಂಬ ವಿವರಗಳನ್ನು ಅನೇಕ ಗ್ರಂಥಗಳು ನಿರ್ಧಿಷ್ಟವಾಗಿ ಕೊಟ್ಟಿರುತ್ತವೆ. ಆಗಮಗಳು ಧ್ಯಾನ ಶ್ಲೋಕಗಳನ್ನೂ ಹಾಗೂ ಮೂರ್ತಿಲಕ್ಷಣದ ವಿವರಗಳನ್ನು ಶ್ಲೋಕಗಳ ರೂಪದಲ್ಲಿ ನೀಡಿರುವುದರಿಂದ ರೂವಾರಿಗಳು ತಮ್ಮ ಆಗಮಪದ್ಧತಿಯ ತಾಳಮಾನ ಮತ್ತು ಇತರ ಲಕ್ಷಣಗಳನ್ನು ಗಮನದಲ್ಲಿರಿಸಿಕೊಂಡು ಮಹಿಷಾಸುರ ಮರ್ಧಿನಿಯ ಶಿಲ್ಪಗಳನ್ನು ಶಾಸ್ತ್ರ ಬದ್ಧವಾಗಿ ರಚಿಸಿದ್ದಾರೆ. ಮುಂದೆ ಈ ಎಲ್ಲಾ ಗ್ರಂಥಗಳಲ್ಲಿ ವಿಷದಪಡಿಸಿರುವ ಮಹಿಷಾಸುರಮರ್ಧಿನಿಯ ರೂಪ, ಲಕ್ಷಣ, ಆಯುಧಗಳು, ಕೈಗಳ ಸಂಖ್ಯೆ ಹಾಗೂ ದೇವಿಯು ನಿಂತಿರುವ, ಸಮರಗೈಯ್ಯುತ್ತಿರುವ ವಿವರಗಳನ್ನು ಪಟ್ಟಿಕೆಯ ರೂಪದಲ್ಲಿ ನೀಡಿರುವುದರಿಂದ ತುಲನಾತ್ಮಕ ಅವಲೋಕನಕ್ಕೆ ಹೆಚ್ಚು ಸಹಾಯಕವಾಗುವುದು.



ಮಹಿಷಾಸುರಮರ್ದಿನಿಯು ಸಮರದಲ್ಲಿ ತೊಡಗಿರುವುದು, ಬಾದಾಮಿ ಚಾಲುಕ್ಯ ಶೈಲಿ

ವಿವಿಧ ಗ್ರಂಥಗಳಲ್ಲಿ ಮಹಿಷಾಸುರಮರ್ಧಿನಿಯ ಸ್ವರೂಪದ ವಿವರಣೆ

ಅಗ್ನಿ ಪುರಾಣ:

ಚಂಡೀ ವಿಂಶತಿಬಾಹುಃ ಸ್ವಾದ್ವಿಭ್ರತೀ ದಕ್ಷಿಣೈಃ ಕರೈಃ ।
ಶೂಲಾ ನಿಶಕ್ತಿ ಚಕ್ರಾಣಿ ಪಾಶ್‌ಖೇಟಾ ಯುಧಾಭವಂ ॥
ಡಮರೂ ಶಕ್ತಿಕಾಂ ವಾಮ್ಯೆನ ಗಿಪಾರಂ ಚ ಖೇಟಕಮ್ ।
ಕುರಾರಾಂಕುಶಪಾಶಾಶ್ಚ ಘಂಟಾಯುಧಗದಾ ಸ್ತಥಾ ॥
ಆದರ್ಶ ಮುದ್ಗರಾನ್ವಸ್ತೈಶ್ಚಂಡೀ ವಾ ದಶ್‌ಬಾಹುಕಾ ।
ತದಥೋ ಮಹಿಷಶಿಸ್ಛನ್ನ ಮೂರ್ಧನಾ ಪಾತಿತಮಸ್ತಕಃ ॥
ಶಸ್ತ್ರೋದ್ಧತಕರಃ ಕೃದ್ಧಸ್ತದ್ಗ್ರೀವಾಸಂಭವಃ ಪುಮಾನ್ ।
ಶೂಲಹಸ್ತೋ ವಮದ್ರಕ್ತೋ ರಕ್ತಸ್ರಂಗ ಮೂರ್ಧಜೇಷಣಃ ॥
ಯಾತ್ಮಾಜ್ಞ ಧ್ರೂಯಾಕ್ರಾಂತಸಿಂಹಾ ಚ ಸವಾಜ್ಞ ಫ್ರಿನೀಗಾಸುರೆ,
ಚಂಡೀಕೇಯಂ ತ್ರಿನೇತ್ರಾ ಚ. ಸಶಸ್ತ್ರಾ ರಿಪುರಮರ್ದಿನೀ।
ನವಪದ್ಮಾತ್ಮರೇ ಸ್ಥಾನೆ ಪೂಜ್ಯಾ ದುರ್ಗಾ ಸ್ವಮೂರ್ತಿತಃ।
ಆದೌ ಮಧ್ಯ ತಥೇಂದ್ರಥಾ ನವತ್ತವಾತ್ಮಭಿಃ ಕ್ರಮಾತ್।
ಅಷ್ಟಾದಶ್‌ಭುಜೈಕಾ ತು ದಷೇ ಮುಂಡೇ ಚ ಖೇಟಕಮ್॥
ದ್ವಿಬಾಹವೋ ಲೋಕಪಾಲಾ ವಿಶ್ವಕರ್ಮಾ ಷ ಸೂತ್ರಭೃತ್।
ಹನುಮಾನ್‌ವಜ್ರಹಸ್ತಃ ಸ್ಯಾತ್ತದ್ಭಾವಂ ಸಂಪೀಡಿತಾಂಸುರ॥
ವೀಣಾಹಸ್ತಾಃ ಕಿನಂರಾಃ ಸ್ಯಾಮೂರ್ಲಾವಿಧಾಧರಾಶ್ಚ ಖೆ।
ದುರ್ಬಲಾಂಗಾಃ ಪಿಶಾಚಾಃ ಸ್ಯುರ್ವೇ ತಾಲಾ ವಿಕೃತಾನನಃ
ಕ್ಷೇತ್ರಪಾಲಃ ಶೂಲವಂತಃ ಪ್ರೇತಾ ಮಹೋದರಾಃ ಕೃಶಾಃ॥

– "ಅಗ್ನಿಪುರಾಣ"

ಭವಿಷ್ಯತ್ ಪುರಾಣ:

ಅಷ್ಟಾದಶ ಭುಜೈಕಾ ತು ಪೀನವಕ್ಷೋರುಹೋರು ಹಾ ।
ಸರ್ವಾಲಂಕಾರ ಸಂಯುಕ್ತಾ ಸರ್ವಸಿದ್ಧಿ ಪ್ರದಾಯಿನೀ ॥
ಮೂರ್ಧಜಂ ಖೇಟಕಂ ಘಂಟಾಮಾದರ್ಶ ತರ್ಜನೀಂ ಧನುಃ ।
ಧ್ವಜ ಡಮರುಕ ಪಾಶಂ ವಿಭ್ರತೀ ವಾಮಪಾಣಿಭಿಃ ॥
ಶಕ್ತಿ ಮುದ್ಗರ ಶೂಲಾನಿ ವಜ್ರಂ ಶಂಖಮಥಾಂಕಶಮ್ ॥
ಶಲಾಕಾರಿ ಮಾರ್ಗಣಂ ಚಕ್ರಂ ದಧಾನಾ ದಕ್ಷಿಣೈಃ ಕರೈಃ ॥
ಜಯಮಿಚ್ಚದ್ಭಿರಿತ್ಯೇತಾಃ ಪೂಜನೀಯಾ ಮಹಾತ್ಮಭಿಃ ॥
ಶೇಷಾಷೋಡಶಹಸ್ತಾಶ್ಚ ಶಲಾಶಾಂ ಮಾರ್ಗಣಂವಿನಾ ॥
ರುದ್ರ ಚಂಡಾ ಪ್ರಚಂಡಾ ಚ ಚಂಡೋಗ್ರಾ ಚಂಡನಾಯಿಕಾ ॥
ನವಮೀ ಚೋಗ್ರಚಂಡಾ ಚ ಮಧ್ಯಸ್ಥಾ ವಹ್ನಿಸನ್ನಿಭಾ ॥
ರೋಚನಾಭಾರುಣಾ ಕೃಷ್ಣಾ ನೀಲಾ ಶುಕ್ಲಾ ಚ ಧೂಮ್ರಿಕಾ ॥
ಪೀತಾ ಚ ಪಾಂಡುರಾ ಜ್ಞೇಯಾ ಆಲೀಢಸ್ಥಾ ಹರಿಸ್ಥಿತಾ ॥
ಶ ಮಹಿಷಸ್ಥಾ ಸಶಸ್ತ್ರೀಕಾ ದೈತ್ಯಮೂರ್ಧಜ ಮುಷ್ಟಿಕಾ ॥
ಪದ್ಧಮಾಕೃತಿರಥಸ್ಥಾಪ್ಯಾ ಇತ್ಯುಕ್ತಂ ಸ್ಕಂದಯಾಮಲೆ ॥

– ***"ಭವಿಷ್ಯತ್ಪುರಾಣ"***

ದೇವೀ ಭಾಗವತ ಪುರಾಣ:

([illegible])

ಅಷ್ಟಾದಶ ಭುಜಾಂ ದಿವ್ಯಾ ಸರ್ವಾಭರಣ ಭೂಷಿತಾಮ್ ॥
ಸರ್ವಲಕ್ಷಣಸಂಪನ್ನಾಂ ವರಾಯುಧಧರಾಂ ಶಭಾಮ್ ॥
ಸಿಂಹಾರುಢಾಂ ಯುಧಧರಾ ಚಾಷ್ಟಾದಶ ಕರಾಂ ವರಾ ॥

– "ದೇವೀ ಭಾಗವತ ಪುರಾಣ"

ಕಾಳಿಕಾ ಪುರಾಣ

ಜಟಾಜೂಟ ಸಮಾಯುಕ್ತಾಮರ್ದ್ವೇಂದು ಕೃತಶೆಖರಾಮ್ ॥
ಲೋಚನತ್ರಯ ಸಂಯುಕ್ತಾಂ ಪುಷ್ಪೆಂದು ಸದೃಶಾನನಾಂ ॥
ತಪ್ತಕಾಂಚನ ವರ್ಣಾಭಾಂ ಸುಪ್ರತಿಷ್ಠಾಂ ಸುಲೋಚನಾಮ್ ॥
ನವಯುವ್ವನ ಸಂಪನ್ನಾಂ–ಸರ್ವಾಭರಣ ಭೂಷಿತಾಮ್ ॥
ಸುಚಾರು ದರ್ಶನಾಂ ತೀಕ್ಷ್ಣಾಂ ಪೀನೋನ್ನತ ಪಯೋಧರಾಮ್ ॥
ತ್ರಿಭಂಗಸ್ಥಾನ ಸಂಸ್ಥಾನಾಂ ಮಹಿಷಾಸುರ ಮರ್ದಿನೀಮ್ ॥
ಮೃಣಾಲಾಯತ ಸಂಸ್ಪರ್ಶ ದಶಬಾಹು ಸಮನ್ವಿತಾಮ್॥
ತ್ರಿಶೂಲಂ ದಕ್ಷಿಣೇ ದೇಯಂ ಖಡ್ಗ ಚಕ್ರ ಕ್ರಮಾದಯಃ ॥
ತೀಕ್ಷ್ಣಬಾಣಂ ತಥಾ ಶಕ್ತಿಂ ಬಾಹು ಸಘೋಷು ಸಂಗತಾಮ್ ।
ಖೇಟಕಂ ಪೂರ್ಣಚಾಪಂ ಚ ಪಾಶಂ ಚಾಂಕುಶಮೂರ್ಧತಃ ॥
ಘಂಟಾಂ ಚ ಪರಶುಂ ಚಾಪಿ ವಾಮೇಧಃ ಪತಿಯೋಜಯೇತ್ ॥
ಅಧಸ್ತಾನ್ಮಹಿಷ ತದ್ವದ್ವಿಶಿರಕ್ತಂ ಪದರ್ಶಯೇತ್ ॥
ಶಿರಶ್ಛೇದೋದ್ಭವಂ ತದ್ವದ್ದಾನವಂ ಖಡ್ಗ ಪಾಣಿನಮ್॥
ಹೃದಿ ಶೂಲೇಕನ ನಿರ್ಭಿನ್ನಂ ನಿರ್ಯದಂತ್ರ ವಿಭೂಷಿತಮ್॥
ರಕ್ತ ರಕ್ತೀಕೃತಾಂಗಂ ಚ ರಕ್ತ ವಿಸ್ಫುರಿತೇಷಣಮ್॥

ವೇಷ್ಟಿತಂ ನಾಗ ಪಾಶೇವ ಭ್ರುಕುಟಿ ಕುಟಿಲಾನನಮ್॥

ಸಪಾಶಂ ವಾಮ ಹಸ್ತೇನ ಧೃತ ಕೇಶಂ ಚ ದುರ್ಗಯಾ॥

ವಮದ್ರುಧೀರವಕ್ತ್ರಂ ಚ ದೇವ್ಯಾ ಸಿಂಹಂ ಪ್ರದರ್ಶಯೇತ್॥

ದೇವ್ಯಾಸ್ತು ದಕ್ಷಿಣ ಪಾದಂ ಸಮಂ ಸಿಂಹೋಪರಿ ಸ್ಥಿತಂ॥

ಕಿಂಚಿದೂರ್ಧ್ವ ತಥಾ ವಾಮಮಂಗುಷ್ಠಂ ಮಹಿಷೋಪರಿ॥

– ಕಾಳಿಕಾ ಪುರಾಣ

ಮತ್ಸ್ಯ ಪುರಾಣ:

ಲೋಚನತ್ರಯ ಸಂಪನ್ನಾಂ ಪದ್ಮೇಂದುಸದೃಶಾನನಾಮ್ ॥

ಅತಸೀಪುಷ್ಪಸಂಕಾಶಾಂ ಸುಪ್ರತಿಷ್ಠಾಂ ಸುಲೋಚನಾಮ್ ॥

ನವಯೌವನ ಸಂಪನ್ನಾಂ ಸರ್ವಾಭರಣ ಭೂಷಿತಾಮ್ ॥

ಸುಚಾರುದರ್ಶನಾಂತದ್ವತ್ಪೀನೋನ್ನತಪಯೋಧರಾಮ್ ॥

ತ್ರಿಭಂಗಸ್ಥಾನ ಸಂಸ್ಥಾನಾಂ ಮಹಿಷಾಸುರ ಮರ್ದಿನೀಮ್ ॥

ತ್ರಿಶೂಲಂ ದಕ್ಷಿಣೇ ದಧ್ಯಾತ್ ಖಡ್ಗಂ ಚಕ್ರ ತಥೈವಚ ॥

ತೀಕ್ಷ್ಣಬಾಣಂ ತಥಾಶಕ್ತಿಂ ವಾಮತೋಡಪಿನಿ ಬೋಧತ ॥

ಖೇಟಕಂ ಪೂರ್ಣಚಾಪಂಚ ಪಾಶಮಂಕುಶಮೇವ ಚ ॥

ಘಂಟಾವಾ ಪರಶುಂ ಚಾಪಿ ವಾಮತಃ ಸನ್ನಿವೇಶಯೇತ್ ॥

ಅಧಸ್ತಾನ್ಮಹಿಷನ್ತದ್ವದ್ವಿಶಿರಸ್ಕಂ ಪ್ರದರ್ಶಯೇತ್ ॥

ಶಿರಚ್ಛೇದೋದ್ಭವಂ ತದ್ವದ್ದಾನವಂ ಖಡ್ಗ ಪಾಣಿನಮ್ ॥

ರಕ್ತರಕ್ತೀಕೃತಾಂಗಂ ಚ ರಕ್ತಾ ವಿಸ್ಫಾರ ತೇಕ್ಷ್ಣ ಮ್ ॥

ವೇಷ್ಟಿತಂ ನಾಗಪಾಶೇನ ಭೃಕುಟೀ ಭೀಷಣಾನನಮ್ ॥

ವಮದ್ರುಧಿರವಕ್ತ್ರಂ ಚ ದೇವ್ಯಾಃ ಸಿಂಹಂ ಪ್ರದರ್ಶಯೇತ್ ॥

ದೇವ್ಯಾಸ್ತು ದಕ್ಷಿಣ ಪಾದಂ ಸಮಂ ಸಿಂಹೋಪರಿ ಸ್ಥಿತಮ್ ॥

ಕಿಂಚಿದೂರ್ಧ್ವಂ ತಥಾ ವಾಮಮಂಗುಷ್ಠರ ಮಹಿಷೋಪರಿ ॥

ಸ್ತೂಯಮಾನಂಚ ತದ್ರೂಪಸವರ್ಯೈಃ ಸನ್ನಿವೇಯೇತ್ ॥

– ***"ಮತ್ಸ್ಯ ಪುರಾಣ"***

ಮಾರ್ಕಂಡೇಯ ಪುರಾಣ:

ಅಕ್ಷಸ್ರಕ್ ಪರಶುಂ ಗದೇಷು ಕುಲಿಶಂ ಪದಂ ಧನುಷ್ಕುಂಡಿಕಾಂ ।

ದಂಡಂ ಶಕ್ತಿನಿಂಚ ಚರ್ಮ ಜಲಜಂ ಘಂಬಾ ಸುರಭಾಜನಮ್ ॥

ಶೂಲಂ ಪಾಶಸುದರ್ಶನೇ ಚ ದಧತೀಂ ಹಸ್ತೈ ಪ್ರಸನ್ನಾನಾಮ್ ।

ಸೇವೆ ಸೈರಿಭಮರ್ದಿನೀಮಹೀಂ ಮಹಾಲಕ್ಷ್ಮೀ ಸುರೋಜಸ್ಥಿನಾಮ್ ॥

– ***'ಮಾರ್ಕಂಡೇಯ ಪುರಾಣ'***

ವಾಮನ ಪುರಾಣ:

ತಸ್ಮಾಚ್ಚ ಜಾತಾ ತರಲಾಯತಾಷೀ, ಕಾತ್ಯಾಯನೀ ಯೋಗ ವಿರುದ್ಧದೇ

ಮಾಹೇಶ್ವರಾದ್ ವಕ್ತ್ರಮಥೋವಭವ ನೇತ್ರತ್ರಯಂ ಪಾವಕ ತೇಜಸ ಚ ।

ಯಾಮ್ಯೇನ ಕೇಶಾ ಹರಿತೇಜಸಾ ಚ, ಭುಜಾಸ್ತದಾಷ್ಟಾದಶ ಮಜಗ್ಗಿರೆ ॥

ಸೌಮ್ಯಂ ಯುಗ್ಮಂ ಸ್ತನಯೋಃ ಸುಸಂಹತಂ ಮಧ್ಯಂ ತಥೈಂದ್ರೇಣ ಚ ತೇಜಸಾ ಭವತ್।

ಊರು ಝಂಘೆ ಚ ನಿತಂಬಸಂಯುತೇ ಜಾತೆ ಜಲೇಶಾ ತು ತೇಜಸಾಹಿ ॥

– ***"ವಾಮನ ಪುರಾಣ"***

ವರಾಹ ಪುರಾಣ:

ತತಸ್ತೇಶಾಂ ವಿಧಾ ದೃಷ್ಟಿಭಿರ್ಯೈಕೈಕಾ ಸಮಜಾ ಯತ ।

ತಸ್ಯಾಃ ದಋುಷ್ಟಯಾ ಸಮುತ್ಪನ್ನಾ ಕುಮಾರೀ ದಿವ್ಯ ರೂಪಿಣೀ ॥

ನೀಲೋತ್ಪಲದಲ ಶ್ಯಾಮಾ

ಸುನಾಸಾ ಯದಗ್ನಿ ಜಿಹ್ವಂ ಲಕ್ಷ್ಮಣಂ ಪರಿಭಾಶಿತಮ್ ।

ತತ್ಸರ್ವಮೇಕತಃ ಸಂಸ್ಥಂ ಕನ್ಯಾಯಾಂ ಸಪ್ರದೃಶ್ಶೆ ॥

– *'ವರಾಹ ಪುರಾಣ'*

ಅಂಶುಭೇದಾಗಮ:

ಚತುರ್ಭುಜಾ ತ್ರಿನೇತ್ರಾ ಚ ಸಾ ಸ್ಯಾಮ್ಬಾಮನಿಭಾವರಾ ।

ಸೌಮ್ಯಾಪೀತಾಂಬರೋಪೇತಾ ಪೀನೋರುಜಘನಸ್ಥ ನಾ ॥

ಕರಂಡಮುಕುಟೋಪೇತಾ ಸರ್ವಾಭರಣ ಭೂಷಿತಾ ।

ಅಭಯಂ ದಕ್ಷಿಣಂ ಹಸ್ತಂ ಕಟಕಂ ವಾಮ ಹಸ್ತಕಮ್ ॥

– *'ಅಂಶುಭೇದಾಗಮ'*

ವಿಷ್ಣುಧರ್ಮೋತ್ತರ ಪುರಾಣ:

ನಿಗದ್ಯತೆ ಹ್ಯಥೋ ಚಂಡೀ ಹೇಮಾಭಾ ಸಾ ಸುರೂಪಿಣೀ ।

ತ್ರಿನೇತ್ರಾ ಯೌವನಸ್ಥಾ ಚ ಕೃದ್ಧಾ ಚೋರ್ಧ್ವಸ್ಥಿತಾ ಮತಾ ॥

ಕೃಶಮಧ್ಯಾ ವಿಶಾಲಾಕ್ಷೀ ಚಾರುಪೀನಪಯೋಧರಾ ।

ಏಕವಕ್ತ್ರಾ ತು ಸುಗ್ರೀವಾ ಬಾಹುವಿಂಶತಿ ಸಂಯುತಾ ॥

ಶೂಲಾಸಿಶಂಖಚಕ್ರಾಣಿ ಬಾಣಶಕ್ತಿಪವೀನಪಿ ॥

ಅಭಯಂ ಡಮರೂಂ ಚೈವ ಛತ್ರಿಕಾಂ ದಕ್ಷಿಣೇ ಕರೆ ॥

ಊರ್ಧ್ವಾದಿಕ್ರಮ ಯೋಗೇನ ಬಿಭ್ರತೀ ಸಾ ಸದಾ ಶುಭಾ ॥

ನಾಗಪಾಶಂ ತಥಾ ಖೇಟಂ ಕುಠಾರಾಂಕಶಕಾರ್ಮುಕಮ್ ॥

ಘಂಟಾಧ್ವಜಗದಾದರ್ಶ ಮುದ್ಗರಂ ವಾಮ ಏವ ಚ ॥

ತದಧೋ ಮಹಿಷಶ್ಛಿನ್ನಮೂರ್ಧಾ ಪತಿತಮಸ್ತಕಃ ॥

ತಾಸ್ತ್ರೋಧ್ವತಕರಸ್ತಬ್ಧಸ್ತತ್ ಗ್ರೀವಾಸಂಭವಃ ಪುಮಾನ್ ॥
ಶೂಲಭಿನ್ನೋ ವಮದ್ರವಕ್ತ್ರೋ ರಕ್ತಭ್ರೂಮೂರ್ಧ ಜೇಷಣಃ ॥
ಸಿಂಹೇನ ಖಾದ್ಯಮಾನಶ್ಚ ಪಾಶಬದ್ಧೋ ಗಲೆ ಭೃಶಮ್ ॥
ಯಾಮ್ಯಾಂಘ್ರೂಯಾಕಾಂತಸಿಂಹಾ ಚ ಸವ್ಯಾಂಘ್ರೂ ವಾಲಿಡಗಾಸುರೆ ॥
ಚಂಡಿ ಚೋಧ್ಯತಶಪ್ಸೇಯಂ ಚಾಶೇಷರಿಪುನಾಶಿನೀ ।

ಸುಪ್ರಬೇಧಾಗಮ:

ಆದಿ ಶಕ್ತೀಸಮುದ್ಭೂತಾ ವಿಷ್ಣು ಪ್ರಾಣಾನುಜಾ ಶುಭಾ ।
ಶಂಕ ಚಕ್ರಧರಾ ದೇವೀ ಧನುಸ್ಸಾಯಕಧಾರಿಣೀ ॥
ಖಡ್ಗಖೇಟಕಸಂಯುಕ್ತಾ ಶೂಲ–ಪಾಶ–ಸಮಾಯುತಾ ।
ಚತುರ್ಭುಜಾ ವಾ ಕುರ್ವೇತ ಸರ್ವಾಭರಣಭೂಷಿತಾಮ್ ॥
ಶ್ಯಾಮವರ್ಣಾ ಸುವದನಾಂ ಮಹಿಷಸ್ಯ ಶಿರಸ್ಥಿತಾಮ್ ॥
ಸಿಂಹಾರೂಢಾಂ ಚಾ ವಾ ಕುರ್ಯಾ ಪ್ರದಮೂಸನಸಮಾಗತಾಮ್ ॥
– 'ಸುಪ್ರಭೇದಾಗಮೆ ಷಟ್‌ಚತ್ವಾರಿಶತ್ತಪಟಲ'

ಮಯದೀಪಿಕಾ:

ಕಾತ್ಯಾಯನ್ಯಾಃ ಪವಷ್ಯಾಮಿ ರೂಪಂ ದಶಭುಜಂ ತಥಾ ।
ತ್ರಯಾಣಾಮಪಿ ದೇವಾನಾಮನು ಕಾರಾನುಕಾರಿಣೀಮ್ ॥
ಜಟಾ ಜೂಟಸಮಾಯುಕ್ತಾಮರ್ಧೇಂದುಕೃತಲಕ್ಷಣಾಮ್ ।
ಲೋಚನತ್ರಯ ಸಂಯುಕ್ತಾಂ ಪೂರ್ಣೇಂದು ಸದೃಶಾನನಾಮ್ ॥
ಅತಸೀಪುಷ್ಪಸಂಕಾಶಾಂ ಸುಪ್ರತಿಷ್ಠಾಂ ಸುಲೋಚನಾಮ್ ।
ನವಯೌವನಸಂಪನ್ನಾಂ ಸರ್ವಾಭರಣ ಭೂಷಿತಾಮ್ ॥

ಸುಚಾರುದರ್ಶನಾಂ ತದ್ವತ್ಪೀನೋನ್ನತಪಯೋಧರಾಮ್ ।
ತ್ರಿಭಂಗಸ್ಯಾನ ಸಂಸ್ಥಾನಾಂ ಮಹಿಷಾಸುರಮದಿನೀಮ್ ॥

– 'ಮಯದೀಪಿಕಾ'

ತ್ರಿಶೂಲಂ ದಕ್ಷಿಣೆ ದಧ್ಯಾತ್ಖಡ್ಗ ಚಕ್ರಂ ತಥೈವ ಚ ।
ತೀಕ್ಷ್ಣಬಾಣಂ ತಥಾ ಶಕ್ತಿಂ ವಾಮತೋಽವಿನಿಬೋದತ ॥
ಖೇಟಕಂ ಪೂರ್ಣ ಪಾತ್ರಂ ಚ ಪಾಶಮಂಕುಶವೇವ ಚ ।
ಘಂಟಾಂ ಚ ಪರಶುಂ ಚಾಪಿ ಚಾಮರಂ ಮನ್ನಿವೇಶಯೇತ್ ॥
ಅಧಸ್ತಾನ್ಮಹಿಷಂ ವಿದ್ಯಾದ್ವಿಶಿರಸ್ಕಂ ಪ್ರದರ್ಶಯೇತ್ ।
ಶಿರಶ್ಚೇದೋದಭವಂ ತದ್ವದ್ದಾನವಂ ಖಡ್ಗಪಾಣಿಕಂ ॥
ಹೃದಿ ಶೂಲೇನ ನಿರ್ಭಿನ್ನಂ ನಿರ್ಯದಂತ್ರ ವಿಭೂಷಣಂ ।
ರಕ್ತರಕ್ತೀಕೃತಾಖಡ್ಗಂ ಚ. ರಕ್ತವಿಸ್ತಾದಿತೇಷಣಂ ॥
ವೇಷ್ಟಿತಂ ನಾಗಪಾಶೇನ ಭ್ರೂಕುಟೀಭೀಷಣಾನವಂ ।
ಸಪಾಶವಾಮ ಹಸ್ತೇನ ಧೃತಕೇಶಂ ಚ ದುರ್ಗಯಾ ॥
ವಮದ್ರುಧೀರವಕ್ತ್ರಂ ಚ ದೇವ್ಯಾಸ್ಸಿಂಹಂ ಪ್ರದರ್ಶಯೇತ್ ।

– 'ಮಯದೀಪಿಕಾಯಾಮ್''

ಪ್ರತಿಮಾ ವಿಜ್ಞಾನ:

ಕಾತ್ಯಾಯನೀಂತತೋ ವಕ್ಷ್ಯೆ ಕ್ಷತ್ರಯೋದ್ಗತ ಶಾಸನೀ ।
ತೇಜಃ ಪ್ರತಾಪದಾ ನಿತ್ಯಂ ನೃಪಾಣಾಂ ಸುಖವೋಧಿನೀ ॥
ಶೂಲ ಖಡ್ಗೈ ವಜ್ರ ಚಕ್ರೆ ಬಾಣೋ ದಕ್ಷಿಣ ಬಾಹುಷು ।
ಚಾಪ ಖೇಟಕ ಪಾಶಾಶ್ಚ ಘಂಟಾ ವಾಮೇಷು ಚಾಂಕುಶಂ ।
ಅಧಸ್ತಾನ್ಮಹಿಷಂ ಕುರ್ಯಾದ್ ವಿಶಿರಸ್ಕಂ ಚ ಪಾದಯೋಃ ।
ವಿಧಾದ್ ಕ್ಷಣಪಾದೂ ತು ಮಹಿಷಸ್ಯೋಪರಿ ತಿಷ್ಠತಂ ॥

ಪಾದ ಪದ್ಮಾಯ ಪಾದೌ ಚ ವಾಮ ಪಾದ ಮುದಾಪಯೇತ್ ।

ತಥಾ ಛಿನ್ನ ಶಿರಸ್ಕಂ ಚ ದೈತ್ಯಾಂತಂ ರಕ್ತವಾಸಸಂ ॥

ಗೃಹೋತ್ವಾ ಚೈನ ಕೇಶಾಗ್ರೆ ವಾಮಕೇನ ತೆಥೇಶ್ವರೀ ।

ಹೃದಿಶೂಲೇನ ನಿರ್ಭಿನ್ನಂ ಮಹಿಷಕುಷಾ ಸುದರ್ಶನಂ ॥

ದೇವ್ಯಾಸ್ತು ವಾಹನಂ ಸಿಂಹಃ ಸಂಲಗ್ನೊ ಮಹಿಷೋಪರಿ ।

ಕಾತ್ಯಾಯನೀ ನಾಮಿಕಾ ಚ ಕರ್ತವ್ಯಾ ಚೈವಮೇವ ಹಿ ॥

– 'ಪ್ರತಿಮಾ ವಿಜ್ಞಾನ'

ಪ್ರಪಂಚಸಾರ ಸಾರ

ಗಾರುಡೋಪಲ ಸಂನ್ನಿಭಾಂ ಮಣಿ ಮೌಲಿಕುಡ್ಲಲಮಡ್ಲಿತಾಂ

ನೌಮಿ ಫಾಲ ವಿಲೋಚನಾಂ ಘನಕುಂತಲಾಂ ಮಹಿಷೋಷುಷೀಮ್

ಚಕ್ರ ಶಂಖ ಕೃಪಾಣ ಖೇಟಕ ಬಾಣ ಶೂಲಕಾಂ।

ತರ್ಜನೀಮಪಿ ವಿಭ್ರಾಂತೀ ನಿಜ ಬಾಹುಭಿಃ ಶಶಿ ಶೇಖರಾಮ್॥

– 'ಪ್ರಪಂಚಸಾರ ಸಾರ ಸಂಗ್ರಹ'

ಕರಕಮಲ ವಿರಾಜಚ್ಚಕ್ರ ಶಂಖಾಸಿಶೂಲಾ

ಪರಿಲಸಿತ ಕಿರೀಟಾ ಪಾತಿತಾನೇಕ ದೈತ್ಯಾ

ತ್ರಿನಯನ ಲಸಿತಾಂಗೀ ತಿಮ್ಮರಶಿಮ ಪ್ರಕಾಶಾ

ಪವನ ಸಖ ನಿಭಾಂಗೀ ಪಾತ್ರ ಕಾತ್ಯಾಯನೀ ವಃ॥

– 'ಪ್ರಪಂಚಸಾರ ತಂತ್ರಮ್'

ರೂಪಮಂಡನ:

ಕಾತ್ಯಾಯನೀಂ ತತೋ ವಕ್ಷ್ಯೇ ದಶಹಸ್ತಾಂ ಮಹಾಭುಜಾಮ್ ।
ತೇಜಃ ಪ್ರತಾಪದಾ ನಿತ್ಯಾಂ ನೃಪಾಣಾಂ ಸುಖಬೋಧಿನೀಂ ॥
ತ್ರಿಭಂಗೀಸ್ಥಾನಸಂಸ್ಥಾನಾ ಮಹಿಷಾಸುರಸೂದನೀ ।
ದಕ್ಷೆ ತ್ರಿಶೂಲಂ ಗಡ್ಗಂ ಚ ಚಕ್ರಂ ಬಾಣಂ ಚ ಶಕ್ತಿಕಾಮ್ ॥
ಖೇಟಕಂ ಪೂರ್ಣಚಾಪಂ ಚ ಪಾಶಮಂಕುಶ್ಮೇವ ಚ ।
ಘಂಟಾ ಚ ವಾಮತೋ ವೂಧ್ಯಾದತ್ಯಮೂರ್ಧಜದೃತ್ಕರೀ ॥
ಆಧಸ್ತಾನ್ಮಹಿಷಂ ತದ್ವದ್ವಿಶಿರಸ್ಕಂ ಪ್ರದರ್ಶಯೇತ್ ।
ಶಿರಚ್ಛೇದೋಬ್ಧವಂ ತದ್ವದದಾನವಂ ಖಡ್ಗಪಾಣಿನಮ್ ॥
ಹೃದಿ ಶೂಲೇನ ನಿರ್ಭಿನ್ನಂ ನಿರ್ಯದಂತ್ರವಿಭೂಷಿತಮ್ ।
ರಕ್ತರಕ್ತೀಕೃತಾಂಗಂ ಚ ರಕ್ತವಿಷ್ಫಾರಿತೇಕ್ಷಣಮ್ ॥
ದವ್ಯಾಸ್ತು ದಕ್ಷಿಣಂ ಪಾದಂ ಸಂಂ ಸಿಂಹೋಪರಿ ಸ್ಥಿತಮ್ ।
ಕಿನ್ಚಿದೂರ್ಧ್ವ ತಥಾ ವಾಮಮುಂಗುಷ್ಠಂ ಮಹಿಷೋಪರಿ ॥
– 'ರೂಪಮಂಡನ'

ಶಿಲ್ಪರತ್ನಂ:

ಕಾತ್ಯಾಯನೀ
ವಕ್ಷ್ಯೆ ಕಾತ್ಯಾಯನೀಂ ದೇವೀಂ ಶಿವನಾರಾಯಣಾನ್ವಿತಾಮ್ ।
ಬಾಹುಭಿರ್ದಶಭಿರ್ಯುಕ್ತಾಂ ಜಟಾಮ ಕುಟಮಂಡಿತಾಮ್ ॥
ಲೋಚನತ್ರಯ ಸಂಯುಕ್ತಾಮರ್ಧೇಂದು ಕೃತ ಶೇಖರಾಮ್ ।
ಆತಸೀಪುಷ್ಪಸಂಕಾ ಶಾ ಮಿಂದಿವರದಲೇಷಣಾಮ್ ॥
ಪಿನೋನ್ನತ ಕುಂಚಾಂಭುಜಾಂ ತನುಮಧ್ಯೇನ ಶೋಭಿತಾಮ್ ।
ತ್ರಿಭಂಗಿಸ್ಥಾನ ಸಂಸ್ಥಾನಾಂ ಮಹಿಷಾಸುರಮರ್ಧಿನೀಮ್ ॥
ತ್ರಿಶೂಲಂ ದಕ್ಷಿಣ್ ಖಡ್ಗಂ ಶಕ್ತಿತಂ ಚಕ್ರಧರಂ ತಥಾ ।

ಅಧೀಜ್ಯಂ ಕಾರ್ಮುಕಂ ವಾಮೇ ಪಾಶಮಂ ಕುಶಖೇಟಕಮ್ ॥
ಘಂಟಾಂಚ ಪರಶೂಂ ಚಾಪಿ ಧಾರಯಂತೀಂ ಸಮಾಲಿಖೇತ್ ।
ಅಧಸ್ತಾನ್ಮಹಿಷಂ ಚಾಸ್ಯಾಚ್ಛಿನ್ನಗ್ರೀವಂ ಸಮಾಲಿಖೇತ್ ॥
ಛಿನ್ನಸ್ಥಾನೆ ಸಮುತ್ಪನ್ನಂ ಖಡ್ಗ ಖೇಟಕಧಾರಿಣಮ್ ।
ಹೃದಿ ಶೂಲೇನ ನಿರ್ಭಿನ್ನಂ ರುಧಿರಾರುಣವಿಗ್ರಹಮ್ ।
ಪ್ರಬದ್ಧಂ ನಾಗಪಾಶೇನ ಭ್ರೂಕುಟೀಭೀಷಣೆಷಣಮ್ ।
ನಾಭೇರೂರ್ಧ್ವಾ ವಿನಿಷ್ಕ್ರಾಂತಂ ದಾನವಂ ದಾರುಣಂ ಲಿಖೇತ್ ॥
ದಕ್ಷಿಣಂ ಚರಣಂ ದಏವ್ಯಾಸಿಂಹಪುಷ್ಠೇ ಪ್ರತಿಷ್ಠಿತಮ್ ।
ಉತ್ತುಂಗಮಂಚಿತಂ ವಾಮಂ ಮಹಿಷಸ್ಯೋ ಪರಿಸ್ಥಿತಮ್ ॥

– ‘ಶಿಲ್ಪರತ್ನಸಂಯೋಜಿತೆ ಕನ್ಮಿಂಶಿಂಚದಗ್ರಂಥೆ’

ಮಹಿಷಾಸುರ ಮರ್ಧಿನಿಯ ಶಿಲ್ಪರಚನೆಯ ಲಕ್ಷಣಗಳು

ಮೂಲಾಧಾರಗಳು	ದೇವಿಯ ಹೆಸರು	ಕೈಗಳ ಸಂಖ್ಯೆ	ಬಲ ಭಾಗ	ಎಡ ಭಾಗ	ಮುಖ್ಯ ಲಕ್ಷಣಗಳು – ಬೇಧಗಳು
ಅಗ್ನಿಪುರಾಣ	ಚಂಡಿಕೆ	೨೦ ಕೈಗಳು	ದೈವಿತ್ರಿಶೂಲ, ಖಡ್ಗ, ಭರ್ಚಿ, ಚಕ್ರ, ಪಾಶ, ಖೇಟ, ಆಯುಧ, ಅಭಯ, ಢಮರು, ಶಕ್ತಿ	ನಾಗಪಾಶ, ಕೇಟಕ, ಕೊಡಲಿ, ಅಂಕುಶ, ಬಿಲ್ಲು, ಘಂಟೆ, ಧ್ವಜ, ಗಧೆ, ಧರ್ಪಣ, ಮುದ್ಗರ	ಕೋಣ ಕೆಳಗಡೆ ಇದ್ದು ತಲೆಯನ್ನು ಸಂಪೂರ್ಣವಾಗಿ ಕಡಿದಿರಲಾಗುವುದು. ಕಡಿದ ಭಾಗದ ದೇಹದಿಂದ ಅಸುರ ಹೊರಗೆ ಬಂದಿರುತ್ತಾನೆ. ರಕ್ತವನ್ನು ವಾಂತಿ ಮಾಡಿರುತ್ತಾನೆ. ಅವನ ಕೈಯಲ್ಲಿ ಇನ್ನೂ ಖಡ್ಗ ಝುಳಪಿಸುತ್ತಿರುತ್ತದೆ. ಎರಡು ಕಣ್ಣುಗಳಿಂದ ರಕ್ತವು ಇಳಿಯುತ್ತಿರುತ್ತದೆ. ದೇವಿಯು ನಿಂತಿರುತ್ತಾಳೆ. ಮೂರು ಕಣ್ಗಳು.
ಭವಿಷ್ಯತ್ ಪುರಾಣ	ಮಹಿಷಾಸುರ ಮರ್ಧಿನಿ	ಹದಿನೆಂಟು ಕೈಗಳು ೧೬ ಕೈಗಳಿದ್ದಾಗ	ಶಕ್ತಿ, ಖಟ್ವೆ (ದೊಣ್ಣೆ), ತ್ರಿಶೂಲ, ವಜ್ರ, ಶಂಖ, ಅಂಕುಶ, ಚಕ್ರ, ಸಲಾಕೀ, ಬಾಣ ಮತ್ತು ಸಲಾಕೆಗಳು ವರ್ಜಿತ	ರುಂಡ, ಗುರಾಣಿ, ಘಂಟಾ, ತರ್ಜನೀಮುದ್ರ, ಬಿಲ್ಲು ಧ್ವಜ, ಢಮರು, ಪಾಶ,	ಸುಂದರ ವದನೆ, ಸರ್ವಾಭರಣಭೂಷಿತೆ, ವರಗಳನ್ನು ನೀಡುವವಳು, ಜಯ ಸಾಧನೆಗಾಗಿ ಬೇಡಿದವರು, ಋಷಿಮುನಿಗಳಿಂದ ಪೂಜಿತೆ. ಶ್ಯಾಮವರ್ಣೆ, ಬಂಗಾರದ ಕಾಂತಿ. ಮಹಿಷನ ತಲೆಯ ಮೇಲೆ ನಿಂತು ಧಮಿಸುತ್ತಿರುವವಳು. ಆಕ್ರಮಣದಲ್ಲಿ ಇರುವ ಮಹಿಷನನ್ನು ನಿಯಂತ್ರಿಸುವುದು.

				ದರ್ಪಣ	
ದೇವಿ ಭಾಗವತ ಪುರಾಣ	ದುರ್ಗೆಯ ರೂಪ	ಹದಿನೆಂಟು ಕೈಗಳು	ಆಯುಧಗಳು	ಆಯುಧಗಳು	ಸುಂದರಾಂಗನೆ, ಆಭೂಷಿತೆ, ಸಿಂಹವಾಹಿನಿ.
ಕಾಲಿಕಾ ಪುರಾಣ	ಮಹಿಷಾಸುರ ಮರ್ಧಿನಿ	ಹತ್ತು ಕರಗಳು, ಕಮಲದ ದೇಟುಗಳಂತೆ	ಖಡ್ಗ, ಚಕ್ರ, ಚೂಪಾದ ಬಾಣ, ಶಕ್ತಿ, ತ್ರಿಶೂಲ	ಘಂಟಾ, ಕೊಡಲಿ, ಖೇಟಕ, ಬಿಲ್ಲು, ಪಾಶ, ಅಸುರ ಕೂದಲನ್ನು ಹಿಡಿದಿರುವುದು	ಅರ್ಧಚಂದ್ರನೊಂದಿಗೆ ಜಟೆ, ೩ ಕಣ್ಣುಗಳು, ಬಂಗಾರದ ಕಾಂತಿ, ಚಿರಯೌವನೆ, ತ್ರಿಭಂಗ, ಮಹಿಷನೊಂದಿಗೆ ಹೋರಾಟ, ಶಿರಚ್ಛೇದ, ಮಹಿಷಾಸುರನ ಎದೆಯನ್ನು ಪಾಶದಿಂದ ಬಿಗಿದಿದೆ, ರಕ್ತ ಚಿಮ್ಮುತ್ತಿದೆ, ಸಿಂಹವಾಹನ, ಬಲಗಾಲನ್ನು ಮಡಿಚಿ ಸಿಂಹನ ಬೆನ್ನಿನ ಮೇಲೆ ಒತ್ತಿದ್ದಾಳೆ. ಎಡಗಾಲು ಅಸುರನ ಮೇಲೆ ಒತ್ತಿದೆ.
ಮಾರ್ಕಂಡೇಯ ಪುರಾಣ (ದೇವಿ ಮಹಾತ್ಮ್ಯ ಅಧ್ಯಾಯ ೨)	ಮಹಾಲಕ್ಷ್ಮಿಯಂತೆ ಸ್ಮಿತವದನೆ	ಹದಿನೆಂಟು ಕೈಗಳು	ಜಪಮಾಲೆ, ಕೊಡಲಿ, ಗಧೆ, ಬಾಣ, ವಜ್ರ, ಕಮಲ, ಕುಂಡಿಕ, ದಂಡ, ಶಕ್ತಿ	ಖಡ್ಗ, ಗುರಾಣಿ, ಶಂಖ, ಘಂಟಾ, ಕೃಶ, ಪಾಶ, ಚಕ್ರ	ಕಮಲದಲ್ಲಿ ಕುಳಿತಿರುವ ನಗುಮುಖದ ದೇವಿ, ಮಹಿಷಾಸುರನ ವಧೆ.

ಮತ್ಸ್ಯ ಪುರಾಣ	ಕಾತ್ಯಾಯಿನಿ	೧೦ ಕೈಗಳು	ಬ್ರಹ್ಮ, ವಿಷ್ಣು, ಶಿವ ತ್ರಿಮೂರ್ತಿಗಳ ಕೈಲ್ಲಿರುವ ಆಯುಧಗಳನ್ನು ಹೊಂದಿರುವವಳು, ಚಕ್ರ, ತ್ರಿಶೂಲ, ಚೂಪಾದ ಬಾಣ, ಭರ್ಜಿ, ಖಡ್ಗ	ಬಿಲ್ಲು, ಪಾಶ, ಮೊನೆ ಗೋಲು, ಘಂಟೆ, ಯುದ್ಧ ಕೊಡಲಿ	ತಲೆಯ ಮೇಲೆ ಅರ್ಧಚಂದ್ರ, ಮೂರು ಕಣ್ಣುಗಳು, ಮುಖ ಚಂದ್ರನಂತೆ, ಅತಾಸಿ ಹೂಗಳನ್ನು ಹೊಂದಿರುವವಳು, ಆಭರಣಗಳು, ಶಿರಚ್ಛೇದಿತ ಮಹಿಷಾಸುರ ಕೆಳಗೆ, ಕೈಯಲ್ಲಿ ಖಡ್ಗ, ಭಯಂಕರ ರೂಪ, ದೇವಿಯ ಭರ್ಜಿಯಿಂದ ಎದೆ ಸೀಳಿದೆ, ಬಲಗಾಲು ಮಡಚಿ ಸಿಂಹದ ಬೆನ್ನ ಮೇಲೆ, ಎಡಗಾಲು ಮಹಿಷಾಸುರನ ಶರೀರವನ್ನು ತಾಕಿವೆ. ಮಹಿಷ ವೃತ್ತಾಕಾರವಾಗಿದೆ. ಅಸುರನ ತಲೆಗೂದಲು ದೇವಿಯ ಕೈಯಲ್ಲಿ, ದೇವಿಯ ಸುತ್ತಲೂ ದೇವತೆಗಳು ಪ್ರಾರ್ಥನೆ ಸಲ್ಲಿಸುತ್ತಿರುವುದು.
ವಾಮನ ಪುರಾಣ	ಕಾತ್ಯಾಯಿನಿ	ಹದಿನೆಂಟು ಕೈಗಳು			ಯೋಗ ಸ್ವರೂಪಿಣಿ, ಶಿವನಿಂದ ಮೂರನೇ ಕಣ್ಣನ್ನು ಪಡೆದವಳು. ಗುಂಗುರು ಕೂದಲು ಪ್ರಜ್ವಲಿಸುವ ಕಣ್ಣುಗಳು.
ವರಾಹ ಪುರಾಣ	ದೇವಿ – ಬ್ರಹ್ಮ, ವಿಷ್ಣು, ಶಿವನ ತ್ರಿವಿಧ	ಕಪ್ಪು ಬಣ್ಣ ನಿಲ್ಲೋತ್ಪಲ ಪುಷ್ಪದ ವರ್ಣ			ತೊಪ್ಪಿ, ಉರಿನಾಲಿಗೆ ಹೊಂದಿರುವವಳು ರೌದ್ರರೂಪಿಣಿ.

	ದೃಷ್ಟಿಯಿಂದ ಹುಟ್ಟಿದವಳು	ಕಪ್ಪು ಗುಂಗುರು ಕೂದಲು			
ವಿಷ್ಣುಧರ್ಮೋತ್ತರ ಪುರಾಣ	ಮಹಿಷಾಸುರ ಮರ್ಧಿನಿ ಚಂಡಿಕೆ	೨೦ ಕೈಗಳು	ಶೂಲ, ಖಡ್ಗ, ಶಂಖ, ಚಕ್ರ, ಬಾಣ, ಶಕ್ತಿ, ವಜ್ರ, ಅಭಯ, ಢಮರು, ಛತ್ರಿ	ನಾಗಪಾಶ, ಖೇತಕ, ಪರಶು, ಅಂಕುಶ, ಧನಸ್ಸು, ಘಂಟಾ, ಧ್ವಜ, ಗಧೆ, ಧರ್ಪಣ, ಮುದ್ಗರ	ಸ್ವರ್ಣಕಾಂತಿ, ಸುಂದರಾಂಗನೆ, ಕುಪಿತಭಾವ, ಸಿಂಹದ ಮೇಲೆ ಕುಳಿಗಿರುವ ಭಂಗಿ. ಎಮ್ಮೆಯು ಶರೀರ ಹೊರಹೊಮ್ಮಿದೆ. ಕಣ್ಣು, ಕೂದಲು, ಮುಖವೆಲ್ಲಾ ರಕ್ತ ಹೆಪ್ಪುಗಟ್ಟಿ ಬಾಯಿಯಿಂದ ರಕ್ತ ಉಕ್ಕುತ್ತಿದೆ. ಅವಳ ತೊಡೆ ಅಸುರನನ್ನು ಜೋರಾಗಿ ಅಮುಕುತ್ತಿದೆ, ತ್ರಿಶೂಲ ಕತ್ತಿನ ಭಾಗವನ್ನು ಚುಚ್ಚಿದೆ, ನಾಗಪಾಶದಿಂದ ಬಂಧಿತನಾದ ಅಸುರ ಖಡ್ಗ ಮತ್ತು ಗುರಾಣಿಯನ್ನು ಹಿಡಿದಿದ್ದಾನೆ.
ಅಂಶುಭೇದಾಗಮ	ದೇವಿ	೪ ಕೈಗಳು	ಅಭಯ ಹಸ್ತ	ಕಟಕ ಹಸ್ತ	ಪೀತಾಂಬರಧಾರಿ, ತ್ರಿನೇತ್ರೆ, ಸರ್ವಾಭರಣಭೂಷಿತೆ, ಕರಂಡ ಮುಕುಟ.
ಪೂರ್ವಕರಣಾಗಮ		ಎರಡು ಕೈಗಳು	ಅಂಕುಶ ಹಲವು ವೇಳೆ ಕಮಲ ಹಸ್ತೆ	ಇಳಿಬಿಟ್ಟ ಕೈ	ಎರಡು ಕಣ್ಣುಗಳು, ಸ್ಮಿತ ವದನೆ, ಸರ್ವಾಭರಣಭೂಷಿತೆ, ಶ್ಯಾಮವರ್ಣೆ.
ಪೂರ್ವಕರ್ಣಾಗಮ	ಮಹಿಷಾಸುರ	೪ ಅಥವಾ	ಶೂಲ, ಖಡ್ಗ, ಬಾಣ	ಪಾಶ, ಖೇಟಕ,	ಹಣೆಯಲ್ಲಿ ತಿಲಕ, ತೇಜೋಮಯ ನೇತ್ರೆ ತಲೆಯ ಮುಂಭಾಗ ಮಣಿಯಿಂದ ಅಲಂಕೃತ, ಕಿರೀಟ

ದ್ವಾದಶ ಪಟಲ	ಸಂಹಾರಮೂರ್ತಿ	ಎಂಟು ಕೈಗಳು	ಚಕ್ರ	ವರದ ಹಸ್ತ, ಮುದ್ರ, ಮೇಲೆತ್ತಿದ ಕೈ	ಮುಕುಟ, ಕುಂಡಲ, ಅರ್ಧಚಂದ್ರ ಮಹಿಷನ ತಲೆಯ ಮೇಲೆ ನಿಂತ ಭಂಗಿ.
ಸುಪ್ರಭೇದಾಗಮ	ಆದಿಶಕ್ತಿ	೪ ಕೈಗಳು	ಶಂಖ, ಧನುಸ್, ಅಥವಾ ಶೂಲ	ಚಕ್ರ, ಖಡ್ಗ ಅಥವಾ ಪಾಶ	ಶ್ಯಾಮಲ ವರ್ಣ, ಕಪ್ಪು ಛಾಯೆ, ಖಳೆಯಿಂದ ಹೊಳೆಯುವ ಮುಖ, ಸಿಂಹದ ಮೇಲೆ ಪದ್ಮಾಸನಾರೂಢಳು, ಸರ್ವ ಆಭರಣಗಳಿಂದ ಅಲಂಕೃತ ಕಾಲಿನ ಕೆಳಗೆ ಮಹಿಷನ ತಲೆ ಇರುತ್ತದೆ.
ಮಯದೀಪಿಕಾ	ಕಾತ್ಯಾಯಿನಿ	೧೦ ಕೈಗಳು	ಖೇಟಕ, ಪಾತ್ರೆ, ಪಾಶ, ಅಂಕುಶ, ಘಂಟೆ, ಪರಶು ಅಥವಾ ಚಾಮರ	ತ್ರಿಶೂಲ, ಖಡ್ಗ, ಚಕ್ರ, ಬಾಣ, ಶಕ್ತಿ	ತ್ರಿಮೂರ್ತಿಗಳಿಂದ ಪೂಜೆಗೊಳ್ಳುವ ದೇವಿ ಜಟಾಮುಕುಟ, ಅರ್ಧಚಂದ್ರ, ತ್ರಿನೇತ್ರೆ, ಅತಸೀ ಪುಷ್ಪದ ವರ್ಣಕಾಂತಿಯುಳ್ಳವಳು, ತೇಜೋಮಯ ಕಣ್ಗಳಿರುವ ಸುಂದರಾಂಗನೆ, ತ್ರಿಭಂಗ ನಿಲುವು, ಮಹಿಷಾಸುರನನ್ನು ಸಂಹರಿಸುತ್ತಿರುವ ದೇವಿ. ಮಹಿಷಾಸುರ ನಾಗಪಾಶದಿಂದ ಬಂಧಿತ, ಶಿರಛೇದನ, ರಕ್ತ ಚಿಮ್ಮುತ್ತಿರುವುದು, ಅಸುರ ಹೊರಬಂದು ಖಡ್ಗ, ಗುರಾಣಿಗಳಿಂದ ಆಕ್ರಮಿಸುತ್ತಿರುವುದು, ತ್ರಿಶೂಲದಿಂದ ಅಸುರನ ದೇಹವನ್ನು ಛೇದಿಸುತ್ತಿರುವುದು, ತಲೆಯ ಕೂದಲನ್ನು ಹಿಡಿದುರುವುದು.
ಪ್ರತಿಮಾವಿಜ್ಞಾನ	ಕಾತ್ಯಾಯಿನಿ	೧೦ ಕೈಗಳು	ಶೂಲ, ಖಡ್ಗ, ವಜ್ರ, ಚಕ್ರ, ಬಾಣ	ಬಾಣ, ಖೇಟಕ, ಪಾಶ, ಘಂಟೆ,	ಜಗತ್ತನ್ನು ಆಳುವವಳು, ಎಡಗಾಲನ್ನು ಮಹಿಷಾಸುರನ ಎದೆಯ ಮೇಲೆ ನೆಟ್ಟಿರುವವಳು, ಬಲಗಾಲನ್ನು ಮಹಿಷಾಸುರನ ತಲೆಯ ಭಾಗದಲ್ಲಿ ಹೊರಬಂದ ಕಮಲದ ಮೇಲೆ ಮೆಟ್ಟಿರುವುಳು, ಶೂಲದಿಂದ ಅಸುರನನ್ನು ಇರಿಯುತ್ತಿದ್ದರೆ

				ಅಂಕುಶ	ಸಿಂಹವಾಹನ ಅಸುರನನ್ನು ಆಕ್ರಮಣ ಮಾಡುತ್ತಿದೆ.
ಪ್ರಪಂಚಸಾರ ಸಂಗ್ರಹ	ದೇವಿ	ಆರು ಕೈಗಳು	ಚಕ್ರ, ಶಂಖ, ಕತ್ತಿ	ಬಿಲ್ಲು ಬಾಣ, ತ್ರಿಶೂಲ, ತರ್ಜನೀ ಮುದ್ರೆ	ಸುಂದರಾಂಗನೆ, ಚೂಡಾಮಣಿಯನ್ನು ಶಿರದಲ್ಲಿ ಧರಿಸಿದವಳು, ಅರ್ಧಚಂದ್ರನನ್ನು ತಲೆಯ ಮೇಲೆ ಧರಿಸಿ, ಕುಂಡಲಿಗಳಿಂದ ಅಲಂಕೃತಳಾದವಳು, ಪ್ರಜ್ವಲಿಸುವ ಕಣ್ಣುಳು.
ಪ್ರಪಂಚಸಾರ ತಂತ್ರ	ಕಾತ್ಯಾಯಿನಿ		ಚಕ್ರ, ಶಂಖ, ಖಡ್ಗ	ತ್ರಿಶೂಲ, ಹೊಳೆಯುವ ಬಿಲ್ಲು, ಬಾಣ	ಮೂರು ಕಣ್ಣುಳುಳ್ಳವಳು, ತೇಜೋಮಯಿ
ರೂಪಮಂಡನ	ಕಾತ್ಯಾಯಿನಿ	೧೦ ಕೈಗಳು	ತ್ರಿಶೂಲ, ಖಡ್ಗ, ಚಕ್ರ, ಬಾಣ, ಶಕ್ತಿ	ಖೇಟಕ, ಧನಸ್ಸು, ಪಾಶ, ಅಂಕುಶ ಮತ್ತು ಘಂಟೆ	ದೇವತೆಯರನ್ನು ಸುಪ್ರೀತಗೊಳಿಸುವವಳು, ತ್ರಿಭಂಗಿಯಲ್ಲಿ ನಿಂತು ಮಹಿಷಾಸುರನನ್ನು ಸಂಹರಿಸುತ್ತಿರುವವಳು. ಶಿರಚ್ಛೇದವಾಗಿರುವ ಮಹಿಷ ಸತ್ತು ಬಿದ್ದಿದ್ದಾನೆ. ಅಲ್ಲಿಂದ ಅಸುರನ ಮಾನವಾಕೃತಿ ಹೊರಬೀಳುತ್ತಿದೆ. ಅವನು ಖಡ್ಗ ಮತ್ತು ಗುರಾಣಿಗಳನ್ನು ಹಿಡಿದಿದ್ದಾನೆ, ಎದೆಯ ಮೇಲೆ ತ್ರಿಶೂಲದಿಂದ ಇರಿದಿದ್ದಾಳೆ, ರಕ್ತ ಉಕ್ಕುತ್ತಿದೆ ಬಲಗಾಲು ಸಿಂಹದ ಮೇಲೆ ಎಡಗಾಲು ಮಹಿಷಾಸುರನ ಮೇಲೆ ನೆಟ್ಟಿದೆ.


ಶಿಲ್ಪರತ್ನ	ದುರ್ಗಾ ಮಹಿಷಾಸುರ ಮರ್ಧಿನಿ	೧೦ ಕೈಗಳು	ತ್ರಿಶೂಲ, ಖಡ್ಗ, ಸತ್ಯಾಯುಧ, ಹೆದೆಯೇರಿಸಿದ ಬಿಲ್ಲು	ಪಾಶ, ಅಂಕುಶ, ಖೇಟಕ ಪರಶು ಮತ್ತು ಘಂಟೆ	ತ್ರಿನೇತ್ರೆ, ಜಟಾಮಕುಟೆ, ಚಂದ್ರಕಲ ಧರಿಸಿದವಳು ಅತಸಿ ಹೂವಿನ ವರ್ಣದವಳೇ, ನೀಲೋತ್ಪಲದಂತಹ ಕಣ್ಣುಳ್ಳವಳು, ತ್ರಿಭಂಗ ಸ್ವರೂಪಳೇ, ಕಾಂತಿಯುತಳೇ, ಕಾಲಬಳಿ ಎಮ್ಮೆ ಬಿದ್ದಿದ್ದು ಅದರಿಂದ ಅಸುರ ಹೊರಬರುತ್ತಿದ್ದು ರಕ್ತ ಉಕ್ಕುತ್ತಿದೆ, ನಾಗಪಾಶದಿಂದ ಬಿದ್ದಿದ್ದಾನೆ, ಖಡ್ಗ, ಗುರಾಣಿಗಳನ್ನು ಹಿಡಿದು ಮುನ್ನುಗ್ಗುತ್ತಿದ್ದಾನೆ, ಆದರೆ ದೇವಿ ಆಗಲೇ ಅವನ ಕುತ್ತಿಗೆಯನ್ನು ಇರಿದಿದ್ದಾಳೆ. ಬಲಗಾಲು ಸಿಂಹದ ಮೇಲೆ ಊರಿದ್ದು ಎಡಗಾಲು ಅಸುರನ ಶರೀರವನ್ನು ಮೆಟ್ಟಿದೆ.



ಮಹಿಷಸಂಹಾರಿ ದುರ್ಗೆ ದೇವಾಲಯ, ತಿರುವಣ್ಣಾಮಲೈ



ತರ್ಜನಿ ಹಸ್ತ



ವರದ ಹಸ್ತ



ತಾಡನ ಹಸ್ತ



ಅಭಯ ಹಸ್ತ




ಮುಷ್ಟಿ



ಕಟಕ ಹಸ್ತ



ಸಂದಂಶ ಹಸ್ತ




ಪಲ್ಲವ ಹಸ್ತ




ಢಮರು



ಕಟಕ ಹಸ್ತ



ಕಟಿ ಹಸ್ತ



ಢಮರು ಹಸ್ತ



ಕಟಕ ಹಸ್ತ



ಪಾನ ಪಾತ್ರೆ




ಧನುರ್ ಹಸ್ತ




ಕಟಕ ಹಸ್ತ



ಅರ್ಧ ಚಂದ್ರ



ಬಿಲ್ಲು ಬಾಣ



ಪಾಶ



ಅಂಕುಶ




ಖೇಟಕ



ಚಕ್ರ



ಶಂಖ



ವಜ್ರ



ಢಮರು




ಜಪಮಾಲೆ




ಖಟ್ವಾಂಗ



ಶಕ್ತಿ ಆಯುಧ



ಖಡ್ಗ



ಖಡ್ಗ




ಗಂಟೆ



ಸೂರಿ ಕಾಯಿ



ಶೂಲ



ಪರಶು




ದಂಡ




ಗದೆ




ಮೇಖಲಾ



ಮೇಖಲಾ ವಿನ್ಯಾಸದ





ಕಟಿ ವಿನ್ಯಾಸದ ಲಕ್ಷಣಗಳು



ತೋಳು ಬಂಧಿಗಳು



ಕಂಠಾ ಹಾರ



ಕಂಠಾಭರಣ






ಪಾದುಕಾಭರಣ



ಪಾದುಕಾಭರಣ



ಕಡಗ



ಕರಂಡ ಮುಕುಟ



ಕಮಲ




ರುಂಡ ಮಾಲೆ








ಸ್ಥಾನಕಗಳು



ಸ್ಥಾನಕಗಳು



ಮಹಿಷಾಸುರಮರ್ಧಿನಿ – ಚಿದಂಬರಂ, ತಮಿಳು ನಾಡು



ಮಹಿಷಾಸುರಮರ್ಧಿನಿ

ಅಧ್ಯಾಯ – ೦೫

ಮಹಿಷಾಸುರಮರ್ಧಿನಿ ಶಿಲ್ಪರಚನೆಯ ಪರಿಮಾಣ ಮತ್ತು ವೈವಿಧ್ಯತೆಗಳು

ಅಧ್ಯಾಯ - ೦೫

ಮಹಿಷಾಸುರಮರ್ಧಿನಿ ಶಿಲ್ಪರಚನೆಯ ಪರಿಮಾಣ ಮತ್ತು ವೈವಿಧ್ಯತೆಗಳು

ಮಹಿಷಾಸುರಮರ್ಧಿನಿಯ ಪರಿಕಲ್ಪನೆ, ನೆಲೆ, ಹಿನ್ನಲೆಯನ್ನು ಪುರಾಣ, ಆಗಮ ಮತ್ತು ಶಿಲ್ಪಶಾಸ್ತ್ರ ಗ್ರಂಥದಲ್ಲಿ ಕಲ್ಪಿಸಿಕೊಂಡಿರುವ ಬಗೆಯನ್ನು ಮತ್ತು ಭಾರತದಾದ್ಯಂತ ಸರ್ವಕಾಲಿಕ ಮೌಲ್ಯವನ್ನು ಹೊಂದಿರುವ ಶಕ್ತಿ ದೇವತೆಯ ಬಗ್ಗೆ ನೀಡಿರುವ ಸವಿಸ್ತಾರ ವಿವರಗಳನ್ನು ತಿಳಿದುಕೊಂಡ ನಂತರ, ಕೊನೆಯ ಅಧ್ಯಾಯದಲ್ಲಿ ದೇವಿಯ ಶಿಲ್ಪರಚನೆಯನ್ನು ಐತಿಹಾಸಿಕ ಕಾಲಘಟ್ಟದಲ್ಲಿ ಹೇಗೆ ರಚಿಸಲಾಯಿತೆಂಬ ಹಿನ್ನೆಲೆಯಲ್ಲಿ ಹಲವು ಮುಖ್ಯ ಶಿಲ್ಪಗಳನ್ನು ಕುರಿತು ಚರ್ಚಿಸಲಾಗಿದೆ. ಮೂರ್ತಿಶಿಲ್ಪ ರಚನೆಯಲ್ಲಿ ದೇವಿಶಿಲ್ಪಗಳ ರಚನೆಯದೇ ಸಿಂಹಪಾಲು. ಅನಾದಿಕಾಲದಿಂದ ಐತಿಹಾಸಿಕ ಕಾಲದಲ್ಲಿ ಮತ್ತು ಇಂದಿನವರೆಗಿನ ಎಲ್ಲಾ ಕಾಲಗಳಲ್ಲಿಯೂ ದೇವಿಶಿಲ್ಪಗಳನ್ನು ಶಿಲೆ, ಲೋಹ, ಆವಿಮಣ್ಣು, ಮರ, ಗಾರೆ, ಮರಳು ಅಲ್ಲದೇ ನೇಯ್ದ ಬಟ್ಟೆಯ ಮೇಲಿನ ಕಸೂತಿ ಮತ್ತು ಅಚ್ಚುಗಳಲ್ಲಿ ಪರಿಪರಿಯಾಗಿ ಪರಿಕಲ್ಪಿಸಿರುವುದನ್ನು ಕಾಣಬಹುದು.

ಹಿರಿಯ ವಿದ್ವಾಂಸರಾದ ಪ್ರೊ. ಎಸ್.ಕೆ. ರಾಮಚಂದ್ರರಾವ್ ಅವರು ತಮ್ಮ ಗ್ರಂಥವಾದ 'ಮೂರ್ತಿಶಿಲ್ಪ - ನೆಲೆ ಹಿನ್ನೆಲೆಯಲ್ಲಿ' ಮೂರ್ತಿಶಿಲ್ಪ ರಚನೆಯ ಬಗ್ಗೆ ಈ ರೀತಿ ವ್ಯಾಖ್ಯಾನಿಸುತ್ತಾರೆ. 'ಒಬ್ಬ ವ್ಯಕ್ತಿಯು ಪಡೆದುಕೊಂಡ ಅವನ ಅನುಭವದಲ್ಲಿ ಬಂದ, ಕಲ್ಪನೆಗಳಿಗಿಂತ ಇಡೀ ಸಮುದಾಯವು ಒಟ್ಟಾರೆ ಗಳಿಸಿಕೊಂಡ ಕಲ್ಪನೆಗಳು ಒಬ್ಬೊಬ್ಬ ವ್ಯಕ್ಯಿಯಲ್ಲಿಯೂ ಅಡಗಿಕೊಂಡು ಕೆಲಸಮಾಡುವುದು ಮುಖ್ಯ. ಮನೋವಿಜ್ಞಾನ ಇದನ್ನು ಸಾಮುದಾಯಿಕ-ಸುಪ್ತಪ್ರಜ್ಞೆ' (collective unconcious) ಎಂದು ನಿರ್ದೇಶಿಸುತ್ತದೆ. ನಮ್ಮೆಲ್ಲರ ದಿನದಿನದ ವ್ಯವಹಾರದಲ್ಲಿ ಇದರ ಪಾತ್ರ ಎಷ್ಟು ಹಿರಿದೆಂಬುದನ್ನು ಮನವರಿಕೆ ಮಾಡಿಕೊಡುತ್ತದೆ. ನಮ್ಮ ಧಾರ್ಮಿಕ ವಿಧಿಗಳು ಮಾತ್ರವಲ್ಲ, ಸಾಮಾಜಿಕ ಕಟ್ಟಳೆಗಳು, ನೀತಿ ನಿಯಮಗಳೂ, ಆಟಪಾಟಗಳೂ, ಬಯಕೆ ಬಿಂಕಗಳೂ ಈ ತೆರೆಯ ಮರೆಯ ಕಲ್ಪನೆಗಳಿಂದ ಪ್ರಭಾವಿತವಾಗುತ್ತವೆ. ಕಲ್ಪನೆಗಳು ಪ್ರತಿಮೆಗಳಂತೆ ಮೈದಳೆದು ಮನಸ್ಸಿನ ಪ್ರವೃತ್ತಿಗಳಿಗೆ ದಾರಿತೋರಿಸುತ್ತವೆ. ನಡೆ-ನುಡಿಗಳಲ್ಲಿ ಮೂಡಿ ಬರುತ್ತವೆ. ನಮ್ಮ ಧಾರ್ಮಿಕ, ಕಲಾತ್ಮಕ ವ್ಯವಹಾರಗಳು ಕೂಡಿಕೊಂಡಿರುವ ದೇವತಾಮೂರ್ತಿ ನಿರ್ಮಾಣದಲ್ಲಿ ಈ ಪ್ರತಿಮೆಗಳ ಪ್ರಭಾವವನ್ನು ಗುರುತಿಸಬಹುದು. ಮಹಿಷಾಸುರಮರ್ದಿನಿಯ ಶಿಲ್ಪರಚನೆಯೂ ಈ ಸಿದ್ಧಾಂತದ ಹಿನ್ನೆಲೆಯಲ್ಲಿಯೇ ಸೃಷ್ಟಿಗೊಂಡಿದ್ದು ಮಾನವ ಜೀವನದ ಆಗುಹೋಗುಗಳ ರಕ್ಷಣಾಕವಚದ ಪ್ರತೀಕದಂತೆ ಬೆಳೆದುಕೊಂಡು ಬಂದಿದೆ.

ಭಾರತೀಯ ಶಿಲ್ಪಕಲಾ ಇತಿಹಾಸದಲ್ಲಿ ಮಹಿಷಾಸುರಮರ್ದಿನಿಯ ಶಿಲ್ಪವನ್ನು ಶಿಲ್ಪಶಾಸ್ತ್ರ ಗ್ರಂಥಗಳು, ಆಗಮಗಳು, ಪುರಾಣಗಳು ಮತ್ತು ತಂತ್ರಗಳ ಆಧಾರದ ಮೇಲೆ ಪರಿಕಲ್ಪಿಸಿಕೊಳ್ಳಲಾಗುತ್ತದೆ. ನಂತರ ಧ್ಯಾನ ಶ್ಲೋಕವನ್ನು ಮನನ ಮಾಡಿ ಆ ಧ್ಯಾನಶ್ಲೋಕದಲ್ಲಿ ತಿಳಿಸಿರುವ ಭಂಗಿ ಆಯುಧಗಳು, ಭುಜಗಳು, ಮುದ್ರೆಗಳು, ಮಹಿಷಾಸುರನ ರೂಪ ಅಂದರೆ ಪೂರ್ಣ ಮಹಿಷನ ರೂಪ, ಅರ್ಧ ಮಹಿಷ, ಅರ್ಧ ಮಾನವ ಅಥವಾ ಪೂರ್ಣಮಾನವನ ರೂಪದಲ್ಲಿ ಹಾಗೂ ದೇವಿಯು ತೊಟ್ಟ ಆಭರಣಗಳನ್ನು ಸೃಜಿಸಿ ಶಿಲ್ಪವನ್ನು ತಯಾರಿಸಲಾಗುತ್ತದೆ. ಈ ಶಿಲ್ಪವು ಸಂಯೋಜನಾ ತಂತ್ರವನ್ನಲ್ಲದೇ ಶಿಲ್ಪಿಯ ಅನುಭವವನ್ನು ಮತ್ತು ಸೃಜನಾತ್ಮಕ ಶಕ್ತಿಯನ್ನೂ ಮುಖ್ಯವಾಗಿ ಅವಲಂಬಿಸಿರುತ್ತದೆ. ಗಣಪತಿ, ಸೂರ್ಯ, ವಿಷ್ಣು, ಲಕ್ಷ್ಮಿ, ಸರಸ್ವತಿ ಮುಂತಾದ ಶಿಲ್ಪಗಳನ್ನು ರಚಿಸುವಾಗ ಮೂಲವಾಗಿ ಪ್ರತಿಮಾಶಾಸ್ತ್ರದ ತತ್ವಗಳನ್ನು ಅನುಸರಿಸಲಾಗುತ್ತದೆ. ಆದರೆ ವಿಷ್ಣುವಿನ ದಶಾವತಾರಗಳು, ಶಿವನ ವಿವಿಧ ರೂಪಗಳು, ವಿವಿಧ ತಾಂಡವ ಪ್ರಸಂಗಗಳು, ಹಾಗೂ ದೇವಿಯನ್ನು ಮಹಿಷಾಸುರಮರ್ದಿನಿಯ ರೂಪದಲ್ಲಿ ರಚಿಸುವಾಗ ಸಂಯೋಜನಾ ತತ್ವಗಳು ಮುಖ್ಯವಾಗುತ್ತವೆ. ಅಲ್ಲಿ ಯುದ್ಧ ಪ್ರಸಂಗದಲ್ಲಿ ತೊಡಗಿರುವಾಗ ದೇವಿಯ ಭುಜಗಳು ಹೇಗೆ ಆಯುಧಗಳು ಮತ್ತು ಮುದ್ರೆಗಳನ್ನು ಪ್ರಯೋಗಿಸುವ ಶಕ್ತಿಯನ್ನು ಪಡೆದುಕೊಂಡು ಪಕ್ಕಗಳಲ್ಲಿ, ಮೇಲ್ಭಾಗದಲ್ಲಿ, ಕೆಳಭಾಗದಲ್ಲಿ, ಮಧ್ಯದಲ್ಲಿ ಹರಡಿಕೊಳ್ಳುತ್ತವೆ ಎಂದು ಮುಖ್ಯವಾಗಿ ಗಮನಿಸಬೇಕು, ದೇವಿಯು ದುರ್ಗೆಯ ರೂಪದಲ್ಲಿ ಮಹಿಷಾಸುರನ ವಧೆಗಾಗಿ ಸಮರಕ್ಕೆ ಹೊರಟಿರುವ ರೀತಿಯನ್ನು ಸಂಯೋಜಿಸಲಾಗಿರುತ್ತದೆ.

ಸಮರದಲ್ಲಿ ದೇವಿಯು ಎಷ್ಟು ದೂರ ಮತ್ತು ಸಮಾಂತರದಲ್ಲಿ ನಿಂತು ಮಹಿಷನ ಮೇಲೆ ಆಯುಧ ಪ್ರಯೋಗಿಸುವಳು ಎಂಬ ವಿಷಯವನ್ನು ಗಮನಿಸಬೇಕು. ಮಹಿಷನನ್ನು ಯಾವ ರೀತಿಯಾಗಿ ತನ್ನ ಬಲಪ್ರಯೋಗದಿಂದ ಮೆಟ್ಟಿದ್ದಾಳೆ, ಅವಳ ದೇಹದ ಸತ್ವ, ಶಕ್ತಿ ಮಹಿಷನನ್ನು ಯಾವ ರೀತಿ ಮೆಟ್ಟಿದೆ, ಅವಳ ವಾಹನವಾದ ಸಿಂಹದ ಪ್ರತಿಕ್ರಿಯೆಯೇನು? ಮಹಿಷ ಯಾವ ರೀತಿಯಾಗಿ ದೇವಿಯಿಂದ ಪರಾಭವಗೊಳ್ಳುತ್ತಿದ್ದಾನೆ, ಅವನ ನಿಸ್ತೇಜ ದೇಹ, ಅಥವಾ ಶಕ್ತಿ ತುಂಬಿದ ದೇಹ, ಹೊರಬಿದ್ದ ನಾಲಿಗೆ, ಅವನ ಆಯುಧಗಳು ಇವುಗಳನ್ನು ಹೇಗೆ ಶಿಲ್ಪದಲ್ಲಿ ಪ್ರತಿಬಿಂಬಿಸಲಾಗುತ್ತದೆ, ಅಲ್ಲದೆ ಅವನ ಸೈನ್ಯದ ಪರಾಭವ ಇವೆಲ್ಲವನ್ನೂ ಮಹಿಷಾಸುರ ಮರ್ಧಿನಿಯ ಶಿಲ್ಪದಲ್ಲಿ ಸಂಯೋಜಿಸಲಾಗುವುದರಿಂದ ಇದು ಸಂಯೋಜನಾಶಿಲ್ಪವಾಗಿರುತ್ತದೆ. ಅದರೊಂದಿಗೆ ಶಾಸ್ತ್ರ ಸಮ್ಮತವಾದ ದೇವಿಯ ವಿಗ್ರಹ ಮೂಲತತ್ವಗಳನ್ನು ಅಳವಡಿಸಿಕೊಂಡಾಗ ಮಾತ್ರ ಅದು ದೇವಾಲಯ ಪರಿಸರದಲ್ಲಿ ಸ್ಥಾನ ಪಡೆದುಕೊಳ್ಳುತ್ತದೆ. ಕೇವಲ ಶಿಲ್ಪಿಯ ಕೈಚಳಕ

ಅಥವಾ ಕಲ್ಪನಾವಿಶೇಷದಿಂದ ರಚಿತವಾದಾಗ ಅದು ಕಲಾತ್ಮಕವಾಗಿದ್ದರೂ ಪ್ರತಿಮಾಶಾಸ್ತ್ರದ ದೃಷ್ಟಿಯಿಂದ ಹಿಂದೆ ಸರಿಯಬೇಕಾಗುತ್ತದೆ.

ಮಹಿಷಾಸುರಮರ್ದಿನಿಯ ಶಿಲ್ಪರಚನೆಯನ್ನು ಬುಡಕಟ್ಟು ಜನಾಂಗ ಸಂಸ್ಕೃತಿ, ಜನಪದ ಸಂಸ್ಕೃತಿ, ಶಿಷ್ಟಸಮುದಾಯದ ಸಂಸ್ಕೃತಿಯಲ್ಲಲ್ಲದೆ ದೇವಾಲಯ ಸಂಸೃತಿಯಲ್ಲಿಯೂ ಗುರುತಿಸಬಹುದಾಗಿದೆ. ಭಾರತದಲ್ಲಷ್ಟೇ ಅಲ್ಲದೇ ಭಾರತೀಯ ಸಂಸ್ಕೃತಿ ಹರಡಿಕೊಂಡಿರುವ ನೇಪಾಳ, ಶ್ರೀಲಂಕಾ, ಇಂಡೋನೇಶಿಯಾ, ಮಲೇಶಿಯಾ, ಥಾಯ್‌ಲ್ಯಾಂಡ್, ಸಿಂಗಾಪುರ, ವಿಯೆಟ್ನಾಂ ಮುಂತಾದ ದೇಶದ ಸಂಸ್ಕೃತಿಗಳಲ್ಲೂ ಗುರುತಿಸಬಹುದು. ಈ ಕೆಲವು ದೇಶಗಳಲ್ಲಿಯಂತೂ ರಾಷ್ಟ್ರೀಯ ಅಧಿದೇವತೆಯ ಸ್ಥಾನವನ್ನು ದೇವಿಯ ಈ ರೂಪಕ್ಕೆ ನೀಡಲಾಗಿದೆ. ಇಂಡೋನೇಷಿಯಾ ಇಂದು ಇಸ್ಲಾಂ ಧರ್ಮವನ್ನು ಅನುಸರಿಸುತ್ತಿದ್ದರೂ ಪ್ರತಿಯೊಂದು ಪ್ರಮುಖ ಸರಕಾರಿ ಭವನಗಳಲ್ಲಿ, ಖಾಸಗಿ ಭವನಗಳಲ್ಲಿ ಗಣಪತಿ ಮತ್ತು ಮಹಿಷಾಸುರಮರ್ದಿನಿ ಶಿಲ್ಪಗಳನ್ನು ಭವನಗಳ ದ್ವಾರಗಳಲ್ಲಿ ಇಟ್ಟು ಪುಷ್ಪಗಳಿಂದ ಅಲಂಕರಿಸಲಾಗುತ್ತದೆ. ಪಾಶ್ಚಾತ್ಯ ಮತ್ತು ಪೌರ್ವಾತ್ಯ ದೇಶಗಳ ಮ್ಯೂಸಿಯಂಗಳ ಸಂಗ್ರಹದಲ್ಲಿ ಒಂದೆರಡು ಮಹಿಷಾಸುರಮರ್ದಿನಿಯ ಶಿಲ್ಪಗಳು ಇದ್ದೇ ಇರುತ್ತವೆ. ಈ ಶಿಲ್ಪಗಳನ್ನು ಅತ್ಯಂತ ಅಭಿಮಾನದಿಂದ ಕೇಂದ್ರ ಸ್ಥಾನದಲ್ಲಿ ಪ್ರದರ್ಶಿಸಲಾಗಿರುತ್ತದೆ. ಅದರ ಕಾಲ ಮತ್ತು ಐತಿಹಾಸಿಕ ವಿಷಯಗಳ ಮಾಹಿತಿಯನ್ನು ಇಲ್ಲಿ ಪಡೆಯಬಹುದು.

ಮಹಿಷಾಸುರಮರ್ದಿನಿಯ ಶಿಲ್ಪಗಳು ಸಾಮಾನ್ಯವಾಗಿ ಎಲ್ಲಾ ಪ್ರಾಂತ್ಯಗಳಲ್ಲೂ ದೇವಾಲಯ ನಿರ್ಮಾಣದೊಂದಿಗೆ ಆಯಾ ಶಿಲ್ಪಶೈಲಿಯೊಂದಿಗೆ ಗುರುತಿಸಿಕೊಂಡಿವೆ. ದೇವಿಯ ಆರಾಧನೆಗಾಗಿ ನಿರ್ಮಿಸಿದ ಅನೇಕ ದೇವಾಲಯಗಳಿವೆ. ಇಲ್ಲವೇ ಶಿವನ ದೇವಾಲಯಗಳ ಪಕ್ಕದಲ್ಲಿ ಇನ್ನೊಂದು ಗರ್ಭಗುಡಿಯಲ್ಲಿ ದೇವಿಯನ್ನು ಪೂಜಿಸಲಾಗುತ್ತದೆ. ವಿಶೇಷ ಉತ್ಸವಗಳೂ ನಡೆಯುತ್ತವೆ. ಆದರೆ ಮಹಿಷಾಸುರಮರ್ದಿನಿಯ ರೂಪದ ದೇವಿಗಾಗಿಯೇ ಗುಡಿಗಳನ್ನು, ದೇವಾಲಯಗಳನ್ನು ಕಟ್ಟಿ ಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸುವುದು ವಿರಳವಾಗಿದೆ. ಮೈಸೂರಿನ ಚಾಮುಂಡೇಶ್ವರೀ ದೇವಿಯ ದೇವಾಲಯ ಒಂದು ವಿಶಿಷ್ಟರೂಪ. ಮೈಸೂರು ಎಂದು ಹೆಸರು ಬರಲು ಅದು ಮಹಿಷೂರು, ಮಹಿಷಾಸುರನ ಸ್ಥಳವೆಂದೂ ದೇವಿಯು ದುರ್ಗೆಯಾಗಿ ಬಂದು ಚಂಡಮುಂಡರನ್ನು, ಮಹಿಷಾಸುರನನ್ನು ಇಂದಿನ ಚಾಮುಂಡೀ ಬೆಟ್ಟದಲ್ಲೇ ವಧಿಸಿದಳೆಂದೂ, ಆ ಮಹಾ ಪ್ರಸಂಗದ ಕುರುಹಾಗಿ ಚಾಮುಂಡೇಶ್ವರೀ ದೇವಾಲಯವನ್ನು ಕಟ್ಟಲಾಯಿತೆಂದೂ ಸ್ಥಳಪುರಾಣ ಮತ್ತು ಮೈಸೂರಿನ ಅರಸರ

ಸಾಹಿತ್ಯರಚನೆಗಳು ತಿಳಿಸುತ್ತವೆ. ಚಾಮುಂಡೇಶ್ವರಿಯನ್ನೇ ಮೈಸೂರಿನ ಅರಸರಾದ ಒಡೆಯರ ಸಂತತಿಯವರು ತಮ್ಮ ಇಷ್ಟದೇವತೆ ಮತ್ತು ಕುಲದೇವತೆಯನ್ನಾಗಿ ಪಡೆದು ಈ ದೇವಾಲಯದ ಬೆಳವಣಿಗೆಗೆ ಮತ್ತು ಮಹತ್ವಕ್ಕೆ ಕಾರಣರಾಗಿದ್ದಾರೆ.

ಮುಮ್ಮಡಿ ಕೃಷ್ಣರಾಜ ಒಡೆಯರ್ (೧೭೯೪-೧೮೬೮) ಅವರು ರಚಿಸಿರುವ ಶ್ರೀ ತತ್ವನಿಧಿಯಲ್ಲಿ ದೇವಿಯ ಅನೇಕ ರೂಪಗಳ ಸುಂದರ ಸಚಿತ್ರ ವಿವರಗಳಿವೆ. ಅದರಲ್ಲಿ ಅವರ ಕುಲದೇವತೆ ಚಾಮುಂಡೇಶ್ವರಿಯ ಬಗ್ಗೆ ಅನೇಕ ಶ್ಲೋಕಗಳನ್ನು ರಚಿಸಲಾಗಿದೆ. ಚಾಮುಂಡೇಶ್ವರಿಯ ಚಿತ್ರವನ್ನು ಮಹಿಷಾಸುರ ಮರ್ದಿನಿಯ ಚಿತ್ರಲಕ್ಷಣಗಳಿಗೆ ಅನುಗುಣವಾಗಿ ರಚಿಸಲಾಗಿದೆ. ಶ್ರೀ ತತ್ವನಿಧಿಯ ಪ್ರಥಮ ಸಂಪುಟವಾದ ಶಕ್ತಿನಿಧಿಯಲ್ಲಿ ಉತ್ತಮ ದೇವಿಚಿತ್ರಗಳನ್ನು ಆಗಮ, ತಂತ್ರಗಳ ವಿವರಗಳಿಗೆ ಅನುಗುಣವಾಗಿ ರಚಿಸಿರುವುದೇ ಅಲ್ಲದೇ ಆಯಾದೇವಿಯರ ಮೂಲ ವಿವರಗಳನ್ನು ಆಯಾ ಗ್ರಂಥಗಳ ಉಲ್ಲೇಖದೊಂದಿಗೆ ನೀಡಲಾಗಿದೆ. ಈ ಮಹಾಗ್ರಂಥದ ರಚನೆಯನ್ನು ಮುಮ್ಮಡಿಯವರು ೧೮೫೦ರ ನಂತರ ಕೈಗೊಂಡರೆಂದು ತೋರುತ್ತದೆ.

ಕರ್ನಾಟಕ ಸಾಂಸ್ಕೃತಿಕ ಇತಿಹಾಸದಲ್ಲಿ ಮುಮ್ಮಡಿಯವರದು ಅತಿಉತ್ತಮವಾದ ಹೆಸರು. ಬಾಲ್ಯದಲ್ಲಿಯೇ ದೇವಭಾಷೆಯಾದ ಸಂಸ್ಕೃತ, ದೇಶಭಾಷೆಯಾದ ಕನ್ನಡದಲ್ಲಿ ಉತ್ತಮ ಶಿಕ್ಷಣ ಪಡೆದಿದ್ದ ಅವರು ತಮ್ಮ ಆಳ್ವಿಕೆಯಲ್ಲಿ ಹಲವಾರು ವಿದ್ವಾಂಸರಿಗೆ, ಕವಿಗಳಿಗೆ, ಸಂಗೀತಗಾರರಿಗೆ, ಶಿಲ್ಪಿಗಳಿಗೆ ಮತ್ತು ಚಿತ್ರಕಾರರಿಗೆ ರಾಜಾಶ್ರಯ ನೀಡಿ 'ಕವಿಜನ ಕಾಮಧೇನು', 'ಕನ್ನಡದ ಭೋಜ' ಎಂದು ಪ್ರಸಿದ್ಧರಾಗಿದ್ದರು. ಮುಮ್ಮಡಿಯವರ ಮಹಾಕೃತಿಗಳಲ್ಲೇ ಮೇರು ಸದೃಶವಾದ ಕೃತಿ ಶ್ರೀ ತತ್ವನಿಧಿ. ಈ ಗ್ರಂಥದ ಪ್ರಾರಂಭದಲ್ಲಿಯೇ (ಈ ಗ್ರಂಥದ ಮುಖಪುಟದಲ್ಲಿ) ಬರುವ ಚಾಮುಂಡಾಂಬಿಕೆಯ ವರ್ಣನೆಯನ್ನು ಈ ರೀತಿ ಮಾಡಲಾಗಿದೆ (ಶ್ರೀ ತತ್ವನಿಧಿ ಸಂ. ಎಚ್.ಪಿ. ದೇವಕಿ, ಪು. xxxii - xxxiii)

ನಿಡದ್ಯತೇತ್ರ ಯಾ ಚಂಡೀ ಹೇಮಭಾಸುಸ್ವರೂಪಣೀ ।

ತ್ರಿಣೇತ್ರಾ ಯೌವನಸ್ಥಾಚಕ್ರದ್ದಾಚೋರ್ಧ್ವಸ್ಮಿತಾ ಮತಾ ॥ ೧೭ ॥

ಮುಂದೆ ಶಕ್ತಿನಿಧಿ ಹಸ್ತಪ್ರತಿಯ ೫೪ಎ ಪುಟದಲ್ಲಿ ಭವ್ಯವಾದ ಮಹಿಷಾಸುರ ಮರ್ಧಿನಿಯ ಚಿತ್ರವನ್ನು ನೀಡಲಾಗಿದೆ. ಅದರ ವಿವರವನ್ನು ಈ ರೀತಿ ಕೊಡಲಾಗಿದೆ (ಶ್ರೀ ಶಕ್ತಿನಿಧಿ, ಪುಟ ೨೪೯)

ಚಿಂತಾಮಣಿದುರ್ಗಾಧ್ಯಾನ, ದೇವಶಿಲ್ಪಶಾಸ್ತ್ರದಲ್ಲಿ ಪದ್ಮರಾಗ ಮಣಿಯ ಪ್ರಭೆಯುಳ್ಳ, ಉದಯ ಸೂರ್ಯನ ಕಿರಣಗಳಂತೆ ಕೆಂಪಾಗಿರುವ, ಹತ್ತುಮೊಗಗಳಿರುವ, ಮೂರು ಕಣ್ಣುಗಳಿರುವ, ಉನ್ನತವಾದ ಕುಚಗಳಿರುವ, ಹತ್ತು ಪಾದಕಮಲಗಳಿರುವ, ಹತ್ತು ದಿಕ್ಕುಗಳಲ್ಲೂ ಪೂಜಿತಳಾದ, ಕೆಂಪು ವಸ್ತ್ರಗಳನ್ನು ಧರಿಸಿರುವ (ಕೆಂಪುಗಂಧ / ರಕ್ತಚಂದನ) ಲೇಪಿಸಿಕೊಂಡಿರುವ, ಕಾದಚಿನ್ನದಂತೆ ಮಹಾಜ್ವಾಲಗಳಿರುವ, ಚಂದ್ರಕಲೆಯಿಂದ ಅಲಂಕೃತಳಾದ, ಚಂದ್ರಹಾಸ (ಖಡ್ಗ), ತ್ರಿಶೂಲ, ಖಡ್ಗ, ಗದೆ, ಬಿಲ್ಲು, ಬಾಣ, ಕೊಡಲಿ, ಡಮರು, ಗುರಾಣಿ, ಬಿಂಡಿವಾಳ, ಅಮೃತ ತುಂಬಿದ ಘಟಗಳು, ಫಲಕ ಮುಷ್ಟಿ (ಮುದ್ರೆ), ವಜ್ರಾಯುಧ, ಈಟಿ, ಖಟ್ವಾಂಗ, ನೇಗಿಲು, ಅಂಕುಶ, ಸಣ್ಣಚೂರಿ, ದ್ರೋಣ, ತೋಮರ, ಪಾನ ಪಾತ್ರೆ, ಪಟ್ಟಸ, ದಂಡ, ಸರ್ಪ, ವರದ ಮುದ್ರೆ, ಪಾಶ, ಭುಶುಂಡಿ, ಕನ್ನಡಿ, ರುದ್ರವೀಣೆ ಇವುಗಳನ್ನು ಮೂವತ್ತೆರಡು ಭುಜಗಳಿಂದ ಧರಿಸಿಕೊಂಡಿರುವ ಚಿಂತಾಮಣಿ ಮಹಾದುರ್ಗೆಯಾದ ಸರ್ವಶತ್ರುಗಳನ್ನು ಸಂಪೂರ್ಣವಾಗಿ ನಾಶಪಡಿಸುವ ಮಹಿಷಾಸುರಮರ್ದಿನಿಯನ್ನು (ಧ್ಯಾನಿಸಬೇಕು) (ನೀಲವರ್ಣ).

ಶ್ರೀತತ್ವನಿಧಿಯಲ್ಲಿ ಸುಂದರವಾಗಿ ರಚಿಸಿದ ದೇವಿ ಚಿತ್ರಗಳನ್ನು ಆಧರಿಸಿ ಅನೇಕ ಕಲಾವಿದರು ದೊಡ್ಡ ಚಿತ್ರಗಳನ್ನು ರಚಿಸತೊಡಗಿದರು. ಅವುಗಳನ್ನು ಅನೇಕ ಶ್ರೀಮಂತ ಕುಟುಂಬಗಳು ಕೊಂಡು ತಮ್ಮ ಮನೆಗಳಲ್ಲಿ ಪ್ರದರ್ಶಿಸಿ ಮನೆಯ ಶೋಭೆಯನ್ನೂ ಬೆಳೆಸುವುದೇ ಅಲ್ಲದೆ ಪೂಜಾಮಂದಿರಗಳಲ್ಲಿಟ್ಟು ಪೂಜೆಯನ್ನೂ ಸಲ್ಲಿಸತೊಡಗಿದರು. ಈ ಪರಂಪರೆಯು ಮೈಸೂರು ಚಿತ್ರಕಲೆಯೆಂದು ಹೆಸರು ಪಡೆದು ಜನಪ್ರಿಯವಾಯಿತು. ಚಿತ್ರಗಳಲ್ಲಿ ಆಭರಣ, ಆಯುಧ, ಸೀರೆಯ ಅಂಚು, ಸೆರಗು, ಪೀಠ ಮುಂತಾದ ಭಾಗಗಳಲ್ಲಿ ಉಬ್ಬು ತಂತ್ರವನ್ನು ಬಳಸಿ ಅದರ ಮೇಲೆ ಬಂಗಾರದ ತೆಳ್ಳನೆಯ ರೇಖನ್ನು ಲೇಪಿಸಿ ರಚಿಸುವ ಮತ್ತು ಗಾಢವಾದ ಬಣ್ಣಗಳನ್ನು ಬಳಸಿ, ಸೂಕ್ಷ್ಮವಾದ ರೇಖೆಗಳಿಂದ ಪೂರ್ಣಗೊಳಿಸುವ ಈ ಮೈಸೂರು ಸಂಪ್ರದಾಯ ಚಿತ್ರಗಳಿಗೆ ಬಹಳ ಬೇಡಿಕೆಯಿದೆ. ಪ್ರತಿಮಾಶಾಸ್ತ್ರದ ಧ್ಯಾನಶ್ಲೋಕಗಳಿಗೆ ಅನುಗುಣವಾಗಿಯೇ ಚಿತ್ರಗಳನ್ನು ರಚಿಸಲಾಗುವುದು. ಪ್ರಪಂಚದ ಅನೇಕ ಮ್ಯೂಸಿಯಂಗಳಲ್ಲಿ, ಸಂಗ್ರಹಕಾರರ ಸಂಗ್ರಹಗಳಲ್ಲಿ ಈ ಚಿತ್ರಗಳು ಮಹತ್ವದ ಸ್ಥಾನ ಪಡೆದಿವೆ.

ಇಲ್ಲಿ ಹಲವು ಮಹಿಷಾಸುರಮರ್ದಿನಿಯ ಶಿಲ್ಪಗಳನ್ನು ಕುಶಾನ, ಗುಪ್ತ, ಪಲ್ಲವ, ಚಾಲುಕ್ಯ, ಚೋಳ, ಸೇನ, ರಾಷ್ಟ್ರಕೂಟ, ಹೊಯ್ಸಳ ಮತ್ತು ವಿಜಯನಗರ ಕಾಲದಲ್ಲಿ ಯಾವ ರೀತಿ ಪರಿಕಲ್ಪಿಸಿ ರಚಿಸಲಾಗಿದೆ ಎಂಬುದನ್ನು ಶಿಲ್ಪಗಳ ಚಿತ್ರಗಳೊಂದಿಗೆ ವಿಶ್ಲೇಷಿಸಲಾಗಿದೆ. ಶಿಲ್ಪರತ್ನ, ವಿಷ್ಣುಧರ್ಮೋತ್ತರ ಪುರಾಣ, ಮತ್ಸ್ಯಪುರಾಣ, ಕಾಳಿಕಾ ಪುರಾಣ, ಅಗ್ನಿ ಪುರಾಣ, ವಿಶ್ವಕರ್ಮ

ಶಿಲ್ಪಶಾಸ್ತ್ರ ದೇವಿಮಹಾತ್ಮ್ಯ, ರೂಪಮಂಡನ, ಸುಪ್ರಬೇಧಾಗಮ, ಉತ್ತರಕಾಮಿಕಾಗಮ ಮುಂತಾದ ಗ್ರಂಥಗಳು ಮಹಿಷಾಸುರಮರ್ದಿನಿಯ, ವಿಗ್ರಹ ಲಕ್ಷಣಗಳನ್ನು ವ್ಯಾಪಕವಾಗಿ ವಿವರಿಸುತ್ತವೆ. ವಿಷ್ಣುಧರ್ಮೋತ್ತರವು 'ಚಂಡಿಕೆ' ಎಂಬ ಹೆಸರಿನೊಂದಿಗೆ ಮಹಿಷಾಸುರಮರ್ದಿನಿಯನ್ನು ಗುರುತಿಸಿಕೊಳ್ಳುತ್ತದೆ. ದೇವೀಮಹಾತ್ಮೆಯು 'ಸಹಸ್ರಭುಜೆ' ಎಂದು ಗುರುತಿಸುತ್ತದೆ. ಬಾಣನ ಚಂಡೀಶತಕದಲ್ಲಿ 'ಭುಜವನಂ' ಎಂದು ಸಂಬೋಧಿಸಲಾಗಿದೆ. ದೇವಿ ಭಾಗವತ ಪುರಾಣವು 'ದುರ್ಗೆ' ಎಂದೂ, ಅಗ್ನಿ ಪುರಾಣವೂ ಚಂಡಿಕೆಯಂದೂ, ವಾಮನ ಪುರಾಣ ಮತ್ತು ಮತ್ಸ್ಯ ಪುರಾಣ 'ಕಾತ್ಯಾಯಿನಿ' ಎಂದೂ, ವರಾಹ ಪುರಾಣವು ಬ್ರಹ್ಮ, ವಿಷ್ಣು ಮತ್ತು ಶಿವನ ತ್ರಿವಿಧ ದೃಷ್ಟಿಯಿಂದ ಹುಟ್ಟಿದವಳೆಂದು ತಿಳಿಸುತ್ತದೆ. ಅಂಶುಬೇಧಾಗಮವು 'ದೇವಿ'ಯೆಂದೂ ಸುಪ್ರಬೇಧಾಗಮವು 'ಆದಿಶಕ್ತಿ' ಎಂದೂ, ಮಯದೀಪಿಕಾ ಮತ್ತು ಪ್ರತಿಮಾವಿಜ್ಞಾನ ಗ್ರಂಥಗಳೂ, ಪ್ರಪಂಚಸಾರತಂತ್ರ ಮತ್ತು ರೂಪಮಂಡನ ಗ್ರಂಥಗಳೂ ಸಹ 'ಕಾತ್ಯಾಯಿನಿ' ಎಂದು, ಉಳಿದ ಶಿಲ್ಪರತ್ನ, ಶಾರದಾತಿಲಕತಂತ್ರ, ಭವಿಷ್ಯತ್‌ಪುರಾಣ, ಕಾಲಿಕಾಪುರಾಣ, ಪೂರ್ವಕರ್ಣಾಗಮ, ಗ್ರಂಥಗಳು 'ಮಹಿಷಾಸುರಮರ್ದಿನಿ' ಎಂದು ಹೆಸರಿಸುತ್ತವೆ. ಆದರೆ ಕಾತ್ಯಾಯಿನಿ, ದುರ್ಗೆ, ಚಂಡಿಕೆ, ದೇವಿ, ಆದಿಶಕ್ತಿ ಎಂದು ಹಲವು ಗ್ರಂಥಗಳು ಕರೆದರೂ ಸಹ ವರ್ಣನೆಯಲ್ಲಿ, ಆಯುಧಗಳಲ್ಲಿ ಮಹಿಷಾಸುರನನ್ನು ಸಂಹರಿಸುತ್ತಿರುವ ವಿವರಣೆಯನ್ನೇ ನೀಡುತ್ತವೆ. ಹೀಗಾಗಿ ರೂಪ ಒಂದು ನಾಮಹಲವು ಎನ್ನುವುದನ್ನು ಇಲ್ಲಿ ಒಪ್ಪಬಹುದು. ಮಹಿಷಾಸುರಮರ್ದಿನಿ ರೂಪದ ಶಿಲ್ಪಗಳನ್ನು ಪ್ರಾರಂಭದಲ್ಲಿ ಎರಡು ಅಥವಾ ನಾಲ್ಕು ಭುಜಗಳಿರುವಂತೆ ಪರಿಕಲ್ಪಿಸಲಾಗಿತ್ತು. ಆದರೆ ಶಕ್ತಿಪಂಥ ಮತ್ತು ಶಕ್ತಿವಾದವು ಬಲಗೊಂಡಂತೆ ಈ ರೂಪದ ದೇವಿಯ ಪರಾಕ್ರಮವನ್ನು ಮತ್ತು ಶಕ್ತಿರೂಪವನ್ನು ವೈಭವೀಕರಿಸಲು ಮತ್ತು ಸಾಹಿತ್ಯದಲ್ಲಿ ಭುಜಬಲವನ್ನು ಅನೇಕ ರೀತಿಯಲ್ಲಿ ವರ್ಣಿಸಲು ಸಾಧ್ಯವಾಗಿರುವುದಲ್ಲದೇ ಮಹಿಷಾಸುರನೂ ಎಂತಹ ಪರಾಕ್ರಮಿ, ಅಂತಹವನನ್ನು ಸಮರದಲ್ಲಿ ಎದುರಿಸಬೇಕಾದರೆ ದೇವಿಗೆ ಬೇಕಾಗುವ ಸಾಮರ್ಥ್ಯ, ಪರಿಪರಿಯ ಆಯುಧ ಬಳಕೆಯನ್ನು ವಿಜೃಂಭಿಸಲು ಶಿಲ್ಪಗಳಲ್ಲಿ ಎಂಟು, ಹನ್ನೆರಡು, ಹದಿನಾರು, ಹದಿನೆಂಟು ಮತ್ತು ಇಪ್ಪತ್ತು ಭುಜಗಳ ದೇವಿಯನ್ನು ಪರಿಕಲ್ಪಿಸಲಾಯಿತು. ಅದರಂತೆ ಶಾಸ್ತ್ರಗಳಲ್ಲಿಯೂ ಪರಿಭಾವಿಸಲಾಯಿತು. ಅನೇಕಾನೇಕ ಮಹಿಷಾಸುರಮರ್ದಿನಿಯ ಶಿಲ್ಪಗಳೂ ರಚನೆಗೊಂಡವು.

ಇತಿಹಾಸಕಾಲದ ದೃಷ್ಟಿಯಿಂದ ಮಹಿಷಾಸುರಮರ್ದಿನಿಯ ಶಿಲ್ಪಗಳನ್ನು ಗಮನಿಸಿದಾಗ ಕ್ರಿ.ಪೂ. ೧ನೇ ಶತಮಾನದ ಕುಶಾನರ ಕಾಲದ ಶಿಲ್ಪಗಳು ಮೊದಲಿಗೆ ಕಂಡುಬರುತ್ತವೆ. ಈ ಕಾಲದ ಶಿಲ್ಪಗಳು ಎರಡು ಭುಜಗಳನ್ನು ಮಾತ್ರ ಹೊಂದಿದ್ದು ಬಲಗೈಯಲ್ಲಿ ಶೂಲವನ್ನು ಹಿಡಿದು

ಪ್ರಾಣಿಯ ರೂಪದ ಮಹಿಷನನ್ನು ಇರಿಯುತ್ತಾ ಎಡಗೈಯಿಂದ ಬಾಲವನ್ನು ತಿರುಚುತ್ತಾ ಇರುವ ಲಕ್ಷಣಗಳನ್ನು ಹೊಂದಿದೆ. ಪೂರ್ವಕರ್ಣಾಗಮವು ಎರಡು ಭುಜಗಳ ದೇವಿಯ ಬಗ್ಗೆ ತಿಳಿಸುತ್ತವೆ. ಎರಡು ಭುಜದ ದೇವಿಯನ್ನು 'ವಿರಜ' ಎಂದು ಕರೆಯಲಾಗಿದೆ. ಅಹಿಚ್ಛತ್ರದಲ್ಲಿ ಭಯಂಕರ ರೂಪದ ದ್ವಿಭುಜ ಮಹಿಷಾಸುರ ಮರ್ದಿನಿಯು ಕಂಡುಬುತ್ತದೆ. ಗುಪ್ತರ ಕಾಲಕ್ಕೆ ಸೇರಿದ 'ವಿರಜ' ಶಿಲ್ಪಗಳು ಒರಿಸ್ಸಾದ ಜಜ್‌ಪುರ್ ಪ್ರಾಂತ್ಯದಲ್ಲಿ ಸಿಕ್ಕುತ್ತವೆ. ಸುಮಾರು ೧೧ನೇ ಶತಮಾನದವರೆಗೂ ದ್ವಿಭುಜ ಮಹಿಷಾಸುರ ಮರ್ದಿನಿ ಶಿಲ್ಪಗಳು ಅಲ್ಲಲ್ಲಿ ದೊರೆಯುತ್ತವೆ. ನಂತರ ಭುಜಗಳ ಸಂಖ್ಯೆ ದ್ವಿಗುಣಗೊಂಡು ದ್ವಿಭುಜಶಿಲ್ಪಗಳ ರಚನೆ ಸಿಗುವುದಿಲ್ಲ. (Mahishamardini in Sculptural Art of Orissa by Sujatha Das, P. 184, Proceedings of Indian Art History Congress - 2000)

ಚತುರ್ಭುಜ ಮಹಿಷಮರ್ದಿನಿಯ ಶಿಲ್ಪಗಳು ಕುಶಾನ ಮತ್ತು ಗುಪ್ತರ ಕಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ. ಮಥುರಾ ಮ್ಯೂಸಿಯಂ ಸಂಗ್ರಹದಲ್ಲಿ ಆರು ನಾಲ್ಕು ಭುಜಗಳ ಮಹಿಷಾಸುರ ಮರ್ದಿನಿಯ ಶಿಲ್ಪಗಳು ದೊರೆಯುತ್ತವೆ. ಆದರೆ ಸಿಂಹವಾಹನವು ಈ ಯಾವ ಶಿಲ್ಪದಲ್ಲಿಯೂ ಕಂಡುಬರುವುದಿಲ್ಲ. ನಂತರದ ಬಾದಾಮಿ ಚಾಲುಕ್ಯರ ಕಾಲದಲ್ಲಿ, ದಕ್ಷಿಣದಲ್ಲಿ ತಮಿಳುನಾಡಿನಲ್ಲಿ ಒರಿಸ್ಸಾದ ಪರಶುರಾಮೇಶ್ವರ ಮತ್ತು ಇತರ ದೇವಾಯಲಗಳಲ್ಲೇ ಅಲ್ಲದೇ ದೇಶದ ನಾನಾ ಭಾಗಗಳಲ್ಲಿ ಮಹಿಷಾಸುರಮರ್ದಿನಿಯ ಶಿಲ್ಪಗಳು ಕಾಣಸಿಗುತ್ತವೆ. ಇಂತಹ ಶಿಲ್ಪರಚನೆಯಲ್ಲಿ ಹೆಚ್ಚಿನ ಮಟ್ಟಿಗೆ ಮಹಿಷಾಸುರನನ್ನು ಪ್ರಾಣಿರೂಪದಲ್ಲೇ ತೋರಿಸಲಾಗುತ್ತದೆ. ಅಂಶುಬೇಧಾಗಮ ಮತ್ತು ಸುಪ್ರಬೇಧಾಮಗಳು ದೇವಿಗೆ ನಾಲ್ಕು ಕೈಗಳಿರುವಂತೆ ತಿಳಿಸುತ್ತವೆ. ಷಟ್‌ಭುಜಗಳ ರೂಪವನ್ನು ಪ್ರಪಂಚಸಾರದಲ್ಲಿ ವಿವರಿಸಲಾಗಿದೆ. ಆದರೆ ಇವುಗಳ ಸಂಖ್ಯೆ ಅಷ್ಟಭುಜ ಮತ್ತು ದಶಭುಜಗಳ ಶಿಲ್ಪಗಳಷ್ಟು ಹೇರಳವಾಗಿಲ್ಲ. ಮಧ್ಯಯುಗದಲ್ಲಿ ಈ ರೂಪದ ಆವಿಷ್ಕಾರವಾಗಿದೆ. ದೇಶದ ಎಲ್ಲಾ ಭಾಗಗಳಲ್ಲಿ ಒಂದೆರಡು ಉದಾಹರಣೆಗಳು ಕಂಡುಬಂದರೆ, ಹೊಯ್ಸಳ ಶೈಲಿಯ ಶಿಲ್ಪಗಳಲ್ಲಿ ಆರು ಭುಜಗಳ ಶಿಲ್ಪತಳು ಹೆಚ್ಚಿವೆ. ಸಾಮಾನ್ಯವಾಗಿ ಶಂಖ, ಖಡ್ಗ, ತ್ರಿಶೂಲ, ಬಿಲ್ಲು, ಬಾಣಗಳೊಂದಿಗೆ ಮಹಿಷನನ್ನು ಹಿಡಿದಿರುವುದು, ಅಭಯ ಮುದ್ರ, ಕಡಿದ ತಲೆಯನ್ನು ಹಿಡಿದಿರುವುದು ಮುಂತಾಗಿ ಇರುತ್ತದೆ. ಅಷ್ಟಭುಜಗಳ ಸಂಯೋಜನೆಯ ಶಿಲ್ಪಗಳೇ ಹೆಚ್ಚು ಸಂಖ್ಯೆಯಲ್ಲಿ ದೇಶದ ಉದ್ದಗಲಕ್ಕೂ ಅಲ್ಲದೇ ಅನೇಕ ಅಂತರರಾಷ್ಟ್ರೀಯ ಮ್ಯೂಸಿಯಂಗಳಲ್ಲಿ ದೊರೆಯುತ್ತವೆ. ಶಾರದಾತಿಲಕ ತಂತ್ರವು ಅಷ್ಟಭುಜಗಳ ಬಗ್ಗೆ ತಿಳಿಸುತ್ತದೆ. ಅಲ್ಲದೇ ಪೂರ್ವಕರ್ಣಾಗಮವೂ ಇದನ್ನೇ ಸಮರ್ಥಿಸಿದೆ. ಅಂದರೆ ಶಾರದಾತಿಲಕತಂತ್ರ ಮತ್ತು

ಪೂರ್ವಕರ್ಣಾಗಮಗಳನ್ನು ಆಧರಿಸಿ ಶಿಲ್ಪರಚಿಸುವ ಪದ್ಧತಿಯು ದೇಶದಲ್ಲಿ ಹೆಚ್ಚು ವ್ಯಾಪಕವಾಗಿದ್ದಿತೆಂದು ತೋರುತ್ತದೆ.

ದಶಭುಜಗಳ ಮಹಿಷಾಸುರಮರ್ದಿನಿಯ ರೂಪವನ್ನು ಒರಿಸ್ಸಾ ಮತ್ತು ಕೇರಳಗಳಲ್ಲಿ ಭಗವತೀ ಎಂದು ಕರೆಯಲಾಗಿದೆ. ಇಲ್ಲಿಂದ ದೇವಿಯ ಸಂಯೋಜನೆಯು ಬೃಹತ್ ಪ್ರಮಾಣವನ್ನು ಪಡೆದುಕೊಳ್ಳುತ್ತಾ ಹೋಗುತ್ತದೆ. ಕಾಲಿಕಾಪುರಾಣ, ಮತ್ಸ್ಯಪುರಾಣ, ಮಯದೀಪಿಕಾ, ಪ್ರತಿಮಾ ವಿಜ್ಞಾನ, ರೂಪಮಂಡನ, ಶಿಲ್ಪರತ್ನ, ಈ ಗ್ರಂಥಗಳು ದಶಭುಜ ಸಂಯೋಜನ ಶಿಲ್ಪವನ್ನು ವಿವರಿಸುತ್ತವೆ. ದೇವಿಯ ಪರಾಕ್ರಮವನ್ನು ಈ ಶಿಲ್ಪಗಳು ವಿಜೃಂಭಿಸುತ್ತವೆ. ಈ ಹತ್ತೂ ಕೈಗಳಲ್ಲಿ ತ್ರಿಶೂಲ, ಖಡ್ಗ, ಚಕ್ರ, ಸತ್ಯಾಯುಧ, ಬಿಲ್ಲು, ಬಾಣ, ವಜ್ರ, ಪಾಶ, ಘಂಟಾ ಮತ್ತು ಶೂಲಗಳನ್ನು ನೀಡಬೇಕು. ಆಯುಧಗಳು, ಮುದ್ರೆಗಳ ವಿಷಯದಲ್ಲಿ ಒಂದು ಗ್ರಂಥವು ಇನ್ನೊಂದು ಗ್ರಂಥಕ್ಕಿಂತ ಭಿನ್ನವಾಗಿರುತ್ತವೆ.

ಉತ್ತರಭಾರತದ ಹಲವೆಡೆ ಹನ್ನೆರಡು ಭುಜಗಳ ಮಹಿಷಮರ್ದಿನಿ ಶಿಲ್ಪಗಳು ದೊರೆಯುತ್ತವೆ. ಇವುಗಳಲ್ಲಿ ಒರಿಸ್ಸಾದ ವೇತಾಳ ದೇವಾಲಯದಲ್ಲಿ ದ್ವಾದಶಭುಜದ ಮೂರ್ತಿಯು ಕಂಡುಬರುತ್ತದೆ. ಸಾಮಾನ್ಯವಾಗಿ ಹದಿನಾಲ್ಕು ಭುಜಗಳನ್ನು ಎಲ್ಲಿಯೂ ತಿಳಿಸಿಲ್ಲ. ಆದರೆ ಹದಿನಾರು ಅಂದರೆ ಷೋಡಷ ಭುಜದ ದುರ್ಗೆಯ ಶಿಲ್ಪಗಳು ಸಾಕಷ್ಟು ಸಂಖ್ಯೆಯಲ್ಲಿ ದೇಶಾದ್ಯಂತ ಕಂಡುಬರುತ್ತವೆ. ಭವಿಷ್ಯತ್ ಪುರಾಣವು ಇಂತಹ ಮೂರ್ತಿಯ ಲಕ್ಷಣಗಳನ್ನು ಕೊಡುತ್ತದೆ. ಹೆಚ್ಚಿನ ಗ್ರಂಥಗಳು ಹದಿನೆಂಟು ಭುಜದ ದೇವಿಯ ಬಗ್ಗೆ ತಿಳಿಸುತ್ತವೆ. ಭವಿಷ್ಯತ್ ಪುರಾಣ, ದೇವಿಭಾಗವತ ಪುರಾಣ, ಮಾರ್ಕಂಡೇಯ ಪುರಾಣ, ವಾಮನ ಪುರಾಣ ಗ್ರಂಥಗಳು ಮಹಿಷಮರ್ದಿನಿಯನ್ನು ಕಂಡರಿಸುವಾಗ ಹದಿನೆಂಟು ಕೈಗಳು, ಹದಿನೆಂಟು ಪ್ರಕಾರದ ಆಯುಧಗಳಿರಬೇಕೆಂದು ಸ್ಪಷ್ಟಪಡಿಸುತ್ತವೆ. ಮಾರ್ಕಂಡೇಯ ಪುರಾಣವು ಈ ರೂಪದ ದೇವಿಯನ್ನು ಮಹಾಲಕ್ಷ್ಮಿಯಂತೆ, ಸ್ಮಿತವದನೆಯೆಂದು ನಿರೂಪಿಸುತ್ತದೆ. ಇಂತಹ ಮೂರ್ತಿಗಳು ೧೧ನೇ ಶತಮಾನದಿಂದ ಈಚೆಗೆ ಹೆಚ್ಚು ರಚಿತಗೊಂಡಂತೆ ತೋರುತ್ತದೆ. ಇಪ್ಪತ್ತು ಕೈಗಳ ದೇವಿಯನ್ನು ಹೆಚ್ಚು ವರ್ಣಚಿತ್ರಗಳಲ್ಲಿ ಕಾಣಬಹುದು. ಆದರೆ ಶಿಲ್ಪಗಳು ಈಗ ಸಿಗುವುದು ವಿರಳ. ಹಿಂದೆ ಹೆಚ್ಚಾಗಿ ಇದ್ದಿರಬಹುದು. ಏಕೆಂದರೆ ವಿಷ್ಣು ಧರ್ಮೋತ್ತರ ಪುರಾಣ. ಅಗ್ನಿಪುರಾಣಗಳು ಈ ವರ್ಣನೆಯನ್ನು ನೀಡುತ್ತವೆ. ಶಿಲ್ಪಗಳಲ್ಲಿ ಇಪ್ಪತ್ತು ಕೈಗಳ ಸಂಯೋಜನೆಯು ಕಷ್ಟಕರ ಹಾಗು ಅದನ್ನು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸುವುದು ಪ್ರಯಾಸಕರ. ಈ ಇಪ್ಪತ್ತು ಕೈಗಳು ದೇವಿಯ ಶಕ್ತಿ, ಪರಾಕ್ರಮವನ್ನು ವೈಭವೀಕರಿಸುತ್ತವೆ. ಬಲ ಕೈಗಳಲ್ಲಿ ಶೂಲ, ಖಡ್ಗ, ಶಂಖ, ಚಕ್ರ, ಬಾಣ,

ಶಕ್ತಾಯುಧ, ವಜ್ರ, ಅಭಯ ಢಮರು, ಛತ್ರಿಗಳನ್ನು ಹಿಡಿದಿದ್ದರೆ, ಎಡಭಾಗದ ಕೈಗಳಲ್ಲಿ ನಾಗಪಾಶ, ಖೇಟಕ, ಪರಶು, ಅಂಕುಶ, ಧನಸ್ಸು, ಧ್ವಜ, ಘಂಟಾ, ಗದೆ, ದರ್ಪಣ ಮತ್ತು ಮುದ್ಗರಗಳನ್ನು ಹಿಡಿದಿರಬೇಕೆಂದು ಸೂಚಿಸಲಾಗಿದೆ. ಇಷ್ಟೊಂದು ಆಯುಧಗಳನ್ನು ಪ್ರಯೋಗಿಸುವ ರೀತಿ, ಮಹಿಷಾಸುರನನ್ನು ವಧಿಸುವ ರೀತಿಯಿಂದ ಈ ಶಿಲ್ಪಗಳು ಅಸಾಧಾರಣವಾಗಿ ಕಾಣುವುದಲ್ಲದೇ ಶಿಲ್ಪಿಯು ಸಂಯೋಜನಾ ಕ್ರಿಯೆಯಲ್ಲಿ ತೋರುವ ಸೃಜನಶೀಲತೆಯನ್ನು ಪ್ರತಿಬಿಂಬಿಸುತ್ತವೆ.

ಮಹಿಷಾಸುರಮರ್ದಿನಿಯ ಶಿಲ್ಪಗಳು: ಮುಂದೆ ವಿಶ್ಲೇಷಿಸಲಾಗುವ ಶಿಲ್ಪ ರಚನೆಯಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ, ಕೆಲವು ಶಿಲ್ಪಗಳಲ್ಲಿ ಮಹಿಷಾಸುರಮರ್ದಿನಿಯು ಸಮರಕ್ಕೆ ಸಿಂಹವಾಹಿನಿಯಾಗಿ ತೆರಳುತ್ತಿರುವ ರೂಪದಲ್ಲಿವೆ. ಎರಡನೆಯ ಗುಂಪಿಗೆ ಸೇರಿದ ಶಿಲ್ಪಗಳು ಮಹಿಷಾಸುರಮರ್ದಿನಿಯು ಸಮರದಲ್ಲಿ ಮಹಿಷಾಸುರನ ಮೇಲೆ ಆಯುಧಗಳನ್ನು ಪ್ರಯೋಗಿಸುತ್ತಾ ಎದುರಿಸುತ್ತಿರುವುದು. ಮೂರನೆಯ ಗುಂಪಿನಲ್ಲಿ ಸಮರದ ಕೊನೆಯ ಹಂತದಲ್ಲಿ ಮಹಿಷಾಸುರನನ್ನು ವಧಿಸುತ್ತಿರುವುದು. ಇನ್ನು ನಾಲ್ಕನೆಯ ಗುಂಪಿನಲ್ಲಿ ದೇವಿಯು ಕತ್ತರಿಸಿದ ಮಹಿಷನ ಪ್ರಾಣಿರೂಪದ ತಲೆಯ ಮೇಲೆ ಪಾದಗಳನ್ನು ಇಳಿಬಿಟ್ಟು ಕುಳಿತಿರುವುದು ಅಥವಾ ನಿಂತಿರುವುದು. ಈ ನಿಂತ ಭಂಗಿಯು ಸಾಮಾನ್ಯವಾಗಿ ವಿಷ್ಣುವಿನ ಮೂರ್ತಿಲಕ್ಷಣವನ್ನೇ ಹೊಂದಿರುತ್ತದೆ. ಇನ್ನು ಮಹಿಷನ ವಿಷಯದಲ್ಲೂ ಮಹಿಷನು ಪೂರ್ಣಪ್ರಮಾಣದ ಪ್ರಾಣಿಯ ರೂಪ, ದೇಹ ಮಾನವ, ಮುಖಮಾತ್ರ ಮಹಿಷ, ಇಲ್ಲವೇ ಅರ್ಧ ಮಹಿಷ ಮತ್ತು ಅರ್ಧಮಾನವರೂಪ, ಕೆಲವೆಡೆ ಪೂರ್ಣ ಪ್ರಮಾಣದ ಮಾನವರೂಪ ಆದರೆ ಕೋಡುಗಳು ಚಾಚಿರುತ್ತವೆ. ಸಿಂಹವಾಹನವನ್ನು ಗಮನಿಸಿದಾಗ ಕೆಲವೆಡೆ ಸಿಂಹದ ಮೇಲೆ ಕುಳಿತ, ಸಿಂಹದ ಮೇಲೆ ಸವಾರಿ ಮಾಡುತ್ತಿರುವ, ಸಿಂಹದ ಮೇಲೆ ಕುಳಿತೇ ಸಮರಗೈಯ್ಯುತ್ತಿರುವ, ದೇವಿಯೊಂದಿಗೆ ಸಿಂಹವೂ ಸಮರದಲ್ಲಿ ಮಹಿಷನ ಮೇಲೆ ಎರಗುತ್ತಿರುವ ಅಥವಾ ಇನ್ನು ಕೆಲವೆಡೆ ಲಾಂಛನದಂತೆ ಸಂಯೋಜನೆಯಲ್ಲಿ ಕಂಡುಬರುವ ರೀತಿಯಲ್ಲಿ ತೋರಲಾಗುತ್ತದೆ. ಆಯುಧಗಳಲ್ಲಿ ಮುಖ್ಯವಾಗಿ ಮಹಿಷಾಸುರನನ್ನು ವಧಿಸುತ್ತಿರುವ ತ್ರಿಶೂಲ, ಪ್ರಯೋಗದಲ್ಲಿ ಅಥವಾ ಸ್ಥಿತಿಯಲ್ಲಿ ಚಕ್ರ, ದೊಡ್ಡದಾದ ಖಡ್ಗ, ಘಂಟೆ, ವಜ್ರಾಯುಧ ಹೆದೆಯೇರಿಸುತ್ತಾ ಇರುವ ಧನಸ್ಸು, ಬಾಣ, ಅಕ್ಷಮಾಲ, ಅಭಯ, ವರದ ಮುದ್ರೆಗಳು ಸಾಮಾನ್ಯವಾಗಿರುತ್ತವೆ. ಇವಲ್ಲದೇ ಗ್ರಂಥಗಳಲ್ಲಿ ಕೊಟ್ಟಿರುವ ವಿವರಣೆಯ ಪ್ರಕಾರವೂ ಆಯುಧಗಳಿರುತ್ತವೆ. ಹೆಚ್ಚಿನಾಂಶ ಕರಂಡಮುಕುಟವೇ ಇದ್ದರೂ ಕೆಲವು ಶಿಲ್ಪಗಳಲ್ಲಿ ಕಿರೀಟ ಮುಕುಟವನ್ನು ಚಿತ್ರಿಸಲಾಗುತ್ತದೆ. ತಮಿಳುನಾಡಿನ ಶಿಲ್ಪಗಳಲ್ಲಿ ಕುಚವಸ್ತ್ರವನ್ನೂ, ಇತರ ಭಾಗಗಳಲ್ಲಿ ಸ್ತನಹಾರವನ್ನೂ ಶಿಲ್ಪದಲ್ಲಿ

ಕಂಡರಿಸಲಾಗುತ್ತದೆ. ಕಂಠೀಹಾರಗಳು, ಕರ್ಣಕುಂಡಲಗಳು, ಮಣಿಕಟ್ಟು ಭುಜ ಆಭರಣಗಳೂ ಮುಖ್ಯವಾಗುತ್ತವೆ. ಹಲವು ಶಿಲ್ಪಗಳಲ್ಲಿ ವೈಜಯಂತೀಹಾರ ಅಥವಾ ರುಂಡಮಾಲೆಯನ್ನೂ, ಸೊಂಟಕ್ಕೆ ಒಡ್ಯಾಣ ಮೇಖಲವನ್ನೂ ಕಾಲಿಗೆ ಕಡಗಗಳು ಅಂದಿಗೆಗಳನ್ನು ಸೃಜಿಸಲಾಗಿರುತ್ತದೆ. ದೇವಿಯನ್ನು ಮಹಿಷಾಸುರಮರ್ದಿನಿಯ ರೂಪದಲ್ಲಿ ಸರ್ವಾಲಂಕಾರಭೂಷಿತೆಯಾಗಿ ಹಾಗೂ ಮಂಗಳಮೂರ್ತಿಯಾಗಿ ರಚಿಸಲಾಗುವುದು. ಈ ಮೇಲೆ ವಿಶ್ಲೇಷಿಸಿರುವ ಮೂರ್ತಿಲಕ್ಷಣಗಳನ್ನು ಮುಂದೆ ಆಯಾ ಶಿಲ್ಪಗಳ ಹಿನ್ನೆಲೆಯಲ್ಲಿ ಗಮನಿಸಬಹುದಾಗಿದೆ.

ಸಿಂಹವಾಹಿನಿ ಮಹಿಷಮರ್ದಿನಿ ದುರ್ಗಾ

ಶಿಲ್ಪ – ೦೧, ಸಿಂಹವಾಹಿನಿ, ಪಲ್ಲವ ಶೈಲಿ

ಪಲ್ಲವ ರಾಜಸಿಂಹನು ಕಟ್ಟಿಸಿದ ಕೈಲಾಸನಾಥ ಸ್ವಾಮಿ ದೇವಾಲಯದಲ್ಲಿ ವೈಶಿಷ್ಟಪೂರ್ಣವಾದ ನಾಲ್ಕು ಮಹಿಷಾಸುರ ಮರ್ದಿನಿಯ ಶಿಲ್ಪಗಳಿವೆ. ಈ ಶಿಲ್ಪಗಳನ್ನು ರೂವಾರಿಯು ಅತ್ಯಂತ ಸುಂದರವಾಗಿ ಕಂಡರಿಸಿದ್ದಾನೆ. ದೇವಿ ಮಾಹಾತ್ಮೆಯ ವಿವರಗಳನ್ನು ಆಧರಿಸಿ ದೇವಿಗೆ ದೇವಾನುದೇವತೆಗಳು ಅನೇಕ ದಿವ್ಯಾಸ್ತ್ರಗಳನ್ನು ನೀಡಿ ಮಹಿಷಾಸುರನನ್ನು ವಧಿಸಲು ಪ್ರಾರ್ಥಿಸುತ್ತಾರೆ. ಆ ಎಲ್ಲಾ ದಿವ್ಯಾಸ್ತ್ರಗಳನ್ನು ತೊಟ್ಟು ತನ್ನ ವಾಹನವಾದ ಶೂರಸಿಂಹದ ಮೇಲೆ ಕುಳಿತು ಸಮರಕ್ಕೆ ಹೊರಟಿರುವ ಸಿಂಹವಾಹಿನಿ ಶಿಲ್ಪ ಸಂಯೋಜನೆಯು ಒಂದು ಅಪೂರ್ವ ಕಲಾಕೃತಿ. ಈ ಶಿಲ್ಪ ರಚನೆಯಲ್ಲಿ ದೇವಿಯ ಸುಂದರಾಂಗದ ಜೊತೆಗೆ ಅವಳ ಪರಾಕ್ರಮ, ಶಕ್ತಿ ಧಮಿಸುತ್ತಿರುವುದುನ್ನು ಕಾಣಬಹುದು. ಸಿಂಹದ ಶೌರ್ಯ, ಗಾತ್ರ, ಭಂಗಿ ದೇವಿಯ ಕಾರ್ಯಸಾಧನೆಗೆ ಒಪ್ಪುವಂತಿದೆ. ಕೈಗಳೆಲ್ಲಾ ಸ್ವಾಭಾವಿಕತೆಯಿಂದ ಕೂಡಿದ್ದು ಕಲಾತ್ಮಕವಾಗಿ ಸಂಯೋಜಿಸಲ್ಪಟ್ಟಿವೆ. ಹದಿನಾರು ಕೈಗಳಲ್ಲಿ ಪ್ರಮುಖ ಆಯುಧಗಳಾದ ತ್ರಿಶೂಲ, ಭರ್ಚಿ, ಧನಸ್ಸು, ಬಾಣಗಳು ಇದ್ದು ಉಳಿದ ಕೈಗಳು ಹಲವು ಮುದ್ರೆಗಳನ್ನು ಸೂಚಿಸುತ್ತಿವೆ. ಅರೆಪದ್ಮಾಸನದಲ್ಲಿ ಸಿಂಹದ ಮೇಲೆ ಕುಳಿತು ಪಕ್ಕಕ್ಕೆ ವಾಲಿರುವ ಭಂಗಿಯೂ ಈ ಶಿಲ್ಪಕ್ಕೆ ಒಂದು ರೀತಿಯ ಸೊಬಗನ್ನಿತ್ತಿದೆ. ಮಹಾ ಸಾಮ್ರಾಜ್ಞಿಯ ಲಾಂಛನದಂತೆ ತಲೆಯ ಮೇಲೆ ಛತ್ರವಿದೆ. ಕರಂಡ ಮುಕುಟವು ಶೋಭೆಯನ್ನಿತ್ತಿದೆ. ಹಿತ ಮಿತವಾದ ಆಭರಣಗಳಿಂದ ಅಲಂಕೃತಗೊಂಡ ದೇವಿಯು ತನ್ನ ಘನತೆಯನ್ನು ತೋರುವಂತಿದೆ. ಮರಳು ಶಿಲೆಯ ಈ ಶಿಲ್ಪವು ಸಾಕಷ್ಟು ಸವೆದಿದ್ದರೂ ಹೊಚ್ಚಹೊಸದಾದ ಪ್ರಭೆಯನ್ನು ಬೀರುತ್ತದೆ. ದೇವಿ ಭಾಗವತ ಪುರಾಣದ ವರ್ಣನೆಯನ್ನು ಈ ಶಿಲ್ಪವು ಹೋಲುತ್ತದೆ



ಶಿಲ್ಪ – ೦೧. ಸಿಂಹವಾಹಿನಿ – ಪಲ್ಲವ ಶೈಲಿ. ಕಾಲ: ಪಲ್ಲವ, ೮ನೇ ಶತಮಾನ.

ಸ್ಥಳ: ಕಾಂಚೀಪುರಂ. ದೇವಾಲಯ / ಮ್ಯೂಸಿಯಂ: ಕೈಲಾಸನಾಥಸ್ವಾಮಿ ದೇವಾಲಯ

ಶಿಲ್ಪ – ೦೨, ಸಿಂಹವಾಹಿನಿ, ಪಲ್ಲವ ಶೈಲಿ

ಈ ಅಪೂರ್ವ ಶಿಲ್ಪವು ೮ ಕೈಗಳನ್ನು ಹೊಂದಿದ್ದು ಆಯುಧಗಳು ಸ್ಪಷ್ಟವಾಗಿ ಮೂಡಿವೆ. ಬಲಭಾಗದ ಕೈಗಳಲ್ಲಿ ಖಡ್ಗ ಮತ್ತು ಬಾಣವಿದೆ, ಒಂದು ಕೈಯಲ್ಲಿ ಸ್ಪಷ್ಟವಾದ ಕಲಾತ್ಮಕ ಧ್ಯಾನ ಮುದ್ರೆ, ಎರಡನೆಯದನ್ನು ಬಲ ತೊಡೆಯ ಮೇಲೆ ಇಡಲಾಗಿದೆ. ಎಡ ಭಾಗದ ಕೈಗಳಲ್ಲಿ ಧನಸ್ಸು, ಖೇಟಕ, ಶೂಲವಿದ್ದು, ಒಂದು ಕೈಯನ್ನು ಸೊಂಟದ ಬಳಿ ತೊಡೆಯ ಹತ್ತಿರ ಇಳಿಬಿಟ್ಟಿರುವುದು ಸುಂದರವಾಗಿ ಮೂಡಿ ಬಂದಿದೆ. ನೀಳವಾದ ಕೈಬೆರಳುಗಳು; ಬಳೆಗಳನ್ನು ತೊಟ್ಟಿರುವ ರೀತಿ ಸಂಯೋಜನೆಗೆ ಮೆರಗನ್ನಿತ್ತಿದೆ. ದೇವಿಯು ತನ್ನ ಎಡಗಾಲನ್ನು ತನ್ನ ಬಲಿಷ್ಠವಾದ ವಾಹನ ಸಿಂಹದ ಮೇಲೆ ನೆಟ್ಟು ಬಲಗಾಲನ್ನು ಸಮಭಂಗದಲ್ಲಿಟ್ಟು ಕಟಿಯನ್ನು ವಾಲಿಸಿರುವ ರೀತಿ ಸುಂದರ ತ್ರಿಭಂಗವಾಗಿದೆ. ಈ ಶಿಲ್ಪದ ಶಾರೀರಿಕ ಭಾಗಗಳನ್ನು ಬಿಡಿಬಿಡಿಯಾಗಿ ನೋಡಿದಾಗ ಅಲ್ಲಿ ಅನೇಕ ತ್ರಿಕೋನಗಳು ರಚಿತವಾಗಿರುವುದರಿಂದ ಇಡೀ ಸಂಯೋಜನೆಗೆ ಕಲಾತ್ಮಕತೆ ದೊರೆತಿದೆ. ಕಲಾತತ್ವದ ದೃಷ್ಟಿಯಿಂದ ನೋಡಿದಾಗ ಪಕ್ಕಕ್ಕೆ ವಾಲಿರುವ ತಲೆ, ಮಣಿದಿರುವ ಕಟಿ, ದೃಢವಾದ ಆಲೀಢ ಸ್ಥಾನಗಳಿಂದ ವೈಶಿಷ್ಟ್ಯಪೂರ್ಣವಾಗಿದೆ. ದೇವಿಯ ಕಿರೀಟವು ಉದ್ದವಾಗಿರುವುದರಿಂದಲೇ ಈ ಭಂಗಿಗೆ ಒಂದು ರೀತಿಯ ಸಮತೋಲನ ತಂದಿದೆ. ಕುಚವಸ್ತ್ರ, ವಸ್ತ್ರದ ಪಟ್ಟಿಗಳು ಕಟಿ ಪ್ರದೇಶದಲ್ಲಿ ಇಳಿಬಿಟ್ಟಿರುವುದು ವಿಶೇಷವಾಗಿದೆ. ದೇವಿಯ ಪರಾಕ್ರಮಕ್ಕೆ ಒಪ್ಪುವಂತೆ ಸಿಂಹವು ತನ್ನ ಪೌರಷವನ್ನು ತೋರುವ ಭಂಗಿಯಲ್ಲಿದೆ. ಹೆಚ್ಚಿನ ಮಟ್ಟಿನ ಲಕ್ಷಣಗಳಲ್ಲಿ ಈ ಶಿಲ್ಪವು ಪೂರ್ಣಕರ್ಣಾಗಮವನ್ನು ಅನುಸರಿಸಿದರೂ ಮಹಿಷನ ಮೇಲೆ ನಿಂತಿಲ್ಲದಿರುವುದರಿಂದ ಭಿನ್ನವಾಗಿದೆ.



ಶಿಲ್ಪ – ೦೨. ಸಿಂಹವಾಹಿನಿ. ಪಲ್ಲವ ಶೈಲಿಯ ಶಿಲ್ಪ
ಕಾಲ – ಪಲ್ಲವ, ೮ನೇ ಶತಮಾನ.
ಸ್ಥಳ – ಕಾಂಚೀಪುರಂ ದೇವಾಲಯ, ಕೈಲಾಸನಾಥಸ್ವಾಮಿ ದೇವಾಲಯ
ಶಾಸನಗಳಲ್ಲಿ ರಾಜಸಿಂಹ ಗೃಹವೆಂದು ಕರೆಯಲಾಗಿದೆ.

ಶಿಲ್ಪ – ೦೩, ಸಿಂಹವಾಹಿನಿ ದುರ್ಗೆ, ಪಲ್ಲವ ಶೈಲಿ

ಈ ಶಿಲ್ಪದಲ್ಲಿ ದೇವಿಯು ಸಿಂಹವನ್ನು ಏರಿ ಯುದ್ಧ ಮಾಡುವ ವೈಖರಿಯಲ್ಲಿ ಸೃಜಿಸಲಾಗಿದೆ. ದೇವಿಯ ದೇಹದ ಮೇಲ್ಭಾಗವು ಮಾತ್ರ ಗೋಚರವಾಗುತ್ತಿದೆ. ಸಿಂಹವು ದೇವಿಗಿಂತ ಗಾತ್ರದಲ್ಲಿ ದೊಡ್ಡಗಾಗಿದ್ದು ಎರಡು ಕಾಲ್ಗಳನ್ನು ಮೇಲೆತ್ತಿ ಮುಂದೆ ಭರದಿಂದ ಸಾಗಿದೆ. ವೀರರಸ ಪ್ರಧಾನವಾಗಿರುವ ಈ ಶಿಲ್ಪ ಸಂಯೋಜನೆ ಅಪರೂಪವಾಗಿದೆ. ಚತುರ್ಭುಜಗಳನ್ನು ಹೊಂದಿರುವ ದೇವಿಯು ನಾಲ್ಕೂ ಕೈಗಳಲ್ಲಿ ಆಯುಧ ಹಿಡಿದಿದ್ದಾಳೆ, ಅವಳ ಕೈಗಳ ಚಲನೆಯು ಆಯುಧ ಪ್ರಯೋಗವನ್ನು ಸೂಚಿಸುತ್ತಿದೆ. ಬಲ ಕೈಗಳಲ್ಲಿ ಒಂದು ಮೇಲೆತ್ತಿ ಬಾಣವನ್ನು ಎಳೆಯುತ್ತಿದೆ, ಇನ್ನೊಂದು ಬಲವಾದ ತ್ರಿಶೂಲವನ್ನು ಹಿಡಿದಿದೆ. ಎಡ ಕೈಗಳಲ್ಲಿ ಮೇಲಿನದು ನಾಗಪಾಶ ಮತ್ತು ಎರಡನೆಯದು ಬಲವಾದ ಧನಸ್ಸನ್ನು ಹಿಡಿದಿದೆ. ಕೂದಲನ್ನು ಜಟಾಮುಕುಟದಂತೆ ಮೇಲೆಕಟ್ಟಿ ಮುಂದೆ ಹರಡಲಾಗಿದೆ. ದೊಡ್ಡ ಕರ್ಣಕುಂಡಲಗಳು ದೇವಿಯ ಭಂಗಿಗೆ ಒಪ್ಪುತ್ತಿದೆ. ಸ್ಮಿತವದನೆಯಾಗಿ, ಕಂಠಾಭರಣಗಳನ್ನು, ಕುಚವಸ್ತ್ರವನ್ನೂ ತೊಟ್ಟಿದ್ದಾಳೆ. ತೆಳುವಾದ ಕಟಿಯೂ ದೇವಿಯ ದೈವೀಸೌಂದರ್ಯ ಲಕ್ಷಣಸೂಚಿಸುತ್ತದೆ. ಈ ಎಲ್ಲಾ ಲಕ್ಷಣಗಳನ್ನು ಗಮನಿಸಿ ಗ್ರಂಥಗಳ ಆಧಾರಗಳನ್ನು ನೋಡಲು ತೊಡಗಿದರೆ ಒಂದೇ ಗ್ರಂಥದ ಲಕ್ಷಣಗಳು ಹೊಂದಿಕೆಯಾಗುವುದಿಲ್ಲ. ಅಂಶುಬೇಧಾಗಮದಂತೆ ನಾಲ್ಕು ಕೈಗಳಿದ್ದರೆ, ಆಯುಧಗಳು, ಮುದ್ರೆಗಳು ಭಿನ್ನವಾಗಿವೆ, ಪೂರ್ವಕರ್ಣಾಗಮದ ನಾಲ್ಕು ಕೈಗಳ ಲಕ್ಷಣ ಮತ್ತು ಕೆಲವು ಆಯುಧಗಳು ಸಮಂಜಸವಾಗಿವೆ. ಆಭರಣಗಳೂ ಹೊಂದುತ್ತವೆ. ಆದರೆ ಈ ಗ್ರಂಥದ ವಿವರಣೆಯ ಪ್ರಕಾರ ಭಂಗಿಯಲ್ಲಿ ಮಹಿಷನ ತಲೆಯ ಮೇಲೆ ನಿಲ್ಲಬೇಕು. ಆದರೆ ಈ ಶಿಲ್ಪದಲ್ಲಿ ಸಮರ ಮಧ್ಯದಲ್ಲಿರುವಂತೆ ಸಂಯೋಜಿಸಲಾಗಿದೆ.



ಶಿಲ್ಪ – ೦೩. ಸಿಂಹವಾಹಿನಿ ದುರ್ಗೆ, ಪಲ್ಲವ ಶೈಲಿ
ಕಾಲ – ಪಲ್ಲವ ೮ನೇ ಶತಮಾನ
ಸ್ಥಳ – ಕಾಂಚೀಪುರಂ,
ದೇವಾಲಯ – ಕೈಲಾಸನಾಥಸ್ವಾಮಿ ದೇವಾಲಯ

ಶಿಲ್ಪ – ೦೬, ಸಿಂಹವಾಹನದೊಂದಿಗೆ ದುರ್ಗ, ಚೋಳ ಶೈಲಿ

ಅಷ್ಟಭುಜೆಯಾದ ಈ ದೇವಿಯು ದುರ್ಗೆಯೆಂದೂ, ಚಾಮುಂಡಿಯೆಂದೂ ಪೂಜಿಸಲ್ಪಡುವವಳು. ಸಮಭಂಗದಲ್ಲಿ ನಿಂತು ಕಟಿಪ್ರದೇಶದಲ್ಲಿ ಮಾತ್ರ ಸ್ವಲ್ಪ ಬಾಗಿರುವುದರಿಂದ ತ್ರಿಭಂಗಿಯಂತಿದೆ. ಎಂಟು ಕೈಗಳಲ್ಲಿ ಚಕ್ರ, ಶಂಖ, ಖಡ್ಗ, ಶೂಲ, ಅಭಯ, ಖೇಟಕ, ಕೃಪಾಣ ಮತ್ತು ಕಾರ್ಮುಕವನ್ನು ಹಿಡಿದಿದ್ದು, ಕರಂಡ, ಮುಕುಟ, ಮಣಿ, ಮೌಳಿ ಕುಂಡಲಗಳಿಂದ ಶೋಭಿತಳಾಗಿ, ದಟ್ಟ ಕೂದಲಿನ ದೇವಿ ಗಾಂಭೀರ್ಯಭಾವದಿಂದ ನಿಂತಿರುವಳು. ಈ ಶಿಲ್ಪಗಳು ವಿಗ್ರಹಲಕ್ಷಣಗಳನ್ನೇ ಹೆಚ್ಚಾಗಿ ಹೊಂದಿದ್ದು ಸಂಯೋಜನೆಯಲ್ಲಿ ಚಲನಾತ್ಮಕತೆ ಮತ್ತು ಶಿಲ್ಪಿಯ ಕ್ರಿಯಾತ್ಮಕತೆಯನ್ನು ಹೊರಹೊಮ್ಮಿಸಲು ವಿಫಲವಾಗುತ್ತವೆ. ಈ ರೂಪದ ಶಿಲ್ಪಗಳು, ಹೆಚ್ಚಿನಮಟ್ಟಿಗೆ ಶಾರದಾತಿಲಕತಂತ್ರದಲ್ಲಿ ತಿಳಿಸಿರುವ ಪ್ರತಿಮಾಲಕ್ಷಣವನ್ನು ಹೋಲುತ್ತದೆ. ಆದರೆ ಅಲ್ಲಿ ತಿಳಿಸಿದಂತೆ ಇಲ್ಲಿ ಮಹಿಷ ಸಂಹಾರಿಯಾಗಿರುವುದಿಲ್ಲ.



ಶಿಲ್ಪ – ೧೪. ಸಿಂಹವಾಹನದೊಂದಿಗೆ ದುರ್ಗೆ, ಚೋಳರ ಶೈಲಿ
ಕಾಲ – ಚೋಳ, ಹನ್ನೊಂದನೇ ಶತಮಾನ
ಸ್ಥಳ – ಗಂಗೈಕೊಂಡ ಚೋಳಪುರಂ,
ದೇವಾಲಯ – ಗಂಗೈಕೊಂಡ ಚೋಳೇಶ್ವರ ದೇವಾಲಯ

ಶಿಲ್ಪ – ೦೫, ಸಿಂಹವಾಹಿನಿ, ಚೋಳ ಶೈಲಿ

ಬಲಿಷ್ಠವಾದ, ಬಹುಗಾತ್ರದ ಓಡುತ್ತಿರುವ ಸಿಂಹದ ಮೇಲೆ ಯುದ್ಧಕ್ಕಾಗಿ ಧಾವಿಸುತ್ತಿರುವಂತಿದೆ ದೇವಿಯ ಈ ಭಂಗಿ. ಷಟ್‌ಭುಜಗಳಿಂದ ಕಂಗೊಳಿಸುತ್ತಿರುವ ದೇವಿಯ ಎಲ್ಲಾ ಕೈಗಳಲ್ಲೂ ಆಯುಧಗಳಿವೆ. ಒಂದು ಕಾಲನ್ನು ಇಳಿಬಿಟ್ಟು ಇನ್ನೊಂದು ಕಾಲನ್ನು ಮಡಿಚಿ ಕುಳಿತಿದ್ದು ಸಿಂಹದ ವೇಗದ ರಭಸಕ್ಕೆ ದೇವಿಯು ಹಿಂದಕ್ಕೆ ವಾಲಿದಂತೆ ಇದ್ದರೂ ಸತ್ವ, ಪರಾಕ್ರಮ, ವೀರಾವೇಷವನ್ನು ಈ ಶಿಲ್ಪ ತೋರಿಸುತ್ತದೆ. ಕೈಗಳೆಲ್ಲಾ ವೇಗಗತಿಯನ್ನು ಸೂಚಿಸುವಂತೆ ಹರಡಿವೆ. ಇಡೀ ಶಿಲ್ಪಕ್ಕೆ ಚಲನಾತ್ಮಕತೆಯನ್ನು ತಂದುಕೊಡಲಾಗಿದೆ. ಕುಚವಸ್ತ್ರ, ಸ್ತನಹಾರ ಮತ್ತು ಮೇಖಲಗಳು ಸ್ಪಷ್ಟವಾಗಿವೆ. ಈ ಶಿಲ್ಪವು ಪ್ರಪಂಚಸಾರಸಂಗ್ರಹದ ಹಲವು ಲಕ್ಷಣಗಳನ್ನು ಪ್ರತಿಪಾದಿಸುತ್ತದೆ.



ಶಿಲ್ಪ – ೦೫. ಸಿಂಹವಾಹಿನಿ, ಚೋಳರ ಶೈಲಿ
ಕಾಲ – ಚೋಳ, ೧೩ನೇ ಶತಮಾನ
ಸ್ಥಳ – ತಂಜಾವೂರು
ದೇವಾಲಯ – ಬೃಹದೇಶ್ವರ ದೇವಾಲಯದ ಆವರಣದಲ್ಲಿರುವ ಸುಬ್ರಹ್ಮಣ್ಯೇಶ್ವರ ದೇವಾಲಯ

ಶಿಲ್ಪ – ೦೬, ಸಿಂಹವಾಹನದೊಂದಿಗೆ ದುರ್ಗೆ, ವಿಜಯನಗರ ಶೈಲಿ

ಈ ಶಿಲ್ಪವನ್ನು ಸಂಪೂರ್ಣ ವಿಗ್ರಹಶಾಸ್ತ್ರದ ಲಕ್ಷಣಗಳಿಗೆ ಅನುಗುಣವಾಗಿ ರಚಿಸಲಾಗಿದೆ. ಚತುರ್ಭುಜೆಯಾದ ದೇವಿಯ ಮೇಲಿನ ಎರಡು ಕೈಗಳಲ್ಲಿ ಚಕ್ರ, ಮತ್ತು ಶಂಖ, ಒಂದು ಬಲಗೈ ಅಭಯ ಮತ್ತು ಒಂದು ಎಡಗೈ ಗದಾಮುದ್ರೆಯಲ್ಲಿದೆ. ಕರಂಡಮುಕುಟ / ಹಾರಗಳು, ಮೇಖಲಗಳನ್ನು ವಿವರವಾಗಿ ಬಿಡಿಸಲಾಗಿದೆ



ಶಿಲ್ಪ – ೦೬. ಸಿಂಹವಾಹನದೊಂದಿಗೆ ದುರ್ಗೆ, ವಿಜಯನಗರ ಶೈಲಿ
ಕಾಲ – ವಿಜಯನಗರ, ೧೬ನೇ ಶತಮಾನ, ಸ್ಥಳ: ಬಿಡಿ ಶಿಲ್ಪ
ದೇವಾಲಯ / ಮ್ಯೂಸಿಯಂ : ರಾಷ್ಟ್ರೀಯ ಸಂಗ್ರಹಾಲಯ, ನವದೆಹಲಿ

ಎರಡನೆಯ ಗುಂಪಿಗೆ ಸೇರಿದ ಶಿಲ್ಪಗಳು:

ಮಹಿಷಾಸುರಮರ್ಧಿನಿಯು ಸಮರದಲ್ಲಿ ಆಯುಧಗಳನ್ನು ಪ್ರಯೋಗಿಸಿ ಮಹಿಷನನ್ನು ಎದುರಿಸುತ್ತಿರುವುದು.

ಮಹಿಷಾಸುರ ಮರ್ದಿನಿ ಶಿಲ್ಪವಿರುವ ಗುಹೆಯನ್ನು ಚಿತ್ರ ೦೭ರಲ್ಲಿ ಕಾಣಬಹುದು. ಮಹಾಬಲೀಪುರಂನಲ್ಲಿ ಈ ವಿಶಿಷ್ಟವಾದ ಗುಹಾಂತರ ರಚನೆಯಲ್ಲಿ ಒಂದು ಗೋಡೆಯ ಭಾಗವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಾಗಿದೆ. ದೇವಿಯು ಮಹಿಷಾಸುರನೊಡನೆ ಸಮರಗೈಯ್ಯುವ ದೃಶ್ಯವನ್ನು ದೇವೀ ಮಹಾತ್ಮೆಯಲ್ಲಿ ವಿವರಿಸುವಂತೆಯೇ ಚಿತ್ರಿಸಲಾಗಿದೆ. ಮಹಾಬಲಿಪುರಂನಲ್ಲಿ ಇಂತಹ ಅನೇಕ ದೃಶ್ಯ ಶಿಲ್ಪಗಳನ್ನು ರೂವಾರಿಗಳು ಸೃಜಿಸಿದ್ದಾರೆ.



ಚಿತ್ರ – ೦೭. ಸ್ಥಳ: ಮಹಾಬಲಿಪುರಂ

ಶಿಲ್ಪ – ೧೮, ಸಮರ ದೃಶ್ಯ, ಮಹಿಷಾಸುರಮರ್ಧಿನಿ, ಪಲ್ಲವ ಶೈಲಿ

ಈ ಶಿಲ್ಪ ದೃಶ್ಯಾವಳಿಯಲ್ಲಿ ಮಹಿಷಾಸುರನೊಂದಿಗೆ ದೇವಿಯು ಸಮರಗೈಯ್ಯುತ್ತಿರುವಂತೆ ತೋರಲಾಗಿದೆ. ದೇವಿಯ ಸೈನ್ಯ ಮತ್ತು ಮಹಿಷನ ಸೈನ್ಯವನ್ನೂ ಚಿತ್ರಿಸಲಾಗಿದೆ. ಅಷ್ಟಭುಜಗಳ ದೇವಿಯು ಮಹಿಷಾಸುರನ ಮೇಲೆ ಹೆದೆ ಏರಿಸಿ ಬಾಣಪ್ರಯೋಗ ಮಾಡುತ್ತಿರುವುದು ಸ್ಪಷ್ಟವಾಗಿದೆ. ಇನ್ನೊಂದು ಬಲಗೈಯಲ್ಲಿ ಬಲಿಷ್ಠವಾದ ಖಡ್ಗವನ್ನು ಹಿರಿದು ಪ್ರಯೋಗಿಸಲು ಸಿದ್ಧವಾಗಿರುವಂತಿದ್ದು ಮೇಲಿನ ಎಡೆಗೈಯಲ್ಲಿ ಇನ್ನೊಂದು ಪ್ರಬಲವಾದ ಖಡ್ಗವನ್ನು ದೇವಿಯು ಮೇಲಕ್ಕೆ ಎತ್ತಿ ಹಿರಿದು ಸಿಂಹದ ಮೇಲೆ ಕುಳಿತು ರಭಸವಾಗಿ ಮುನ್ನುಗ್ಗುತ್ತಿದ್ದಾಳೆ. ಅವಳ ಎತ್ತಿದ ತಲೆ ಕಣ್ಣುಗಳು ಪ್ರಖರತೆಯಿಂದ ಮಹಿಷನನ್ನು ನೋಡುತ್ತಿವೆ. ದೇವಿಯ ಸೈನ್ಯದಲ್ಲಿ ಅನೇಕ ಗಣಗಳು, ದೇವಿಯ ಪ್ರತಿರೂಪಗಳು ಮಹಿಷನ ಸೈನ್ಯದ ಮೇಲೆ ಬಲವಾಗಿ ಎರಗುತ್ತಿವೆ. ದೇವಿಯ ತೆಳುವಾದ ಶರೀರವನ್ನು ಶಿಲ್ಪಿಯು ಸತ್ವಯುತವಾಗಿ ರಚಿಸಿದ್ದಾನೆ. ತಲೆಯ ಕರಂಡ ಮುಕುಟ, ಕುಚವಸ್ತ್ರ, ಮೇಖಲ, ಕರ್ಣಾಭರಣ ಮತ್ತು ಕಂಠಾಭರಣಗಳು ಹಿತಮಿತವಾಗಿ ಮೂಡಿಬಂದಿವೆ. ದೇವಿಯ ಶತ್ರುವಾದ ಮಹಿಷನು ಬಲಿಷ್ಠವಾದ ಚಿಕ್ಕ ಗಧೆಯನ್ನು ಎರಡೂ ಕೈಗಳಲ್ಲಿ ಹಿಡಿದು ದೇವಿಯ ಮೇಲೆ ಬಲವಾಗಿ ಎಸೆಯುವ ಸನ್ನಾಹದಲ್ಲಿರುವಂತೆ, ಮಹಿಷನ ತಲೆಯು ಪ್ರಾಣಿ ರೂಪದಲ್ಲೇ ಇದ್ದು ಕೊಂಬುಗಳನ್ನು ಅದಕ್ಕೆ ಒಪ್ಪುವ ಕಿರೀಟವನ್ನು ಧರಿಸಿದ್ದಾನೆ. ದೇಹವು ಸತ್ವಯುತವಾಗಿ ಮಾನವ ರೂಪದಲ್ಲಿದ್ದು ಪ್ರತ್ಯಾಲೀಢ ಸ್ಥಾನದಲ್ಲಿ ತೋರಲಾಗಿದೆ. ಮಹಿಷಾಸುರನ ವಸ್ತ್ರಗಳು ಯುದ್ಧದಲ್ಲಿ ಸೆಣಸಾಡುತ್ತಿರುವ ರೂಪಕ್ಕೆ ತಕ್ಕಂತೆ ಪ್ರತಿಪಾದಿತವಾಗಿವೆ. ಅವನ ಕಾಲ ಕೆಳಗೆ ಸತ್ತುಬಿದ್ದ ದೇಹಗಳು, ಪರಾಭವಗೊಂಡು ಕೆಳಗೆ ಕುಳಿತಿರುವ ಅವನ ಪ್ರಮುಖ ಸೇನಾಪತಿಗಳು, ಇನ್ನೊಂದೆಡೆಗೆ ಬಲವಾದ ಖಡ್ಗ, ಗುರಾಣಿಗಳನ್ನು ಹಿಡಿದು ಮುನ್ನುಗ್ಗುತ್ತಿರುವ ಅವನ ಯೋಧರು, ಇನ್ನು ಕೆಲವರು ದೇವಿಯ ಪರಾಕ್ರಮವನ್ನು ನೋಡುತ್ತಾ ದಂಗು ಬಡೆದಿರುವಂತೆ ತೋರುವ ರೀತಿ ಸಹಜತೆಯಿಂದ ಕೂಡಿದೆ. ಪ್ರಾಯಶಃ ದೇವದಾನವರ ಯುದ್ಧದ ಪ್ರಥಮ ಬೃಹತ್ ಸಂಯೋಜನ ಶಿಲ್ಪ ಇದಾಗಿದೆ. ಇದು ಪೂಜೆಗೈಯ್ಯುವ ಮೂರ್ತಿಶಿಲ್ಪವಾಗಿರದೆ ಕ್ರಿಯಾಶೀಲತೆಯಿಂದ ಕೂಡಿದ ಸಂಯೋಜನ ಶಿಲ್ಪವಾಗಿದ್ದು ಹೆಚ್ಚು ಕಲಾತ್ಮಕತೆಯಿಂದ ಕೂಡಿರುತ್ತದೆ.

ಈ ರೀತಿಯ ಸಂಯೋಜನೆಯನ್ನು ಯಾವ ಶಿಲ್ಪ ಗ್ರಂಥಗಳು ನೀಡದಿದ್ದರೂ ವಿವರಣೆಯನ್ನು ನೋಡಿದಾಗ ಭವಿಷ್ಯತ್‌ಪುರಾಣವನ್ನು ಹೆಚ್ಚು ಅನುಮೋದಿಸುತ್ತದೆ. ಈ ಗ್ರಂಥವು ಮಹಿಷಾಸುರ ಮರ್ಧಿನಿಯೆಂದೇ ಹೆಸರಿಸಿದ್ದು ಹದಿನೆಂಟು ಕೈಗಳನ್ನು ತಿಳಿಸುತ್ತದೆ. ಆದರೆ ಈ ಶಿಲ್ಪದಲ್ಲಿ ಎಂಟು ಕೈಗಳು ಮಾತ್ರವಿದೆ. ಭವಿಷ್ಯತ್ ಪುರಾಣದ ವಿವರಣೆಯಂತೆ ದೇವಿಯು

ಸುಂದರವದನೆ, ಸರ್ವಾಭರಣಭೂಷಿತೆ, ಜಯಸಾಧನೆಗಾಗಿ ನಿಂತವಳು, ಶ್ಯಾಮಲವರ್ಣೆ, ಬಂಗಾರದ ಕಾಂತಿಯುಳ್ಳವಳು ಹಾಗೂ ಮಹಿಷನನ್ನು ನಿಯಂತ್ರಿಸುವ ಶಕ್ತಿಯಿರುವ ದೇವಿಯ ರೂಪದಲ್ಲಿ ಈ ಶಿಲ್ಪದಲ್ಲಿ ಮಹಿಷಾಸುರ ಮರ್ಧಿನಿಯು ಕಂಗೊಳಿಸುತ್ತಾಳೆ.



ಶಿಲ್ಪ – ೦೮, ಸಮರ ದೃಶ್ಯ, ಮಹಿಷಾಸುರ ಮರ್ಧಿನಿ
ಕಾಲ – ೭ನೇ ಶತಮಾನ, ಪಲ್ಲವ ಶೈಲಿ
ಸ್ಥಳ – ಮಹಾಬಲಿಪುರಂ

ಶಿಲ್ಪ – ೦೯, ಸಮರ ದೃಶ್ಯ, ಮಹಿಷಾಸುರ ಮರ್ಧಿನಿ, ಬಾದಾಮಿ ಚಾಲುಕ್ಯ ಶೈಲಿ

ಮಹಾಬಲೀಪುರಂನ ಸಮರ ದೃಶ್ಯವನ್ನೇ ಸಣ್ಣ ಪಟ್ಟಿಕೆಯಲ್ಲಿ ಇಲ್ಲಿ ಹಿಡಿದಿಡಲಾಗಿದೆ. ದೇವಿಯು ಸಿಂಹದ ಮೇಲೆ ಕುಳಿತು ಅಷ್ಟಭುಜಗಳುಳ್ಳವಳಾಗಿ ಮಹಿಷನ ಮೇಲೆ ಗುರಿ ಇಟ್ಟು ಬಾಣಪ್ರಯೋಗ ಮಾಡುತ್ತಿರುವ ರೀತಿ ಕಲಾತ್ಮಕವಾಗಿ ಮೂಡಿದೆ. ಇನ್ನುಳಿದ ಕೈಗಳಲ್ಲಿ ಶಂಖಚಕ್ರ, ಬಲವಾದ ಖಡ್ಗ, ಗುರಾಣಿ, ಘಂಟೆಗಳನ್ನು ಹಿಡಿದು ರಭಸವಾಗಿ ಎಲ್ಲಾ ಆಯುಧಗಳನ್ನೂ ಪ್ರಖರವಾಗಿ ಪ್ರಯೋಗಿಸುತ್ತಿರುವ ಭಂಗಿ, ತೆಳ್ಳನೆಯ ಸತ್ವಯುತ ಶರೀರ, ಕರಂಡ ಮುಕುಟ, ಸ್ತನಹಾರಗಳಿಂದ ಶೋಭಿಸುತ್ತಿದ್ದಾಳೆ. ಮಹಿಷ ಮತ್ತು ದೇವಿಯ ಮಧ್ಯದ ಸ್ಥಳಾವಕಾಶವನ್ನು ಬೃಹತ್ ಗಾತ್ರದ ಸಿಂಹ ಮಹಿಷನ ಮೇಲೆ ಮತ್ತು ಅವನ ಸೈನಿಕರ ಮೇಲೆ ಬಲವಾಗಿ ಪ್ರಹಾರ ಮಾಡುತ್ತಾ ಆಕ್ರಮಿಸುತ್ತಿರುವ ರೂಪದಲ್ಲಿ ಬಳಸಿಕೊಳ್ಳಲಾಗಿದೆ. ಮಹಿಷಾಸುರನ ದೇಹ ಮಾನವರೂಪ ಮುಖ ಬಲಿಷ್ಠ ಮಹಿಷನ ರೂಪದಲ್ಲಿದ್ದು ಮಹಾಬಲೀಪುರಂನ ಮಹಿಷಾಸುರನಂತೆ ಎರಡು ಕೈಗಳಲ್ಲಿ ಬೃಹತ್ ಗಧೆಯನ್ನು ಹಿಡಿದು ತನ್ನನ್ನು ರಕ್ಷಿಸಿಕೊಳ್ಳುವಂತಿದೆ. ಕಾಲುಗಳನ್ನು ಪ್ರತ್ಯಾಲೀಢ ಸ್ಥಾನದಲ್ಲಿಟ್ಟು ಸಿಂಹದ ಪಂಜರದಿಂದ ಪ್ರಹಾರಗೊಳ್ಳುತ್ತಿದ್ದಾನೆ. ಅವನ ಸೈನಿಕರು ಪರಾಭವಗೊಂಡು, ಶಿರಛೇದಗೊಂಡು ಕೆಳಗೆ ಬಿದ್ದಿದ್ದಾರೆ. ಚಿಕ್ಕ ಪಟ್ಟಿಕೆಯಾದರೂ ಕಲಾತ್ಮಕ ದೃಷ್ಟಿಯಲ್ಲಿ ಸತ್ವಯುತವಾಗಿ ಅಭಿವ್ಯಕ್ತಗೊಂಡಿರುವ ರಚನೆ ಈ ಸಮರ ದೃಶ್ಯವಾಗಿದೆ.



ಶಿಲ್ಪ – ೦೯. ಸಮರ ದೃಶ್ಯ, ಮಹಿಷಾಸುರಮರ್ದಿನಿಯು ಸಮರದಲ್ಲಿ ತೊಡಗಿರುವುದು.
ಕಾಲ – ೮ನೇ ಶತಮಾನ ಬಾದಾಮಿ ಚಾಲುಕ್ಯ ಶೈಲಿ,
ಸ್ಥಳ – ಮಲ್ಲಿಕಾರ್ಜುನ ದೇವಾಲಯ ಪಟ್ಟದಕಲ್ಲು. ರಂಗಮಂಟಪದ ಕಂಭದ ಮೇಲೆ ರಚಿಸಿರುವ ಸಮರ ದೃಶ್ಯ ಶಿಲ್ಪ.

ಶಿಲ್ಪ – ೧೦, ಸಮರ ದೃಶ್ಯ, ಮಹಿಷಾಸುರಮರ್ಧಿನಿ, ರಾಷ್ಟ್ರಕೂಟ ಶೈಲಿ

ದೇವಿಯು ಮಹಿಷನೊಂದಿಗೆ ಹೋರಾಡುತ್ತಿರುವ ಈ ಪಟ್ಟಿಕೆಯು ಮೂರು ಭಾಗಗಳಲ್ಲಿ ವಿಸ್ತೃತಗೊಂಡಿದೆ. ಮೇಲಿನ ಭಾಗದಲ್ಲಿ ಅಷ್ಟ ದಿಕ್ಪಾಲಕರು, ಗಂಧರ್ವ ಮತ್ತು ಕಿನ್ನರರು ದೇವಿ ಕೈಗೊಂಡಿರುವ ಯುದ್ಧವನ್ನು ಆಕಾಶದಿಂದಲೇ ವೀಕ್ಷಿಸುತ್ತಾ ದೇವಿಗೆ ಜಯಕಾರ ಮಾಡುತ್ತಿರುವುದನ್ನು ದೃಶ್ಯಶಿಲ್ಪದಲ್ಲಿ ಕಾಣುತ್ತದೆ. ಮಧ್ಯ ಭಾಗದಲ್ಲಿ ದೇವಿಯು ಸಿಂಹದ ಮೇಲೆ ಅರ್ಧಪದ್ಮಾಸನೆಯಾಗಿ ಕುಳಿತು ಅಷ್ಟಭುಜಗಳಲ್ಲಿ ವಿವಿಧ ಆಯುಧಗಳನ್ನು ಹಿಡಿದು ಬಿಲ್ಲನ್ನು ಹೆದೆ ಏರಿಸಿ ಗುರಿಯಿಟ್ಟು ಮಹಿಷಾಸುರನ ಮೇಲೆ ಪ್ರಯೋಗ ಮಾಡುತ್ತಿದ್ದಾಳೆ. ಘಂಟೆ, ತ್ರಿಶೂಲ, ಶಂಖ, ಚಕ್ರ, ಖಡ್ಗ, ಗುರಾಣಿಗಳನ್ನು ಹಿಡಿದು ಶತ್ರುವಿನ ಮೇಲೆ ಪ್ರಯೋಗ ಮಾಡುವ ರೀತಿ ಶಿಲ್ಪಿಯ ಕಲಾವಂತಿಕೆಯನ್ನು ಸೂಚಿಸುತ್ತಿದೆ. ಕರಂಡಮುಕುಟ, ಸ್ತನಹಾರ, ಹಿತಮಿತವಾದ ಆಭರಣಗಳನ್ನು ತೊಟ್ಟಿರುವ ದೇವಿಯ ಅಂಗಸೌಷ್ಟವವು ಸೌಂದರ್ಯದಿಂದ ಕೂಡಿದ್ದರೂ ಅವಳ ವೀರತ್ವದ ಲಕ್ಷಣ ಸ್ಪಷ್ಟವಾಗಿ ಮೂಡಿಬಂದಿದೆ. ದೇವಿಯ ವಾಹನ ಸಿಂಹವೂ ಅಷ್ಟೇ ಪ್ರಖರವಾದ ವೀರಾವೇಶದಿಂದ ಬಾಲವನ್ನು ಸುರುಳಿ ಸುತ್ತಿ ಮಹಿಷನ ಸೈನದ ಮೇಲೆ ಎರಗುತ್ತಿದೆ. ಮಹಾಬಲೀಪುರಂ ಮತ್ತು ಪಟ್ಟದಕಲ್ಲಿನ ಸಮರ ದೃಶ್ಯವನ್ನೇ ಈ ಎಲ್ಲೋರ ದೃಶ್ಯವೂ ಸಮಂಜಿಸುತ್ತಿವೆ. ಈ ಮೂರೂ ದೃಶ್ಯಗಳಲ್ಲೂ ದೇವಿಯು ಅಷ್ಟಭುಜೆಯಾಗಿ ಮಹಿಷನ ಮೇಲೆ ಹೆದೆಏರಿಸಿ ಬಾಣಪ್ರಯೋಗ ಮಾಡುತ್ತಾ ಸಿಂಹದ ಮೇಲೆ ಕುಳಿತು ಯುದ್ಧದಲ್ಲಿ ತೊಡಗಿರುವುದನ್ನು ಮೂರು ದೃಶ್ಯದ ಶಿಲ್ಪಿಗಳೂ ಕಂಡರಿಸಿದ್ದಾರೆ. ಮಹಾಬಲೀಪುರಂ ಪಟ್ಟಿಕೆಯಲ್ಲಿ ದೇವಿಯ ತಲೆಯ ಮೇಲೆ ಹಾಗೂ ಮಹಿಷನ ತಲೆಯ ಮೇಲೆ ಸಾಮ್ರಾಜ್ನಿ ಸಂಕೇತವಾದ ದೊಡ್ಡಸತ್ತಿಗೆಯನ್ನು (ಛತ್ರಿ) ತೋರಲಾಗಿದೆ. ಪಟ್ಟದಕಲ್ಲಿನ ಶಿಲ್ಪದಲ್ಲಿ ಈ ಸಂಕೇತವಿಲ್ಲ. ಆದರೆ ಎಲ್ಲೋರಾದ ಶಿಲ್ಪ ಪಟ್ಟಿಕೆಯಲ್ಲಿ ಛತ್ರಿ ಮತ್ತು ಚಾಮರಗಳು ದೇವಿಯ ತಲೆಯ ಮೇಲೆ ಇರುವುದು ಸಾಮ್ರಾಜ್ಞಿಯ ಲಾಂಛನಗಳನ್ನು ಸೂಚಿಸುತ್ತವೆ. ಮೊದಲಿನ ಎರಡೂ ಪಟ್ಟಿಕೆಗಳಲ್ಲಿ ಮಹಿಷಾಸುರನ ಮುಖ ಪ್ರಾಣಿರೂಪದ್ದೇ ಇದ್ದುದೇಹ ಮಾತ್ರ ಮಾನವಾಕೃತಿಯಲ್ಲಿದೆ. ಆದರೆ ಎಲ್ಲೋರಾದ ಪಟ್ಟಿಕೆಯಲ್ಲಿ ಮಹಿಷಾಸುರ ಪೂರ್ಣ ಮಾನವಾಕೃತಿಯಲ್ಲಿದ್ದು ತಲೆಯ ಮೇಲೆ ಕೊಂಬುಗಳು ಸ್ಪಷ್ಟವಾಗಿ ಒಡಮೂಡಿವೆ. ಇಲ್ಲಿಯೂ ಗಧೆಯಿಂದಲೇ ಬಲವಾಗಿ ಪ್ರಹಾರ ಮಾಡುತ್ತಿದ್ದಾನೆ. ಆದರೆ ಪ್ರತ್ಯಾಲೀಢ ಸ್ಥಾನದಲ್ಲಿರದೇ ಬಲಪ್ರಯೋಗಕ್ಕಾಗಿ ಬಲಗಾಲನ್ನು ಅಡ್ಡವಾಗಿ ಮಡಿಸಿ ಸಿಂಹವನ್ನು ಹಿಂದಕ್ಕೆ ತಳ್ಳುತ್ತಿದ್ದಾನೆ. ಮೂರನೇ ಭಾಗವಾದ ಕೆಳಭಾಗದಲ್ಲಿ ದೇವಿಯಿಂದ ಹೊರಟ ಪ್ರತಿರೂಪಗಳು ಮಹಿಷನ ಸೈನ್ಯದ ಮೇಲೆ ಎರಗುತ್ತಿವೆ. ಮಹಿಷನ ಸೈನ್ಯ ಎದೆಯನ್ನು ಚಾಚಿ

ಪರಾಭವಗೊಳ್ಳುತ್ತಿವೆ. ಇಲ್ಲಿಯೂ ಶಿಲ್ಪಿಯು ತನ್ನ ಕಲಾಪ್ರಜ್ಞೆಯನ್ನು ತೋರಿದ್ದಾನೆ. ಒಟ್ಟಿನಲ್ಲಿ ಈ ದೃಶ್ಯಶಿಲ್ಪವು ದೇವೀ ಮಹಾತ್ಮೆಯಲ್ಲಿ ವರ್ಣಿಸುವ ರೀತಿಯಲ್ಲೇ ರಚಿತಗೊಂಡಿದೆ. ಈ ಶಿಲ್ಪ ಸಂಯೋಜನೆಗೆ ದೇವೀ ಮಹಾತ್ಮೆ ಸಮರ ಪ್ರಸಂಗವನ್ನು ಆಯ್ದುಕೊಳ್ಳಲಾಗಿದೆ.



ಶಿಲ್ಪ – ೧೦. ಸಮರದೃಶ್ಯ, ಮಹಿಷಾಸುರಮರ್ದಿನಿಯು ಸಮರದಲ್ಲಿ ತೊಡಗಿರುವುದು
ಕಾಲ – ೯ನೇ ಶತಮಾನ, ರಾಷ್ಟ್ರಕೂಟರ ಕಾಲದ ಶಿಲ್ಪ
ಸ್ಥಳ – ಎಲ್ಲೋರ ಕೈಲಾಸ ಗುಹಾಂತರ ದೇವಾಲಯ

ಶಿಲ್ಪ – ೧೧, ಸಮರ ದೃಶ್ಯ, ಮಹಿಷಾಸುರಮರ್ಧಿನಿ, ಚೋಳ ಶೈಲಿ

ಈ ಶಿಲ್ಪವು ಪಟ್ಟದಕಲ್ಲಿನ ಮಲ್ಲಿಕಾರ್ಜುನ ದೇವಾಲಯದ ನವರಂಗ ಕಂಭಗಳಲ್ಲಿ ಒಂದರಲ್ಲಿ ಕಂಡರಿಸಿದ ಪಟ್ಟಿಕೆಯಂತೆಯೇ ಇದೆ. ಆದರೆ ಇಲ್ಲಿ ದೇವಿಯು ಯುದ್ಧರಂಗದ ಮಧ್ಯೆ ಸಿಂಹದಿಂದ ಕೆಳಗಿಳಿದು ಮೂಲವಾಗಿ ತ್ರಿಶೂಲವನ್ನು ಸದೃಢವಾಗಿ ಹಿಡಿದು ಮಹಿಷಾಸುರ ಮತ್ತು ಅವನ ಸೈನ್ಯದ ಮೇಲೆ ಎರಗುತ್ತಿರುವ ಭದ್ರಕಾಳಿಯ ರೂಪದಲ್ಲಿದ್ದಾಳೆ. ಅಷ್ಟಭುಜಗಳಲ್ಲಿ ವಿವಿಧ ಆಯುಧಗಳನ್ನು ಹಿಡಿದು, ಒಂದು ಕೈಯನ್ನು ವಿಸ್ಮಯಹಸ್ತದಲ್ಲಿ ಮೇಲ್ಭಾಗದಲ್ಲಿ ತಿರುಗಿಸಿದ್ದಾಳೆ, ಹೆಚ್ಚು ವಸ್ತ್ರಗಳನ್ನೂ ಧರಿಸದೇ ತಲೆಯನ್ನು ಜ್ವಾಲರೂಪದ ಜಟೆಯಂತೆ ಬಿರುದು ಸೈನ್ಯವನ್ನು ಚೆಂಡಾಡುತ್ತಿರುವ ದೃಶ್ಯ ಸ್ಪಷ್ಟವಾಗಿ ಮೂಡಿದೆ. ಮಹಿಷನು ಕೊಂಬುಗಳನ್ನು ಹೊಂದಿದ್ದು ಪೂರ್ಣವಾಗಿ ಮಾನವಾಕೃತಿಯಲ್ಲಿದ್ದು ದೇವಿಯ ಭೀಕರ ರೂಪವನ್ನು ನೋಡಿ ಹೆದರಿ ಓಡುತ್ತಿದ್ದಾನೆ. ದೇವಿಯು ಅವನನ್ನು ಅಟ್ಟಿಸಿಕೊಂಡು ಹೋಗುತ್ತಿದ್ದಾಳೆ. ದೇವಿಯ ಸೈನ್ಯವೂ ಹೆದರಿ ತಲೆಯ ಮೇಲೆ ಕೈಜೋಡಿಸಿ ನಮೋ ನಮೋ ಎನ್ನುತ್ತಿದ್ದಾರೆ. ಅಲ್ಲಲ್ಲಿ ಕತ್ತರಿಸಿ ಬಿದ್ದ ರುಂಡಗಳು ಚೆಲ್ಲಾಡಿವೆ. ವರ್ತುಲಾಕಾರದ ಒಂದು ಸಣ್ಣ ಪಟ್ಟಿಯಲ್ಲಿ ಚೋಳರ ಕಾಲದ ಶಿಲ್ಪಿಯು ತನ್ನ ಕಲಾವಂತಿಕೆಯನ್ನು ಮೆರೆದಿದ್ದಾನೆ.

ಮೇಲೆ ವಿವರಿಸಿರುವ ಹತ್ತು ಶಿಲ್ಪಗಳಲ್ಲಿ ಮೊದಲಿನ ಆರು ಶಿಲ್ಪಗಳು ಪಲ್ಲವ ಮತ್ತು ಚೋಳರ ಕಾಲಕ್ಕೆ ಸೇರಿದ್ದು, ದೇವಿಯು ದೇವಾನುದೇವತೆಗಳು ನೀಡಿದ್ದ ಎಲ್ಲಾ ಅಸ್ತ್ರಗಳನ್ನೂ ತೊಟ್ಟು ಸಿಂಹದ ಮೇಲೆ ಕುಳಿತು ಯುದ್ಧಕ್ಕೆ ಸನ್ನದ್ಧಳಾಗಿ ಹೊರಟಿರುವ ರೀತಿಯಲ್ಲಿ ರಚಿಸಲಾಗಿದೆ. ಇವುಗಳಲ್ಲೆವೂ ಭಿತ್ತಿ ಶಿಲ್ಪಗಳಾಗಿವೆ. ನಾಲ್ಕನೆಯ ಶಿಲ್ಪವು ತಂಜಾವೂರಿನ ಭಿತ್ತಿಯ ಕೋಷ್ಟಕದಲ್ಲಿದೆ. ಮುಂದಿನ ನಾಲ್ಕು ಶಿಲ್ಪಗಳು ಕ್ರಮವಾಗಿ ಮಹಾಬಲೀಪುರಂ, ಪಟ್ಟದಕಲ್ಲು, ಎಲ್ಲೋರಾ ಮತ್ತು ದಾರಾಸುರಂ ದೇವಾಲಯಗಳಲ್ಲಿ ಮಹಿಷಾಸುರನೊಡನೆ ಸಮರಗೈಯ್ಯುವ ದೃಶ್ಯ ಶಿಲ್ಪದಲ್ಲಿ ದೇವಿಯನ್ನು ಅತ್ಯಂತ ಪ್ರಭಾವೀ ವೀರವನಿತೆ, ಸಾಮ್ರಾಜ್ಞಿಯ ರೂಪದಲ್ಲಿ ರಚಿಸಲಾಗಿದೆ. ಒಟ್ಟಿನಲ್ಲಿ ದೇವೀ ಮಹಾತ್ಮೆಯ ಕಥಾಪ್ರಸಂಗವನ್ನೇ ಆಧರಿಸಿ ಈ ಎಲ್ಲಾ ಶಿಲ್ಪಗಳನ್ನು ಸೃಜನಾತ್ಮಕವಾಗಿ ಮತ್ತು ಕಲಾತ್ಮಕವಾಗಿ ಸಂಯೋಜಿಸಲಾಗಿದೆ. ಈ ಶಿಲ್ಪಗಳು ಒಂದೊಂದು ಮೇರು ಕೃತಿಯೆಂಬುದರಲ್ಲಿ ಯಾವ ರೀತಿಯ ಸಂದೇಹವೂ ಇರುವುದಿಲ್ಲ.

ದೇವಿಯು ದಿವ್ಯಾಸ್ತ್ರಗಳನ್ನು ತನ್ನ ಅನೇಕ ಕೈಗಳಲ್ಲಿ ತೊಟ್ಟು ಸಿಂಹವಾಹಿನಿಯಾಗಿ ಯುದ್ಧರಂಗಕ್ಕೆ ಬರುವ ಮೂರ್ತಿಶಿಲ್ಪ ರಚನೆಗಳು ಹೆಚ್ಚಿನ ಮಟ್ಟಿಗೆ ಪಲ್ಲವ ಮತ್ತು ಚೋಳರ ಶೈಲಿಗೆ ಸೇರಿದವುಗಳಾಗಿವೆ. ನಂತರ ದೇವಿಯು ಯುದ್ಧರಂಗದಲ್ಲಿ ವೀರಾವೇಶದಿಂದ ಮಹಿಷನೊಡನೆ ಸಮರಗೈಯ್ಯುವ ದೃಶ್ಯಶಿಲ್ಪಗಳು ಉತ್ತಮ ಕೃತಿಗಳಾಗಿವೆ. ಇಲ್ಲಿ ದೇವಿಯು ಅಷ್ಟಭುಜಗಳನ್ನು

ಹೊಂದಿದ್ದು ಬಾಣಪ್ರಯೋಗದಲ್ಲಿ ನಿರತಳಾಗಿ ಇತರ ಕೈಗಳಲ್ಲಿ ಅರ್ಧವರ್ತುಲಾಕಾರದಲ್ಲಿ ಉಳಿದ ಬಲವಾದ ಆಯುಧಗಳಾದ ತ್ರಿಶೂಲ, ಶಂಖ, ಚಕ್ರ, ಘಂಟೆ, ಖಡ್ಗ ಮತ್ತು ಖೇಟಕಗಳನ್ನು ಹಿಡಿದು ಮಹಿಷನ ಮೇಲೆ ಪ್ರಯೋಗ ಮಾಡುತ್ತಿರುವ ದೃಶ್ಯಗಳನ್ನು ಪಲ್ಲವ, ಚಾಲುಕ್ಯ, ರಾಷ್ಟ್ರಕೂಟ ಮತ್ತು ಚೋಳರ ಕಾಲದ ದೇವಾಲಯಗಳಲ್ಲಿ ಕಾಣುತ್ತೇವೆ. ಪಲ್ಲವ ಮತ್ತು ರಾಷ್ಟ್ರಕೂಟರ ಕಾಲದ ಗುಂಹಾಂತರ ದೇವಾಲಯಗಳಲ್ಲಿ ವಿಸ್ತೃತವಾಗಿ ರೂಪಿಸಲಾಗಿದೆ. ಈ ದೃಶ್ಯಶಿಲ್ಪಗಳಲ್ಲಿ ಮಹಾಬಲೀಪುರಂ ಪಟ್ಟಿಕೆಯು ೭ನೇ ಶತಮಾನದಲಿ ಪಲ್ಲವ ನರಸಿಂಹವರ್ಮನ ಕಾಲದಲ್ಲಿ ರಚಿಸಲಾಗಿದ್ದು ನಂತರ ಚಾಲುಕ್ಯ, ರಾಷ್ಟ್ರಕೂಟ ಮತ್ತು ಚೋಳರ ಶೈಲಿಗಳಲ್ಲಿ ಸಮೀಕರಿಸಲಾಗಿದೆ. ಅಸಂಖ್ಯಾತ ಸಂಖ್ಯೆಯಲ್ಲಿ ದೇವಿಯು ಮಹಿಷಾಸುರನನ್ನು ವಧಿಸುವ ಅಥವಾ ಮರ್ಧಿಸುವ ಶಿಲ್ಪಗಳನ್ನು ಭಾರತದ ಉದ್ದಗಲಕ್ಕೂ ಸುಮಾರು ೨ನೇ ಶತಮಾನದಿಂದಲೇ ಗುರುತಿಸಬಹುದು. ಇಲ್ಲಿ ದೇವಿಯು ಮಹಿಷಾಸುರಮರ್ದಿನಿಯ ಮೂರ್ತಿ ಶಿಲ್ಪ ರೂಪದಲ್ಲಿ ಕಂಡುಬರುತ್ತಾಳೆ. ಮುಂದೆ ಈ ಅಧ್ಯಯನದಲ್ಲಿ ವಿವಿಧ ಶೈಲಿಗಳಲ್ಲಿ ಶಿಲ್ಪ ಮತ್ತು ಆಗಮ ಶಾಸ್ತ್ರಗ್ರಂಥಗಳ ಆಧಾರದಿಂದ ಮಹಿಷಮರ್ಧಿನಿಯ ಮೂರ್ತಿಶಿಲ್ಪದ ರಚನೆಯನ್ನು ಯಾವ ರೀತಿ ಮಾಡಲಾಗಿದೆ ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ.



ಶಿಲ್ಪ – ೧೧, ಸಮರದೃಶ್ಯ, ಸಮರದಲ್ಲಿ ತೊಡಗಿರುವ ಮಹಿಷಾಸುರಮರ್ದಿನಿ
ಕಾಲ – ೧೧ – ೧೨ ನೇ ಶತಮಾನ, ಚೋಳರ ಕಾಲದ ಶಿಲ್ಪ
ಸ್ಥಳ – ಐರಾವತೇಶ್ವರ ದೇವಾಲಯ, ದಾರಾಸುರಂ, ನವರಂಗದ ಕಂಭದ ಮೇಲಿನ ಮಧ್ಯಭಾಗದ ಪಟ್ಟಿಕೆ.

ಶಿಲ್ಪ – ೧೨, ಮಹಿಷಾಸುರಮರ್ಧಿನಿ

ಇಲ್ಲಿ ದೇವಿಯು ಚತುರ್ಭುಜೆಯಾಗಿ ಬಲವಾದ ತ್ರಿಶೂಲದಿಂದ ಮಹಿಷನ ಮಸ್ತಕವನ್ನು ಅಂದರೆ ಕುಂಭಸ್ಥಳವನ್ನು ಮರ್ಧಿಸುತ್ತಾ ಇನ್ನೊಂದು ಕೈಯಲ್ಲಿ ಬಾಲವನ್ನೂ ತಿರುಚಿತ್ತಿದ್ದು ಮತ್ತೊಂದು ಕೈಯಲ್ಲಿ ನೇಗಿಲು ಮತ್ತು ಪಾಶವನ್ನೂ ಹಿಡಿದಿದ್ದಾಳೆ. ನಿರಾಭರಣೆಯಾಗಿದ್ದು ಪ್ರಾಯಶಃ ಪುರಾತನ ಜಾನಪದ ಸಂಪ್ರದಾಯದಲ್ಲಿ ಈ ಶಿಲ್ಪವನ್ನು ರಚಿಸಲಾಗಿದೆ. ಮಹಿಷನು ಮಾನವಾಕೃತಿಯನ್ನು ಈ ಶಿಲ್ಪದಲ್ಲಿ ತಳೆದಿರುವುದಿಲ್ಲ. ಆಗಮ ಅಥವಾ ಶಿಲ್ಪಶಾಸ್ತ್ರದ ಆಧಾರವನ್ನು ಈ ಶಿಲ್ಪಕ್ಕೆ ನೀಡುವುದು ಸಮಂಜಸವೆನಿಸುವುದಿಲ್ಲ.



ಶಿಲ್ಪ – ೧೨. ಮಹಿಷಾಸುರಮರ್ದಿನಿ
ಕಾಲ – ೪ನೇ ಶತಮಾನ, ಬಿಹಾರ್
ಸ್ಥಳ – ನಲಂದ ಸಂಗ್ರಹಾಲಯ, ಅರ್ಧಅಡಿ ಎತ್ತರದ ಆವಿಮಣ್ಣಿನ ಶಿಲ್ಪ.

ಶಿಲ್ಪ – ೧೩, ಮಹಿಷಾಸುರಮರ್ಧಿನಿ, ಗುಪ್ತರ ಕಾಲ

ಇದು ಅರ್ಧ ಅಡಿ ಎತ್ತರದ ಶಿಲೆಯ ಶಿಲ್ಪವಾಗಿದೆ. ಅಷ್ಟಾಗಿ ಕಲಾತ್ಮಕವಾಗಿಲ್ಲದಿದ್ದರೂ ಮೂರ್ತಿ ಲಕ್ಷಣವನ್ನು ಸೂಚಿಸುವ ಪುರಾತನ ಶಿಲ್ಪವಾಗಿವೆ. ಆವಿಮಣ್ಣಿನ ಮೇಲಿನ ಶಿಲ್ಪದಂತೆ ಬಲವಾದ ತ್ರಿಶೂಲದಿಂದ ಮಹಿಷನ ಮಧ್ಯದೇಹವನ್ನು ಬೇಧಿಸುತ್ತಾ ಇನ್ನೊಂದು ಕೈಯಲ್ಲಿ ಮಹಿಷನ ಬಾಲವನ್ನೂ ತಿರುಚಿ ಅಸುರನನ್ನೂ ಬಲಹೀನಗೊಳಿಸಿದ್ದಾಳೆ. ಮತ್ತೆರಡು ಕೈಗಳಲ್ಲಿ ಖಡ್ಗ ಮತ್ತು ಖೇಟಕವನ್ನೂ ಹಿಡಿದು ಬಲಗಾಲನ್ನು ಮಹಿಷನ ಮೇಲೆ ನೆಟ್ಟು ಎಡಗಾಲನ್ನು ಸಮಪಾದದಲ್ಲಿ ಇರಿಸಿದ್ದಾಳೆ. ಹಿತ ಮಿತ ಆಭರಣ, ಜಟಾಮುಕುಟವನ್ನೂ ಧರಿಸಿ ಗಂಭೀರದಿಂದ ವಿಜೃಂಭಿಸಿದ್ದಾಳೆ. ಅಂಶುಬೇಧಾಗಮ ಇಲ್ಲವೇ ಪೂರ್ವಕರ್ಣಾಗಮದ ವರ್ಣನೆಯನ್ನು ಈ ಶಿಲ್ಪವು ಹೋಲುತ್ತದೆ.



ಶಿಲ್ಪ – ೧೩. ಮಹಿಷಾಸುರಮರ್ಧಿನಿ
ಕಾಲ – ನಾಲ್ಕನೇ ಶತಮಾನ, ಗುಪ್ತರಕಾಲ
ಸ್ಥಳ: ನಲಂದ ಸಂಗ್ರಹಾಲಯ, ಬಿಹಾರ್

ಶಿಲ್ಪ – ೧೪, ಮಹಿಷಾಸುರಮರ್ಧಿನಿ

ಅಷ್ಟಭುಜೆಯಾದ ಈ ದೇವಿಯು ಮಹಿಷನನ್ನು ಸಂಹರಿಸುತ್ತಿದ್ದಾಳೆ. ಎಡಭಾಗದ ಕೈಗಳಲ್ಲಿ ದೊಡ್ಡದಾದ ಖೇಟಕ, ಬಿಲ್ಲು, ಘಂಟೆಯನ್ನು ಹಿಡಿದು ಇನ್ನೊಂದು ಕೈಯಿಂದ ಮಹಿಷನ ತಲೆಯ ಕೂದಲನ್ನು ಎತ್ತಿ ಹಿಡಿದಿದ್ದಾಳೆ. ಬಲಭಾಗದ ಕೈಗಳು ಭಗ್ನವಾಗಿದ್ದು ಮುಖ್ಯವಾದ ಕೈಯಲ್ಲಿ ಬಲವಾದ ತ್ರಿಶೂಲದಿಂದ ಮಹಿಷನ ನಡುಭಾಗದ ದೇಹಕ್ಕೆ ನೆಟ್ಟಿ ಬಲಗಾಲಿನಿಂದ ಅವನನ್ನು ಮೆಟ್ಟಿದ್ದಾಳೆ. ಎಡಗಾಲನ್ನು ಬಾಗಿಸಿ ಸಮಪಾದದಲ್ಲಿ ನಿಂತಿರುವುದರಿಂದ ಸುಂದರ ತ್ರಿಭಂಗಿಯಲ್ಲಿ ರಚಿತಗೊಂಡಿದೆ. ದೇವಿಯ ಬಲಭಾಗದಲ್ಲಿ ಸಿಂಹವು ಮಹಿಷನ ಮೇಲೆ ಎರಗುತ್ತಿದೆ. ಜಟಾಮುಕುಟ ಹಾಗೂ ಅರ್ಧಚಂದ್ರನನ್ನು ಧರಿಸಿ ಸುಂದರ ಕಂಠಾಭರಣ, ಕರ್ಣಾಕುಂಡಲ, ಮಣಿಕಟ್ಟುಗಳನ್ನು, ಕುಚವಸ್ತ್ರವನ್ನು ಧರಿಸಿರುವ ಸುಂದರವಾದ ಶಿಲ್ಪ ಇದಾಗಿದೆ. ಮಹಿಷನು ಪ್ರಾಣಿ ರೂಪದಿಂದ ಹೊರಹೊಮ್ಮುತ್ತಿದ್ದು ದೇವಿಯ ಆಯುಧಗಳ ಪ್ರಯೋಗದಿಂದ ರಕ್ತ ಚಿಮ್ಮಿ ತತ್ತರಿಸುತ್ತಿದ್ದಾನೆ. ಈ ಶಿಲ್ಪದ ಸಂಯೋಜನಾ ವಿವರಗಳನ್ನು ನೋಡಿದಾಗ ಇದು ಮಯದೀಪಿಕಾ ಶಿಲ್ಪಗ್ರಂಥವನ್ನು ಹೆಚ್ಚಿನ ಮಟ್ಟಿಗೆ ಹೋಲುತ್ತದೆ. ಆದರೆ ಅಲ್ಲಿ ತಿಳಿಸಿರುವಂತೆ ಹತ್ತು ಕೈಗಳಿರದೆ ಎಂಟು ಕೈಗಳಿವೆ. ಇಂತಹ ದೇವಿಯ ಸ್ವರೂಪವನ್ನು ಈ ಗ್ರಂಥದಲ್ಲಿ 'ಕಾತ್ಯಾಯಿನಿ' ಎಂದು ಕರೆಯಲಾಗಿದೆ. ಭಗ್ನ ಶಿಲ್ಪವಾದರು ಸೌಂದರ್ಯ ಶಾಸ್ತ್ರದ ಎಲ್ಲಾ ಲಕ್ಷಣಗಳನ್ನೂ ಇಲ್ಲಿ ಪ್ರತಿಪಾದಿಸಲಾಗಿದೆ.



ಶಿಲ್ಪ – ೧೪, ಮಹಿಷಾಸುರಮರ್ಧಿನಿ
ಕಾಲ – ೮ನೇ ಶತಮಾನ, ಉತ್ತರಭಾರತ
ಸ್ಥಳ – ಪಾಟ್ನಾ ಸಂಗ್ರಹಾಲಯ,
ಪೂರ್ಣಪ್ರಮಾಣದ ಐದು ಅಡಿಯ ಕೆಂಪು ವರ್ಣ ಶಿಲಾಶಿಲ್ಪ.

ಶಿಲ್ಪ – ೧೫, ಮಹಿಷಾಸುರಮರ್ಧಿನಿ

ಬಂಡೆಯನ್ನು ಕೊರೆದು ಸೃಜಿಸಿರುವ ಶಿಲ್ಪ. ಚಾಲುಕ್ಯ ಶಿಲ್ಪಗಳಲ್ಲಿ ಹೆಚ್ಚಿನ ಮಟ್ಟಿಗೆ ತ್ರಿಶೂಲದ ಕೆಳಗಿನ ಭಾಗದಿಂದಲೇ ಮಹಿಷನನ್ನು ಚುಚ್ಚಿ ಸಂಹರಿಸುತ್ತಿರುವುದನ್ನು ಗಮನಿಸಬಹುದು. ಬೇರೆಲ್ಲಾ ಶೈಲಿಗಳಲ್ಲಿ ತ್ರಿಶೂಲದ ಮುಂಭಾಗದಿಂದಲೇ ಚುಚ್ಚಲಾಗುತ್ತದೆ. ಚಾಲುಕ್ಯ ಶಿಲ್ಪಗಳಲ್ಲಿ ತ್ರಿಶೂಲವನ್ನು ಅದರ ಸ್ಥಾನದಲ್ಲೇ ಹಿಡಿದು ಮಹಿಷನನ್ನು ಮಸ್ತಕದ ಮೇಲೋ ಹಿಂಬಾಗದ ದೇಹದ ಮೇಲೋ ಬಲವಾಗಿ ತಿವಿಯಲಾಗಿರುತ್ತದೆ. ಇದು ಒಂದು ವಿಶೇಷ. ಈ ಶಿಲ್ಪದಲ್ಲಿ ದೇವಿಯು ಚತುರ್ಭುಜೆ, ಮೇಲಿನ ಕೈಗಳಲ್ಲಿ ಶಂಖಚಕ್ರ, ಇನ್ನೆರಡು ಕೈಗಳಲ್ಲಿ ಕ್ರಮವಾಗಿ ತ್ರಿಶೂಲ ಮತ್ತು ಎಡಗೈಯಿಂದ ಮಹಿಷನ ಬಾಲವನ್ನು ಎತ್ತಿ ತಿರುಚಲಾಗಿರುತ್ತದೆ. ಆಲೀಢ ಸ್ಥಾನದಲ್ಲಿ ಬಲಗಾಲನ್ನು ಮಹಿಷನ ತಲೆಯ ಮೇಲೆ ನೆಟ್ಟು ಎಡಗಾಲನ್ನು ಸಮಪಾದದಲ್ಲಿ ದೂರದಲ್ಲಿಡಲಾಗಿದೆ. ಕರಂಡ, ಕಿರೀಟಮುಕುಟ, ಕೆಳಭಾಗದ ವಸ್ತ್ರ, ಮೇಖಲ, ಕಂಠಾಭರಣ, ತೋಳುಬಂಧಿ, ಕಡಗಗಳು, ಸ್ತನಹಾರಗಳು ಸ್ಪಷ್ಟವಾಗಿ ಮೂಡಿವೆ. ಮಹಿಷನು ಪ್ರಾಣಿಯ ರೂಪದಲ್ಲೇ ಇದ್ದು ದೇವಿಯ ವೀರಾವೇಶಕ್ಕೆ ತತ್ತರಿಸಿರುವುದು ವ್ಯಕ್ತವಾಗಿದೆ. ಈ ಶಿಲ್ಪ ರಚನೆಯು ಪೂರ್ವಕರ್ಣಾಗಮ ದ್ವಾದಶ ಪಟಲದ ವರ್ಣನೆಯನ್ನು ಹೆಚ್ಚು ಹೋಲುತ್ತದೆ. ಇಲ್ಲಿ ಮಹಿಷಾಸುರಮರ್ಧಿನಿಯೆಂದೇ ಕರೆಯಲಾಗಿದ್ದು ನಾಲ್ಕು ಕೈಗಳು, ಶೂಲಿ, ಶಂಖ ಮತ್ತು ಚಕ್ರ ಮುಖ್ಯವಾಗಿರುತ್ತದೆ, ಹಣೆಯಲ್ಲಿ ತಿಲಕ, ತೇಜೋಮಯ ನೇತ್ರ, ಕಿರೀಟ, ಕುಂಡಲಗಳಿಂದ ಅಲಂಕೃತೆ, ಮಹಿಷನ ತಲೆಯ ಮೇಲೆ ನಿಂತ ಭಂಗಿಯೆಂದು ಈ ಆಗಮವು ತಿಳಿಸುತ್ತದೆ. ಪಕ್ಕದಲ್ಲಿ ಗಂಧರ್ವ ದಂಪತಿಗಳು ಆಕಾಶದಿಂದ ಈ ಸಂಹಾರವನ್ನು ವೀಕ್ಷಿಸುತ್ತಿದ್ದಾರೆ. ಕೆಳಪಟ್ಟಿಕೆಯಲ್ಲಿ ಗಣಗಳು ಸಂಭ್ರಮ ಪಡುತ್ತಿರುವುದು ಸ್ಪಷ್ಟವಾಗಿದೆ.



ಶಿಲ್ಪ – ೧೫. ಮಹಿಷಾಸುರಮರ್ಧಿನಿ
ಕಾಲ – ಆರನೇ ಶತಮಾನ, ಚಾಲುಕ್ಯರ ಕಾಲ
ಸ್ಥಳ – ಬಾದಾಮಿಯ ಗುಹಾಂತರ ದೇವಾಲಯ, ಶೈವಗುಹೆ.

ಶಿಲ್ಪ – ೧೬, ಮಹಿಷಾಸುರಮರ್ಧಿನಿ, ಬಾದಾಮಿ ಚಾಲುಕ್ಯ ಶೈಲಿ

ಈ ಶಿಲ್ಪದಲ್ಲಿ ದೇವಿಯು ಸತ್ವಯುತವಾಗಿಯೂ, ಸುಂದರವಾಗಿಯೂ ಕಲಾತ್ಮಕತೆಯಿಂದಲೂ ರೂಪಗೊಂಡಿದ್ದಾಳೆ. ಅಷ್ಟಭುಜಗಳನ್ನು ಹೊಂದಿರುವ ದೇವಿಯ ಕೈಗಳಲ್ಲಿ ಸತ್ವಯುತವಾದ ಆಯುಧಗಳಿವೆ. ಬಲಭಾಗದ ನಾಲ್ಕು ಕೈಗಳಲ್ಲಿ ಪ್ರಯೋಗಚಕ್ರ, ತ್ರಿಶೂಲ, ಭರ್ಚಿ, ಪಾಶಗಳಿದ್ದರೆ, ಎಡಭಾಗದ ಕೈಗಳಲ್ಲಿ ಶಂಖ, ಖೇಟಕ, ದೊಡ್ಡ ಬಿಲ್ಲು ಮತ್ತು ಒಂದು ಕೈಯಿಂದ ಮಹಿಷನ ಮುಖವನ್ನು ಬಲವಾಗಿ ಹಿಡಿದು ತಿರುಚಲಾಗಿದೆ. ಇಲ್ಲಿಯೂ ತ್ರಿಶೂಲದ ಹಿಂಭಾಗದಿಂದಲೇ ತಿವಿಯಲಾಗಿದೆ. ಕಿರೀಟ ಮುಕುಟವನ್ನೂ ಧರಿಸಿ, ಸುಂದರವಾದ ಕುಂಡಲ, ಕಂಠಾಭರಣ, ಕೇಯೂರ, ಸ್ತನಹಾರ, ಕಡಗಗಳು ದೇವಿಯ ಸೌಂದರ್ಯವನ್ನು ನೂರ್ಮಡಿಸಿವೆ ದೇವಿಯ ಬಲಗಾಲು ಮಡಿಸಿ ಮಹಿಷನ ಕುತ್ತಿಗೆಯನ್ನು ಬಲವಾಗಿ ಒತ್ತಿದೆ. ಎಡಗಾಲು ಸಮಪಾದದಲ್ಲಿ ನೆಟ್ಟಿದೆ. ಇಡೀ ಸಂಯೋಜನೆಯು ತ್ರಿಭಂಗರೂಪಕ್ಕೆ ಪುಷ್ಟಿ ನೀಡಿದೆ. ದೇವಿಯ ಬಲದಿಂದ ಮಹಿಷ ತಿಣಕಿ ತತ್ತರಿಸಿದ್ದಾನೆ. ಇಲ್ಲಿಯೂ ಪ್ರಾಣಿರೂಪದಲ್ಲೇ ಇದೆ. ಸಿಂಹವು ಅವನ ತಿಣಕಾಟವನ್ನು ವೀಕ್ಷಿಸುತ್ತಿದೆ. ಇದೊಂದು ಅಪರೂಪ ಶಿಲ್ಪ ರಚನೆ. ಈ ಮಹಿಷಾಸುರ ಸಂಹಾರ ಮೂರ್ತಿಯು ಪೂರ್ವಕರ್ಣಾಗಮದ ವಿವರಣೆಯನ್ನು ಹೆಚ್ಚಿನ ಮಟ್ಟಿಗೆ ಹೋಲುತ್ತದೆ.



ಶಿಲ್ಪ – ೧೬. ಮಹಿಷಾಸುರಮರ್ಧಿನಿಯ ಮೂರ್ತಿ
ಕಾಲ – ೭ನೇ ಶತಮಾನ, ಬಾದಾಮಿ ಚಾಲುಕ್ಯರ ಕಾಲ
ಸ್ಥಳ – ಐಹೊಳೆಯ ರಾವಣಫಾಡಿ ಗುಹಾಂತರ ದೇವಾಲಯ

ಶಿಲ್ಪ – ೧೨, ಮಹಿಷಾಸುರಮರ್ಧಿನಿ, ಬಾದಾಮಿ ಚಾಲುಕ್ಯರ ಕಾಲ

ಐಹೊಳೆಯ ದುರ್ಗಾದೇವಾಲಯದ ಈ ಶಿಲ್ಪವು ವೀರೋಚಿತ ಮಹಿಷಮರ್ಧಿನಿಯ ಉತ್ತಮ ನಿರೂಪಣೆಗೆ ಒಂದು ವಿಶಿಷ್ಟ ನಿದರ್ಶನ. ಅಷ್ಟಭುಜಗಳಲ್ಲಿ ದಿವ್ಯಾಸ್ತ್ರಗಳನ್ನು ತೊಟ್ಟು, ಮುಖ್ಯವಾಗಿ ಪ್ರಯೋಗ, ಚಕ್ರ, ಘಂಟೆ, ಮೇಲ್ಮುಖ ತ್ರಿಶೂಲ, ಅದರ ಕೆಳಭಾಗದಿಂದ ಮಹಿಷನನ್ನು ಚುಚ್ಚುತ್ತಿರುವುದು. ಎಡಗಾಲನ್ನು ಮಹಿಷನ ಮೇಲಿಟ್ಟು ಬಲವಾಗಿ ಒತ್ತಿದ ರಭಸಕ್ಕೆ ಮಹಿಷನು ತತ್ತರಿಸಿ ಬಿಡಿಸಿಕೊಳ್ಳಲು ಹವಣಿಸಿ ಆರ್ತನಾಗಿ ದೇವಿಯತ್ತ ನೋಡುತ್ತಿದ್ದಾನೆ. ಕಿರೀಟಮುಕುಟ, ಶಿರಚ್ಚಕ್ರ, ದಿವ್ಯಾಭರಣಗಳು, ದೊಡ್ಡ ಕಡಗಗಳು, ಸ್ತನಹಾರಗಳು ಈ ಶಿಲ್ಪದಲ್ಲಿ ವಿಶೇಷವಾಗಿವೆ. ಸಿಂಹವು ರೋಷದಿಂದ ಮಹಿಷನನ್ನು ನೋಡುತ್ತಿದೆ. ಈ ವರ್ಣನೆಯೂ ಪೂರ್ವಕರ್ಣಾಗಮಕ್ಕೆ ಅನುಗುಣವಾಗಿದೆ.









ಶಿಲ್ಪ – ೧೭, ಮಹಿಷಾಸುರಮರ್ಧಿನಿ
ಕಾಲ: ೭ನೇ ಶತಮಾನ, ಬಾದಾಮಿ ಚಾಲುಕ್ಯರ ಕಾಲ
ಸ್ಥಳ: ಐಹೊಳೆಯ ದುರ್ಗಾದೇವಾಲಯದ ಕೋಷ್ಟಕದ ಶಿಲ್ಪ.

ಶಿಲ್ಪ – ೧೮, ಮಹಿಷಾಸುರಮರ್ಧಿನಿ, ಬಾದಾಮಿ ಚಾಲುಕ್ಯರ ಕಾಲ

ಈ ಪಟ್ಟಿಕೆಯಲ್ಲಿ ಮಹಿಷಾಸುರಮರ್ದಿನಿಯು ಮಹಿಷನನ್ನು ತನ್ನ ಎಡಗೈ ಮತ್ತು ಕಾಲಿನಿಂದಲೇ ಬಗ್ಗು ಬಡಿದು ಸಂಹರಿಸುತ್ತಿರುವ ದೃಶ್ಯವಿದೆ. ಷಟ್‌ಭುಜಗಳ ದೇವಿ, ಮೇಲಿನ ಕೈಗಳಲ್ಲಿ ಶಂಖ ಮತ್ತು ಚಕ್ರ, ಬಲ ಒಂದು ಕೈ ತರ್ಜನೀ ಮುದ್ರೆ ಮತ್ತು ಇನ್ನೊಂದು ಕೈಯನ್ನು ಮಹಿಷನ ಮಸ್ತಕದ ಮೇಲೆ ಬಲವಾಗಿ ಒತ್ತಿದ್ದಾಳೆ. ಇನ್ನುಳಿದ ಎರಡು ಕೈಗಳಿಂದ ಶರಣರನ್ನು ಅನುಗ್ರಹಿಸುತ್ತಿದ್ದಾಳೆ. ಜಟಾಮುಕುಟ ಮತ್ತು ಸೊಂಟದ ಕೆಳಗೆ ಕಚ್ಚೆ ವಸ್ತ್ರವನ್ನು ಧರಿಸಿದ್ದಾಳೆ. ಸಿಂಹವು ಮೇಲಿನಿಂದ ದೇವಿಯನ್ನು ನೋಡುತ್ತಿದ್ದರೆ ಇನ್ನೊಂದು ಕಡೆ ಜಿಂಕೆ ಅದೇ ರೀತಿ ನೋಡುತ್ತಿದೆ. ದೇವಿಯ ಗುಣಗಾನ ಮಾಡುತ್ತಿರುವ ಒಬ್ಬ ಯೋಗಿನಿಯು ಈ ಸಂಯೋಜನೆಯಲ್ಲಿ ಕಂಡು ಬರುತ್ತಾಳೆ. ಈ ಸಂಯೋಜನಾ ಶಿಲ್ಪವು ಯಾವ ಆಗಮ ಅಥವಾ ಶಿಲ್ಪಶಾಸ್ತ್ರದ ವಿವರಣೆಯ ಪ್ರಕಾರ ಕಂಡುಬರುವುದಿಲ್ಲ. ಇನ್ನೂ ಈ ಪಟ್ಟಿಕೆಯನ್ನು ಪೂರ್ಣಗೊಳಿಸಿದಂತೆ ಕಾಣುವುದಿಲ್ಲ. ಈ ಶಿಲ್ಪದಲ್ಲೂ ಮಹಿಷಾಸುರನು ಪ್ರಾಣಿರೂಪದಲ್ಲಿಯೇ ಇರುವಂತೆ ಚಿತ್ರಿಸಲಾಗಿದೆ.



ಶಿಲ್ಪ – ೧೮, ಮಹಿಷಾಸುರಮರ್ದಿನಿ
ಕಾಲ – ಎಂಟನೇ ಶತಮಾನ, ಬಾದಾಮಿ ಚಾಲುಕ್ಯರ ಕಾಲ
ಸ್ಥಳ – ಪಟ್ಟದಕಲ್ಲು, ವಿರೂಪಾಕ್ಷ ದೇವಾಲಯದ ಉತ್ತರಭಾಗದ ಭಿತ್ತಿಯಲ್ಲಿರುವ ಪಟ್ಟಿಕೆ.

ಶಿಲ್ಪ – ೧೯, ಮಹಿಷಾಸುರ ಮರ್ಧಿನಿ, ಬಾದಾಮಿ ಚಾಲುಕ್ಯರ ಕಾಲ

ಇದೊಂದು ಅಪರೂಪದ ಮಹಿಷಾಸುರ ಸಂಹಾರ ಮೂರ್ತಿ ಶಿಲ್ಪ ರಚನೆ. ವಿಗ್ರಹಶಾಸ್ತ್ರದ ಎಲ್ಲಾ ಲಕ್ಷಣಗಳನ್ನು ಈ ಶಿಲ್ಪವು ಪ್ರತಿಪಾದಿಸುತ್ತದೆ. ಈ ಮಹಿಷಮರ್ಧಿನಿ ದುರ್ಗೆಯು ಶಾರದಾತಿಲಕತಂತ್ರದ ಮತ್ತು ಶಿಲ್ಪರತ್ನದ ವಿಗ್ರಹ ಲಕ್ಷಣಗಳನ್ನು ಹೊಂದಿರುತ್ತಾಳೆ. ಅಷ್ಟಭುಜಗಳು, ಪ್ರಖರವಾದ ಬೃಹತ್ ಆಕಾರದ ಬಿಲ್ಲು ಬಾಣಗಳು, ಶಂಖಚಕ್ರಗಳು, ಗುರಾಣಿ, ಖಡ್ಗ ಹಾಗೂ ಬೃಹತ್ ಗಾತ್ರದ ತ್ರಿಶೂಲದ ಹಿಂದಿನಿಂದ ಮಹಿಷಾಸುರನ ಕುತ್ತಿಗೆಯನ್ನು ಇರಿಯುತ್ತಿದ್ದಾಳೆ. ಅಲ್ಲದೇ ಬಲವಾದ ಖಡ್ಗದಿಂದಲೂ ಬರ್ಬರವಾಗಿ ಅಸುರನನ್ನು ಘಾಸಿಗೊಳಿಸಿದ್ದಾಳೆ. ದೊಡ್ಡದಾದ ಕಿರೀಟಮುಕುಟ, ಶಿರಶ್ಚಕ್ರ, ಕಂಠಿ, ತೋಳಬಂಧಿ ಕಡಗಗಳಿಂದ ಶೋಭಿತಳು, ಯಜ್ಞೋಪವೀತವು ಅವಳ ವಕ್ಷ ಮತ್ತು ಕಟೀಪ್ರದೇಶಕ್ಕೆ ಸಹಜವಾಗಿ ಪ್ರವಹಿಸಿದೆ. ಕೈಗಳು, ಆಯುಧಗಳು ಮತ್ತು ಕತ್ತು ಮುಖಗಳನ್ನು ಸಂಯೋಜಿಸಿರುವ ವೈಖರಿಯು ಈ ಶಿಲ್ಪಕ್ಕೆ ವಿಶೇಷ ಭಂಗಿಯನ್ನಿತ್ತಿದೆ. ಚಾಲುಕ್ಯರ ಕಾಲದ ಶಿಲ್ಪಗಳಲ್ಲಿ ಮೊದಲಬಾರಿಗೆ ಈ ವಿಗ್ರಹ ರಚನೆಯಲ್ಲಿ ಮಹಿಷಾಸುರನನ್ನು ಸಂಪೂರ್ಣ ಮಾನವರೂಪದಲ್ಲಿ ತೋರಲಾಗಿದೆ. ಖಡ್ಗ ಮತ್ತು ತ್ರಿಶೂಲದ ತುದಿಯಿಂದ ದೇಹಕ್ಕೆ ಚುಚ್ಚಿರುವ ರೀತಿ ಅವನನ್ನು ಸಂಪೂರ್ಣವಾಗಿ ನಿಸ್ತೇಜಗೊಳಿಸಿದೆ. ಅಸುರನ ತಲೆಯ ಮೇಲಿನ ಕೊಂಬು ಸ್ಪಷ್ಟವಾಗಿದೆ. ಇದು ಬಾದಾಮಿ ಚಾಲುಕ್ಯರ ಕಾಲದ ದುಂಡುಶಿಲ್ಪಗಳಲ್ಲಿ ಮೇರುಕೃತಿಯಾಗಿದೆ. ವಿಗ್ರಹ ಲಕ್ಷಣ ರಚನೆಯೊಂದಿಗೆ ಶಿಲ್ಪಿಯು ಕಲಾತ್ಮಕವಾಗಿ ಈ ಶಿಲ್ಪವನ್ನು ರಚಿಸಿದ್ದಾನೆ.



ಶಿಲ್ಪ – ೧೯, ಮಹಿಷಾಸುರಮರ್ಧಿನಿ

ಕಾಲ – ಎಂಟನೇ ಶತಮಾನ, ಬಾದಾಮಿ ಚಾಲುಕ್ಯರ ಕಾಲ.

ಸ್ಥಳ – ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ರಂಗಮಂಟಪದ ಎಡಭಾಗದ ಬಳಿಯ ಚಿಕ್ಕ ಗರ್ಭಗೃಹ.

ಶಿಲ್ಪ – ೨೦, ಮಹಿಷಾಸುರ ಮರ್ಧಿನಿ, ಬಾದಾಮಿ ಚಾಲುಕ್ಯರ ಕಾಲ

ವಿರೂಪಾಕ್ಷದೇವಾಲಯದ (ಶಿಲ್ಪ ಸಂಖ್ಯೆ ೧೮) ಮಹಿಷಾಸುರಮರ್ಧಿನಿಯನ್ನೇ ಈ ಶಿಲ್ಪವು ಅನುಸರಿಸಿದ್ದರೂ ಕೈಗಳಲ್ಲಿ ಹಿಡಿದಿರುವ ಆಯುಧಗಳಲ್ಲಿ ಹಾಗೂ ದೇಹವನ್ನು ತಿರಿಚಿರುವ ರೀತಿಯಲ್ಲಿ ವ್ಯತ್ಯಾಸವನ್ನು ಕಾಣಬಹುದು. ಶಂಖ, ಚಕ್ರ, ಬಿಲ್ಲು, ಬಾಣ, ಖಡ್ಗ, ಘಂಟೆಗಳನ್ನು ಹಿಡಿದು, ಒಂದೆಡೆ ತ್ರಿಶೂಲದ ತುದಿಯಿಂದ ಚುಚ್ಚುತ್ತಿದ್ದು, ಇನ್ನೆರಡು ಕೈಗಳಲ್ಲಿ ದೊಡ್ಡದಾದ ಬಿಲ್ಲು ಮತ್ತು ಬಾಣಪ್ರಯೋಗ ಮಾಡುತ್ತಿರುವ ರೀತಿಯು ಕಲಾತ್ಮಕತೆಯಿಂದ ಕೂಡಿದೆ. ಮಹಿಷನು ಮಾನವ ರೂಪದಲ್ಲಿ ದೇಪಿಯ ದಿವ್ಯಾಸ್ತ್ರಗಳಿಗೆ ತುತ್ತಾಗಿ ತತ್ತರಿಸುತ್ತಿದ್ದರೆ ಸಿಂಹವೂ ಅವನ ಮೇಲೆ ಎರಗುತ್ತಿದೆ. ಒಟ್ಟಿನಲ್ಲಿ ಈ ಎರಡೂ ಶಿಲ್ಪಗಳನ್ನು ರಚಿಸಿರುವ ಶಿಲ್ಪಿಗಳು ಪ್ರತಿಸ್ಪರ್ಧಿಗಳಂತೆ ಈ ಕಲಾಕೃತಿಗಳನ್ನು ಅರ್ಪಿಸಿದ್ದಾರೆ.



ಶಿಲ್ಪ – ೨೦, ಮಹಿಷಾಸುರಮರ್ಧಿನಿ
ಕಾಲ – ಎಂಟನೇ ಶತಮಾನ, ಬಾದಾಮಿ ಚಾಲುಕ್ಯರ ಕಾಲ.
ಸ್ಥಳ – ಪಟ್ಟದಕಲ್ಲಿನ ಪಾಪನಾಥ ದೇವಾಲಯದ ನವರಂಗದೊಳಗಿನ ಒಂದು ಕೋಷ್ಟಕರದಲ್ಲಿರುವ ಶಿಲ್ಪ.

ಶಿಲ್ಪ – ೨೧, ಮಹಿಷಾಸುರಸಂಹಾರಿ, ಬಾದಾಮಿ ಚಾಲುಕ್ಯರ ಕಾಲ

ಚತುರ್ಭುಜೆಯಾದ ದೇವಿಯು ಮೇಲಿನ ಎರಡು ಕೈಗಳಲ್ಲಿ ಘಂಟೆ ಮತ್ತು ಬಾಣವನ್ನು ತೊಡಲು ಸನ್ನದ್ಧಳಾಗಿದ್ದಾಳೆ. ಕೆಳ ಎರಡು ಕೈಗಳಲ್ಲಿ ಅಡ್ಡವಾಗಿ ಹೂಡುತ್ತಿರುವ ಬಿಲ್ಲು ಬಲಕೈಯಲ್ಲಿ ತ್ರಿಶೂಲದ ಕೆಳಗಿನ ಭಾಗದಿಂದ ಮಹಿಷನ ಎದೆಯನ್ನು ಸೀಳುತ್ತಿದ್ದಾಳೆ. ಬಾಣ ದೊಡ್ಡದಾಗಿ ದೇವಿಗೆ ಅರ್ಧಚಂದ್ರನಾಕಾರದಲ್ಲಿ ಶೋಭೆಯನ್ನು ನೀಡಿದೆ. ಕರಂಡಮುಕುಟ, ಕರ್ಣಕುಂಡಲ, ಕಂಠಾಭರಣ ಮತ್ತು ತೋಳುಬಂಧಿಗಳನ್ನು ಧರಿಸಿರುವ ಸುಂದರಾಂಗನೆ. ಬಲಗಾಲನ್ನು ಅಸುರನ ವಕ್ಷಕ್ಕೆ ಬಲವಾಗಿ ಒತ್ತಿ ನಿಂತಿದ್ದಾಳೆ. ಆ ನಿಂತಿರುವ ರಭಸಕ್ಕೆ ಅವಳ ಕಟಿವಸ್ತ್ರ ತೂಗಾಡಿ ಒಂದು ಸುಂದರ ತ್ರಿಭಂಗವಾಗಿದೆ. ಅಸುರನು ಎಮ್ಮೆಯ ರೂಪದಿಂದ ಹೊರಬಂದು ಮಾನವಾಕೃತಿಯಲ್ಲಿ ಉರುಳಿದ್ದಾನೆ. ಅವನ ದೊಡ್ಡ ಕೊಂಬು ನೆಲಕ್ಕೆ ಉಜ್ಜಿದೆ. ಕೈಗಳ ಸಂಖ್ಯೆಯೊಂದನ್ನು ಬಿಟ್ಟರೆ ಉಳಿದೆಲ್ಲಾ ಲಕ್ಷಣಗಳು ಶಾರದಾತಿಲಕತಂತ್ರವನ್ನು ಹೋಲುತ್ತದೆ. ಚಿಕ್ಕ ಶಿಲ್ಪವಾದರೂ ಕಂಡರಿಸಿರುವ ಶೈಲಿ ಕಲಾತತ್ವ ಪೂರಕವಾಗಿದೆ.



ಶಿಲ್ಪ – ೨೧, ಮಹಿಷಾಸುರಸಂಹಾರಿ
ಕಾಲ – ಎಂಟನೆಯ ಶತಮಾನ, ಬಾದಾಮಿ ಚಾಲುಕ್ಯರ ಕಾಲ
ಸ್ಥಳ – ಪಟ್ಟದಕಲ್ಲಿನ ಪಾಪನಾಥ ದೇವಾಲಯದ ಉತ್ತರ ಭಾಗದ ಭಿತ್ತಿಯಲ್ಲಿ ಸಣ್ಣ ಪ್ರಮಾಣದ ಶಿಲ್ಪ.

ಶಿಲ್ಪ – ೨೨, ಮಹಿಷಾಸುರಮರ್ಧಿನಿ–ವಧೆ ಮಾಡುತ್ತಿರುವ ದೃಶ್ಯ, ರಾಷ್ಟ್ರಕೂಟರ ಕಾಲ

ಈ ಶಿಲ್ಪವು ಪಟ್ಟದಕಲ್ಲಿನ ೧೯ನೇ ಶಿಲ್ಪವನ್ನು ಹೆಚ್ಚುಮಟ್ಟಿಗೆ ಹೋಲುತ್ತದೆ. ಇಲ್ಲಿ ದೇವಿಯು ಷಟ್‌ಭುಜೆ ಅಂದರೆ ಆರು ಕೈಗಳನ್ನು ಹೊಂದಿದ್ದಾಳೆ. ತ್ರಿಶೂಲ, ಬಾಣ, ಹೆದೆ ಏರಿಸುತ್ತಿರುವ ಬಿಲ್ಲು, ಶಂಖ, ಚಕ್ರ, ಎತ್ತಿರುವ ಖಡ್ಗ ಇವುಗಳಿಂದ ಮಹಿಷಾಸುರನನ್ನು ಆಕ್ರಮಿಸಿ ಸದೆ ಬಡಿಯುತ್ತಿದ್ದಾಳೆ. ಸುಂದರಾಂಗಿ, ಜಟಾಮುಕುಟ, ಚೂಡಾಮಣಿಯನ್ನು ಶಿರದಲ್ಲಿ ಧರಿಸಿದ್ದಾಳೆ, ಕುಂಡಲಗಳಿಂದ ಅಲಂಕೃತಳು. ಈ ಎಲ್ಲಾ ವರ್ಣನೆಗಳು ಪ್ರಪಂಚಸಾರಸಂಗ್ರಹವನ್ನು ಆಶ್ರಯಿಸಿದೆ. ಮಹಿಷನು ಪ್ರಾಣಿರೂಪದಿಂದ ಹೊರಬರುತ್ತಿದ್ದಾನೆ. ಅವನ ಕುತ್ತಿಗೆಯ ಮೇಲೆ ಬಲವಾಗಿ ಕಾಲನ್ನಿಟ್ಟು ಸಂಹರಿಸುತ್ತಿದ್ದಾಳೆ. ದೇವಿಯ ಗಣಗಳು ಅಟ್ಟಹಾಸ ಮಾಡುತ್ತಿವೆ.



ಶಿಲ್ಪ – ೨೨, ಮಹಿಷಾಸುರಮರ್ಧಿನಿ ವಧೆ ಮಾಡುತ್ತಿರುವ ದೃಶ್ಯ
ಕಾಲ – ೮ನೇ ಶತಮಾನ, ರಾಷ್ಟ್ರಕೂಟರ ಕಾಲ
ಸ್ಥಳ – ಎಲ್ಲೋರ ಕೈಲಾಸ ಗುಹೆಯ ಭಿತ್ತಿ.

ಶಿಲ್ಪ – ೨೩, ಮಹಿಷಾಸುರ ಸಂಹಾರಿ ದುರ್ಗೆ, ರಾಷ್ಟ್ರಕೂಟರ ಕಾಲ

ಇಲ್ಲಿಯೂ ದೇವಿಯು ಆರು ಭುಜಗಳನ್ನು ಹೊಂದಿದ್ದು, ವೀರಾವೇಶದಿಂದ ಮಹಿಷನ ದೊಡ್ಡ ಕೊಂಬನ್ನು ಹಿಡಿದು, ಇನ್ನೊಂದು ಕೈಯಿಂದ ತ್ರಿಶೂಲ ಪ್ರಯೋಗವನ್ನು ರಭಸದಿಂದ ಮಾಡುತ್ತಾ ಅಸುರನನ್ನು ಕೋಪದಿಂದ ನೋಡುತ್ತಿರುವ ರೀತಿಯಿಂದ ಈ ಶಿಲ್ಪವು ಮೇರುಕೃತಿ ಎನಿಸಿಕೊಳ್ಳುವುದು.



ಶಿಲ್ಪ – ೨೩, ಮಹಿಷಾಸುರ ಸಂಹಾರಿ ದುರ್ಗೆ
ಕಾಲ – ೯ನೇ ಶತಮಾನ, ರಾಷ್ಟ್ರಕೂಟರ ಕಾಲ
ಸ್ಥಳ – ಎಲ್ಲೋರ, ಕೈಲಾಸ ಗುಹಾಂತರ ದೇವಾಲಯದ ಬಿತ್ತಿ.

ಶಿಲ್ಪ – ೨೪, ೨೫, ೨೬, ಮಹಿಷಾಸುರಮರ್ಧಿನಿ. ೧೭ನೇ ಶತಮಾನ ನಾಯಕರ ಕಾಲ

ಈ ಮೂರೂ ಶಿಲ್ಪಗಳಲ್ಲಿ ದೇವಿಯು ಅಷ್ಟಭುಜಗಳನ್ನು ಹೊಂದಿದ್ದು ಮಹಿಷನನ್ನು ಸಂಹಾರಮಾಡುತ್ತಿರುವ ಭಂಗಿಯು ಒಂದೇ ರೀತಿಯಲ್ಲಿವೆ. ಎಡಗಾಲನ್ನು ಅಡ್ಡಹಾಕಿ ಮಹಿಷನ ಬೆನ್ನಮೇಲೆ ನೆಟ್ಟು ಅವನನ್ನು ನಿಸ್ತೇಜಗೊಳಿಸಿದ್ದಾಳೆ. ಮಹಿಷನು ಹಿಂದೆ ನೋಡುತ್ತಾ ಗುರಾಣಿಯನ್ನು ಮತ್ತು ಖಡ್ಗವನ್ನು ನೆಲಕ್ಕೆ ಊರಿ ಆಧಾರ ಪಡೆಯುತ್ತಿದ್ದಾನೆ. ನೆಲಕ್ಕೆ ಉರುಳಿರುವ ಅಸುರ ದೇವಿಯನ್ನು ಆರ್ತನಾಗಿ ನೋಡುತ್ತಿರುವ ರೀತಿ ಈ ಶಿಲ್ಪಗಳಲ್ಲಿ ಒಂದೇ ತರವಾಗಿದೆ. ದೇವಿಯ ತ್ರಿಭಂಗರೂಪವು ಮೂರೂ ಶಿಲ್ಪಗಳಲ್ಲಿ ವೈವಿಧ್ಯವಾಗಿದೆ. ಶಿಲ್ಪ ರಚಿಸಿರುವ ಶೈಲಿಯಲ್ಲಿಯೂ ವ್ಯತ್ಯಾಸಗಳಿವೆ. ೨೪ನೇ ಶಿಲ್ಪವು ಹೆಚ್ಚು ಕಲಾತ್ಮಕವಾಗಿ ಮೂಡಿಬಂದಿದೆ. ಬಲಭಾಗದ ಕೈಗಳಲ್ಲಿ ತ್ರಿಶೂಲ, ಢಮರು, ಖಡ್ಗ ಮತ್ತು ಮುಕ್ತಾಫಲವನ್ನು ಹಿಡಿದಿದ್ದರೆ, ಎಡಭಾಗದ ಕೈಗಳಲ್ಲಿ ಅಲಪಲ್ಲಿವ (ಅದ್ಭುತಹಸ್ತ), ಗುರಾಣಿ, ಘಂಟೆ ಮತ್ತು ಪಾನ ಪಾತ್ರೆಯನ್ನು ಹಿಡಿದಿದ್ದಾಳೆ. ಕಿರೀಟವು ಜ್ವಾಲರೂಪದಲ್ಲಿದ್ದು ಕಣ್ಣುಗಳು ಮುಖ ಉಗ್ರವಾಗಿದೆ. ಕುಚವಸ್ತ್ರ, ವೈಜಯಂತೀಹಾರ, ಕಚ್ಚೆ, ಹಾರುತ್ತಿರುವ, ತೂಗಾಡುತ್ತಿರುವ ಉತ್ತರೀಯ ದೇವಿಯ ವೇಗವನ್ನು ಸಂಹಾರ ಮಾಡುತ್ತಿರುವ ರಭಸವನ್ನೂ ಸೂಚಿಸುತ್ತಿದೆ. ಹಲವು ವಿಗ್ರಹ ಲಕ್ಷಣಗಳು ಶಾರದಾತಿಲಕತಂತ್ರವನ್ನೂ ಮತ್ತೆ ಕೆಲವು ಶಿಲ್ಪರತ್ನದ ಲಕ್ಷಣಗಳನ್ನು ಹೋಲುತ್ತವೆ.

೨೫ನೇ ಶಿಲ್ಪದ ಕೈಯಲ್ಲಿ ಬೇರೆ ರೀತಿಯ ವಿನ್ಯಾಸವಿದೆ. ಬಲಭಾಗದ ಕೈಗಳಲ್ಲಿ ಮೇಲೆ ಎತ್ತಿದ ಖಡ್ಗ, ಚಕ್ರ, ತ್ರಿಶೂಲ ಮತ್ತು ಅಭಯ ಮುದ್ರೆ, ಎಡಭಾಗದ ಕೈಗಳಲ್ಲಿ ಚೌಕಾಕಾರದ ಗುರಾಣಿ, ಶಂಖ, ಮಹಿಷನಕೊಂಬು ಮತ್ತು ವರದ ಮುದ್ರೆಗಳಿವೆ. ದೇವಿಯ ವೇಷಭೂಷಣಗಳು ಹೆಚ್ಚು ಅಲಂಕೃತವಾಗಿವೆ. ತಲೆಗೆ ವಿಷ್ಣುವಿನಂತೆ ಉದ್ದವಾದ ಕಿರೀಟವನ್ನೂ ಧರಿಸಿದ್ದಾಳೆ. ಸಿಂಹವು ದೇವಿಯ ತೊಡೆಗಳ ಮಧ್ಯದಿಂದ ಹೊರಬಂದು ಮಹಿಷಾಸುರನನ್ನು ತನ್ನ ಪಂಜದಿಂದ ಹೊಡೆಯುತ್ತಿದೆ. ದೇವಿಯು ಮಹಿಷಾಸುರ ಸಂಹಾರಿಯಾಗಿಯೂ ತನ್ನ ಭಕ್ತರನ್ನು, ಆಶ್ರಿತರನ್ನು ಪೊರೆಯಲು ದರ್ಶನ ನೀಡಿರುವಂತಿದೆ. ಭುಜಗಳ ಸಂಖ್ಯೆಯನ್ನು ಬಿಟ್ಟರೆ ಉಳಿದ ವರ್ಣನೆಗಳು ಭವಿಷ್ಯತ್‌ಪುರಾಣ (೧೮ ಕೈಗಳು) ಮತ್ತು ಶಿಲ್ಪರತ್ನದ ಕೆಲವು ಲಕ್ಷಣಗಳನ್ನು ಈ ಶಿಲ್ಪದಲ್ಲಿ ಅಳವಡಿಸಲಾಗಿದೆ. ೨೬ನೇ ಸಂಖ್ಯೆ ಶಿಲ್ಪವೂ ಹೆಚ್ಚಾಗಿ ೨೫ನೇ ಶಿಲ್ಪವನ್ನೇ ಹೋಲುತ್ತದೆ. ಎಡಗೈಯಲ್ಲಿ ಘಂಟೆಯ ಬದಲು ಅಸುರನ ಕೋಡನ್ನು ಹಿಡಿದು ಎಳೆಯಲಾಗುತ್ತಿದೆ. ಇನ್ನೊಬ್ಬ ಅಸುರನು ಹಿರಿದ ಖಡ್ಗ ಮತ್ತು ಗುರಾಣಿಗಳನ್ನು ಹಿಡಿದು ಧಾಳಿ ಮಾಡುತ್ತಿದ್ದಾನೆ. ದೇವಿಯ ಮುಖವು ರೌದ್ರತೆಯಿಂದ ಕೂಡಿದ್ದು ಜಟಾಮುಕುಟ ಧರಿಸಲಾಗಿದೆ.



ಶಿಲ್ಪ - ೨೪



ಶಿಲ್ಪ - ೨೫




ಶಿಲ್ಪ –೨೬

ಶಿಲ್ಪ – ೨೪, ೨೫, ೨೬, ಮಹಿಷಾಸುರಮರ್ಧಿನಿ.
ಕಾಲ: ೧೭ನೇ ಶತಮಾನ ನಾಯಕರ ಕಾಲ
ಸ್ಥಳ: ತಂಜಾವೂರಿನ ಬೃಹದೇಶ್ವರ ದೇವಾಲಯದ ಪ್ರಾಂಗಣದಲ್ಲಿರುವ ಸುಬ್ರಮಣ್ಯ ದೇವಾಲಯದ ಜಾಲಾಂಧ್ರದ ಕೆಳಭಾಗದ ಪಟ್ಟಿಕೆಗಳಲ್ಲಿ ಈ ಮೂರು ಶಿಲ್ಪಗಳನ್ನು ರಚಿಸಲಾಗಿದೆ.

ಶಿಲ್ಪ – ೨೭, ಮಹಿಷಾಸುರಮರ್ಧಿನಿ. ಚೋಳರ ಕಾಲ.

ಕೋಷ್ಟಕದ ಅಳತೆಗೆ ತಕ್ಕಂತೆ ಶಿಲ್ಪಿಯು ಈ ದೊಡ್ಡ ಶಿಲ್ಪವನ್ನು ಸಂಕುಚಿತಗೊಳಿಸಿ ಸೃಜಿಸಿದ್ದಾನೆ. ಅಷ್ಟಭುಜಗಳಲ್ಲಿ ವಿವಿಧ ಆಯುಧಗಳು, ಆದರೆ ಉದ್ದವಾದ ತ್ರಿಶೂಲವು ದೇವಿಯ ದೇಹದ ಅಳತೆಗೂ ಅಡ್ಡವಾಗಿ ಬಂದು ಕೆಳಗೆ ಕುಳಿತ ಅಸುರನನ್ನು ಸೀಳುತ್ತಿದೆ. ಇಲ್ಲಿಯೂ ತಂಜಾವೂರಿನ ಶಿಲ್ಪಗಳ ರೂಪದಲ್ಲಿ ದೇವಿಯನ್ನು ಕಂಡರಿಸಲಾಗಿದೆ. ಕಿರೀಟಮುಕುಟ, ದೊಡ್ಡ ಪದಕ ಹಾರಗಳು ವಿಶೇಷ ಗಮನ ಸೆಳೆಯುತ್ತವೆ.



ಶಿಲ್ಪ – ೨೭, ಮಹಿಷಾಸುರಮರ್ಧಿನಿ
ಕಾಲ – ೧೧ನೇ ಶತಮಾನ, ಚೋಳರ ಕಾಲ
ಸ್ಥಳ – ಗಂಗೈಕೊಂಡ ಚೋಳಪುರಂನ ಉತ್ತರಭಾಗದ ಭಿತ್ತಿಯ ಕೋಷ್ಟಕದಲ್ಲಿರುವ ಶಿಲ್ಪ

ಹೊಯ್ಸಳ ಶೈಲಿಯ ಮಹಿಷಾಸುರ ಮರ್ಧಿನಿಯ ಶಿಲ್ಪಗಳು –

೨೮, ೨೯, ೩೦, ೩೧, ೩೨, ೩೩, ೩೪, ೩೫

ಹೊಯ್ಸಳರ ಕಾಲದ ದೇವಾಲಯಗಳಲ್ಲಿ ದೇವಿಯ ವಿಶೇಷ ರೂಪಗಳನ್ನು ಭಿತ್ತಿಯಲ್ಲಿ ಹೊರ ಆವರಣದಲ್ಲಿ ಕಂಡರಿಸಲಾಗಿರುತ್ತದೆ. ಅವುಗಳಲ್ಲಿ ಮಹಿಷಾಸುರಮರ್ದಿನಿಯ ಶಿಲ್ಪಗಳು ವಿಶಿಷ್ಟವಾಗಿವೆ. ಕೆಲವು ಹೊಯ್ಸಳ ತ್ರಿಕೂಟ ದೇವಾಲಯಗಳಲ್ಲಿ ಒಳಗಿನ ನವರಂಗದ ಕೋಷ್ಟಕಗಳನ್ನು ರಚಿಸಿ ಒಳಗಡೆ ಈ ವಿನಾಯಕ, ಸರಸ್ವತಿ ಮತ್ತು ಮಹಿಷಾಸುರಮರ್ಧಿನಿ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಲಾಗುತ್ತಿತ್ತು. ಬೇಲೂರು, ಹಳೇಬೀಡು, ಸೋಮನಾಥಪುರ, ಹೊಸಹೊಳಲು, ಮೊಸಳೆ, ಜಾವಗಲ್, ಬೆಳವಾಡಿ, ನಾಗಲಾಪುರ, ನುಗ್ಗೇಹಳ್ಳಿ ಮುಂತಾದ ಹೊಯ್ಸಳ ಶೈಲಿಯ ದೇವಾಲಯಗಳಿಂದ ಈ ಕೆಳಗೆ ಶಿಲ್ಪಗಳನ್ನು ಆರಿಸಿಕೊಳ್ಳಲಾಗಿದೆ. ಇವುಗಳಲ್ಲಿ ಒಂದು ಶಿಲ್ಪವು ಲಂಡನ್ನಿನ ವಿಕ್ಟೋರಿಯಾ ಆಂಡ್ ಆಲ್ಬರ್ಟ್ ಮ್ಯೂಸಿಯಂ ಸಂಗ್ರಹದಲ್ಲಿದೆ. ವಿಗ್ರಹಶಾಸ್ತ್ರದ ಲಕ್ಷಣಗಳನ್ನು ಗಮನಿಸಿದಾಗ ಹೆಚ್ಚಿನ ಹೊಯ್ಸಳ ಶೈಲಿಯ ಶಿಲ್ಪಗಳು ಅಷ್ಟಭುಜಗಳನ್ನು ಹೊಂದಿದ್ದು ಎಡಗೈ ಅಥವಾ ಬಲಗೈಯಲ್ಲಿ ತ್ರಿಶೂಲವನ್ನು ಅಡ್ಡವಾಗಿ ಹಿಡಿದು ಮಹಿಷಾಸುರನ ಎದೆಯನ್ನು ಸೀಳುತ್ತಿದ್ದು, ದೇವಿಯು ಎಡ ಅಥವಾ ಬಲಪಾದವನ್ನು ಮಹಿಷನ ಪ್ರಾಣಿಯ ರೂಪದ ಬೆನ್ನಿನ ಮೇಲೆ ಬಲವಾಗಿ ಊರಿದಾಗ ಮಹಿಷನು ಮನುಷ್ಯರೂಪದಿಂದ ಹೊರಬರುತ್ತಿರುವಂತೆ ಚಿತ್ರಿಸಲಾಗುತ್ತದೆ. ದೇವಿಯು ಕರಂಡ**ಮುಕುಟ** ಧರಿಸಿ ಸರ್ವಾಭರಣ ಭೂಷಿತೆಯಾಗಿರುವಂತೆ ಕಂಡರಿಸಲಾಗಿರುತ್ತದೆ. ಇಡೀ ಸಂಯೋಜನೆಯೇ ಕುಶಲತೆಯಿಂದ ಮನೋಹರವಾಗಿ ಮತ್ತು ಮಾರ್ಮಿಕವಾಗಿ ಕೆತ್ತನೆಯ ಕೆಲಸಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿರುತ್ತದೆ. ದೇವಿಯ ಆಭರಣಗಳು ವಿಶೇಷವಾಗಿ ರಚಿತಗೊಂಡಿರುತ್ತವೆ.

ಹೊಯ್ಸಳ ಶಿಲ್ಪಗಳ ವಿಗ್ರಹಲಕ್ಷಣಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಬಹುಮಟ್ಟಿಗೆ ರೂಪಮಂಡನದಲ್ಲಿ ನೀಡಿರುವ ಅನೇಕ ವಿವರಗಳಿಗೆ ಹತ್ತಿರವೆನಿಸುತ್ತವೆ. ಈ ಶಿಲ್ಪ ಗ್ರಂಥದಲ್ಲಿ ದೇವಿಯನ್ನು ಕಾತ್ಯಾಯಿನಿ ಎಂದೂ ಹತ್ತು ಕೈಗಳನ್ನು ಹೊಂದಿರುವಳೆಂದೂ, ತ್ರಿಶೂಲ, ಖಡ್ಗ, ಚಕ್ರ, ಬಾಣ, ಶಕ್ತಿ (ಬಲಗಡೆ) ಖೇಟಕ, ಧನಸ್ಸು, ಪಾಶ, ಅಂಕುಶ ಮತ್ತು ಘಂಟೆ (ಎಡಗಡೆ) ಇವುಗಳನ್ನು ತೊಟ್ಟಿದ್ದು, ದೇವತೆಯರನ್ನು ಸುಪ್ರೀತಗೊಳಿಸುವವಳು, ತ್ರಿಭಂಗಿಯಲ್ಲಿ ನಿಂತು ಮಹಿಷಾಸುರನನ್ನು ಸಂಹರಿಸುತ್ತಿರುವವಳು, ಶಿರಚ್ಛೇದವಾಗಿರುವ ಮಹಿಷ ನಿಸ್ತೇಜವಾಗಿ ಅಲ್ಲಿಂದ ಅಸುರನ ಮಾನವಾಕೃತಿ ಹೊರ ಬೀಳುತ್ತಿದೆ, ಅವನು ಖಡ್ಗ ಗುರಾಣಿಗಳನ್ನು ಹಿಡಿದಿದ್ದಾನೆ, ಎದೆಯ ಮೇಲೆ ತ್ರಿಶೂಲದಿಂದ

ಇರಿಯುತ್ತಿದ್ದಾಳೆ, ರಕ್ತ ಉಕ್ಕುತ್ತಿದೆ, ಬಲಗಾಲು ಸಿಂಹದ ಮೇಲೆ, ಎಡಗಾಲು ಮಹಿಷಾಸುರನ ಮೇಲೆ ನೆಟ್ಟಿದೆ. ಇಲ್ಲಿ ಉದಾಹರಣೆಗೆ ನೀಡಿರುವ ಹೊಯ್ಸಳ ಶಿಲ್ಪಗಳು ಎಂಟುಕೈಗಳನ್ನೂ, ಕೈಗಳಲ್ಲಿನ ಆಯುಧಗಳು ಬಲ ಮತ್ತು ಎಡಕೈಗಳಲ್ಲಿ ವ್ಯತ್ಯಯವಾಗಿರುತ್ತದೆ. ಹಲವು ಶಿಲ್ಪಗಳಲ್ಲಿ ಮಾತ್ರ ಸಿಂಹವು ಗೋಚರಿಸುತ್ತದೆ. ಇಲ್ಲವೇ ದೇವಿಯು ಸಮಪಾದ ಮತ್ತು ಮಹಿಷನ ಮೇಲೆ ನೆಟ್ಟಿರುವ ಪಾದದ ರೀತಿಯಿಂದ ತ್ರಿಭಂಗದಲ್ಲಿ ನಿಂತಿರುತ್ತಾಳೆ. ಉಳಿದೆಲ್ಲಾ ಲಕ್ಷಣಗಳು ರೂಪಮಂಡನದಂತೆಯೇ ಕಂಡುಬರುತ್ತದೆ.



ಶಿಲ್ಪ – ೨೮, ಸ್ಥಳ: ಜಾವುಗಲ್



ಶಿಲ್ಪ - ೨೯



ಶಿಲ್ಪ – ೩೦, ಸ್ಥಳ: ಬೇಲೂರು



ಶಿಲ್ಪ – ೩೧, ಸ್ಥಳ: ಹಾರನಹಳ್ಳಿ



ಶಿಲ್ಪ – ೩೨, ಸ್ಥಳ: ಹೊಸಹೊಳಲು



ಶಿಲ್ಪ - ೩೩



ಶಿಲ್ಪ – ೩೪, ಸ್ಥಳ : ಹಳೇಬೀಡು

ಹೊಯ್ಸಳ ಶೈಲಿ ಶಿಲ್ಪ – ೨೫, ಮಹಿಷಾಸುರಮರ್ಧಿನಿ

ಈ ಶಿಲ್ಪವು ಆವರಣ ಶಿಲ್ಪವಾಗಿರದೆ ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಿದ ಮೂರ್ತಿಶಿಲ್ಪ. ರೂಪಮಂಡನದಲ್ಲಿ ನೀಡಿರುವ ಸಂಪೂರ್ಣ ವಿವರಣೆಯನ್ನು ಈ ಕಾತ್ಯಾಯಿನಿ ಶಿಲ್ಪವು ಪೂರ್ಣವಾಗಿ ಅನುಮೋದಿಸುತ್ತದೆ. ಹತ್ತು ಕೈಗಳು, ಅಲ್ಲಿ ತಿಳಿಸಿರುವ ಎಲ್ಲಾ ಆಯುಧಗಳು ಮತ್ತು ಮಹಿಷನ ಸಂಹಾರ ಚಿತ್ರಣವನ್ನು ಇಲ್ಲಿ ನಿಖರವಾಗಿ ಪ್ರತಿಪಾದಿಸಲಾಗಿದೆ.



ಶಿಲ್ಪ – ೩೫, ಮಹಿಷಾಸುರಮರ್ಧಿನಿ
ಕಾಲ – ೧೨ನೇ ಶತಮಾನ
ಸ್ಥಳ – ಬ್ರಿಟಿಷ್ ಮ್ಯೂಸಿಯಂ, ಲಂಡನ್

ಶಿಲ್ಪ – ೩೬, ಮಹಿಷಾಸುರಮರ್ಧಿನಿ, ೧೨ನೇ ಶತಮಾನ, ಕಳಿಂಗ ಶೈಲಿ

ದೇವಿಯು ಅಷ್ಟಭುಜೆಯಾಗಿ, ತುಂಬು ಯೌವನೆ, ಪ್ರಪಂಚಸಾರದ ಹಲವು ಲಕ್ಷಣಗಳನ್ನು ಈ ಮೂರ್ತಿಶಿಲ್ಪವು ಪ್ರತಿಪಾದಿಸುತ್ತದೆ. ಕುಂಡಲ, ಜಟಾಮುಕುಟ, ಮಣಿ, ಹಾರ ಕಂಕಣಗಳು ಶೋಭಾಯ ಮಾನವಾಗಿವೆ. ಬೃಹತ್ ಗಾತ್ರದ ಶಿಲ್ಪ ಇದಾಗಿದೆ.



ಶಿಲ್ಪ – ೩೬, ಮಹಿಷಾಸುರಮರ್ಧಿನಿ
ಕಾಲ – ೧೨ನೇ ಶತಮಾನ, ಕಳಿಂಗ ಶೈಲಿ, ಒರಿಸ್ಸಾ
ಸ್ಥಳ – ಕೌಂಟಿ ಮ್ಯೂಸಿಯಂ, ಲಾಸ್ ಎಂಜಲೀಸ್, ಅಮೆರಿಕ

ಚಿತ್ರ – ೩೭, ಮಹಿಷಾಸುರಮರ್ಧಿನಿ ದುರ್ಗೆ, ಕಾಂಗ್ರಾಶೈಲಿ

ಸಿಂಹವಾಹಿನಿಯಾಗಿ ಅಸುರನ ಕತ್ತನ್ನು ಹಿರಿದ ಖಡ್ಗದಿಂದ ಕಡಿದಿದ್ದಾಳೆ, ಮಹಿಷನ ದೇಹದಿಂದ ಹೊರಬರುತ್ತಿರುವ ಅಸುರ ತನ್ನ ಖಡ್ಗ, ಗುರಾಣಿಗಳಿಂದ ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆ. ಸಿಂಹವು ಬಲವಾಗಿ ಮಹಿಷನ ಮೇಲೆ ಎರಗಿದೆ, ತನ್ನ ಬಾಲವನ್ನು ಆಕಾಶದೆತ್ತರಕ್ಕೆ ಬೀಸಿದೆ. ದೇವಿಯ ಕೈಗಳಲ್ಲಿ ಶಂಖ, ಖಡ್ಗ, ಗುರಾಣಿ, ಪಾಶ (ಬಲ) ತ್ರಿಶೂಲ, ಗಧೆ, ಧನಸ್ಸು ಪಾಶ(ಎಡ)ಗಳನ್ನು ಹಿಡಿದು ಪ್ರಯೋಗಿಸುತ್ತಿದ್ದಾಳೆ. ಇದೂ ಸಹರೂಪಮಂಡನ ಮತ್ತು ಪ್ರಪಂಚಸಾರಕ್ಕೆ ಸಮೀಪವಾದ ಲಕ್ಷಣಗಳನ್ನು ಹೊಂದಿದೆ. ಸುಂದರವರ್ಣಗಳಿಂದ, ದೇವಿಯು ಶೋಭಿಸಿದ್ದಾಳೆ.



ಚಿತ್ರ – ೩೭, ಮಹಿಷಾಸುರಮರ್ಧಿನಿ ದುರ್ಗೆ
ಕಾಲ – ೧೮ನೇ ಶತಮಾನ, ದೇವಿ ಮಹಾತ್ಮೆ ಸಚಿತ್ರ ಗ್ರಂಥದ ಪುಟ, ಕಾಂಗ್ರಾಶೈಲಿ.

ಶಿಲ್ಪ – ೩೮, ೩೯, ೪೦, ೪೧, ೪೨, ಮಹಿಷಾಸುರಮರ್ಧಿನಿ, ವಿಜಯನಗರ ಶೈಲಿ

ವಿಜಯನಗರ ಶೈಲಿಗೆ ಸೇರಿದ ಶಿಲ್ಪಗಳು ಹೆಚ್ಚು ವೈವಿಧ್ಯತೆಯಿಂದ ಕೂಡಿದೆ. ಜಾನಪದ ಸಂಸ್ಕೃತಿಯ, ಶಿಷ್ಟಸಂಸ್ಕೃತಿಗಳ ಪ್ರಭಾವ ಈ ಶಿಲ್ಪಗಳಲ್ಲಿ ಕಂಡುಬರುತ್ತವೆ. ಹೆಚ್ಚಿನ ಮಟ್ಟಿಗೆ ಆರು ಕೈ ಅಥವಾ ನಾಲ್ಕು ಕೈಗಳನ್ನು ಈ ಶಿಲ್ಪಗಳು ಹೊಂದಿವೆ. ಹೆಚ್ಚಿನಮಟ್ಟಿಗೆ ಒಂದರಿಂದ ೩ ಅಡಿಗಳಷ್ಟು ಅಳತೆಯೊಳಗೇ ಸೃಜಿಸಲ್ಪಟ್ಟಿವೆ. ಮಹಿಷನನ್ನು ಪೂರ್ಣಪ್ರಮಾಣದ ಪ್ರಾಣಿಯಾಗಿ, ಅರ್ಧಮಾನವ, ದೇಹ ಮಾನವ ತಲೆ ಮಾತ್ರ ಮಹಿಷರೂಪ, ಮುಂತಾಗಿ ಚಿತ್ರಿಸಲಾಗಿದೆ. ದೇವಿಯು ವಿವಿಧ ಆಯುಧಗಳನ್ನು ತೊಟ್ಟು ಸಂಹಾರ ಮಾಡುತ್ತಿದ್ದಾಳೆ. ಈ ಎಲ್ಲಾ ಶಿಲ್ಪಗಳು ವಿಠ್ಠಲಸ್ವಾಮಿ, ಹಜಾರ ರಾಮ, ಪೆನುಗೊಂಡ, ಅಚ್ಚುತರಾಯ ದೇವಾಲಯದ ಪ್ರಾಂಗಣದಲ್ಲಿ ಕಂಡುಬರುತ್ತವೆ. ವಿರೂಪಾಕ್ಷ ದೇವಾಲಯದ ಆವರಣದ ಚಿಕ್ಕಮಂಟಪದಲ್ಲಿ ಮಹಿಷಮರ್ಧಿನಿಯ ೩ ಅಡಿ ಎತ್ತರದ ವಿಗ್ರಹಕ್ಕೆ ಸೀರೆ ಉಡಿಸಿ ಪೂಜೆ ಸಲ್ಲಿಸುತ್ತಾರೆ. ಈ ಶಿಲ್ಪಗಳು ಯಾವುದೇ ಒಂದು ಗ್ರಂಥದ ಲಕ್ಷಣಗಳನ್ನೇ ಆಧರಿಸದೇ ಅಂದು ಪ್ರಚಲಿತವಿದ್ದ ಶಿಲ್ಪ ಲಕ್ಷಣಗಳನ್ನು ಮತ್ತು ಅವರವರ ಗುರು ಪದ್ಧತಿಗಳನ್ನು ಆಧರಿಸಿ ಶಿಲ್ಪಗಳನ್ನು ರಚಿಸಿದಂತೆ ಕಾಣುತ್ತವೆ. ಎಲ್ಲೆಡೆಯಲ್ಲಿಯೂ ಸಂಹಾರ ಕ್ರಮದಲ್ಲಿ ತ್ರಿಶೂಲವನ್ನೇ ಬಲವಾಗಿ ಪ್ರಯೋಗಿಸಲಾಗಿದೆ.



ಶಿಲ್ಪ – ೩೮, ವಿಜಯ ನಗರ ಶೈಲಿ
ಸ್ಥಳ – ಪೆನುಗೊಂಡ, ರಾಮಚಂದ್ರ ದೇವಾಲಯ



ಶಿಲ್ಪ – ೩೯, ವಿಠಲ – ಹಂಪಿ ದೇವಾಲಯ, ವಿಜಯನಗರ ಶೈಲಿ



ಶಿಲ್ಪ – ೪೦, ಹಜಾರರಾಮ ದೇವಾಲಯ, ಹಂಪಿ, ವಿಜಯನಗರ ಶೈಲಿ



ಶಿಲ್ಪ – ೪೧, ಅಚ್ಯುತರಾಯ ದೇವಾಲಯ ಪ್ರಾಂಗಣ, ಹಂಪಿ ವಿಜಯನಗರ ಶೈಲಿ



ಶಿಲ್ಪ – ೪೨, ವಿರುಪಾಕ್ಷ ದೇವಾಲಯ, ಹಂಪಿ ವಿಜಯನಗರ ಶೈಲಿ

ಶಿಲ್ಪ – ೪೩, ೪೪, ೪೫, ೪೬, ೪೭, ಮಹಿಷಾಸುರ ಮರ್ಧಿನಿ

ಕಾಲ: ೧೬ ರಿಂದ ೧೯ನೇ ಶತಮಾನ, ಮಧುರೈ ನಾಯಕರ ಶೈಲಿ.

ನಾಲ್ಕೂ ಶಿಲ್ಪಗಳು ತಮಿಳುನಾಡಿನ ಮಧುರೈನಾಯಕ ಶೈಲಿಗೆ ಸೇರಿದ ಶಿಲ್ಪಗಳಾಗಿವೆ. ಇವೆಲ್ಲವೂ ಆವರಣ ಶಿಲ್ಪಗಳು, ಇದರಲ್ಲಿ ಕೊನೆಯದು ಗೋಪುರದಲ್ಲಿದೆ. ಸಾಮಾನ್ಯವಾಗಿ ಎಲ್ಲಾ ತಮಿಳುನಾಡಿನ, ವಿಜಯನಗರ ಕಾಲದ ಗೋಪುರಗಳಲ್ಲಿ ಬಲಭಾಗದಲ್ಲಿ ಮಹಿಷಾಸುರಮರ್ಧಿನಿ ಶಿಲ್ಪವಿರುತ್ತದೆ. ಹೆಚ್ಚಾಗಿ ಚೋಳರ ಕಾಲದ ಶಿಲ್ಪಲಕ್ಷಣಗಳನ್ನೇ ಇಲ್ಲೂ ಅನುಸರಿಸಲಾಗಿದೆ. ದೇವಿಯ ರೂಪವನ್ನು ರಸಭರಿತವಾಗಿ ಸೃಜಿಸಲಾಗಿದೆ. ಪೂರ್ವಕರ್ಣಾಗಮದ ಹಲವು ಲಕ್ಷಣಗಳನ್ನೂ ಇಲ್ಲಿ ಗುರುತಿಸಬಹುದು.

ನಾಲ್ಕನೆಯ ಗುಂಪಿಗೆ ಸೇರಿದ ಸ್ಥಾನಕ ಮೂರ್ತಿಗಳು ದೇವಿಯು ಮಹಿಷಾಸುರನನ್ನು ಸಂಹರಿಸಿ ಆ ಜಯದ ಪ್ರತೀಕವಾಗಿ ಅವನ ಕಡಿದ ತಲೆಯ ಮೇಲೆ ನಿಂತು ಶಂಖ, ಚಕ್ರ, ಅಭಯ ಮತ್ತು ಗಧಾ ಹಸ್ತ- ರೂಢಳಾಗಿ ವಿಷ್ಣುವಿನ ರೂಪದ ತನ್ನ ಅವತಾರವನ್ನು ದೇವತೆಗಳಿಗೆ ಮತ್ತು ತನ್ನ ಭಕ್ತರಿಗೆ ದರ್ಶನ ನೀಡುವ ರೀತಿಯಲ್ಲಿ ದೇವಿಯನ್ನು ಅನೇಕ ಕಡೆಗಳಲ್ಲಿ ಅದರಲ್ಲೂ ತಮಿಳುನಾಡಿನ ಅನೇಕ ದೇವಾಲಯ ಕೋಷ್ಟಕಗಳಲ್ಲಿ ಪೂಜಿಸಲಾಗುತ್ತದೆ.



ಶಿಲ್ಪ – ೪೩, ಮೀನಾಕ್ಷಿ ದೇವಾಲಯ, ಮಧುರೈ



ಶಿಲ್ಪ – ೪೪, ಮೀನಾಕ್ಷಿ ದೇವಾಲಯ ಮಂಟಪ, ಮಧುರೈ




ಶಿಲ್ಪ – ೪೫, ಮೀನಾಕ್ಷಿ ದೇವಾಲಯ ಗೋಪುರದ ಭಾಗ, ಮಧುರೈ



ಶಿಲ್ಪ – ೪೬, ಅರುಣಾಚಲೇಶ್ವರ ದೇವಾಲಯ, ತಿರುವಣ್ಣಾಮಲೈ

ಶಿಲ್ಪ – ೪೮, ಮಹಿಷಸಂಹಾರಿ ದುರ್ಗೆ, ಪಲ್ಲವರ ಕಾಲ

ಇಲ್ಲಿ ದೇವಿಯು ಶಂಖ, ಚಕ್ರ, ಅಭಯ ಮತ್ತು ಗಧಾಧಾರಿಯಾಗಿ ಭಕ್ತರಿಗೆ ದರ್ಶನ ನೀಡುತ್ತಿದ್ದಾಳೆ. ಅವಳ ವಾಹನ ಸಿಂಹ, ಜಿಂಕೆ, ಮತ್ತು ಗಣಗಳು ದರ್ಶನ ಭಾಗ್ಯ ಪಡೆದು ಸಂತೃಪ್ತಗೊಂಡಿವೆ.



ಶಿಲ್ಪ – ೪೮, ಮಹಿಷಸಂಹಾರಿ ದುರ್ಗೆ. ಕಾಲ: ಏಳನೇ ಶತಮಾನ, ಪಲ್ಲವರ ಕಾಲ.
ಸ್ಥಳ: ಮಹಿಷಾಸುರ ಮರ್ಧಿನಿ ಗುಹೆ, ಮಹಾಬಲೀಪುರಂ.

ಶಿಲ್ಪ – ಮಹಿಷಮರ್ಧಿನಿ ಸಾಮ್ರಾಜ್ಞೆ, ಪಲ್ಲವರ ಕಾಲ

ಇದು ಒಂದು ಅಪರೂಪದ ಶಿಲ್ಪ. ದೇವಿಯು ಮಹಿಷನನ್ನು ಸಂಹರಿಸಿ ಕಾಲಕೆಳಗೆ ತಲೆಯನ್ನಿಟ್ಟು ಸಿಂಹಾಸನಾರೂಢಳಾಗಿ ಕುಳಿತು ಅಷ್ಟಭುಜೆಯಾಗಿ ದರ್ಶನ ನೀಡುತ್ತಿರುವುದು ಅತಿವಿರಳ. ದೇವಾಲಯದ ಹೊರ ಆವರಣದಲ್ಲಿ ಈ ಶಿಲ್ಪವಿರುವುದು.



ಶಿಲ್ಪ – ೪೯, ಮಹಿಷಮರ್ಧಿನಿ ಸಾಮ್ರಾಜ್ಞೆ,
ಕಾಲ– ಎಂಟನೇ ಶತಮಾನ ಪಲ್ಲವರ ಕಾಲ
ಸ್ಥಳ– ಕೈಲಾಸ ನಾಥ ದೇವಾಲಯ, ಕಾಂಚೀಪುರಂ.

ಮೂರ್ತಿಶಿಲ್ಪದ ಎಲ್ಲಾ ಲಕ್ಷಣಗಳನ್ನೂ ತೋರುವ ಈ ಶಿಲ್ಪದಲ್ಲಿ ದೇವಿಯು ಚತುರ್ಭುಜೆಯಾಗಿ ಶಂಖ, ಚಕ್ರ ಅಭಯವರದ ಮೂರ್ತಿಯಾಗಿ ದರ್ಶನ ನೀಡುತ್ತಿದ್ದಾಳೆ. ಸಮಪಾದವನ್ನು ಮಹಿಷನ ಕಡಿದ ಮಸ್ತಕದ ಮೇಲಿರಿಸಿದ್ದಾಳೆ. ಸಾಮ್ರಾಜ್ಞಿಯಂತೆ ಶಿರಚ್ಚಕ್ರ, ಪ್ರಭಾವಳಿ, ಛತ್ರಿಯನ್ನೂ ಇಬ್ಬರು ದ್ವಾರಪಾಲಿಕೆಯರನ್ನೂ ಇಲ್ಲಿ ತೋರಲಾಗಿದೆ. ಈ ಶಿಲ್ಪವನ್ನು ಅಂಶುಬೇಧಾಗಮದ ಲಕ್ಷಣಗಳಿಗೆ ಹೋಲಿಸಬಹುದಾಗಿದೆ. ಇದೇ ವಿಗ್ರಹ ಲಕ್ಷಣಗಳನ್ನು ಅನುಸರಿಸಿ ಮುಂದೆ ಅನೇಕ ಶಿಲ್ಪಗಳನ್ನು ರಚಿಸಿ ದೇವಾಲಯ ಪ್ರಾಂಗಣದಲ್ಲಿ ಪೂಜೆ ಸಲ್ಲಿಸಲಾಗುತ್ತಿದೆ. ೫೩ನೇ ಶಿಲ್ಪದಲ್ಲಿ ಸಾಮಜ್ಞೆ ಸೂಚನೆಗಳಿಲ್ಲ.



ಶಿಲ್ಪ – ೫೦, ಬೃಹದೇಶ್ವರ ದೇವಾಲಯ,

ಸ್ಥಳ : ತಾಂಜಾವೂರು



ಶಿಲ್ಪ – ೫೦ ಮತ್ತು ೫೧, ಮಹಿಷಾಸುರಸಂಹಾರಿ ದುರ್ಗೆ
ಕಾಲ: ೧೧ನೇ ಶತಮಾನದ ಆದಿ, ಚೋಳರ ಕಾಲ.
ಸ್ಥಳ: ತಂಜಾವೂರಿನ ಬೃಹದೇಶ್ವರ ದೇವಾಲಯ.

ಶಿಲ್ಪ – ೫೨, ಮಹಿಷಾಸುರಸಂಹಾರಿ–ದುರ್ಗೆ.

ಇಲ್ಲಿಯೂ ಮೇಲೆ ತಿಳಿಸಿರುವ ಲಕ್ಷಣಗಳೇ ಕಂಡುಬರುತ್ತವೆ. ಸಿಂಹದೊಂದಿಗೆ ದೇವಿಯು ಚತುರ್ಭುಜೆಯಾಗಿ ನಿಂತಿದ್ದಾಳೆ. ಪ್ರಾಯಶಃ ಮಹಿಷನ ಶಿರಭಗ್ನವಾಗಿದೆ.



ಶಿಲ್ಪ – ೫೨, ಮಹಿಷಾಸುರಸಂಹಾರಿ–ದುರ್ಗೆ

ಕಾಲ: ೧೬–೧೭ ನೇ ಶತಮಾನ

ಸ್ಥಳ: ರಾಷ್ಟ್ರೀಯ ಸಂಗ್ರಹಾಲಯ, ನವ ದೆಹಲಿ

ಶಿಲ್ಪ – ೫೩, ದುರ್ಗೆ, ತಿರುಪರಗುಂಡ್ರಂ

ದೇವಾಲಯದ ಒಂದು ಸ್ತಂಭ ಶಿಲ್ಪವಿದಾಗಿದೆ. ಸ್ಥಳೀಯರಿಂದ ದುರ್ಗೆಯೆಂದೇ ಪೂಜೆಗೊಳ್ಳುವ ದೇವಿ ಚತುರ್ಭುಜೆ.



ಶಿಲ್ಪ – ೫೩, ದುರ್ಗೆ

ಕಾಲ: ೧೬ನೇ ಶತಮಾನ, ನಾಯಕ ಶೈಲಿ

ಸ್ಥಳ: ತಿರುಪರಗುಂಡ್ರಂ ತಮಿಳುನಾಡು

ಶಿಲ್ಪ – ೫೩, ದುರ್ಗೆ, ನಾಯಕರ ಶೈಲಿ

ಒಂದು ಪ್ರಭಾವಳಿಯ ಮಧ್ಯದಲ್ಲಿ ಪೂಜಾಸ್ವರೂಪಿಣಿಯಂದದಿ ರಚಿಸಲಾಗಿದೆ.



ಶಿಲ್ಪ – ೫೪, ಮಹಿಷಸಂಹಾರಿ ದುರ್ಗಾ, ಕಾಲ: ೧೬–೧೭ನೇ ಶತಮಾನ ವಿಜಯನಗರ ಶೈಲಿ
ಸ್ಥಳ: ಹಜಾರರಾಮ ದೇವಾಲಯದ ನವರಂಗದ ಕಂಭ, ಹಂಪಿ.

ಶಿಲ್ಪ – ೫೫, ದುರ್ಗಾ

ಷಟ್‌ಭುಜೆಯಾಗಿ ಪೀಠದ ಮೇಲೆ ನಿಂತಿರುವ ದುರ್ಗಾ, ಮಹಿಷನ ತಲೆ ಕೆಳಗೆ ಸಂಕೇತ ರೂಪದಲ್ಲಿ ಕಾಣುತ್ತಿದೆ. ಶಂಖ, ಚಕ್ರ, ಪಾಶ, ಖಡ್ಗ, ಖೇಟಕ, ಗಧಾಹಸ್ತವಿರುವ ದೇವಿ ಪ್ರೌಢರೂಪಳಾಗಿ ಪ್ರಾಯಶಃ ಗರ್ಭಗೃಹದಲ್ಲಿ ಪ್ರತಿಷ್ಠಾಪಿಸುವ ನಿಮಿತ್ತ ಶಿಲ್ಪವಿದಾಗಿರಬೇಕು. ಕಾಲಿನವರೆಗೂ ಧರಿಸಿರುವ ಉಡುಪು, ಕುಚವಸ್ತ್ರ, ಕಿರೀಟ, ಹಾರ, ಕಂಕಣ, ತೋಳಬಂಧಿಗಳು ದೇವಿಯ ಪ್ರಭೆಯನ್ನು ಹೆಚ್ಚಿಸಿವೆ.



ಶಿಲ್ಪ – ೫೫, ದುರ್ಗಾ, ಕಾಲ: ೧೨ನೇ ಶತಮಾನ,

ಸ್ಥಳ: ಕೊಲಂಬೋ ಸಂಗ್ರಹಾಲಯ. ಶ್ರೀಲಂಕಾ

ಶಿಲ್ಪ – ೫೬, ಮಹಿಷಾಸುರ ಸಂಹಾರಿ ದುಗಾ

ಸಮಪಾದದಲ್ಲಿ ಮಹಿಷನ ಕಡಿದ ಮಸ್ತಕದ ಮೇಲೆ ದಿವ್ಯಾಸ್ತ್ರಗಳನ್ನು ತೊಟ್ಟದೇವಿಯು ಪೂರ್ವಕರ್ಣಾಗಮದ ದ್ವಾದಶ ಪಟಲದಲ್ಲಿ ವಿವರಿಸಿದ ಲಕ್ಷಣಗಳನ್ನು ಹೋಲುತ್ತಿದ್ದಾಳೆ. ತೇಜೋಮಯಿ, ತಲೆಯ ಮುಂಭಾಗ ಮಣಿಯಿಂದ ಅಲಂಕೃತಗೊಂಡಿದೆ, ಕಿರೀಟಮುಕುಟ, ಅರ್ಧಚಂದ್ರ, ಸುಂದರ ಕುಂಡಲಗಳು, ವಸ್ತ್ರಾಭರಣದಿಂದ ಕಂಗೊಳಿಸುವ ಶೂಲ, ಖಡ್ಗ, ಬಾಣ, ಚಕ್ರ, ಶಂಖ, ಖೇಟಕ, ಮೇಲೆತ್ತಿದ ಕೈಗಳು, ಇವೆಲ್ಲ ಲಕ್ಷಣಗಳನ್ನು ಈ ಶಿಲ್ಪವು ಹೊಂದಿರುವುದು. ಮುಖ್ಯವಾದ ವ್ಯತ್ಯಾಸವೆಂದರೆ ಒಂದು ಕೈಯನ್ನು ಕಟಿಯ ಮೇಲೆ ಇರಿಸಿರುವುದು.



ಶಿಲ್ಪ – ೫೬, ಮಹಿಷಾಸುರಸಂಹಾರಿದುರ್ಗಾ, ಕಾಲ: ೧೩ – ೧೪ನೇ ಶತಮಾನ,

ಸ್ಥಳ: ಮ್ಯೂಸಿಯಂ ಸಂಗ್ರಹಾಲಯ ಕೊಲೊಂಬೋ, ಶ್ರೀಲಂಕಾ.

ಸಮಾರೋಪ

ಭಾರತದ ವಿವಿಧ ಪ್ರಾಂತ್ಯಗಳಲ್ಲಿ ಮಹಿಷಾಸುರಮರ್ಧಿನಿಯ ಕಲ್ಪನೆಯು ಯಾವ ರೀತಿಯಿದೆ ಎಂಬ ಈ ಒಂದು ಸಮೀಕ್ಷೆ ಸಂಶೋಧಕರಿಗೆ, ಕಲಾ ಇತಿಹಾಸ ತಜ್ಞರಿಗೆ, ಶಿಲ್ಪಿಗಳಿಗೆ, ದೇವೀ ಆರಾಧಕರಿಗೆ ಮತ್ತು ಉಪಾಸಕರಿಗೆ ಒಂದು ರೀತಿಯ ಅಧ್ಯಯನವನ್ನು ತೆರೆದಿಟ್ಟಿದೆ. ಇಲ್ಲಿ ಚರ್ಚಿಸಿರುವ ಶಿಲ್ಪಗಳೇ ಅಲ್ಲದೇ ಇನ್ನೂ ಅನೇಕ ಪ್ರಕಾರದ ಶಿಲ್ಪಗಳು ಭಾರತದಲ್ಲಿ, ಬೃಹತ್ ಭಾರತದ ಹಾಗೂ ಪರದೇಶಗಳ ಸಂಗ್ರಹಾಲಯಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿರಬೇಕು. ಅವುಗಳನ್ನು ಅಧ್ಯಯನ ಮಾಡಲು ಈ ಒಂದು ಚಿಕ್ಕ ಪ್ರಮಾಣದ ಅಧ್ಯಯನ ಸಹಕಾರಿಯಾಗಬಲ್ಲದು. ಈ ಅಧ್ಯಯನದಲ್ಲಿ ಗಮನಕ್ಕೆ ಬಂದ ಕೆಲವು ಅಂಶಗಳೆಂದರೆ, ಅಗ್ನಿಪುರಾಣ, ವರಾಹ ಪುರಾಣ, ಮತ್ಸ್ಯ ಪುರಾಣ, ಕಾಲಿಕಾ ಪುರಾಣ, ವಿಷ್ಣುಧರ್ಮೋತ್ತರ ಪುರಾಣಗಳೆಲ್ಲವೂ ಸುಮಾರು, ೨೦, ೧೮ ಮತ್ತು ೧೨, ಕೈಗಳಿರುವ ದೇವಿಯನ್ನು ಅವಳು ಸಂಹರಿಸುವ ರೀತಿಯನ್ನು ತೋರಿಸುತ್ತವೆ. ಆದರೆ ಪ್ರಸ್ತುತ ಶಿಲ್ಪಗಳನ್ನು ಗಮನಿಸಿದಾಗ ಅಷ್ಟೊಂದು ಭುಜಗಳ ಸಂಯೋಜನೆ, ತಾಂತ್ರಿಕ ದೃಷ್ಟಿಯಿಂದ ಶಿಲೆಯಲ್ಲಿ ಕಂಡರಿಸುವುದು ದುಸ್ಸಾಧ್ಯವೆಂದು ತಿಳಿದ ಶಿಲ್ಪಿಗಳು ಹೆಚ್ಚಾಗಿ ೮, ೬, ೪, ೨ ಕೈಗಳಿರುವ ಮಹಿಷಾಸುರ ಮರ್ಧಿನಿಯ ಶಿಲ್ಪಗಳನ್ನೇ ರಚಿಸಿರುವುದು ಗಮನಕ್ಕೆ ಬರುತ್ತದೆ. ಮೇಲೆ ತಿಳಿಸಿದ ಪುರಾಣಗಳನ್ನು ಸಚಿತ್ರ ರೂಪದಲ್ಲಿ ಹಸ್ತ ಪ್ರತಿಯಾಗಿ ರಚಿಸಿರುವ ಅವಕಾಶಗಳು ಹೆಚ್ಚು. ಉದಾಹರಣೆಗೆ ಮೈಸೂರು ಶೈಲಿಯಲ್ಲಿ ರಚಿಸಿರುವ ಶ್ರೀತತ್ವನಿಧಿ ಗ್ರಂಥದಲ್ಲಿ ದೇವಿಯು ಸಹಸ್ರಾರು ಅಸ್ತ್ರಗಳನ್ನು ತೊಟ್ಟಿಳೆಂದು ತೋರಿಸುವ ಪ್ರಯತ್ನದಲ್ಲಿ ೨೦ಕ್ಕೂ ಹೆಚ್ಚು ಕೈಗಳನ್ನು ದಿವ್ಯಾಸ್ತ್ರಗಳನ್ನೂ ವರ್ಣರಂಜಿತವಾಗಿ ರಚಿಸಲಾಗಿದೆ. ಈ ಅಧ್ಯಯನಕ್ಕೆ ಪೂರಕವಾಗಿ ದೇವಿಮಹಾತ್ಮೆ ಗ್ರಂಥವನ್ನು ಪ್ರತಿಯೊಂದು ಸಂದರ್ಭದಲ್ಲಿಯೂ ಉಲ್ಲೇಖಿಸುವಾಗ ಅಲ್ಲಿಯ ವೃತ್ತಾಂತದ ಸಂಪೂರ್ಣ ಅರಿವು ಶಿಲ್ಪಿಗಳಿಗಿದ್ದು ತಮ್ಮ ಸಂಯೋಜನೆಗಳಲ್ಲಿ ಆ ಹಿನ್ನೆಲೆಯನ್ನು ಯಶಸ್ವಿಯಾಗಿ ಬಳಸಿಕೊಂಡಿದ್ದಾರೆ. ಹೀಗೆ ದೇವಿಯ ಶಿಲ್ಪಗಳನ್ನು ರಚಿಸುವಾಗ ಶಿಲ್ಪಶಾಸ್ತ್ರ, ರೂಪಮಂಡನ, ಸುಪ್ರಬೇಧಾಗಮ, ಪೂರ್ವಕರ್ಣಾಗಮ, ಶಾರದಾತಿಲಕತಂತ್ರ, ಪ್ರತಿಮಾವಿಜ್ಞಾನ ಮುಂತಾದ ಶಿಲ್ಪಕಲಾ ಶಾಸ್ತ್ರಗ್ರಂಥ ಮತ್ತು ಆಗಮಗಳನ್ನು ಶಿಲ್ಪಿಗಳು ಅನುಸರಿಸಿದ್ದಾರೆ.

ಜಾನಪದ ಸಂಪ್ರದಾಯಗಳಲ್ಲಿ ಅನಾದಿಕಾಲದಿಂದಲೂ, ಶಿಷ್ಟಸಂಪ್ರದಾಯದಲ್ಲಿ ಸುಮಾರು ಎರಡನೇ ಶತಮಾನದಿಂದಲೂ ಸ್ತ್ರೀಶಕ್ತಿಯ ಸಂಕೇತವಾಗಿ ಬಳಕೆಯಾಗಿರುವ ಮಹಿಷಾಸುರಮರ್ಧಿನಿಯ ರೂಪವು ಸಾಧಾರಣದಿಂದ ಸಂಕೀರ್ಣ ಕಲ್ಪನೆಗಳಲ್ಲಿ ವಿಹರಿಸಿ ವಿಗ್ರಹ

ಲಕ್ಷಣಗಳೊಂದಿಗೆ ಶಿಲ್ಪಿಗಳ ಕೈಚಳಕದಿಂದ ರೂಪಗೊಂಡಿದೆ. ಹಲವು ಸಂಪ್ರದಾಯಗಳಲ್ಲಿ ದುರ್ಗೆ, ಚಾಮುಂಡಿಯಾಗಿ ಪೂಜೆಗೊಂಡರೆ, ಇನ್ನು ಕೆಲವೆಡೆ ಆವರಣ ದೇವತೆಯಾಗಿ ದೇವಾಲಯಗಳ ಕೋಷ್ಟಕ, ಭಿತ್ತಿ, ಗೋಪುರ, ಕಂಭಗಳ ಮೇಲೆ ಕಂಡುಬರುವುದನ್ನು ನೋಡಬಹುದು. ಪುರಾಣ ಸದೃಶದೇವಿಯ ಈ ಪರಿಕಲ್ಪನೆ ಶಾಕ್ತ ಸಂಪ್ರದಾಯದ ಪ್ರತೀಕವಾಗಿ ಇತಿಹಾಸ ಕಾಲದಲ್ಲಿ ಪ್ರತಿಯೊಂದು ರಾಜವಂಶದ ಆಳ್ವಿಕೆಯಲ್ಲೂ, ಪ್ರತಿಯೊಂದು ಕಲಾಶೈಲಿಯಲ್ಲೂ ಹೇಗೆ ವಿಸ್ತೃತ ಗೊಂಡಿತು ಎಂಬುದನ್ನು ಈ ಅಧ್ಯಯನವು ವಿನಮ್ರತೆಯಿಂದ ಸಾದರಪಡಿಸಿದೆ. ದೇವಿಯ ವಿಭಿನ್ನ ರೂಪಗಳೆಂಬ ಅಧ್ಯಯನವು ಮಾತೃ ಮರ್ಯಾದೆ, ಮಾತೃ ಪಾರಮ್ಯ, ಪತಿಯಿಂದಲೇ ಪುರಸ್ಕೃತಗೊಳ್ಳುವ ದೇವಿಯ ತತ್ಪರತೆಯನ್ನು ಅರಿಯುವಲ್ಲಿ ಸಹಾಯಕ. ದೇವಿಮಹಾತ್ಮೆಯಲ್ಲಿಯ ಅನೇಕ ವೃತ್ತಾಂತಗಳು ಸ್ತ್ರೀತ್ವದ ಮಹಿಮೆಯನ್ನು ಸಾಧಕ ಶಕ್ತಿಯನ್ನು ಸೂಚಿಸುತ್ತವೆ. ಅತ್ಯಂತ ಕೋಮಲಳಾದ ದೇವಿಯು ಅಸುರ ಸಂಹಾರಕ ಶಕ್ತಿಯನ್ನು ದಿವ್ಯಾಸ್ತ್ರಗಳ ಪ್ರಯೋಗವನ್ನು ಯಾವ ರೀತಿ ತೋರಿದಳೆಂದು ತಿಳಿಸುತ್ತದೆ. ಕಲಾಇತಿಹಾಸದ ದೃಷ್ಟಿಯಿಂದ ಮಹಿಷಾಸುರಮರ್ಧಿನಿಯ ಶಿಲ್ಪರಚನೆಯ, ಲಕ್ಷಣಗಳು, ವಿಧಾನಗಳು, ತಾಂತ್ರಿಕ ವಿವರಗಳನ್ನು ನೀಡುವ ಪ್ರಯತ್ನ ಇಲ್ಲಿ ಮಾಡಲಾಗಿದೆಯೇ ಹೊರತು ಒಬ್ಬ ನಿಪುಣ, ಶಾಸ್ತ್ರಸಮ್ಮತ ಶಿಲ್ಪಿಯ ತಾಂತ್ರಿಕ ದೃಷ್ಟಿಯಿಂದಲ್ಲ. ಆ ಒಂದು ದೃಷ್ಟಿಯಿಂದ ನೋಡಿದಲ್ಲಿ ಈ ಅಧ್ಯಯನದಲ್ಲಿ ಹಲವು ಕೊರತೆಗಳಿರಬಹುದೆಂಬ ಭಾವನೆಯನ್ನು ಇಲ್ಲಿ ನಿವೇದಿಸಿಕೊಳ್ಳುವುದು ನನ್ನ ಕರ್ತವ್ಯ. ಈ ಒಂದು ಕೊರತೆಯನ್ನು ಹೊರತುಪಡಿಸಿ, ಒಂದು ಶಿಲ್ಪವನ್ನು ರಚಿಸುವಾಗ ಬೇಕಾಗುವಂತಹ ನೆಲೆ, ಹಿನ್ನೆಲೆ, ಕಲಾತತ್ವ, ವೃತ್ತಾಂತಗಳ ಮಹತ್ವ, ವಿವಿಧರೂಪಗಳ ಜ್ಞಾನ, ಅನೇಕ ಪುರಾಣ, ಶಾಸ್ತ್ರ, ಆಗಮ ಗ್ರಂಥಗಳಲ್ಲಿ ಉಲ್ಲೇಖವಾಗಿರುವ ವಿವರಗಳನ್ನು ಒಂದೆಡೆಗೆ ಗಮನಿಸಲು, ಐತಿಹಾಸಿಕ ಪ್ರಜ್ಞೆಯಿಂದ ಮಹಿಷಮರ್ಧಿನಿ ಶಿಲ್ಪವನ್ನು ಯಾವ ರೀತಿಯಾಗಿ ಪರಿಕಲ್ಪಿಸಲಾಯಿತು ಎಂಬ ಈ ಎಲ್ಲಾ ವಿಷಯಗಳನ್ನು ತಿಳಿದುಕೊಳ್ಳಲು ಸಹಕಾರವಾಗುವ ಕೈಪಿಡಿಯಂತೆ ಪ್ರಯೋಜನವಾದರೆ ಈ ಅಧ್ಯಯನ ಸಾರ್ಥಕವೆಂದು ತಿಳಿಯುತ್ತೇನೆ.

ಗ್ರಂಥಸೂಚಿ:

ಮೂಲ ಆಧಾರ ಗ್ರಂಥಗಳು:

ವಿಷ್ಣುಧರ್ಮೋತ್ತರ ಪುರಾಣ

ವರಾಹ ಪುರಾಣ

ಶಿಲ್ಪರತ್ನ

ವಾಮನಪುರಾಣ

ಪದ್ಮಪುರಾಣ

ಸುಪ್ರಬೇಧಾಗಮ

ಪೂರ್ವಕರ್ಣಾಗಮ

ಶಿಲ್ಪರತ್ನ

ಶಾರದಾತಿಲಕತಂತ್ರ

ಸೌಂದರ್ಯಲಹರೀ

ಶಾಕ್ತಾಗಮಗಳು

ಶ್ರೀ ತತ್ವನಿಧಿ

ಎರಡನೇ ವರ್ಗಕ್ಕೆ ಸೇರಿದ ಆಧಾರ ಗ್ರಂಥಗಳು

- ಶಿಲೆ-ಕಲೆ, ಡಾ. ಚೂಡಾಮಣಿ ನಂದಗೋಪಾಲ್.
- ಮೂರ್ತಿಶಿಲ್ಪದ ನೆಲೆ ಮತ್ತು ಹಿನ್ನೆಲೆ, ಪ್ರೊ. ಎಸ್. ಕೆ. ರಾಮಚಂದ್ರರಾವ್.
- Rao, Gopinath, T.A, *Elements of Hindu Iconography*, 4 volumes, Motilal Banarasidass Publishers Private Limited, Delhi, 2005
- Nandagopal, Choodamani, *Dance & Music in Temple Architecture*, Agam publication, 199
- Stapati, V, Ganesh *Indian Sculpture and Iconography – Forms and Measurements*, Mapin Publishing Gp Pty Ltd, 2006
- Bruhat Samhita by Varaha Mihira.
- Kramrisch, Stella, *The Hindu Temple I & II Volumes,* Motilal Banarasidass Publishers Private Limited, Delhi, 1976
- Ed. Dahejya, Vidya, *Devi: The Great Goddess – Female Divinity in South East Asian Art (African, Asian & Oceanic Art)* Prestel, 1999
- Ed. C.P. Sinha and U.C. Dvivedi, *Proceedings of Indian Art History Congress*
- Jyotsna Sahoo & B L Malla, *Divine Mother Durga: Plurality Of Her Names,* Orissa, Review Sep- Oct, 2007